ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗಗನಯಾನಿ ಶುಭಾಂಶು ಶುಕ್ಲಾ ತಾಯ್ನಾಡಿಗೆ

ದೆಹಲಿ ವಿಮಾನ ನಿಲ್ದಾಣಕ್ಕೆ ಭಾನುವಾರ ಮುಂಜಾನೆ 2.15ಕ್ಕೆ ಬಂದಿಳಿದ ಗಗನ ಯಾನಿಗೆ ಕೇಂದ್ರ ಸಚಿವ, ದೆಹಲಿ ಸಿಎಂ, ಇಸ್ರೊ ಅಧ್ಯಕ್ಷರಿಂದ ಸ್ವಾಗತ. → 8

ಸೋಮವಾರದಿಂದ ಆರಂಭ ವಾಗಲಿರುವ ಸಿಂಕ್‌ಫೀಲ್ಡ್ ಕಪ್ ಗ್ರ್ಯಾಂಡ್ ಚೆಸ್ ಟೂರ್ನಿಯಲ್ಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್, ಆರ್.ಪ್ರಜ್ಞಾನಂದ ಕಣಕ್ಕಿಳಿಯಲಿದ್ದಾರೆ.

ಹೆಗ್ಗಡೆಯವರನ್ನು ಭೇಟಿ ಮಾಡಿ ಬೆಂಬಲ ಘೋಷಿಸಿದ ಬಿಜೆಪಿ ಮುಸುಕುಧಾರಿ ವ್ಯಕ್ತಿಯನ್ನು ತನಿಖೆಗೊಳಪಡಿಸುವ ಸಂಭವ

ಧರ್ಮಸ್ಥಳ: ಕೇಸರಿ ಬೆಂಬಲ

ಬೆಂಗಳೂರು/ಮಂಗಳೂರು: ಅನಾಮಧೇಯ ವ್ಯಕ್ತಿಯ ದೂರಿನ ಆಧಾರದಲ್ಲಿ 'ಬುರುಡೆ' ಹುಡುಕಾಟದಲ್ಲಿ ಆರಂಭವಾಗಿದ್ದ ವಿಶೇಷ ತನಿಖಾ ತಂಡದ ತನಿಖೆಯ ದಿಕ್ಕು ಬದಲಾಗುತ್ತಿರುವ ನಡುವೆಯೇ, ಭಾನುವಾರ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೆ ಬೆಂಬಲ ನೀಡುವ ನೆಪದಲ್ಲಿ ಬಿಜೆಪಿಯ ಬಲಪ್ರದರ್ಶನ ನಡೆಯಿತು.

ಬುರುಡೆ ಹೊತ್ತು ತಂದ ಮುಸುಕು ಧಾರಿಯ ಹೇಳಿಕೆಯಿಂದ ಆರಂಭಗೊಂಡ ಈ ಪ್ರಹಸನ, ರಾಷ್ಟ್ರೀಯ ಮಟ್ಟದಲ್ಲಿ ಸದ್ದಾಗಿತ್ತು. 16 ಗುಂಡಿ ಅಗೆದರೂ 'ಮಣ್ಣು' ಬಿಟ್ಟು ಬೇರೇನೂ ಸಿಗದ ಬೆನ್ನಲ್ಲೇ ಬಿಜೆಪಿಯು ಕಾಂಗ್ರೆಸ್ ಸರಕಾರದ ವಿರುದ್ಧ ವಾಗ್ದಾಳಿ ಆರಂಭಿಸಿದ್ದು, ವಿಧಾನಸಭೆಯಲ್ಲಿಯೂ ಧರ್ಮಸ್ಥಳದ ಪರವಾಗಿ ಬಿಜೆಪಿ ಧ್ವನಿ ಎತ್ತಿತ್ತು. ಇದೀಗ ಈ ವಿಷಯಕ್ಕೆ ಸಂಬಂಧಿಸಿದಂತೆ ಸೋಮವಾರ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಉತ್ತರ ನೀಡಲಿದ್ದಾರೆ.

ಪರಮೇಶ್ವರ ಅವರು ವಿಧಾನಸಭೆಯಲ್ಲಿ ಉತ್ತರಿಸುವ ಮುನ್ನ ದಿನ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ನಿಯೋಗ ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾಗಿ ಚರ್ಚಿಸಿದ್ದು, ಬಿಜೆಪಿಯು ಧರ್ಮಸ್ಥಳದೊಂದಿಗೆ ನಿಲ್ಲಲಿದೆ ಎನ್ನುವ ಭರವಸೆ ನೀಡಿದೆ. → 4

- ಧರ್ಮಸ್ಥಳ ಪ್ರಕರಣದಲ್ಲಿ ಕಾಂಗ್ರೆಸ್ ಅನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಬಿಜೆಪಿ ಕಸರತ್ತು
- ಮುಸುಕುಧಾರಿಯ ಬಗ್ಗೆಯೇ ತನಿಖೆ ಆರಂಭಿಸಿರುವ ವಿಶೇಷ ತನಿಖಾ ತಂಡ
- ಎಸ್‌ಐಟಿ ನೀಡಿದ ಮಾಹಿತಿಯನ್ನು ಸಿಎಂ ಜತೆ ಚರ್ಚಿಸಿದ ಬಳಿಕ ಸದನದಲ್ಲಿ ಉತ್ತರ
- ಧರ್ಮಸ್ಥಳ, ವೀರೇಂದ್ರ ಹೆಗ್ಗಡೆ ಪರವಾಗಿ ನಿಲ್ಲುವ ಮಾತಾಡಿದ ಕೈ-ಕಮಲ ನಾಯಕರು

ಕೈನಿಂದಲೂ ಧರ್ಮಸ್ಥಳ ಚಲೋ?

ಬಿಜೆಪಿ ಶಾಸಕ ಎಸ್.ಆರ್.ವಿಶ್ವನಾಥ್ ಅವರು ಧರ್ಮಸ್ಥಳ ಚಲೋ ನಡೆಸಿದ ರೀತಿಯಲ್ಲಿಯೇ ಇದೀಗ ನೆಲಮಂಗಲದ ಕಾಂಗ್ರೆಸ್ ಶಾಸಕ ಶ್ರೀನಿವಾಸ್ ಕೂಡ ಧರ್ಮಸ್ಥಳ ಚಲೋ ಮೂಲಕ ಬೆಂಬಲ ಸೂಚಿಸಲು ಮುಂದಾಗಿದ್ದಾರೆ. ಧರ್ಮಸ್ಥಳ ಕ್ಷೇತ್ರದ ಮೇಲಿನ ಅಪಪ್ರಚಾರ ವಿರೋಧಿಸಿ ಶನಿವಾರ ನೆಲಮಂಗಲದಿಂದ ಧರ್ಮಸ್ಥಳಕ್ಕೆ ಹೋಗುವ ಆಲೋಚನೆಯಿದೆ ಎಂದು ತಿಳಿಸಿದ್ದಾರೆ.

ಯುಟ್ಯೂಬರ್‌ಗಳ ವಿರುದ್ಧ ಹಕ್ಕುಚ್ಯುತಿ

ಧರ್ಮಸ್ಥಳ ಕ್ಷೇತ್ರ, ಧರ್ಮಾಧಿಕಾರಿಗಳ ವಿರುದ್ಧ ಮಾತನಾಡಿರುವ ಯೂಟ್ಯೂಬರ್‌ಗಳು ಹಲವು ಬಿಜೆಪಿ ಶಾಸಕರ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಅದರಲ್ಲಿಯೂ ಲಾಯರ್ ಜಗದೀಶ್, ಎಸ್.ಆರ್.ವಿಶ್ವನಾಥ್ ಅವರ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸಿದ್ದಾನೆ. ಆದ್ದರಿಂದ ಸೋಮವಾರ ಜಗದೀಶ್ ಸೇರಿದಂತೆ ಕೆಲ ಯೂಟ್ಯೂಬರ್‌ಗಳ ವಿರುದ್ಧ ಹಕ್ಕುಚ್ಯುತಿ ಮಂಡಿಸಲು ಬಿಜೆಪಿ ಸಿದ್ಧತೆ ನಡೆಸಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದ ಬಿಜೆಪಿ ನಿಯೋಗ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾಗಿ ಬೆಂಬಲ ವ್ಯಕ್ತಪಡಿಸಿತು.

> ಬಿಜೆಪಿಯವರ ಧರ್ಮಸ್ಥಳ ಯಾತ್ರೆ, ಧರ್ಮದ ಯಾತ್ರೆಯಲ್ಲ, ರಾಜಕೀಯ ಪ್ರೇರಿತ ಯಾತ್ರೆ. ಧರ್ಮಸ್ಥಳ ಬಿಜೆಪಿಯವರ ಮನೆ ಆಸ್ತಿಯಲ್ಲ. ಸಾರ್ವಜನಿಕರ ಸ್ವತ್ತು. ಈಗ ವಿರೋಧಿಸುತ್ತಿರುವ ಬಿಜೆಪಿಗರು ಎಸ್‌ಐಟಿ ರಚಿಸಿದ ಸಮಯದಲ್ಲಿ ಏಕೆ ಮೌನವಾಗಿದ್ದರು?
> **-ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

> ಧರ್ಮಸ್ಥಳ ವಿಷಯದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿಲ್ಲ. ಅಸಂಖ್ಯಾತ ಭಕ್ತರಲ್ಲಿ ಗೊಂದಲ ಸೃಷ್ಟಿಸುವ ಷಡ್ಯಂತ್ರವೂ ನಡೆದಿದೆ. ಎಡಪಂಥೀಯರ ಗುಂಪುಗಳ ಒತ್ತಡಕ್ಕೆ ಮಣಿದು ಎಸ್‌ಐಟಿ ರಚಿಸಿದ್ದಾರೆ. ಶ್ರೀ ಕ್ಷೇತ್ರದ ಬಗ್ಗೆ ನಡೆದಿರುವ ಅಪಪ್ರಚಾರಗಳಿಗೆ ಕಡಿವಾಣ ಹಾಕಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳು ರಾಜ್ಯದ ಜನತೆಯ ಕ್ಷಮೆ ಕೇಳಬೇಕು.
> **-ಬಿ.ವೈ.ವಿಜಯೇಂದ್ರ** ಬಿಜೆಪಿ ರಾಜ್ಯಾಧ್ಯಕ್ಷ

ಮತಗಳ್ಳತನ ಕುರಿತು ಪ್ರಮಾಣಪತ್ರ ಸಲ್ಲಿಸಲು ರಾಹುಲ್‌ಗೆ ವಾರ ಗಡುವು

ಪ್ರಮಾಣಪತ್ರ ಸಲ್ಲಿಸಿ ಇಲ್ಲವೇ ಕ್ಷಮೆಯಾಚಿಸಿ

ದೆಹಲಿ: ಮತಗಳ್ಳತನ ಆರೋಪಗಳ ಕುರಿತು ರಾಹುಲ್ ಗಾಂಧಿ ಅವರು 7 ದಿನಗಳಲ್ಲಿ ಪ್ರಮಾಣಪತ್ರ ಸಲ್ಲಿಸಬೇಕು. ಇಲ್ಲವಾದರೆ, ಆರೋಪಗಳನ್ನು ಆಧಾರರಹಿತವಾದವು ಎಂದು ಪರಿಗಣಿಸಲಾಗುವುದು. ಪ್ರಮಾಣಪತ್ರ ಸಲ್ಲಿಸಿ, ಇಲ್ಲವೇ, ಕ್ಷಮೆಯಾಚಿಸಿ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ತಾಕೀತು ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸೂಕ್ತ ಸಾಕ್ಷ್ಯಗಳಿಲ್ಲದೆ ಯಾವುದೇ ಮತದಾರನ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದಿಲ್ಲ. ಆಯೋಗವು ಪ್ರತಿಯೊಬ್ಬ ಮತದಾರನೊಂದಿಗೆ ಬಂಡೆಯಂತೆ ನಿಂತಿದೆ ಎಂದು ಹೇಳಿದ್ದಾರೆ. ಬಿಹಾರದಲ್ಲಿ ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಮಾಡುತ್ತಿರುವ ಆರೋಪಗಳಿಗೆ ತಿರುಗೇಟು ನೀಡಿರುವ ಸಿಇಸಿ, ತರಾತುರಿಯಲ್ಲಿ ಎಸ್‌ಐಆರ್ ನಡೆಸಲಾಗುತ್ತಿದೆ ಎಂಬುದು ಸುಳ್ಳು. ಪ್ರತಿ ಚುನಾವಣೆಗೂ ಮುನ್ನ ಮತದಾರರ ಪಟ್ಟಿ ಚುನಾವಣಾ ಆಯೋಗದ ಕಾನೂನುಬದ್ಧ ಕರ್ತವ್ಯವಾಗಿದೆ ಎಂದು ಪ್ರತಿಪಾದಿಸಿದ್ದಾರೆ.

ರಾಹುಲ್ ಗಾಂಧಿ ಆರೋಪ ಏನು?

ರಾಹುಲ್ ಗಾಂಧಿ ಅವರು ಇತ್ತೀಚೆಗೆ ಪತ್ರಿಕಾಗೋಷ್ಠಿ ನಡೆಸಿ ಚುನಾವಣಾ ಆಯೋಗ ಮತ್ತು ಬಿಜೆಪಿ ವಿರುದ್ಧ ಮತಗಳ್ಳತನದ ಆರೋಪ ಮಾಡಿದ್ದರು. ಮಹಾರಾಷ್ಟ್ರ, ಕರ್ನಾಟಕ, ಹರಿಯಾಣದಲ್ಲಿ ಭಾರಿ ಮತಗಳ್ಳತನ ನಡೆಸಿ ಬಿಜೆಪಿ ಜಯ ಗಳಿಸಿದೆ. ಮತದಾರರ ಪಟ್ಟಿಯಲ್ಲಿ ಅಕ್ರಮ ಎಸಗಲು ಆಯೋಗವು ಬಿಜೆಪಿ ಜತೆ ಕೈಜೋಡಿಸಿದೆ. ಬಿಹಾರದಲ್ಲಿ ಚುನಾವಣೆ ಹೊಸ್ತಿಲಲ್ಲಿ ಎಸ್‌ಐಆರ್ ನಡೆಸಲಾಗುತ್ತಿದೆ. 65 ಲಕ್ಷ ಮತದಾರರ ಹೆಸರು ಕೈಬಿಡಲಾಗಿದೆ ಎಂದು ದೂರಿದ್ದರು.

ಮತದಾರನ ಅಧಿಕಾರ ಯಾತ್ರೆಗೆ ಚಾಲನೆ

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಹಾಗೂ ಮತ ಕಳ್ಳತನ ವಿರೋಧಿಸಿ ಲೋಕಸಭೆ ಪ್ರತಿಪಕ್ಷದ ನಾಯಕ, ಸಂಸದ ರಾಹುಲ್ ಗಾಂಧಿ ಅವರು ಭಾನುವಾರ ಬಿಹಾರದ ಸಸಾರಾಮ್‌ನಿಂದ ಮತದಾರನ ಅಧಿಕಾರ ಯಾತ್ರೆ ಆರಂಭಿಸಿದ್ದಾರೆ. ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಸೇರಿದಂತೆ ಇಂಡಿಯಾ ಮೈತ್ರಿಕೂಟದ ಹಲವು ನಾಯಕರು ಯಾತ್ರೆಯಲ್ಲಿ ಭಾಗವಹಿಸಿದ್ದಾರೆ. ಈ ಯಾತ್ರೆಯು ಬಿಹಾರದಾದ್ಯಂತ 16 ದಿನಗಳು ನಡೆಯಲಿದೆ. 1,300 ಕಿ.ಮೀ ಸಾಗಲಿರುವ ಈ ಯಾತ್ರೆಯು ಸೆಪ್ಟೆಂಬರ್ 1ರಂದು ಪಾಟ್ನಾದಲ್ಲಿ ಸಮಾರೋಪಗೊಳ್ಳಲಿದೆ.

ಸೊಂಪಾದ ಪುಟಗಳು

ಪರಮೇಶ್ವರ್ ಬೆನ್ನಲ್ಲಿ ಕಾಣುತ್ತಿದೆ ರಾಮಬಾಣ?
ಮೂರ್ತಿಪೂಜೆ ಆರ್.ಟಿ.ವಿಠ್ಠಲಮೂರ್ತಿ 6

ಅಡುಗೆ ಮನೆಯಿಂದ ಅಡಿಯಿಟ್ಟ ಅಡೀಡಸ್
ವಿದೇಶವಾಸಿ ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಫೇಸ್‌ಬುಕ್‌ನಲ್ಲಿ ನಿಮಗೆ ಬರುವ ಎಲ್ಲ ಫ್ರೆಂಡ್ ರಿಕ್ವೆಸ್ಟ್‌ಗಳೂ ನಿಜವಾದ ಅರ್ಥದಲ್ಲಿ ಫ್ರೆಂಡ್ ರಿಕ್ವೆಸ್ಟ್‌ಗಳಲ್ಲ, ಆ ಪೈಕಿ ಕೆಲವು, ನೀವೇನು ಮಾಡುತ್ತಿದ್ದೀರಿ ಎಂದು ತಿಳಿಯಬಯಸುವ ಕಣ್ಗಾವಲುಗಳು. ಈ ಬಗ್ಗೆ ಎಚ್ಚರದಿಂದ ಇರಬೇಕು.

ವಕ್ರತುಂಡೋಕ್ತಿ

ಹೆಂಡತಿಗಿಂತ ಅಲೆಕ್ಸಾ ವಾಸಿ. ಕಾರಣ ಅಲೆಕ್ಸಾ ಯಾವ ಪ್ರಶ್ನೆ ಕೇಳದೇ ಹೇಳಿದ್ದನ್ನೆಲ್ಲ ಚಾಚೂತಪ್ಪದೇ ಮಾಡುತ್ತಾಳೆ.

ಮೊಸರು ಗಡಿಗೆ ಉತ್ಸವ: 2 ಸಾವು

ಮುಂಬೈ: ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಮುಂಬೈನ ವಿವಿಧೆಡೆ ನಡೆದ ಮೊಸರು ಗಡಿಗೆ ಉತ್ಸವದ ಸಂದರ್ಭದಲ್ಲಿ ಸಂಭವಿಸಿದ ಅವಘಡದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಈಶಾನ್ಯ ಮುಂಬೈನ ಮಾನ್‌ಕುರ್ದ್ ಪ್ರದೇಶದಲ್ಲಿ ಜಗಮೋಹನ್ ಶಿವಕುಮಾರ್ ಚೌಧರಿ (32) ಎಂಬವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಂಧೇರಿಯ ಆದರ್ಶ ನಗರ ಎಂಬಲ್ಲಿ ರೋಹನ್ ಮೋಹನ್ ಮಾಳ್ವಿ (14) ಎಂಬ ಬಾಲಕ ಕುಸಿದು ಬಿದ್ದು ಮೃತಪಟ್ಟಿದ್ದಾನೆ. 300ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಶಿವಗಂಗಾಗೆ ನೋಟಿಸ್

ಬೆಂಗಳೂರು: ಸಿಎಂ ಬದಲಾವಣೆ ಬಗ್ಗೆ ಯಾವುದೇ ಬಹಿರಂಗ ಹೇಳಿಕೆ ನೀಡದಂತೆ ಎಚ್ಚರಿಕೆ ನೀಡಿದ ಹೊರತಾಗಿಯೂ ಮಾತನಾಡಿದ್ದ ಚನ್ನಗಿರಿ ಶಾಸಕ ಬಸವರಾಜು ಶಿವಗಂಗಾ ಅವರಿಗೆ ಕೆಪಿಸಿಸಿ ಶಿಸ್ತುಪಾಲನಾ ಸಮಿತಿ ನೋಟಿಸ್ ಜಾರಿ ಮಾಡಿದೆ.

ಜೈಲಾಧಿಕಾರಿಗಳಿಂದ ನ್ಯಾಯಾಲಯಕ್ಕೆ ಅರ್ಜಿ

ದರ್ಶನ್ ಬಳ್ಳಾರಿಗೆ ಸ್ಥಳಾಂತರ?

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಬಂಧನವಾಗಿರುವ ನಟ ದರ್ಶನ್ ಮತ್ತು ಸಹಚರರನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ರಾಜ್ಯದ ಬೇರೆ ಬೇರೆ ಜೈಲುಗಳಿಗೆ ಸ್ಥಳಾಂತರಿಸಲು ಜೈಲು ಅಧಿಕಾರಿಗಳು ಮುಂದಾಗಿದ್ದು, ಈ ಕುರಿತು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಕಳೆದ ಬಾರಿಯ ರಾಜಾತಿಥ್ಯ ಪ್ರಕರಣವನ್ನು ಉಲ್ಲೇಖಿಸಿ, ಭದ್ರತಾ ಹಿತದೃಷ್ಟಿಯಿಂದ ಆರೋಪಿಗಳ ಸ್ಥಳಾಂತರ ಅಗತ್ಯ ಎಂದು ಮನವಿ ಮಾಡಲಾಗಿದೆ. ದರ್ಶನ್ ಅವರ ಜಾಮೀನು ರದ್ದು ಆದೇಶದ ಸಮಯದಲ್ಲಿ ಸುಪ್ರೀಂಕೋರ್ಟ್ ಜೈಲು ಅಧಿಕಾರಿಗಳ ಕಾರ್ಯನಿರ್ವಹಣೆಯನ್ನು ಟೀಕಿಸಿತ್ತು. ನ್ಯಾಯಾಲಯದ ಈ ಖಂಡನೆಯಿಂದಾಗಿ ಜೈಲು ಅಧಿಕಾರಿಗಳು ಯಾವುದೇ ಹೆಚ್ಚಿನ ವಿವಾದಗಳಿಗೆ ಅವಕಾಶ ನೀಡದಂತೆ ಆರೋಪಿಗಳನ್ನು ಬೇರೆಡೆಗೆ ವರ್ಗಾಯಿಸಲು ನಿರ್ಧರಿಸಿದ್ದಾರೆ. ಈ ಸ್ಥಳಾಂತರದ ನಿರ್ಧಾರವು ಪ್ರಭಾವಿ ವ್ಯಕ್ತಿಗಳು ಬಂಧಿತರಾದಾಗ ಜೈಲುಗಳಲ್ಲಿ ಎದುರಾಗುವ ಭದ್ರತಾ ಸವಾಲುಗಳನ್ನು ಎದುರಿಸುವಲ್ಲಿ ಹೊಸ ದಿಕ್ಕನ್ನು ಸೂಚಿಸುತ್ತದೆ. ನ್ಯಾಯಾಲಯದ ತೀರ್ಪು ಬಂದ ನಂತರವೇ ಈ ಸ್ಥಳಾಂತರ ಪ್ರಕ್ರಿಯೆ ನಡೆಯಲಿದೆ.

ವಾಸಯೋಗ್ಯ ಪ್ರಮಾಣಪತ್ರ ಕಡ್ಡಾಯ: ಡಿಸಿಎಂ

4 ಲಕ್ಷ ಕಟ್ಟಡಗಳ ಕರೆಂಟ್ ಕಟ್

ಬೆಂಗಳೂರು: ಬೆಂಗಳೂರಿನಲ್ಲಿ ಕಟ್ಟಿರುವ ಅಕ್ರಮ ಕಟ್ಟಡಗಳಿಗೆ ನೀರು, ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಲು ತೀರ್ಮಾನಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು. ನಗರ್ತಪೇಟೆಯಲ್ಲಿ ಅಗ್ನಿ ಅವಘಡ ಸಂಭವಿಸಿದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, ನಗರದಲ್ಲಿ ಶೇ.70ರಷ್ಟು ಕಟ್ಟಡ ನಿರ್ಮಾಣ ಅಕ್ರಮವಾಗಿದೆ. ನೂತನ ಬಿಡಿಎ ಲೇಔಟ್‌ಗಳಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚು ಮಹಡಿ ನಿರ್ಮಾಣ ಮಾಡುತ್ತಿದ್ದಾರೆ. ಅದಕ್ಕೆ ಈಗ ಸುಪ್ರೀಂಕೋರ್ಟ್ ತೀರ್ಪು ವಾಸಯೋಗ್ಯ ಪ್ರಮಾಣಪತ್ರವಿಲ್ಲದೇ ನೀರು, ವಿದ್ಯುತ್ ಸಂಪರ್ಕ ನೀಡಬಾರದು ಎಂದು ಮಾರ್ಗದರ್ಶನ ನೀಡಿದೆ. ಆದ್ದರಿಂದ ನಾಲ್ಕು ಲಕ್ಷ ಸಂಪರ್ಕಗಳನ್ನು ನಿಲ್ಲಿಸಲಾಗಿದೆ. 30/40 ಅಳತೆಯ ಎರಡು ಮಹಡಿಯ ಕಟ್ಟಡಗಳಿಗೆ ವಿನಾಯಿತಿ ನೀಡಬೇಕು ಎನ್ನುವ ವಿಚಾರವನ್ನು ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಸ್ಪಷ್ಟಪಡಿಸಿದರು. ದುರ್ಬಲ ಕಟ್ಟಡಗಳನ್ನು ಕೂಡಲೇ ಕೆಡವಲು ಹೋಗುವುದಿಲ್ಲ. ಮಾಲೀಕರು ಕೂಡಲೇ ದುರಸ್ಥಿಗೆ ಒಳಪಡಿಸಬೇಕು. ಇಲ್ಲದಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಮಧ್ಯಮ ವರ್ಗಕ್ಕೆ ದೀಪಾವಳಿ ಡಬಲ್ ಬೋನಸ್

ಜಿಎಸ್‌ಟಿ ಪರಿಷ್ಕರಣೆಗೆ ಸಹಕರಿಸಿ

ದೆಹಲಿ: ಮುಂದಿನ ಪೀಳಿಗೆಯ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸುಧಾರಣೆಗಳ ಕರಡನ್ನು ಕೇಂದ್ರ ಸರಕಾರವು ರಾಜ್ಯಗಳಿಗೆ ವಿತರಿಸಿದೆ. ದೀಪಾವಳಿಗೆ ಮುಂಚಿತವಾಗಿ ಪ್ರಸ್ತಾವನೆಯನ್ನು ಜಾರಿಗೆ ತರಲು ಅವರ ಸಹಕಾರವನ್ನು ಕೋರಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ. ಕೇಂದ್ರವು ಜಿಎಸ್‌ಟಿ ಕಾನೂನನ್ನು ಸರಳಗೊಳಿಸಲು ಮತ್ತು ತೆರಿಗೆ ದರಗಳನ್ನು ಪರಿಷ್ಕರಿಸಲು ಉದ್ದೇಶಿಸಿದೆ. ಜಿಎಸ್‌ಟಿಯಲ್ಲಿನ ಸುಧಾರಣೆಯಿಂದ ಬಡವರು ಮತ್ತು ಮಧ್ಯಮ ವರ್ಗದ ಜನರಿಗೆ ಹಾಗೂ ಸಣ್ಣ ಮತ್ತು ದೊಡ್ಡ ವ್ಯವಹಾರಗಳಿಗೆ ಅನುಕೂಲವಾಗುತ್ತದೆ. ಈ ದೀಪಾವಳಿಯಲ್ಲಿ ಜನರು ಜಿಎಸ್‌ಟಿ ಸುಧಾರಣೆಯಿಂದ ಎರಡು ಪಟ್ಟು ಬೋನಸ್ ಪಡೆಯುತ್ತಾರೆ. ಕೇಂದ್ರ ಸರಕಾರದ ಪ್ರಸ್ತಾವಿತ ಈ ಸುಧಾರಣೆಗೆ ಎಲ್ಲ ರಾಜ್ಯಗಳು ಸಹಕರಿಸುತ್ತವೆ ಎಂದು ನಾನು ಭಾವಿಸುತ್ತೇನೆ. ದೀಪಾವಳಿ ಹಬ್ಬವು ಮತ್ತಷ್ಟು ಸಂಭ್ರಮದಿಂದ ಕೂಡಿರುವಂತೆ ಮಾಡಲು ಈ ಪ್ರಕ್ರಿಯೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು. ಈ ಸುಧಾರಣೆಯ ಉದ್ದೇಶ ಜಿಎಸ್‌ಟಿಯನ್ನು ಸರಳಗೊಳಿಸುವುದು ಮತ್ತು ದರಗಳನ್ನು ಪರಿಷ್ಕರಿಸುವುದು ಎಂದರು.

ಶಿರಾಡಿ ಹೆದ್ದಾರಿ ಸಂಚಾರ ಬಂದ್ | ಉ.ಕ, ದ.ಕ, ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಶಾಲೆಗಳಿಗೆ ರಜೆ

ಮಳೆನಾಡಾದ ಕರ್ನಾಟಕ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದ ಪರಿಣಾಮ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗಿದ್ದು, ಭಾರೀ ಮಳೆ ಮುನ್ಸೂಚನೆ ಹಿನ್ನೆಲೆಯಲ್ಲಿ ಸೋಮವಾರ ದಕ್ಷಿಣ ಕನ್ನಡ, ಉತ್ತರಕನ್ನಡ, ಚಿಕ್ಕಮಗಳೂರು, ಕೊಡಗು, ಹಾಸನ, ಶಿವಮೊಗ್ಗ ಸೇರಿದಂತೆ ಆರು ಜಿಲ್ಲೆಗಳಲ್ಲಿ ಶಾಲೆಗಳಿಗೆ ರಜೆ ಸಾರಲಾಗಿದೆ. ಈ ಜಿಲ್ಲೆಗಳಲ್ಲಿ ರೆಡ್‌ಅಲರ್ಟ್ ಘೋಷಿಸಲಾಗಿದೆ.

ರಾಜ್ಯದ ಕರಾವಳಿ,ಮಲೆನಾಡು ಮತ್ತು ಕಲ್ಯಾಣ ಕರ್ನಾಟಕದಲ್ಲಿ ಭಾರೀ ಮಳೆಯ ಪರಿಣಾಮ ಸಂಚಾರ ಅಸ್ತವ್ಯಸ್ತಗೊಂಡಿದೆ. ಸಕಲೇಶಪುರ ಭಾಗದಲ್ಲಿ ಹೆದ್ದಾರಿ ಮೇಲೆ ಅಲ್ಲಲ್ಲಿ ಗುಡ್ಡ ಕುಸಿದ ಕಾರಣ ಶಿರಾಡಿ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತಗೊಳಿಸಲಾಗಿದೆ. ರಸ್ತೆ ಬಂದ್ ಆದ ಕಾರಣ ಭಾನುವಾರ ರಾತ್ರಿ ಹೆದ್ದಾರಿಯಲ್ಲಿ ಸಿಲುಕಿದ ನೂರಾರು ಸವಾರರು ಸಂಕಷ್ಟ ಎದುರಿಸಿದರು. ಎಡಕುಮೇರಿ ಬಳಿ ಗುಡ್ಡ ಕುಸಿತದ ಕಾರಣ ಹಾಸನ- ಮಂಗಳೂರು ನಡುವೆ ರೈಲು ಸಂಚಾರ ಸ್ಥಗಿತಗೊಂಡಿದ್ದು, ಮಳೆಯ ನಡುವೆಯೇ ಹಳಿ ದುರಸ್ತಿ ಕಾರ್ಯ ಮುಂದುವರಿದಿದೆ.

ಬೆಂಗಳೂರು, ಗ್ರಾಮಾಂತರ ಜಿಲ್ಲೆಗಳಲ್ಲೂ ಸೋಮವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಗಂಟೆಗೆ 40ರಿಂದ 60 ಕಿ.ಮೀ ವೇಗದಲ್ಲಿ ಬಿರುಗಾಳಿ ಬೀಸುವ ಸಾಧ್ಯತೆ ಸಾಧ್ಯತೆ ಇದ್ದು ಮೀನುಗಾರಿಕೆಗೆ ತೆರಳದಂತೆ ಬೆಸ್ತರಿಗೆ ಮುನ್ನೆಚ್ಚರಿಕೆ ನೀಡಲಾಗಿದೆ. → 9

ರೆಡ್ ಅಲರ್ಟ್

ರಾಜ್ಯದಲ್ಲಿ ಮಳೆಯು ಮತ್ತಷ್ಟು ತೀವ್ರಗೊಂಡಿದ್ದು, ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಅಲರ್ಟ್ ಘೋಷಿಸಿದೆ. ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಬಾಗಲಕೋಟೆ, ಧಾರವಾಡ, ಕೊಪ್ಪಳ, ಬಳ್ಳಾರಿ, ವಿಜಯನಗರ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಕಾರುಗಳ ಮೇಲೆ ಬಿದ್ದ ಮರಗಳು.

- ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಗಂಟೆಗೆ 40ರಿಂದ 60 ಕಿ.ಮೀ ವೇಗದಲ್ಲಿ ಬಿರುಗಾಳಿ ಬೀಸುವ ಸಾಧ್ಯತೆ
- ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಮತ್ತು ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಸೂಚನೆ
- ಯಾವುದೇ ತುರ್ತು ಪರಿಸ್ಥಿತಿಯನ್ನು ಎದುರಿಸಲು ಜಿಲ್ಲಾಡಳಿತಗಳು ಸಿದ್ಧವಾಗಿರಬೇಕು ಎಂದು ತಿಳಿಸಲಾಗಿದೆ

ರಾಧಾಕೃಷ್ಣನ್ ಎನ್‌ಡಿಎ ಉಪರಾಷ್ಟ್ರಪತಿ ಅಭ್ಯರ್ಥಿ

ದೆಹಲಿ: ಉಪ ರಾಷ್ಟ್ರಪತಿ ಚುನಾವಣೆಗೆ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಕಣಕ್ಕಿಳಿಯಲಿದ್ದಾರೆ.

ಜಗದೀಪ್ ಧನಕರ್ ಅವರ ರಾಜೀನಾಮೆಯಿಂದ ಉಪ ರಾಷ್ಟ್ರಪತಿ ಸ್ಥಾನ ತೆರವಾಗಿದ್ದು, ಸೆಪ್ಟೆಂಬರ್ 9ರಂದು ಚುನಾವಣೆ ನಿಗದಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಎನ್‌ಡಿಎ ಅಭ್ಯರ್ಥಿ ಆಯ್ಕೆ ಮಾಡುವ ಅಧಿಕಾರ ನೀಡಲಾಗಿತ್ತು. ಭಾನುವಾರ ಸಂಜೆ ಬಿಜೆಪಿ ಪ್ರಧಾನ ಕಚೇರಿಯಲ್ಲಿ ನಡೆದ ಬಿಜೆಪಿ ಸಂಸದೀಯ ಮಂಡಳಿ ಸಭೆಯಲ್ಲಿ ಸಿ.ಪಿ.ರಾಧಾಕೃಷ್ಣನ್ ಹೆಸರನ್ನು ಅಂತಿಮಗೊಳಿಸಲಾಯಿತು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ರಾಧಾಕೃಷ್ಣನ್ ಹೆಸರನ್ನು ಅಧಿಕೃತವಾಗಿ ಪ್ರಕಟಿಸಿದರು. ಇಂಡಿಯಾ ಒಕ್ಕೂಟ ಈವರೆಗೂ ಅಭ್ಯರ್ಥಿ ಆಯ್ಕೆಯನ್ನು ಪ್ರಕಟಿಸಿಲ್ಲ.

1957ರ ಅಕ್ಟೋಬರ್ 20ರಂದು ತಮಿಳುನಾಡಿನ ತಿರುಪ್ಪೂರಿನಲ್ಲಿ ಜನಿಸಿದ ರಾಧಾಕೃಷ್ಣನ್ ಅವರು 1970ರ ದಶಕದಲ್ಲಿ ಆರ್‌ಎಸ್‌ಎಸ್‌ಗೆ ಸೇರಿದ್ದರು. 1998, 1999ರಲ್ಲಿ ಕೊಯಮತ್ತೂರಿನಿಂದ ಎರಡು ಬಾರಿ ಸಂಸದರಾಗಿದ್ದರು.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮತ್ತು ಬಿಜೆಪಿ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ಅವರ ನಾಯಕತ್ವದಡಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಜುಲೈ 31, 2024ರಂದು ಮಹಾರಾಷ್ಟ್ರದ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡಿದ್ದರು. ವಿವರಪುಟ → 9

ಇಂದು ಟ್ರಂಪ್-ಝೆಲೆನ್ಸ್ಕಿ ಭೇಟಿ

ವಾಷಿಂಗ್ಟನ್: ಸೋಮವಾರ ಶ್ವೇತಭವನದ ಸಭೆಯಲ್ಲಿ ಭಾಗವಹಿಸಲು ಟ್ರಂಪ್ ಯುರೋಪಿಯನ್ ನಾಯಕರನ್ನು ಆಹ್ವಾನಿಸಿದ್ದು, ವಾಷಿಂಗ್ಟನ್‌ನಲ್ಲಿ ಟ್ರಂಪ್ ಅವರನ್ನು ಭೇಟಿಯಾಗುವುದಾಗಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಸೋಮವಾರ ಝೆಲೆನ್ಸ್ಕಿ ಮತ್ತು ಟ್ರಂಪ್ ನಡುವಿನ ಸಭೆಯ ನಂತರ ತ್ರಿಪಕ್ಷೀಯ ಸಭೆ ನಡೆಯುವ ನಿರೀಕ್ಷೆಯಿದೆ ಎಂದು ಜರ್ಮನ್ ಚಾನ್ಸೆಲರ್ ಫ್ರೆಡ್ರಿಕ್ ಮೆರ್ಜ್ ಹೇಳಿದ್ದಾರೆ

ಹೆಬ್ಬಾಳ ಸೇತುವೆ ಸಂಚಾರಕ್ಕೆ ಮುಕ್ತ

ಬೆಂಗಳೂರು: ಕೆ.ಆರ್.ಪುರ ರಸ್ತೆಯಿಂದ ಮೇಖ್ರಿ ವೃತ್ತದ ಕಡೆಗೆ ವಿಸ್ತರಿಸುವ ಹೆಬ್ಬಾಳದ ಫ್ಲೈಓವರ್ ಕಾಮಗಾರಿಯು ಪೂರ್ಣಗೊಂಡಿದ್ದು, ಇಂದಿನಿಂದ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಮುಕ್ತವಾಗಲಿದೆ. ಈಗಾಗಲೇ ಈ ಮಾರ್ಗದಲ್ಲಿ ಎರಡು ದಿನಗಳ ಕಾಲ ಟ್ರಯಲ್ ರನ್ ನಡೆಸಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಬೆಳಗ್ಗೆ 9.00 ಗಂಟೆಗೆ ಹೆಬ್ಬಾಳದ ಹೊಸ ಮೇಲ್ಸೇತುವೆ ರ‍್ಯಾಂಪ್‌ನ್ನು ಉದ್ಘಾಟಿಸಲಿದ್ದಾರೆ.

ಮೇಘಸ್ಫೋಟ: 61 ಜನ ಸಾವು

ಚಿಸೌತಿ: ಜಮ್ಮು ಮತ್ತು ಕಾಶ್ಮೀರದ ಕಿಶ್ತ್‌ವಾಡ ಜಿಲ್ಲೆಯಲ್ಲಿ ನಡೆದ ಮೇಘಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ ಭಾನುವಾರ 61ಕ್ಕೆ ಏರಿದೆ. ರಕ್ಷಣಾ ಕಾರ್ಯ ನಾಲ್ಕನೇ ದಿನವೂ ಮುಂದುವರಿದಿದೆ. ಚಿಸೌತಿ ಮತ್ತು ಮಚೈಲ್ ಮಾತಾ ದೇವಾಲಯಕ್ಕೆ ಸಂಪರ್ಕ ಪುನರ್‌ಸ್ಥಾಪಿಸಲು ಮತ್ತು ರಕ್ಷಣಾ ಕಾರ್ಯವನ್ನು ಮತ್ತಷ್ಟು ತೀವ್ರಗೊಳಿಸಲು ಸೇನಾ ಎಂಜಿನಿಯರ್‌ಗಳು ಕಬ್ಬಿಣದ ಸೇತುವೆಯ ಕೆಲಸ ಪ್ರಾರಂಭಿಸಿದ್ದಾರೆ.

ದರೋಡೆಗೆ ಸಾಕ್ಷಿ ವ್ಯಕ್ತಿಯ ಕಗ್ಗೊಲೆ

ಮಂಡ್ಯ: ಜ್ಯುವೆಲರಿ ಅಂಗಡಿಯಲ್ಲಿ ಕಳ್ಳತನ ಮಾಡಲು ಬಂದಿದ್ದ ದರೋಡೆಕೋರರ ತಂಡ ಚಿನ್ನಾಭರಣ ದೋಚುವ ವೇಳೆ ಘಟನೆಯನ್ನು ನೋಡಿದ ವ್ಯಕ್ತಿಯನ್ನು ಹತ್ಯೆ ಮಾಡಿ, ಶಾಪ್‌ನಲ್ಲಿದ್ದ ಸಿಸಿಟಿವಿಯ ಡಿವಿಆರ್ ದೋಚಿ ಪರಾರಿಯಾಗಿರುವ ಘಟನೆ ಮಳವಳ್ಳಿ ತಾಲೂಕಿನ ಕಿರುಗಾವಲು ಗ್ರಾಮದಲ್ಲಿ ಭಾನುವಾರ ನಸುಕಿನ ವೇಳೆ ನಡೆದಿದೆ. ಕಿರುಗಾವಲು ಗ್ರಾಮದ ಮಹದೇಶ್ವರ ಹೋಟೆಲ್ ಮಾಲೀಕ ಮಾದಪ್ಪ (72) ಮೃತಪಟ್ಟವರು.

5 ಜಿಲ್ಲೆ ಶಾಸಕರ ಜತೆ ಸಭೆ ಇಂದು

ಬೆಂಗಳೂರು: ದಕ್ಷಿಣ ಕನ್ನಡ, ಬೆಂಗಳೂರು ಗ್ರಾಮಾಂತರ, ಕೋಲಾರ, ಬೆಂಗಳೂರು ದಕ್ಷಿಣ ಹಾಗೂ ಮಂಡ್ಯ ಜಿಲ್ಲೆಯ ಶಾಸಕರು, ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಸಿಎಂ ಸಿದ್ದರಾಮಯ್ಯ ಸೋಮವಾರ ಸಂಜೆ 5 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ತಮ್ಮ ಕಚೇರಿಯಲ್ಲಿ ಸರಣಿ ಸಭೆ ನಡೆಸಲಿದ್ದಾರೆ. ಶಾಸಕರಿಗೆ ಒದಗಿಸಲಾಗಿರುವ ತಲಾ 50 ಕೋಟಿ ರು. ವಿಶೇಷ ಅನುದಾನ ಸೇರಿ ಹಲವು ವಿಷಯಗಳ ಕುರಿತು ಚರ್ಚಿಸಲಿದ್ದಾರೆ.

ವೈದ್ಯರ ರಿಜಿಸ್ಟರ್ ಕಡ್ಡಾಯವಲ್ಲ

ದೆಹಲಿ: ವೈದ್ಯರು ರಾಷ್ಟ್ರೀಯ ವೈದ್ಯಕೀಯ ರಿಜಿಸ್ಟರ್ (ಎನ್‌ಎಂಆರ್)ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕೆಂಬ ನಿಯಮವನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಒಂದೇ ವರ್ಷದೊಳಗೆ ಹಿಂತೆಗೆದುಕೊಂಡಿದ್ದು, ನೋಂದಣಿಯನ್ನು ಈಗ ಸ್ವಯಂ ಪ್ರೇರಿತಗೊಳಿಸಿದೆ. ಪೋರ್ಟಲ್‌ನಲ್ಲಿ ಹಲವಾರು ಅಡೆತಡೆಗಳು ಎದುರಾದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸಮಾಚಾರ ಸಣ್ಣದಲ್ಲ

ಚಿನ್ನದಂಗಡಿ ದರೋಡೆ: ಕಳವು ಕಂಡವನ ಕೊಲೆ

ಮಳವಳ್ಳಿ: ದರೋಡೆಕೋರರ ತಂಡವೊಂದು ಜ್ಯುವೆಲರಿ ಶಾಪ್‌ಗೆ ನುಗ್ಗಿ ಚಿನ್ನಾಭರಣಗಳನ್ನು ಲೂಟಿ ಮಾಡಿ ಪರಾರಿಯಾಗುತ್ತಿದ್ದ ಸಂದರ್ಭದಲ್ಲಿ ಅದನ್ನು ನೋಡಿದ ಪಕ್ಕದ ಅಂಗಡಿಯ ಮಾಲೀಕನನ್ನು ಕತ್ತು ಹಿಸುಕಿ ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ಕಿರುಗಾವಲಿನಲ್ಲಿ ಭಾನುವಾರ ಬೆಳಗಿನ ಜಾವ ಮೂರು ಗಂಟೆ ಸಮಯದಲ್ಲಿ ನಡೆದಿದೆ. ಘಟನೆಯ ವಿವರ: ಕಿರುಗಾವಲು ಗ್ರಾಮದ ಮಹಾಲಕ್ಷ್ಮಿ ಜ್ಯೂವೆಲರ್ಸ್ ಆಂಡ್ ಬ್ಯಾಂಕರ್ಸ್‌ನಲ್ಲಿ ಶನಿವಾರ ತಡರಾತ್ರಿ ದರೋಡೆ ನಡೆಸಲು ದುಷ್ಕರ್ಮಿಗಳ ತಂಡ ಸಂಚು ರೂಪಿಸಿ, ಅಂಗಡಿ ಬಾಗಿಲನ್ನು ಗ್ಯಾಸ್ ಕಟ್ಟರ್ ಮೂಲಕ ಕಟ್ ಮಾಡಿದ್ದಾರೆ. ಬಳಿಕ ಒಳ ನುಗ್ಗಿರುವ ದರೋಡೆಕೋರರು ಚಿನ್ನಾಭರಣಗಳನ್ನು ದೋಚಿ ಪರಾರಿಯಾಗುವಾಗ ಶಬ್ದ ಉಂಟಾಗಿದೆ. ಈ ವೇಳೆ ಪಕ್ಕದ ಮಹದೇಶ್ವರ ಹೋಟೇಲ್ ಮಾಲೀಕ ಮಾದಪ್ಪ ಅವರು ಶಬ್ದವನ್ನು ಕೇಳಿಸಿಕೊಂಡು ಹೋಟೇಲ್ ನಿಂದ ಹೊರಗೆ ಬಂದು ನೋಡಿದ್ದಾರೆ. ಇದರಿಂದ ಗಾಬರಿಗೊಂಡ ದುಷ್ಕರ್ಮಿಗಳ ತಂಡ 67 ವರ್ಷದ ಮಾದಪ್ಪ ಅವರನ್ನು ಹಲ್ಲೆ ನಡೆಸಿ ಕತ್ತು ಹಿಸುಕಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ದರೋಡೆಕೋರರು ಜ್ಯುವೆಲರಿ ಅಂಗಡಿಯಲ್ಲಿದ್ದ ಚಿನ್ನಾಭರಣ, ಹಣ ಜೊತೆಗೆ ಸಿ.ಸಿ. ಟಿವಿಯ ಡಿ.ವಿ.ಆರ್‌ನ್ನು ಹೊತ್ತು ಪರಾರಿಯಾಗಿದ್ದು, ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿಗಳಾದ ತಿಮ್ಮಯ್ಯ, ಗಂಗಾಧರಸ್ವಾಮಿ, ಡಿವೈಎಸ್ಪಿ ಕೃಷ್ಣಪ್ಪ, ಸಿಪಿಐ ಶ್ರೀಧರ್, ಪಿಎಸ್‌ಐ ರವಿಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಕಿರುಗಾವಲು ಗ್ರಾಮದಲ್ಲಿ ಬೆಳಿಗ್ಗಿನ ಜಾವ 2ರಿಂದ 3 ಗಂಟೆಗೆ ನಡೆದಿದೆ. ದರೋಡೆಕೋರರು ಕಳ್ಳತನ ಮಾಡಲು ಗ್ಯಾಸ್ ಕಟ್ಟರ್, ಗ್ಲೌಸ್ ಬಳಸಿದ್ದಾರೆ. ಜೊತೆಗೆ ಮಾದಪ್ಪ ಅವರ ಮೇಲೆ ಯಾವುದೇ ಆಯುಧಗಳನ್ನು ಬಳಸದೇ ಕೈಯಿಂದ ಹತ್ಯೆ ಮಾಡಿದ್ದಾರೆ. ಉಂಗುರ, ಓಲೆಗಳು, ಇನ್ನಿತರೆ ಸಣ್ಣಪುಟ್ಟ ಚಿನ್ನಾಭರಣಗಳನ್ನು ಕದ್ದಿದ್ದು, ಆರೋಪಿಗಳನ್ನು ಆದಷ್ಟು ಬೇಗ ಬಂಧಿಸುತ್ತೇವೆ ಎಂದು ಹೇಳಿದರು.

ರಕ್ತದಾನ ಮಾಡಿ ಜೀವ ಉಳಿಸಿ:ಶಾಸಕ

ಮದ್ದೂರು: ಇತ್ತೀಚಿನ ದಿನಗಳಲ್ಲಿ ರಕ್ತದ ಕೊರತೆಯಿಂದಾಗಿ ಅಪಾರ ಸಂಖ್ಯೆಯ ವ್ಯಕ್ತಿಗಳು ಸಾವನ್ನಪ್ಪುತ್ತಿದ್ದು ಅಮೂಲ್ಯವಾದ ಜೀವ ಉಳಿಸಲು ಪ್ರತಿಯೊಬ್ಬರೂ ರಕ್ತದಾನ ಮಾಡುವುದರ ಮೂಲಕ ಮತ್ತೊಬ್ಬರ ಜೀವ ಉಳಿಸಲು ಮುಂದಾಗಬೇಕೆಂದು ಶಾಸಕ ಕೆ.ಎಂ.ಉದಯ ತಿಳಿಸಿದರು. ಮದ್ದೂರು ಪಟ್ಟಣದ ಮಹಿಳಾ ಸರಕಾರಿ ಕಾಲೇಜಿನಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ಬೃಹತ್ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತಾನಾಡಿದರು. 18 ವರ್ಷದೊಳಗಿನ ಯುವಕ ಯುವತಿಯರು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡುವುದರ ಮೂಲಕ ಮತ್ತೊಬ್ಬರ ಜೀವ ಉಳಿಸಲು ಮುಂದಾಗುವಂತೆ ಆರೋಗ್ಯವಂತರು ಹೆಚ್ಚಿನ ಪ್ರಮಾಣದಲ್ಲಿ ರಕ್ತದಾನ ಮಾಡಿ ಸಂಕಷ್ಟದಲ್ಲಿರುವ ಜೀವಗಳನ್ನು ಉಳಿಸಬೇಕೆಂದು ಮನವಿ ಮಾಡಿದರು. ರೆಡ್‌ಕ್ರಾಸ್ ಸಂಸ್ಥೆಯ ಜಿಲ್ಲಾಧ್ಯಕ್ಷೆ ಮೀರಾಶಿವಲಿಂಗಯ್ಯ, ಕಾಲೇಜು ಪ್ರಾಂಶುಪಾಲ ನಾರಾಯಣ್, ವಕೀಲರಾದ ಪೂರ್ಣಿಮ, ಪರಮೇಶ್ವರಯ್ಯ, ಶಂಕರ್, ಆದರ್ಶ ಸುಮುಖ ನಿಧಿ ಲಿಮಿಟೆಡ್ ಅಧ್ಯಕ್ಷ ಕೆ.ಆರ್.ಕುಮಾರ್, ಇನ್ನರ್‌ವ್ಹೀಲ್ ಅಧ್ಯಕ್ಷ ಎಂ.ಸಿ.ಶ್ವೇತಾಶಶಿಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ಮನ್‌ಮುಲ್ ನಿರ್ದೇಶಕ ಹರೀಶ್‌ಬಾಬು ಇದ್ದರು.

ಹರಳಹಳ್ಳಿ ಕೃಷಿ ಪತ್ತಿನ ಸಂಘದ ಮಹಾಸಭೆ

ಕೆ.ಆರ್.ಪೇಟೆ: ದೇಶದ ಆರ್ಥಿಕ ವ್ಯವಸ್ಥೆಯ ಪ್ರಗತಿಯಲ್ಲಿ ಸಹಕಾರ ಸಂಘಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ ಎಂದು ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಎಚ್.ಟಿ.ಲೋಕೇಶ್ ಹೇಳಿದರು. ಅವರು ಹರಳಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದರು. ವಾಣಿಜ್ಯ ಬ್ಯಾಂಕುಗಳಿಗೆ ಸರಿಸಮಾ ನವಾಗಿ ಸಹಕಾರ ಸಂಘಗಳು ಹೆಚ್ಚಿನ ಕೆಲಸ ವನ್ನು ಮಾಡುತ್ತಿವೆ. ರೈತರಿಗೆ ಸಕಾಲಕ್ಕೆ ಸಾಲ ಸೌಲಭ್ಯಗಳನ್ನು ಒದಗಿಸುತ್ತವೆ. ಷೇರುದಾರರು, ಆಡಳಿತ ಮಂಡಳಿಯ ಪದಾಧಿಕಾರಿಗಳು ಹಾಗೂ ಸಂಘದ ನೌಕರರ ಶ್ರಮದಿಂದ ಇಂದು ನಮ್ಮ ಸಂಘವು ಉತ್ತಮ ಸ್ಥಾನವನ್ನು ಪಡೆದಿದೆ. ಮಹಿಳೆಯರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲವನ್ನು ನೀಡುತ್ತದೆ. ಇದನ್ನು ಸದುಪಯೋಗ ಪಡಿಸಿಕೊಂಡು ಸಕಾಲಕ್ಕೆ ಸಂಘಕ್ಕೆ ಸಾಲ ಮರುಪಾವತಿ ಮಾಡಿದಾಗ ಮಾತ್ರ ಬೇರೆ ಷೇರುದಾರರಿಗೆ ಸಾಲವನ್ನು ನೀಡಬಹುದು ಎಂದರು. ಸಂಘದ ಷೇರುದಾರರ ಮಕ್ಕಳು ಪಿಯುಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಪಡೆದವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಈರೇಗೌಡ, ಸಹಕಾರ ಅಭಿವೃದ್ಧಿ ಅಧಿಕಾರಿ ಭರತ್ ಕುಮಾರ್, ಎಂಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಆದಿಲ್ ಪಾಷಾ,ಸಂಘದ ಉಪಾಧ್ಯಕ್ಷೆ ಭಾಗ್ಯಮ್ಮ,ಮಾಜಿ ಅಧ್ಯಕ್ಷ ಭೈರಾಪುರ ಹರೀಶ್,ಪ್ರೇಂಕುಮಾರ್, ಗುರುಪ್ರಸಾದ್ ,ಚಂದ್ರಶೇಖರ್, ರಮೇಶ್, ದೇವಮ್ಮ, ತಿಮ್ಮಯ್ಯ, ಮಂಜುಳಾ, ಸಂಘದ ಸಿಇಒ ಡಿ.ಆದರ್ಶ,ಆಶಾ,ಅರುಣ ಕುಮಾರ್, ಅನುರ ಇದ್ದರು.

{ ಆರ್.ಅಶೋಕ್ } ವಿಪಕ್ಷ ನಾಯಕ

ಧರ್ಮಸ್ಥಳ ಪ್ರಕರಣದಲ್ಲಿ ಮುಸುಕುಧಾರಿಗೆ ಹಣ ನೀಡಿ ಕರೆದುಕೊಂಡು ಬಂದಂತಿದೆ. ಅವನು ಮುಖ್ಯವಲ್ಲ. ಇದನ್ನು ಯಾರು ಮಾಡುತ್ತಿದ್ದಾರೆ ಎಂಬುದು ಮುಖ್ಯ.ಇದಕ್ಕೆ ವಿದೇಶದಿಂದ ಹಣ ಬರುತ್ತಿದೆ ಅದು ಮುಖ್ಯ. ಜೆಡಿಎಸ್, ಬಿಜೆಪಿ ಸರಕಾರದ ವೇಳೆ ಈ ರೀತಿ ಆಗಿಲ್ಲ. ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರದಲ್ಲಿ ಟಿಪ್ಪು ಗ್ಯಾಂಗ್ ನಿಂದ ಷಡ್ಯಂತ್ರ ನಡೆಯುತ್ತಿದೆ.

ಹೋರಾಟಗಾರರಿಗೆ ಭಾವನಮನ

'ವಾಯ್ಸ್ ಆಫ್ ಕೊಡವ', 'ಯುಕೊ' ಸಹಯೋಗದಡಿ ವಿನೂತನ ಕಾರ್ಯಕ್ರಮ

'ವಾಯ್ಸ್ ಆಫ್ ಕೊಡವ' ದಿಂದ ನೆಪ್ಪುರ ನಳತ್ ಮಾಂಜತ ಮೊಟ್ಟ್ ಎಂಬ ವಿನೂತನ ಕಾರ್ಯಕ್ರಮ ನಡೆಯಿತು.

ಮಡಿಕೇರಿ: ಭಾರತ ಸ್ವಾತಂತ್ರ್ಯದ 79ನೇ ವರ್ಷಾಚರಣೆ ನಿಮಿತ್ತ 'ವಾಯ್ಸ್ ಆಫ್ ಕೊಡವ' ಮತ್ತು ಯುನೈಟೆಡ್ ಕೊಡವ ಆರ್ಗನೈಜೇಷನ್' (ಯುಕೊ)ಸಹಯೋಗದಲ್ಲಿ ನೆಪ್ಪುರ ನಳತ್ ಮಾಂಜತ ಮೊಟ್ಟ್ ಎಂಬ ವಿನೂತನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ದಕ್ಷಿಣ ಕೊಡಗಿನ ಪೊನ್ನಂಪೇಟೆ ಸಮೀಪದ ಕೇವ್ ಇನ್ ಸಭಾಂಗಣದಲ್ಲಿ ಆಯೋಜಿತ ಕಾರ್ಯಕ್ರಮವಲ್ಲಿ, ಭಾರತ ಸ್ವಾತಂತ್ರ್ಯದ ಇತಿಹಾಸದಲ್ಲಿ ಕೊಡಗು ತನ್ನದೇ ಅಧ್ಯಾಯವನ್ನು ಹೊಂದಿದ್ದು, ದೇಶದ ಸ್ವಾತಂತ್ರ್ಯಕ್ಕಾಗಿ ಈ ನಾಡಿನ ಹಿರಿಯರು ತಮ್ಮ ನಿಸ್ವಾರ್ಥ ಸೇವೆಯನ್ನು ನೀಡಿದ್ದಾರೆ, ಸ್ವಾತಂತ್ರ್ಯಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿದ ಹೋರಾಟಗಾರರನ್ನು ಕೊಡಗು ದೇಶಕ್ಕೆ ನೀಡಿದೆ. ಆದರೆ ಅವರಿಗೆ ಸರ್ಕಾರದಿಂದಾಗಲೀ, ಸಾರ್ವಜನಿಕರಿಂದಾಗಲಿ ಸೂಕ್ತವಾದ ಗೌರವ ನೀಡಲಾಗುತ್ತಿಲ್ಲ. ನೆನಪಿನಂಗಳದಲ್ಲಿ ಮರೆಯಾಗಿ ಹೋಗಿರುವ ಅಂತಹಾ ಕೊಡಗಿನ ಹೋರಾಟಗಾರರ ಸೇವೆ, ತ್ಯಾಗ, ಬಲಿದಾನಗಳನ್ನು ಪರಿಚಯಿಸುವ ಛಾಯಾ ಚಿತ್ರ ಪ್ರದರ್ಶನವನ್ನು, ಕೊಡಗಿನ ಗಾಂಧಿ ಪಂದ್ಯಂಡ ಬೆಳ್ಯಪ್ಪ ಹಾಗು ಸ್ವಾತಂತ್ರ್ಯ ಹೋರಾಟಗಾರ್ತಿ ಪಂದ್ಯಂಡ ಸೀತಮ್ಮ ಬೆಳ್ಯಪ್ಪರವರ ಪುತ್ರಿ, ತಾನು 6ತಿಂಗಳ ಮಗುವಾಗಿದ್ದಾಗಲೇ ಬಂದಿಸಲ್ಪಟ್ಟು, ತಾಯಿ ಸೀತಮ್ಮರೊಂದಿಗೆ ವೆಲ್ಲೂರು ಜೈಲಿನಲ್ಲಿ 9 ತಿಂಗಳ ಸೆರೆವಾಸ ಅನುಭವಿಸಿದ್ದ ಬುಟ್ಟಿಯಂಡ ಕುಸುಮ್ ಅಯ್ಯಪ್ಪ ಉದ್ಘಾಟಿಸಿದರು.

ಸಿಎಂ ಕಾನೂನು ಸಲಹೆಗಾರರಾದ ಪೊನ್ನಣ್ಣ ಮಾತನಾಡಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಈ ನಾಡಿನ ಹಿರಿಯರ ತ್ಯಾಗ ಬಲಿದಾನಗಳನ್ನು ನೆನಪಿಸುವ, ಇತಿಹಾಸದ ಮಹತ್ವವನ್ನು ಸಾರುವ ಅದ್ಭುತ ಕಾರ್ಯಕ್ರಮ ಇದಾಗಿದೆ. ಭಾವನಾತ್ಮಕ ಕಾರ್ಯಕ್ರಮ ಆಯೋಜಿಸಿದ ಯುಕೊ ಪ್ರಯತ್ನಕ್ಕೆ ಅಭಿನಂದನೆ ಸಲ್ಲಿಸಿದರು. ಯುಕೊ ತನ್ನ ಮುಂದಿಟ್ಟಿರುವ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ಹೇಳಿದರು.

ಅಖಿಲ ಕೊಡವ ಸಮಾಜದ ಅಧ್ಯಕ್ಷ ಸುಬ್ರಮಣಿ ಮಾತನಾಡಿ, ಸ್ವಾತಂತ್ರ್ಯ ಇತಿಹಾಸದಲ್ಲಿ ಕೊಡವರ ಕೊಡುಗೆ ಅಪಾರವಾದುದು. ಸಿಪಾಯಿದಂಗೆಯ ಪೂರ್ವದ ಘಟನೆಗಳನ್ನು ಪರಿಗಣಿಸುವುದಾದರೆ, ತನ್ನ ಸ್ವಂತ ಸೈನ್ಯದ ಮೂಲಕ ನೂರಕ್ಕೂ ಅಧಿಕ ಬ್ರಿಟಿಷ್ ಸೈನಿಕರನ್ನು ಕೊಂದು ಸದೆ ಬಡಿದ ಮಹಾನ್ ಶೂರ ಮಾತಂಡ ಅಪ್ಪಚ್ಚುರವರಿಗೂ ಸರ್ಕಾರ ಮನ್ನಣೆ ನೀಡಬೇಕು ಎಂದು ಹೇಳಿದರು.

ಯುಕೊ ಅಧ್ಯಕ್ಷ, ಕೊಕ್ಕಲೆಮಾಡ ಮಂಜು ಚಿಣ್ಣಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಇಲ್ಲಿನ ನೈಜ ಹೋರಾಟಗಾರರಿಗೆ ಸ್ಥಳೀಯವಾಗಿ ಸಾರ್ವಜನಿಕರು ಹಾಗು ಸರಕಾರದಿಂದ ಗೌರವ ನೀಡಿ ಸ್ಮರಿಸುವ ಕೆಲಸವಾಗಬೇಕಾಗಿದೆ ಎಂದರು.

ಕೊಡಗಿನ ನೈಜ ಹೋರಾಟಗಾರರನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಪ್ರಯತ್ನದ ಭಾಗವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಹೆಸರಾಂತ ಗಾಯಕರಾದ, ಚೆಕ್ಕೇರ ಪಂಚಮ್ ಬೋಪಣ್ಣ, ಬೊಟ್ಟೋಳಂಡ ಅಶಿತಾ ಬೋಪಣ್ಣ, ಪಳಂಗಂಡ ಮೇಘನಾ ನಾಚಪ್ಪ, ರೀಟಾ ನಾಚಪ್ಪ,ಮತ್ತು ಶಾನ್ ನಾಚಪ್ಪ, ಜೂ.ಕಿಶೋರ್ ಕುಮಾರ್ ಖ್ಯಾತಿಯ ಮಾಳೇಟಿರ ಅಜಿತ್ ಪೂವಣ್ಣರ ದೇಶಭಕ್ತಿ ಸಾರುವ ಗೀತೆಗಳು ನೆರೆದವರ ಕಣ್ಣಾಲಿಗಳು ತೇವಗೊಳ್ಳುವಂತೆ ಮಾಡಿದವು. ಸಾಯಿ ಶಂಕರ್ ಶಾಲೆಯ ವಿದ್ಯಾರ್ಥಿಗಳ ಸಾಂಸ್ಕೃತಿಕ ಪ್ರದರ್ಶನ ಕಾರ್ಯಕ್ರಮಕ್ಕೆ ಮೆರಗು ನೀಡಿತು. ಬೋಡಂಗಡ ಜಗದೀಶ್, ಕೋಪುಡ ಸೌಮ್ಯ ಚಿಣ್ಣಪ್ಪ, ಕೋಟ್ರಮಾಡ ಶೀತಲ್ ಸುಮಂತ್ ಹಾಗು ಕಳ್ಳಿಚಂಡ ತನ್ವಿ ಉತ್ತಪ್ಪ, ಕೊಡಗಿನ ಸ್ವಾತಂತ್ರ್ಯ ಹೋರಾಟಗಾರರಿಗೆ ನುಡಿ ನಮನಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ, ಲೇಖಕಿ ಬೊಮ್ಮಂಡ ಸವೇರ ಚಂಗಪ್ಪ, ಮಾಜಿ ವಿಧಾನ ಪರಿಷತ್ ಸದಸ್ಯ ಚೆಪ್ಪುಡಿರ ಅರುಣ್ ಮಾಚಯ್ಯ, ಕೊಡವ ಸಾಹಿತ್ಯ ಅಕಾಡೆಮಿ ಸದಸ್ಯ ಚೊಟ್ಟೆಯಂಡ ಸಂಜು ಕಾವೇರಪ್ಪ, ಪಂದ್ಯಂಡ ಬೆಳ್ಯಪ್ಪನವರ ಪುತ್ರ ಪಂದ್ಯಂಡ ವಿಜಯ್, ಚೆಕ್ಕೇರ ಬಿಪಿನ್ ಮೊಣ್ಣಯ್ಯ, ಮಲ್ಲೇಂಗಡ ಪ್ರಕಾಶ್ ಚಂಗಪ್ಪ, ಕಾಕಮಾಡ ಚಂಗಪ್ಪ, ರಾಷ್ಟ್ರಪತಿ ಪದಕ ಪುರಸ್ಕೃತೆ ಕಾಕಮಾಡ ಗಂಗಾ ಚಂಗಪ್ಪ, ಬಾಳಿಯಡ ಕರುಣ್ ಕಾಳಪ್ಪ, ಕೊಳ್ಳಿಮಾಡ ಅಜಿತ್ ಅಯ್ಯಪ್ಪ, ಮನೆಯಪಂಡ ಕಾಂತಿ ಸತೀಶ್ ಉಪಸ್ಥಿತರಿದ್ದರು

ಮದ್ದೂರು ರಸ್ತೆ ಅಗಲೀಕರಣ ಕಾಮಗಾರಿಗೆ ಅನುಮತಿ ಶೀಘ್ರ

ಮದ್ದೂರು: ಪಟ್ಟಣವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಿ ಸ್ಥಳೀಯ ನಿವಾಸಿಗಳಿಗೆ ಶಾಶ್ವತ ಯೋಜನೆಗಳಡಿ ಅನುದಾನ ತಂದು ಮಾದರಿ ಪಟ್ಟಣವನ್ನಾಗಿಸಲು ಶ್ರಮಿಸುತ್ತಿರುವುದಾಗಿ ಶಾಸಕ ಕೆ.ಎಂ ಉದಯ ತಿಳಿಸಿದರು.

ಪಟ್ಟಣದ ಕೊಪ್ಪ ವೃತ್ತದಲ್ಲಿ ರಾಜ್ಯ ಹೆದ್ದಾರಿ ಅನುದಾನದಡಿ ಬಿಡುಗಡೆಯಾಗಿರುವ 3.5 ಕೋಟಿ ರೂ. ವೆಚ್ಚದ ರಸ್ತೆ ಮರುಢಾಂಬರೀಕರಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಈಗಾಗಲೇ ಕೋಟ್ಯಾಂತರ ರೂ. ವೆಚ್ಚದ ಯು.ಜಿ.ಡಿ ಸಂಪರ್ಕದ ತ್ಯಾಜ್ಯ ನೀರು ಘಟಕ, ಅಗತ್ಯವಿರುವ ಕಡೆ 5 ಕೋಟಿ ರೂ. ವೆಚ್ಚದ ಅನುದಾನವನ್ನು ಬಿಡುಗಡೆಗೊಳಿಸಿ ಡಾಂಬರೀಕರಣ, ವಿದ್ಯುತ್‌ದೀಪ, ರಸ್ತೆ ಅಗಲೀಕರಣ, ಇನ್ನಿತರ ಕಾಮಗಾರಿಗಳನ್ನು ಕೈಗೊಂಡಿರುವುದಾಗಿ ವಿವರಿಸಿದರು.

ಮುಂದಿನ ಕ್ಯಾಬಿನೆಟ್ ಸಭೆಯಲ್ಲಿ ಪಟ್ಟಣದ ರಸ್ತೆ ಅಗಲೀಕರಣ ಕಾಮಗಾರಿಗೆ ಅನುಮತಿ ದೊರೆಯಲಿದ್ದು ಬಹುದಿನದ ಕನಸು ನನಸಾಗುವ ಜೊತೆಗೆ ನೂರಡಿ ರಸ್ತೆ ನಿರ್ಮಾಣಕ್ಕೆ ಯಾವುದೇ ಕಾನೂನು ತೊಡಕು ಬಾರದಂತೆ ಅಗತ್ಯ ಕ್ರಮ ವಹಿಸಿರುವುದಾಗಿ ಹೇಳಿದರು. ಫುಟ್‌ಬಾತ್‌ನಲ್ಲಿ ಅಕ್ರಮವಾಗಿ ಅಂಗಡಿಗಳನ್ನು ಇಟ್ಟಿರುವ ಮಾಲೀಕರು ಅಧಿಕ ಬಾಡಿಗೆ ವಸೂಲಿ ಮಾಡುತ್ತಿದ್ದು ಇದರಿಂದಾಗಿ ಪುರಸಭೆಗೂ ನಷ್ಟ ಉಂಟಾಗುತ್ತಿತ್ತು ಈಗಾಗಲೇ ವಿದ್ಯುತ್ ಹಾಗೂ ಪುರಸಭೆ ಅಧಿಕಾರಿಗಳಿಗೆ ಯಾವುದೇ ಪರವಾನಗಿ ನೀಡದಂತೆ ಕಟ್ಟುನಿಟ್ಟಾಗಿ ಸೂಚನೆ ನೀಡಿದ್ದು ಅಂತಹ ದೂರುಗಳು ಕೇಳಿ ಬಂದಲ್ಲಿ ಕಟ್ಟುನಿಟ್ಟಿನ ಕ್ರಮದ ಎಚ್ಚರಿಕೆ ನೀಡಿದರು.

ಕೊಪ್ಪ ವೃತ್ತದಿಂದ ಚಾಮನಹಳ್ಳಿ, ದೇಶಹಳ್ಳಿ, ಬೆಸಗರಹಳ್ಳಿ ಹಾಗೂ ಆನೆದೊಡ್ಡಿ ಗ್ರಾಮದವರೆಗೂ ಮರುಢಾಂಬರೀಕರಣಕ್ಕೆ ಚಾಲನೆ ದೊರಕಿದ್ದು ತಾಲೂಕಿನ ಗಡಿಭಾಗದವರಿಗೂ ರಸ್ತೆ ಡಾಂಬರೀಕರಣ ಕಾರ್ಯಕ್ಕೆ ಹೆಚ್ಚಿನ ಒತ್ತು ನೀಡುವುದಾಗಿ ತಿಳಿಸಿದರು.

ಈಗಾಗಲೇ ಕೊಪ್ಪ ವೃತ್ತದಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸಿ ಸಾರ್ವಜನಿಕ ಸೇವೆಗೆ ಬಳಕೆ ಮಾಡಿಕೊಟ್ಟಿದ್ದು ಮತ್ತು ಬಿಡುಗಡೆಯಾಗಿರುವ ಅನುದಾನದಲ್ಲಿ ಬಸ್ ತಂಗುದಾಣ, ಶೌಚಾಲಯ ಇನ್ನಿತರ ಸೌಲಭ್ಯವನ್ನು ಕಲ್ಪಿಸಲು ಕ್ರಮ ವಹಿಸಲಾಗಿದೆ ಎಂದರು. ಈ ವೇಳೆ ಪುರಸಭೆ ಅಧ್ಯಕ್ಷೆ ಕೋಕಿಲಾಅರುಣ್, ಸದಸ್ಯರಾದ ಎಂ.ಬಿ.ಸಚಿನ್, ಸಿದ್ದರಾಜು, ಮೋಹನ್‌ಕುಮಾರ್, ಮನ್‌ಮುಲ್ ನಿರ್ದೇಶಕ ಹರೀಶ್‌ಬಾಬು, ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ಮುಖಂಡರಾದ ಗೋಪಿ, ತ್ಯಾಗರಾಜು, ಕುಚೇಲ, ಶರತ್, ಶ್ರೀನಿವಾಸ್, ರವಿ, ಮಹದೇವ ಇತರರಿದ್ದರು.

ಪಟ್ಟಣದ ಕೊಪ್ಪ ವೃತ್ತದಲ್ಲಿ 3.5 ಕೋಟಿ ರೂ. ವೆಚ್ಚದ ರಸ್ತೆ ಮರುಡಾಂಬರೀಕರಣ ಕಾಮಗಾರಿಗೆ ಶಾಸಕ ಕೆ.ಎಂ ಉದಯ ಗುದ್ದಲಿ ಪೂಜೆ ನೆರವೇರಿಸಿದರು.

ಎಸ್‌ಐಟಿ ವರದಿ ಬಂದರೆ ಸತ್ಯಾಂಶ ಬಯಲು: ಸಚಿವ

ಚಾಮರಾಜನಗರ: ಶ್ರೀಕ್ಷೇತ್ರ ಧರ್ಮಸ್ಥಳ ದ ವಿಚಾರದಲ್ಲಿ ಯಾರು ಕೂಡ ರಾಜಕಾ ರಣ ಮಾಡಬೇಡಿ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಹೇಳಿದರು.

ಗುಂಡ್ಲುಪೇಟೆ ತಾಲೂಕಿನ ಬೆಂಡರವಾಡಿ ಗ್ರಾಮದಲ್ಲಿ ನಡೆದ ನೆನಪಿನ ಭವನ ಅಮೃತ ಮಹೋತ್ಸವ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ್ದ ಸಂಭರ್ದದಲ್ಲಿ ಸುದ್ದಿಗಾರೊಂ ದಿಗೆ ಮಾತನಾಡಿದರು.

ಧರ್ಮಸ್ಥಳದ ವಿಚಾರ ನ್ಯಾಯಕ್ಕೆ ಕಾನೂನಿಗೆ ಸಂಬಂಧಪಟ್ಟ ವಿಚಾರವಾಗಿದೆ. ಒಬ್ಬ ವ್ಯಕ್ತಿ ಯಾರಾದರೂ ದೂರು ನೀಡಿದರೆ ಪೋಲಿಸರು ದೂರು ತೆಗೆದುಕೊಂಡು ಕಂಪ್ಲೇಟ್ ಮಾಡಿ ತನಿಖೆ ಮಾಡಿ ಅದರಲ್ಲಿ ತಪ್ಪು ಕಂಡುಬಂದರೆ ಕೇಸ್ ಹಾಕಿ ಮುಂದೆ ಕಾನೂನು ಪ್ರಕ್ರಿಯೆ ನಡೆಯುತ್ತದೆ. ಅಷ್ಟಕ್ಕೇ ಸೀಮಿತವಾಗಬೇ ಕು ವಿನಾ ರಾಜಕೀಯ ಮಾಡುವುದಾಗಲಿ, ಧಾರ್ಮಿಕ ವಿಚಾರದಲ್ಲಾಗಲಿ, ಯಾವುದೂ ನಡೆಯಬಾರದು ಎಂದರು. ಎಸ್ ಐಟಿ ಅಂತಿಮವಾಗುವುದೆ ಬಿಟ್ಟರೆ.

ಸತ್ಯಾಸತ್ಯೆತೆ ಗೊತ್ತಾಗುತ್ತದೆ. ಅದನ್ನು ಬಿಟ್ಟು ರಾಜಕೀಯ ಮಾಡುವುದು. ಇದಕ್ಕೆ ಧಾರ್ಮಿಕ ವಿಚಾರವನ್ನು ಎಳೆದು ತರುವುದು ಆಗಬಾರದು ಎಂದರು.

ಯುವಪೀಳಿಗೆ ಮೊಬೈಲ್ ಬಿಟ್ಟು ಪುಸ್ತಕ ಹಿಡಿಯಲಿ

ಮೈಸೂರು: ಪುಸ್ತಕಗಳು ಜ್ಞಾನದ ಮೂಲ. ಓದುವಿಕೆಯಿಂದ ಹೊಸ ವಿಷಯ ಕಲಿಯಬಹುದು ಎಂದು ಕವಯತ್ರಿ ಸುಕನ್ಯಾ ಮಾರುತಿ ಹೇಳಿದರು.

ಕನ್ನಡ ಸಾಹಿತ್ಯ ಕಲಾಕೂಟ, ಭದ್ರಶೆಟ್ಟಿ ಬಳಗದ ಸಂಯುಕ್ತಾಶ್ರಯದಲ್ಲಿ ಭಾನುವಾರ ನಡೆದ ಪತ್ರಕರ್ತರ ಭವನದಲ್ಲಿ ಲೇಖಕ ಡಾ.ಭ.ನಾಗರಾಜ್ ಅವರ 'ನಾಸ್ಟಾಲ್ ಜಿಯಾ, ವಿಟ್ನೆಸ್' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು. ಪುಸ್ತಕಗಳಿಂದ ಜೀವನದ ಮೌಲ್ಯಗಳು ತಿಳಿಯಬಹುದು. ಸಮಾಜದ ಒಳಿತಿಗೆ ಬೇಕಾದ ಅಂಶಗಳು, ಬದುಕಿನಲ್ಲಿ ಅನುಸರಿಸಬೇಕಾದ ನೀತಿಗಳು ಅರಿಯಬಹುದು. ಆದ್ದರಿಂದ ಪ್ರತಿಯೊಬ್ಬರು ಪುಸ್ತಕ ಓದುವ ಸಂಸ್ಕೃತಿ ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಯಾವ ಭಾಷೆಯೂ ಅಸಮರ್ಥವಲ್ಲ, ಸಮರ್ಥರೊಬ್ಬರು ಬರುವ ತನಕ ಎಂದು ಕುವೆಂಪು ಹೇಳಿದ್ದಾರೆ. ಅದರಂತೆ ಪ್ರತಿಯೊಂದು ಭಾಷೆಗೆ ತನ್ನದೆಯಾದ ಸ್ಥಾನಮಾನವಿದೆ. ಕನ್ನಡ ಭಾಷೆ ಶ್ರೀಮಂತವಾದ ಸಾಹಿತ್ಯಿಕ ಪರಂಪರೆ ಹೊಂದಿದೆ ಎಂದರು.

ಲೇಖಕ ಡಾ.ಭ.ನಾಗರಾಜ್ ಅವರ 'ನಾಸ್ಟಾಲ್‌ಜಿಯಾ, ವಿಟ್ನೆಸ್' ಕೃತಿ ಬಿಡುಗಡೆ ನಡೆಯಿತು.

ಲೇಖಕ ಭ.ನಾಗರಾಜ್ ಬರಹದ ಮೂಲಕ ಸಮಾಜವನ್ನು ಎಚ್ಚರಿಸುವ ಕೆಲಸ ಮಾಡುತ್ತಿದ್ದಾರೆ. ತಮ್ಮ ಕೃತಿಯಲ್ಲಿ ವಾಸ್ತವ ಸಂಗತಿಯ ಅರಿವು ಮೂಡಿಸುವ ಪ್ರಯತ್ನ ಮಾಡಿದ್ದಾರೆ. ನಿಕಟವಾದ ವಿಷಯ ಪ್ರಸ್ತಾಪ ಮಾಡಿದ್ದು, ವಿಮರ್ಶಾತ್ಮಕವಾಗಿದೆ. ಭಾಷೆಯೂ ಸರಳವಾಗಿದ್ದು, ಹೃದಯಸ್ಪರ್ಶಿಯಿಂದ ಕೂಡಿದೆ. ಓದುಗರು ಆಯಾಸವಿಲ್ಲದೆ ಓದಿಕೊಂಡು ಹೋಗಬಹುದು. ಬರಹವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು ಎಂದರು.

ನಾಸ್ಟಾಲ್‌ಜಿಯಾ ಕೃತಿ ಕುರಿತು ಮಾತನಾಡಿದ ಅಂಕಣಕಾರ ಜಿ.ಎಲ್.ತ್ರಿಪುರಾಂತಕ, ಲೇಖಕರು ವೃತ್ತಿಯಲ್ಲಿ ವೈದ್ಯರಾಗಿ ಪ್ರವೃತ್ತಿಯಲ್ಲಿ ಸಾಹಿತಿಯಾಗಿದ್ದಾರೆ. ತಮ್ಮ ಕೃತಿಯಲ್ಲಿ ಸತ್ಯಕಥೆ ದಾಖಲಿದ್ದಾರೆ. ಇದೊಂದು ಅರ್ಥಪೂರ್ಣವಾದ ಕೃತಿಯಾಗಿದೆ. ಎಲ್ಲರೂ ಓದಬೇಕು ಎಂದರು.

ಇಂದಿನ ಯುವಪೀಳಿಗೆ ಮೊಬೈಲ್‌ನಲ್ಲಿ ಮುಳಗಿದ್ದಾರೆ. ಮಾನಸಿಕ ಸ್ಥಿರತೆ ಕಳೆದುಕೊಳ್ಳುತ್ತಿದ್ದಾರೆ. ಪುಸ್ತಕ ಓದುವುದು ಹವ್ಯಾಸವಾಗಿಸಿಕೊಳ್ಳಬೇಕು. ಲೇಖಕರು 82ರ ಹರೆಯದಲ್ಲೂ ಕೃತಿ ರಚಿಸುವ ಮೂಲಕ ಮಾದರಿಯಾಗಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ನಾಗರಾಜ್ ಅವರು ವೈದ್ಯ ಲೇಖಕರಾಗಿ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದಾರೆ. ಹಲವು ಕಾವ್ಯ ಸಂಕಲನಗಳನ್ನ ಹೊರ ತಂದಿದ್ದಾರೆ ಎಂದು ಪ್ರಶಂಸಿಸಿದರು. ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಲೇಖಕ ಡಾ. ಭ.ನಾಗರಾಜ್, ಕಾವೇರಿ ಕಾಲೇಜಿನ ಪ್ರಾಧ್ಯಾಪಕಿ ಬಿ.ಎಂ.ಸುಷ್ಮಾ ಇದ್ದರು.

ಡೇರಿ ಹಾಲು ಉತ್ಪಾದಕರ ಆಸ್ತಿ

ಕೆ ಆರ್ ಪೇಟೆ: ಹಾಲಿನ ಡೇರಿಯು ಗ್ರಾಮದ ಹಾಗೂ ಹಾಲು ಉತ್ಪಾದಕರ ಆಸ್ತಿ. ಅದನ್ನು ರಕ್ಷಣೆ ಮಾಡಬೇಕೆಂದು ಹಾಲು ಉತ್ಪಾದಕರಿಗೆ ಮನ್ಮುಲ್ ನಿರ್ದೇಶಕ ಎಂ ಬಿ ಹರೀಶ್ ಸಲಹೆ ನೀಡಿದರು.

ಅವರು ರಂಗನಾಥಪುರ ಹಾಗೂ ಹರಪನಹಳ್ಳಿ ಕ್ರಾಸ್ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನೋಡುತ್ತಿದ್ದೇವೆ.ಎಷ್ಟೇ ವಿದ್ಯಾಭ್ಯಾಸವನ್ನು ಮಾಡಿದ್ದರೂ ವಿದ್ಯಾಭ್ಯಾಸಕ್ಕೆ ತಕ್ಕಂತೆ ಉದ್ಯೋಗ ಸಿಗುವುದಿಲ್ಲ.ಆದ್ದರಿಂದ ಯುವಕರು, ಯುವತಿಯರು ಹೈನುಗಾರಿಕೆಯಲ್ಲಿ ಪಾಲ್ಗೊಂಡು ಆದಾಯವನ್ನು ಗಳಿಸುವಂತೆ ಕಿವಿಮಾತು ಹೇಳಿದರು. ಮನ್ಮುಲ್ ನಿರ್ದೇಶಕ ಡಾಲು ರವಿ ಮಾತನಾಡಿ, ಖಾಸಗೀ ಹಾಲಿನ ಡೇರಿಗೆ ಹಾಲನ್ನು ಸರಬರಾಜು ಮಾಡಿದರೆ ಏನು ನಿಮಗೆ ಉಪಯೋಗವಿಲ್ಲ. ಆದರೆ ಮಂಡ್ಯ ಜಿಲ್ಲಾ ಹಾಲು ಒಕ್ಕೂಟಕ್ಕೆ ಹಾಲನ್ನು ಸರಬರಾಜು ಮಾಡುವು ದರಿಂದ ಅನೇಕ ಸೌಲಭ್ಯಗಳನ್ನು ಒದಗಿಸುತ್ತದೆ.ಆದ್ದರಿಂದ ಹಾಲು ಉತ್ಪಾದಕರು ರಾಸುಗಳನ್ನ ಅದರಲ್ಲೂ ಎಮ್ಮೆ ಕಟ್ಟುವ ಕೆಲಸವನ್ನು ಮಾಡುವು ದರಿಂದ ಉತ್ಪಾದಕರಿಗೆ ಉತ್ತಮ ಆದಾಯವನ್ನು ಗಳಿಸಬಹುದು ಎಂದು ತಿಳಿಸಿದರು. ಮನ್ಮುಲ್ ಉಪ ವ್ಯವಸ್ಥಾಪಕ ಪ್ರಸಾದ್,ಮಾರ್ಗ ವಿಸ್ತರಣಾ ಧಿಕಾರಿ ಗುರುರಾಜ್ ಎ ಸುರ್ಗೀಹಳ್ಳಿ, ಗ್ರಾಪಂ ಸದಸ್ಯರಾದ ಶ್ರೀನಿವಾಸ್, ಸತ್ಯ, ಸಂಘದ ಉಪಾಧ್ಯಕ್ಷ ರಾಮೇಗೌಡ, ಚಂದ್ರಚಾರಿ, ಸೋಮಶೇಖರ್, ಜಯರಾಂ, ಮಣಿ, ದೀಪಾ, ಕುಮಾರ್, ವೆಂಕಟಾಚಲ ಮನೋಜ್, ವೇದಾವತಮ್ಮ, ಸವಿತಾ, ಕಾರ್ಯದರ್ಶಿ ಲಕ್ಷ್ಮೀ ನಾರಾಯಣ್ ,ಉಮೇಶ್, ರುದ್ರೇಶ್,ಲಕ್ಷ್ಮಮ್ಮ ಇದ್ದರು.

ಕೃಷ್ಣನ ತತ್ವಗಳು ನೆಮ್ಮದಿ ತರಲಿವೆ

ಮಂಡ್ಯ: ಕೃಷ್ಣ ಜಗತ್ತಿಗೆ ನೀಡಿರುವ ವಿಚಾರಗಳು ನಮ್ಮ ಜೀವನದಲ್ಲಿ ನೆಮ್ಮದಿ ಕೊಡುವ ಮಾರ್ಗದ ಕಡೆ ಕೊಂಡೊಯ್ಯುತ್ತದೆ ಎಂದು ಮೇಲುಕೋಟೆ ಇಸ್ಕಾನ್ ಮುಖ್ಯಸ್ಥರಾದ ಆನಂದ ಗೌರಂಗದಾಸ ಅವರು ಹೇಳಿದರು.

ನಗರದ ಶಾರದ ಚಂದ್ರಮೌಳೇಶ್ವರ ಪ್ರಾರ್ಥನಾ ಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೃಷ್ಣಾ ನಮ್ಮೆಲರ ಅಚ್ಚು ಮೆಚ್ಚಿನ ಭಗವಂತ. ಭಾರತ ಮಾತ್ರವಲ್ಲದೇ ವಿಶ್ವದಾದ್ಯಂತ ಭಗವಂತಾ ಕೃಷ್ಣನನ್ನು ಆರಾಧಿಸಲು ಕಾರಣ ಇಸ್ಕಾನ್ ಸಂಸ್ಥೆಯ ಆಚಾರ್ಯರಾದ ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು ಎಂದು ಹೇಳಿದರು.

ಕೃಷ್ಣ ಭಗವದ್ಗೀತೆಯಲ್ಲಿ ಹೇಳಿರುವ ವಿಚಾರಗಳು ಸಹ ನಮಗೆ ಸಹಾಯ ಮಾಡುವ ಜ್ಞಾನ.

ಏನೇ ಮಾಡಿದರೂ ನನಗಾಗಿ ಮಾಡು ಅಂತ ಭಗವದ್ಗೀತೆಯಲಿ ಹೇಳಿಕೊಂಡಿದ್ದಾನೆ. ಆದ್ದರಿಂದ ನೀವೆಲ್ಲರೂ ಒಳ್ಳೆಯ ಮನಸಿನಿಂದ ಸತ್ ಕಾರ್ಯ ನಿರ್ವಹಿಸಿ ಎಂದು ಹೇಳಿದರು.

ಕಾರ್ಯಕ್ರಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ವಿ ನಂದೀಶ್, ಕರ್ನಾಟಕ ಜನಪರ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಎಸ್.ಎಂ ಜವರೇಗೌಡ ಹಾಗೂ ಮುಖಂಡರುಗಳಾದ ಮಾದೇಗೌಡ, ಪ್ರಕಾಶ್, ಮಹೇಶ್ ಉಪಸ್ಥಿತರಿದ್ದರು.

ವರದಿ ಜಾರಿ ದಲಿತ ಗೊಂದಲ ಸೃಷ್ಟಿ

ಚಾಮರಾಜನಗರ: ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ಒಳ ಮೀಸಲಾತಿ ಏಕ ಸದಸ್ಯ ವಿಚಾರಣಾ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ವರದಿ ಜಾರಿಗೆ ಸರಕಾರದ ವಿಳಂಬದಿಂದ ದಲಿತ ಸಮುದಾಯಗಳಲ್ಲಿ ಗೊಂದಲ,ಕಂದಕ ಸೃಷ್ಟಿಯಾಗುತ್ತಿದೆ ಇದಕ್ಕೆ ರಾಜ್ಯಸರಕಾರವೇ ನೇರ ಕಾರಣವಾಗಿದೆ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಅರಕಲವಾಡಿ ನಾಗೇಂದ್ರ, ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಒಳ ಮೀಸಲಾತಿ ಏಕ ಸದಸ್ಯ ವಿಚಾರಣಾ ಆಯೋಗದ ವರದಿ ವೈಜ್ಞಾನಿಕವಾಗಿದ್ದು, ಆದ್ದರಿಂದ ಯಥಾವತ್ತಾಗಿ ವರದಿಯನ್ನು ಕೂಡಲೇ ಜಾರಿಗೊಳಿಸಬೇಕು. ಎಂದು ಒತ್ತಾಯಿಸಿದರು

101 ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಇಲ್ಲದ 4 ಲಕ್ಷ ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡರನ್ನು ಇ ಗುಂಪಿಗೆ ಸೇರಿಸಿದ್ದಾರೆ. ಮೀಸಲಾತಿಯೇ ಸಿಗದ 42 ಪರಿಶಿಷ್ಟ ಜಾತಿಗಳಿವೆ. 12 ಪರಿಶಿಷ್ಟ ಜಾತಿಗಳವರು ಸರಕಾರಿ ನೌಕರಿಯನ್ನೇ ಪಡೆದಿಲ್ಲ. ಇಂತಹವರನ್ನು ಎ ಗುಂಪಿಗೆ ಸೇರಿಸಿದ್ದಾರೆ. ಈ ಮೂಲಕ ಸೌಲಭ್ಯ ವಂಚಿತರಿಗೆ ನ್ಯಾಯ ದೊರಕಿಸಿದ್ದಾರೆ ಎಂದರು.

2.50 ಲಕ್ಷ ಬಲಗೈ ಗುಂಪಿನವರನ್ನು ಎಡಗೈ ಗುಂಪಿಗೆ ಸೇರಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಇದರಿಂದ ಎಡಗೈ ಗುಂಪಿಗೆ ನಷ್ಟವಾಗಲಿದೆ. ಆದರೂ, ಎಡಗೈ ಮುಖಂಡರು ತಕರಾರು ತೆಗೆದಿಲ್ಲ. ಪರೆಯ, ಪರೈಯನ್, ಅಲ್ಲನ್ ಸೇರಿದಂತೆ ಇನ್ನು ಕೆಲವು ಸಣ್ಣ ಸಮುದಾಯಗಳು ಬಲಾಢ್ಯರ ಜೊತೆ ಹೋರಾಡಲಾರರು ಎಂಬ ಕಾರಣಕ್ಕೆ ಪ್ರತ್ಯೇಕ ಮೀಸಲಿಗೆ ಶಿಫಾರಸ್ಸು ಮಾಡಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಜಿಲ್ಲಾ ಮಾಧ್ಯಮ ಸಹ ಸಂಚಾಲಕ್ ರಾಮಸಮುದ್ರ ಶಿವಣ್ಣ, ವಕೀಲರಾದ ಸಿದ್ದೇಶ್. ಡಿಎಸ್‌ಎಸ್ ಸಂಚಾಲಕ ಬೆಳ್ಳಿಯಪ್ಪ, ಮುಖಂಡರಾದ ಸುಂದರ್, ಕಿರಣ್ ಹಾಜರಿದ್ದರು

ಕನ್ನಡ ಹೋರಾಟಗಾರ ಸುದರ್ಶನ್ ನಿಧನ

ಮೈಸೂರು: ಕನ್ನಡ ಪರ ಹೋರಾಟಗಾರ ಹಾಗೂ ಮೈಸೂರಿನ ರಾಮಕೃಷ್ಣನಗರದ ನೃಪತುಂಗ ಕನ್ನಡ ಶಾಲೆಯ ಸ್ಥಾಪಕರಲ್ಲೊಬ್ಬರಾದ ಸ.ರ. ಸುದರ್ಶನ್ (73) ಭಾನುವಾರ ಹೃದಯಾಘಾತದಿಂದ ವಿಜಯನಗರದ ತಮ್ಮ ಮನೆಯಲ್ಲಿ ನಿಧನರಾದರು.ಅವರಿಗೆ ಪುತ್ರಿ, ರಂಗ ಕಲಾವಿದೆ ನುಡಿ ಸುದರ್ಶನ್ ಇದ್ದಾರೆ. ಐವತ್ತು ವರ್ಷಗಳ ಹಿಂದೆಯೇ ಮೊದಲ ಬಾರಿಗೆ ಕನ್ನಡ ಚಳವಳಿಯಲ್ಲಿ ಸುದರ್ಶನ್ ಪಾಲ್ಗೊಂಡು ಅಂದಿನಿಂದ ಇಂದಿನವರೆಗೆ ಸತತವಾಗಿ ಕನ್ನಡ ಚಳವಳಿಯಲ್ಲಿ ಭಾಗಿಯಾಗಿದ್ದರು. ಎಂಬತ್ತರ ರ ದಶಕದ ಗೋಕಾಕ್ ಚಳವಳಿಯಲ್ಲಿ ಹೋರಾಟ ನಡೆಸಿ ಬಂಧನ ಅನುಭವಿಸಿದರು. ಕನ್ನಡ ಕ್ರಿಯಾ ಸಮಿತಿಗೆ ಕೊನೆವರೆಗೂ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಮೈಸೂರು ವಿವಿ ಪ್ರಸಾರಾಂಗದಲ್ಲಿ ಗೌರವ ಸಂಪಾದಕರಾಗಿ ನಾಲ್ಕು ಸಂಪುಟಗಳ 25000 ಪದಗಳಿರುವ ಸಂಕ್ಷಿಪ್ತ ಇಂಗ್ಲಿಷ್ ಕನ್ನಡ ನಿಘಂಟು' ಸಿದ್ಧಪಡಿಸಿದ್ದು, ಅಚ್ಚಿನಲ್ಲಿದೆ. ಇವರೇ ಸ್ವಂತ ಪ್ರಕಟಿಸಿದ 'ಶಾಲಾ ವಿದ್ಯಾರ್ಥಿಗಳಿಗಾಗಿ ಇಂಗ್ಲಿಷ್ ಕನ್ನಡ ನಿಘಂಟು' 15 ಮುದ್ರಣ ಕಂಡಿದೆ. ಮೈಸೂರು ವಿವಿ ಪ್ರಸಾರಾಂಗದಲ್ಲಿ ಉಪನಿರ್ದೇಶಕರಾಗಿ 2014ರಲ್ಲಿ ನಿವೃತ್ತರಾಗಿದ್ದರು. ಇವರ ಪಾರ್ಥಿವ ಶರೀರವನ್ನು ಬೆಳವಾಡಿಯ ಫೇಮ್ ಆಸ್ಪತ್ರೆಗೆ ದಾನ ಮಾಡುವುದಾಗಿ ಕುಟುಂಬ ಮೂಲಗಳು ತಿಳಿಸಿವೆ.

ಡಾ. ಸಾರಾ ಧನುಷ್ ಉಚಿತ ಸೇವೆ ಮಾದರಿ

ಕೆ ಆರ್.ನಗರ: ದುಡ್ಡಿಲ್ಲದ ರೋಗಿಯನ್ನು ಮುಟ್ಟದ ವೈದ್ಯರಿರುವ ಕಾಲದಲ್ಲಿ ತಜ್ಞ ವೈದ್ಯರಾಗಿರುವ ಡಾ. ಸಾರಾ ಧನುಷ್ ಉಚಿತ ಸೇವೆ ಮಾಡುವ ಜೊತೆಗೆ ಹಣ ಸಹಾಯ ಮಾಡುವ ಇಂತಹ ವೈದ್ಯರು ಮಾಣಿಕ್ಯ ವಿದ್ದಂತೆ ಎಂದು ಜೆಡಿಎಸ್ ನ ಹಿರಿಯ ಮುಖಂಡ ಪಿ ಎಲ್ ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಅರ್ಜುನಹಳ್ಳಿ ಗಣೇಶ್ ಹೇಳಿದರು.

ಡಾ.ಸಾ ರಾ ಧನುಷ್ ರವರನ್ನು ಬಟ್ಟೆ ಅಂಗಡಿಯಲ್ಲಿ ಅಭಿಮಾನಿಗಳು ಸನ್ಮಾನಿಸುತ್ತಿರುವುದು.

ಪಟ್ಟಣದಲ್ಲಿ ಮಾಜಿ ಸಚಿವ ಸಾರಾ ಮಹೇಶ್ ಅವರ ಹಿರಿಯ ಪುತ್ರ ಡಾ. ಸಾರಾ ಧನುಷ್ ರವರು ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಜೊತೆಗೂಡಿ ಹಲವಾರು ಜನ ಅನಾರೋಗ್ಯದಿಂದ ಬಳಲುತ್ತಿದ್ದ ಹತ್ತಾರು ಜನರ ಮನೆಗೆ ಭೇಟಿ ನೀಡಿ ಅವರ ಪರೀಕ್ಷಿಸುವ ಜೊತೆಗೆ ಪರಿಹಾರ ನೀಡಿ, ಇಂತಹ ಕೆಲಸವನ್ನು ಎಷ್ಟು ಜನ ವೈದ್ಯರು ಮಾಡಬಲ್ಲರು ಎಂದು ಪ್ರಶ್ನಿಸಿದರು.

ತನ್ನ ತಂದೆಯನ್ನೇ ಮೀರಿಸಿದ ಮಗ ಡಾ.ಸಾ ರಾ ಧನುಷ್ ಎಂಬ ಹೆಗ್ಗಳಿಕೆಗೆ ಹೆಸರುವಾಸಿಯಾಗಲು ಹೆಚ್ಚು ದಿನ ಬೇಕಾಗಿಲ್ಲ. ಮಾಜಿ ಸಚಿವ ಸಾರಾ ಮಹೇಶ್ ಅವರು 23 ವರ್ಷಗಳಿಂದ ತಮ್ಮ ಸ್ವಂತ ಹಣದಿಂದ ವಿದ್ಯಾರ್ಥಿಗಳಿಗೆ ನೋಟ್ ಬುಕ್, ಅಂಗವಿಕಲರಿಗೆ ಬಸ್ ಪಾಸ್ ಜೊತೆಗೆ ವಿಮೆ ಮಾಡಿಸುವ ಹಾಗೂ ಮಹಿಳಾ ಸಂಘಗಳ ಬಲವರ್ಧನೆಗೆ ಸಹಾಯ ರೈತರು ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯ ಮಾಡುತ್ತಿದ್ದಂತೆಯೇ ಅವರ ಮಗ ಡಾ. ಧನುಷ್ ಕೂಡ ಹಣ ಸಹಾಯ ಮಾಡುತ್ತಿರುವುದು ಇತರರಿಗೆ ಮಾದರಿ ಎಂದು ಬಣ್ಣಿಸಿದರು.

ಡಾ. ಸಾ ರಾ ಧನುಷ್ ಮಾತನಾಡಿ, ನನಗೆ ಪ್ರಚಾರ ಮತ್ತು ಯಾವುದೇ ಬೇರೆ ಆಸೆ ಆಕಾಂಕ್ಷಿಗಳಿಂದ ಈ ಸೇವೆಯನ್ನು ಮಾಡುತ್ತಿಲ್ಲ. ನನ್ನ ತಂದೆ ತಾಯಿ ನೀಡಿದ ಮಾರ್ಗದರ್ಶನದಂತೆ ಈ ಕ್ಷೇತ್ರದ ಜನರ ಸೇವೆ ಮಾಡುತ್ತಿದ್ದೇನೆ. ಯಾವುದೇ ನಿರೀಕ್ಷೆಯಿಲ್ಲದೆ ಉಚಿತ ಚಿಕಿತ್ಸೆ ನೀಡುತ್ತೇನೆ ಎಂದು ತಿಳಿಸಿದರು. ಜೆಡಿಎಸ್ ವಕ್ತಾರ ಕೆ ಎಲ್ ರಮೇಶ್ ಜೆಡಿಎಸ್ ಹಿರಿಯ ಮುಖಂಡರುಗಳಾದ ಎಚ್ ಪಿ ಶಿವಣ್ಣ ಕೃಷ್ಣ ಶೆಟ್ಟಿ ಚಂದಗಾಲ್ ಡಿಂಡಿಮ ಬಾಲೂರು ಜವರೇಗೌಡ, ಮೂಲೆ ಪೆಟ್ಲು ಮಹದೇವ್, ಮಂಜುನಾಥ್, ತಿಮ್ಮೇಗೌಡ, ಮಹದೇವ್, ಮುಂಡೂರು ಮನು ಗೌಡ, ನಂಜುಂಡೇಗೌಡ, ಮರಿಗೌಡ, ಜೀವನ್ , ಮೋಹನ ಅವಿನಾಶ್ ಜಗದೀಶ್ ಇದ್ದರು.

ಭಾವನಾತ್ಮಕ ರಾಜಕಾರಣ

ಮೈಸೂರು: ನಿರುದ್ಯೋಗ ನಿವಾರಣೆಗೆ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂಬ ಪ್ರಧಾನಿ ನರೇಂದ್ರ ಮೋದಿ ನೀಡಿದ ಭರವಸೆ ಹುಸಿಯಾಗಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷ(ಸಿಪಿಐ) ರಾಜ್ಯ ಸಹ ಕಾರ್ಯದರ್ಶಿ ಅಜ್ಜದ್ ಟೀಕಿಸಿದರು. ಪಕ್ಷದ ಮಂಡಳಿ ಆಶ್ರಯದಲ್ಲಿ ಭಾನುವಾರ ನಗರದ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಕೇಂದ್ರ ಸರಕಾರ ಜನರ ಸಮಸ್ಯೆಗಳನ್ನು ಬದಿಗೆ ಸರಿಸಿ ಕೇವಲ ಭಾವನಾತ್ಮಕ ರಾಜಕಾರಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಮೋದಿ ಅಧಿಕಾರಕ್ಕೆ ಬರುವ ಮುಂಚೆ ಗ್ಯಾಸ್ ಬೆಲೆ 400 ರೂ. ಇತ್ತು. ಇದೀಗ 900 ರೂ.ಗೆ ಏರಿಕೆಯಾಗಿದೆ. 40 ರೂ. ಇದ್ದ ಪೆಟ್ರೋಲ್ ಬೆಲೆ 100 ರೂ.ಗಡಿ ದಾಟಿದೆ. ಎಲ್ಲ ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಏರಿದ್ದು, ಜನಸಾಮಾನ್ಯರ ಬದುಕು ದುಸ್ತರವಾಗಿದೆ. ದೇಶದಲ್ಲಿ ಶೇ.5 ರಷ್ಟು ಶ್ರೀಮಂತರು ದೇಶದ ಶೇ.70 ರಷ್ಟು ಸಂಪತ್ತನ್ನು ಹೊಂದಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಧರ್ಮ ಆಧಾರಿತ ರಾಜಕಾರಣ ಸಿಪಿಐ ಅಧಿಕಾರದಿಂದ ದೂರ ಇಟ್ಟಿದೆ. ಚುನಾವಣಾ ರಾಜಕಾರಣದಲ್ಲಿ ನಾವು ಹಿನ್ನಡೆ ಸಾಧಿಸಿದ್ದೇವೆ ಎಂಬುದು ನಿಜ. ಆದರೆ, ಜನಪರ ಹೋರಾಟದಲ್ಲಿ ನಾವು ಸದಾ ಮುಂದೆ ಇದ್ದೇವೆ ಎಂದರು. ಕಾರ್ಯಕ್ರಮದಲ್ಲಿ ಸಿಪಿಐ ಪದಾಧಿಕಾರಿಗಳಾದ ರಾಮಕೃಷ್ಣ, ಎನ್.ಕೆ. ದೇವದಾಸ್, ರಾಜು, ಸೋಮರಾಜ್ ಅರಸ್ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

‘ನಶೆ ಮುಕ್ತ ಭಾರತ’ ಜಾಗೃತಿಗೆ ಅಭಿಯಾನ

ಮಧುಗಿರಿ: ಪಟ್ಟಣದ ಪೊಲೀಸ್ ಠಾಣಾ ವತಿಯಿಂದ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಗುರುವಾರ ನಶೆ ಮುಕ್ತ ಭಾರತ ಅಭಿಯಾನ ಕಾರ್ಯಕ್ರಮ ದ ಮೂಲಕ ಮಾದಕ ವಸ್ತುಗಳ ಬಳಕೆ ಮತ್ತು ಪೂರೈಕೆಯ ವಿರುದ್ಧ ಹಾಗೂ ದುಷ್ಪರಿಣಾಮ ಬಗ್ಗೆ ಜಾಗೃತಿಯನ್ನು ಮೂಡಿಸಲಾಯಿತು. ಮಧುಗಿರಿ ಪಟ್ಟಣದ ರಾಘವೇಂದ್ರ ಹಾಗೂ ಎಂಜಿಎಂ ಶಾಲೆಗಳಲ್ಲಿ ಪೊಲೀಸ್ ಇಲಾಖೆ ವತಿಯಿಂದ ಅರಿವು ಮೂಡಿಸಿ ಕಾನೂನಿನ ಬಗ್ಗೆ ತಿಳಿ ಹೇಳಿದರು. ಪಿಎಸ್ಐ ಮುತ್ತುರಾಜು,ಎಎಸ್ಐ ರವೀಶ್, ಹೆಡ್ ಕಾನ್ಸ್ಟೇಬಲ್ ಜಾಫರ್ ಸಾಧಿಕ್, ಶಿಕ್ಷಕರು ಹಾಗೂ ಸಾರ್ವಜನಿಕರು ಇದ್ದರು.

ವೆಂಕಟೇಶ್ವರ ಸ್ವಾಮಿಗೆ ಬೆಣ್ಣೆಯ ಅಲಂಕಾರ

ಶಿರಾ : ಶಿರಾ ನಗರದ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಶನಿವಾರದ ಪ್ರಯುಕ್ತ ಶ್ರೀ ವೆಂಕಟೇಶ್ವರ ಸ್ವಾಮಿಗೆ ಬೆಣ್ಣೆಯ ಅಲಂಕಾರ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ನೂರಾರು ಸಂಖ್ಯೆಯ ಭಕ್ತರು ಆಗಮಿಸಿ ಸ್ವಾಮಿಯ ದರ್ಶನ ಪಡೆದರು.

ಶ್ರೀ ಕೃಷ್ಣ ನ ಬದುಕು, ಬೋಧನೆ ಸದಾ ಪ್ರಸ್ತುತ

ಚಿಂತಾಮಣಿ:ಶ್ರೀಕೃಷ್ಣ ಪರಮಾತ್ಮನ ಬದುಕು ಹಾಗೂ ಬೋಧನೆ ಸದಾ ಕಾಲಕ್ಕೂ ಪ್ರಸ್ತುತವಾಗಿರುತ್ತದೆ.ಗೀತೆಯ ಮೂಲಕ ನೀಡಿರುವ ಸಂದೇಶ ಜನರ ಬದುಕನ್ನು ಮುನ್ನಡೆಸುವಥಿ ದಾರಿದೀಪದಂತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.
ತಾಲೂಕು ಆಡಳಿತ,ಹಿಂದುಳಿದ ವರ್ಗಗಳ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಯಾದವ ಸಮುದಾಯದ ಸಂಯುಕ್ತ ಆಶ್ರಯದಲ್ಲಿ ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಶ್ರೀಕೃಷ್ಣಜನಾಷ್ಟಮಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಶ್ರೀಕೃಷ್ಣನ ಬಾಲ್ಯಲೀಲೆಗಳು ಮತ್ತು ಪವಾಡಗಳನ್ನು ಅರಿಯದವರು ಯಾರು ಇಲ್ಲ.ಸಮಾಜದ ಎಲ್ಲ ವರ್ಗಗಳು ಸಹ ಶ್ರೀಕೃಷ್ಣ ಜಯಂತಿ ಆಚರಣೆ ಮಾಡುತ್ತಾರೆ,ಪೂಜೆ ಸಲ್ಲಿಸುತ್ತಾರೆ.ಧರ್ಮದ ರಕ್ಷಣೆ ಮತ್ತು ಅಧರ್ಮದ ನಾಶಕ್ಕೆ ಸಂಕೇತವೇ ಎಂದರು.
ಕಲೆ ಮತ್ತು ಸಂಸ್ಕೃತಿ,ಸಂಪ್ರದಾಯ ವೈಜ್ಞಾನಿಕವಾಗಿ ಅಧ್ಯಯನ ದಲ್ಲೂ ಕೂಡ ಸಾಬೀತವಾಗಿದೆ.ಪೂರ್ವಿಕರು ವಿದ್ಯೆ ಇಲ್ಲದಿದ್ದರೂ ಸಾಮಾನ್ಯಜ್ಞಾನದಿಂದ ಕೆಲವು ಸಂಪ್ರದಾಯಗಳನ್ನು ಆಚರಿಸುತ್ತಿದ್ದರು. ಪುರುಷ ದೇವರು ಸಮಾಜದ ಶಾಂತಿಯ ಸಂಕೇತ, ಹೆಣ್ಣುದೇವತೆಗಳು ಉಗ್ರರೂಪಿಗಳು.ಆದರೆ ಸಮಾಜದಲ್ಲಿ ತದ್ವಿರುದ್ಧವಾಗಿದೆ ಎಂದರು. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿನ ಗಣ್ಯರನ್ನು ಸನ್ಮಾನಿಸಲಾಯಿತು.ತಹಶೀಲ್ದಾರ್ ಸುದರ್ಶನ ಯಾದವ್, ತಾಪಂ ಇಒ ಎಸ್.ಆನಂದ್ ಮಾತನಾಡಿದರು. ಪೌರಾಯುಕ್ತ ಜಿ.ಎನ್.ಚಲಪತಿ, ಕೃಷಿಕ ಸಮಾಜದ ಅಧ್ಯಕ್ಷ ಜಯರಾಮರೆಡ್ಡಿ, ನೌಕರರ ಸಂಘದ ಅಧ್ಯಕ್ಷ ಆರ್.ಅಶೋಕಕುಮಾರ್, ಯಾದವ ಸಂಘದ ಅಧ್ಯಕ್ಷ ಪುಂಗನೂರು ನಾರಾಯಣಸ್ವಾಮಿ ಇದ್ದರು.

ಗುಬ್ಬಿ ತಹಸೀಲಾರ್‌ಗೆ ನಾಗರಿಕರಿಂದ ಸನ್ಮಾನ

ಗುಬ್ಬಿ: ಸ್ವಾತಂತ್ರ್ಯ ದಿನಾಚರಣೆ ಮುನ್ನ ನಡೆದ ಪೂರ್ವಭಾವಿ ಸಭೆಯಲ್ಲಿ ನೂತನ ಧ್ವಜಕಟ್ಟೆ ನಿರ್ಮಾಣಕ್ಕೆ ನಾಗರೀಕರ ಆಗ್ರಹ ಬಂದ ಹಿನ್ನಲೆ ಕೂಡಲೇ ಸಮ್ಮತಿಸಿದ ತಹಸೀಲ್ದಾರ್ ವೈಯಕ್ತಿಕವಾಗಿ ತಾವೇ ನಿರ್ಮಿಸಿಕೊಡುವುದಾಗಿ ತಿಳಿಸಿ ಹತ್ತು ದಿನದಲ್ಲಿ ಸುಂದರ ಧ್ವಜಕಟ್ಟೆ ನಿರ್ಮಿಸಿಕೊಟ್ಟ ಹಿನ್ನಲೆ ಕೃತಜ್ಞತೆ ಸಲ್ಲಿಸಿದ ಗುಬ್ಬಿ ಜನತೆ ನಾಗರೀಕ ಸನ್ಮಾನ ನೆರವೇರಿಸಿದರು. ಆರು ದಶಕದ ಧ್ವಜಕಟ್ಟೆ ಬದಲಾಗಿ ಆಧುನಿಕ ಸ್ಪರ್ಶದ ಸ್ಟೀಲ್ ಧ್ವಜ ಸ್ತಂಭ ಸುಂದರವಾಗಿ ಗ್ರಾನೈಟ್ ಕಟ್ಟೆ ನಿರ್ಮಿಸಿ ಜೂನಿಯರ್ ಕಾಲೇಜು ಮೈದಾನ ಆಕರ್ಷಕವಾಗಿ ಸೆಳೆದಿದೆ. ಈ ಕಾರಣ ತಹಶೀಲ್ದಾರ್ ಆರತಿ.ಬಿ ಮೇಡಂ ಅವರಿಗೆ ಗುಬ್ಬಿ ಜನರ ಪರವಾಗಿ ನಾಗರೀಕ ಸನ್ಮಾನ ನೆರವೇರಿಸಿದ್ದೇವೆ ಎಂದು ಚನ್ನಬಸವೇಶ್ವರ ಯುವಕ ಸಂಘದ ಸಂಸ್ಥಾಪಕ ಕಾರ್ಯದರ್ಶಿ ಸಿ.ಆರ್.ಶಂಕರ್ ಕುಮಾರ್ ತಿಳಿಸಿದರು. ಪಪಂ ಸದಸ್ಯ ಜಿ.ಸಿ.ಕೃಷ್ಣಮೂರ್ತಿ, ಗುಬ್ಬಿ ಹಿತ ರಕ್ಷಣಾ ಸಮಿತಿಯ ಅಧ್ಯಕ್ಷ ಎಚ್.ಡಿ.ಯಲ್ಲಪ್ಪ, ಸಲೀಂಪಾಷ, ಜಿ.ಆರ್. ರಮೇಶ್, ಗೋಪಾಲ್ ಅರಸ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಕಾಂತರಾಜ್ ಇತರರು ಇದ್ದರು.

ವಿರಾಮ
ಪ್ರತಿ ಭಾನುವಾರ

{ಡಾ.ಜಿ.ಪರಮೇಶ್ವರ್} ಗೃಹ ಸಚಿವ

ಧರ್ಮಸ್ಥಳದ ವಿಚಾರ ನ್ಯಾಯಕ್ಕೆ ಕಾನೂನಿಗೆ ಸಂಬಂಧಪಟ್ಟ ವಿಚಾರವಾಗಿದೆ. ಒಬ್ಬ ವ್ಯಕ್ತಿ ಯಾರಾದರೂ ದೂರು ನೀಡಿದರೆ ಪೋಲಿಸರು ದೂರು ತೆಗೆದುಕೊಂಡು ಕಂಪ್ಲೇಟ್ ಮಾಡಿ ತನಿಖೆ ಮಾಡಿ ಅದರಲ್ಲಿ ತಪ್ಪು ಕಂಡುಬಂದರೆ ಕೇಸ್ ಹಾಕಿ ಮುಂದೆ ಕಾನೂನು ಪ್ರಕ್ರಿಯೆ ನಡೆಯುತ್ತದೆ. ಅಷ್ಟಕ್ಕೇ ಸೀಮಿತವಾಗಬೇಕು ವಿನಾ ರಾಜಕೀಯ ಮಾಡುವುದಾಗಲಿ, ಧಾರ್ಮಿಕ ವಿಚಾರ ಆಗಲಿ, ಯಾವುದೂ ನಡೆಯಬಾರದು.

ಜಿಲ್ಲಾ ರೈಲ್ವೇ ಪ್ರಯಾಣಿಕರ ವೇದಿಕೆಯಿಂದ ಪ್ರತಿಭಾ ಪುರಸ್ಕಾರ : ಸಚಿವ ಸೋಮಣ್ಣ

ತುಮಕೂರಿಗೆ 4 ರೈಲು ಮಾರ್ಗ

ತುಮಕೂರು: ತುಮಕೂರು-ಬೆಂಗಳೂರು ನಡುವೆ ನಾಲ್ಕು ರೈಲು ಮಾರ್ಗ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗುತ್ತಿದೆ. ಹೆಚ್ಚುವರಿ ರೈಲುಗಳ ಸೇವೆ ಒದಗಿಸಲಾಗುತ್ತಿದೆ ಎಂದು ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಇಲಾಖೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ಜಿಲ್ಲಾ ರೈಲ್ವೇ ಪ್ರಯಾಣಿಕರ ವೇದಿಕೆ ನಗರದ ರೈಲ್ವೆ ನಿಲ್ದಾಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವೇದಿಕೆಯ 11ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ, ಪ್ರಯಾಣಿಕರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸಿ ಮಾತನಾಡಿದರು.

ನಗರದ ಹೊರವಲಯದ ತಿಮ್ಮರಾಜನಹಳ್ಳಿ ಬಳಿ ರೈಲ್ವೆ ಇಲಾಖೆಯಿಂದ ಬೃಹತ್ ಗೋಡೌನ್ ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಇದಕ್ಕಾಗಿ ಸುಮಾರು 200 ಎಕರೆ ಜಾಗದ ಅವಶ್ಯಕತೆಯಿದ್ದು, ಈ ಬಗ್ಗೆ ಕೆಐಎಡಿಬಿ ಅಧಿಕಾರಿಗಳ ಜೊತೆ ಸಭೆ ನಡೆಸಿ ಚರ್ಚೆ ಮಾಡಿರುವುದಾಗಿ ಹೇಳಿದರು.

ಜಿಲ್ಲೆಯಲ್ಲಿ 27-28 ರೈಲ್ವೆಗೇಟ್‌ಗಳನ್ನು ತೆರವುಗೊಳಿಸಿ ಅಲ್ಲಿ ಮೇಲ್ಸೇತುವೆ, ಕೆಳಸೇತುವೆ ನಿರ್ಮಾಣ ಕೆಲಸ ಆರಂಭವಾಗಿದ್ದು ಎರಡು ವರ್ಷಗಳಲ್ಲಿ ಲೋಕಾರ್ಪಣೆಯಾಗಲಿವೆ. 18 ವರ್ಷಗಳಿಂದ ಬಾಕಿ ಉಳಿದಿದ್ದ ತುಮಕೂರು-ದಾವಣಗೆರೆ ರೈಲು ಮಾರ್ಗ ಯೋಜನೆ ಕಾಮಗಾರಿಗೆ ವೇಗ ಸಿಕ್ಕಿದೆ. ಸುಮಾರು ಎರಡೂವರೆ ಸಾವಿರ ಎಕರೆ ಭೂಮಿ ಸ್ವಾಧೀನ ಪ್ರಕ್ರಿಯೆ ಮುಗಿಯುತ್ತಿದೆ ಎಂದರು.

ಈ ವೇಳೆ ಕೈಗಾರಿಕೋದ್ಯಮಿ ಎಚ್.ಜಿ.ಚಂದ್ರಶೇಖರ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶಾಸಕ ಜಿ.ಬಿ.ಜ್ಯೋತಿಗಣೇಶ್, ಜಿಲ್ಲಾ ಪಂಚಾಯಿತ್ತಿ ಮಾಜಿ ಅಧ್ಯಕ್ಷ ವೈ.ಹೆಚ್.ಹುಚ್ಚಯ್ಯ, ಬಿಜೆಪಿ ಮುಖಂಡ ಎಸ್. ಶಿವಪ್ರಸಾದ್, ವೇದಿಕೆಯ ಕಾರ್ಯದರ್ಶಿ ನಾಗರಾಜು, ಖಜಾಂಚಿ ಆರ್.ಬಾಲಾಜಿ ಇದ್ದರು.

ಈ ವೇಳೆ ಹಮ್ಮಿಕೊಳ್ಳಲಾಗಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ಸಿದ್ದಗಂಗಾ ಆಸ್ಪತ್ರೆಯ ಆಡಳಿತ ನಿರ್ದೇಶಕ ಡಾ.ಎಸ್.ಪರಮೇಶ್ ಉದ್ಘಾಟಿಸಿದರು. ಡಾ.ಅಗರ್ವಾಲ್ ಕಣ್ಣಿನ ಆಸ್ಪತ್ರೆ ಸಹಯೋಗದ ನೇತ್ರ ತಪಾಸಣಾ ಶಿಬಿರ ನಡೆಯಿತು.

ಜಿಲ್ಲಾ ರೈಲ್ವೇ ಪ್ರಯಾಣಿಕರ ವೇದಿಕೆಯಿಂದ ನಗರದ ರೈಲ್ವೆ ನಿಲ್ದಾಣದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಿತು.

ತುಮಕೂರಿನಿಂದ ಬೆಂಗಳೂರಿಗೆ ಹೆಚ್ಚುವರಿ ರೈಲು ಬೇಕು

ಪ್ರಯಾಣಿಕರ ವೇದಿಕೆ ಅಧ್ಯಕ್ಷ ಕರಣಂ ರಮೇಶ್ , ತುಮಕೂರು-ಬೆಂಗಳೂರು ಮಾರ್ಗದಲ್ಲಿ ಹೆಚ್ಚಿನ ರೈಲು ಸೇವೆ ಒದಗಿಸಬೇಕು. ತುಮಕೂರಿನಿಂದ ಹೊರಡುವ ಮೆಮೊ ರೈಲು ಯಶವಂತಪುರದವರೆಗೆ ಇದೆ. ಅದನ್ನು ಸಂಗೊಳ್ಳಿ ರಾಯಣ್ಣ ನಿಲ್ದಾಣದವರೆಗೂ ವಿಸ್ತರಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕು. ತುಮಕೂರಿನಿಂದ ಹೋಗಿಬರುವ ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಿದ್ದು ಅಗತ್ಯಕ್ಕೆ ತಕ್ಕಂತೆ ಹೆಚ್ಚುವರಿ ರೈಲು ಸೇವೆ ಒದಗಿಸಬೇಕು ಎಂದು ಸಚಿವರನ್ನು ಕೋರಿದರು.

ಸತ್ಯ ಸಾಯಿ ವತಿಯಿಂದ ವಿಶ್ವ ಸಾಂಸ್ಕೃತಿಕ ಉತ್ಸವ

ಚಿಕ್ಕಬಳ್ಳಾಪುರ: ತಾಲ್ಲೂಕು ಮುದ್ದೇನಹಳ್ಳಿಯಲ್ಲಿ ಒಂದು ವಿಶ್ವ ಒಂದು ಕುಟುಂಬ ಜಾಗತಿಕ ಸಾಂಸ್ಕೃತಿಕ ಉತ್ಸವ 2025 ಆರಂಭವಾಯಿತು. ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯ ಮತ್ತು ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಸಹಯೋಗದಲ್ಲಿ ಆರಂಭವಾದ ಈ ಸಾಂಸ್ಕೃತಿಕ ಸಂಭ್ರಮ ಜಗತ್ತನ್ನು ಬೆಸೆಯುವ ಪ್ರಯತ್ನವಾಗಿತ್ತು.

ಒಟ್ಟು 100 ದಿನಗಳ ಕಾಲ ನಡೆಯಲಿರುವ ಜಾಗತಿಕ ಮಟ್ಟದ ಸಾಂಸ್ಕೃತಿಕ ಉತ್ಸವವು ಸಂಸ್ಕೃತಿ, ಅಧ್ಯಾತ್ಮ, ಸೇವೆ ಮತ್ತು ಮಾನವೀಯತೆಯ ಸಹಯೋಗದ ಆಚರಣೆಗಳ ಮೂಲಕ 100 ದೇಶಗಳನ್ನು ಬೆಸೆಯುವಲ್ಲಿ ಯಶಸ್ವಿಯಾಯಿತು.

ಕೇಂದ್ರ ಸಂಸ್ಕೃತಿ ಖಾತೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮಾತನಾಡಿ, ಉತ್ಸವದಲ್ಲಿ ಪಾಲ್ಗೊಳ್ಳಲಿರುವ ಎಲ್ಲ ದೇಶಗಳಿಗೂ ಆತ್ಮೀಯ ಸ್ವಾಗತ ಕೋರಿದ ಅವರು ಭಾರತೀಯ ಪರಂಪರೆಯನ್ನು ಸಶಕ್ತವಾಗಿ ಪ್ರದರ್ಶಿಸಲು ಇಂದಿರಾಗಾಂಧಿ ಕಲಾ ಕೇಂದ್ರದ ಮೂಲಕ ವಿಶೇಷ ಪ್ರದರ್ಶನ ಆಯೋಜಿಸುವುದಾಗಿ ಇದೇ ವೇಳೆ ಘೋಷಿಸಿದರು. ಕಲಾ ಕೇಂದ್ರದ ದಕ್ಷಿಣ ಪ್ರಾದೇಶಿಕ ನಿರ್ದೇಶಕ ಡಿ.ಮಹೇಂದ್ರ ಮಾತನಾಡಿ, ಉತ್ಸವದ ಮುಖ್ಯ ಉದ್ದೇಶವಾಗಿರುವ ಸಾಮರಸ್ಯ ಮತ್ತು ಏಕತೆಯ ದೃಷ್ಟಿಯನ್ನು ಬೆಂಬಲಿಸುವುದಾಗಿ ಸಾರಿದರು. ಕಲಾಕ್ಷೇತ್ರ ಪ್ರತಿಷ್ಠಾನದ ಮಾಜಿ ಅಧ್ಯಕ್ಷ ಪದ್ಮಭೂಷಣ ಸುಬ್ರಮಣಿಯನ್ ರಾಮದೊರೈ ಮಾತನಾಡಿ, ಕಾಳಜಿ ಹಂಚಿಕೊಳ್ಳುವ ಮನೋಭಾವ, ಔದಾರ್ಯ, ಸದ್ಭಾವನೆ, ತಿಳಿವಳಿಕೆ ಮತ್ತು ಸಹಕಾರದ ಸಂದೇಶಗಳು ವಿಶ್ವ ಸಾಂಸ್ಕೃತಿಕ ಉತ್ಸವದ ಮೂಲಕ ಜಗತ್ತಿನೆಲ್ಲೆಡೆ ಪಸರಿಸಲಿದೆ ಎಂದರು. ಶಿರಾ ಕ್ಷೇತ್ರದ ಶಾಸಕ ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ ಮಾತನಾಡಿ, ಈ ಉಪಕ್ರಮವು ಜಾಗತಿಕ ಸಂಸ್ಕೃತಿಯನ್ನು ಸಂಭ್ರಮಿಸುವ, ಪ್ರೀತಿ ಮತ್ತು ಸೇವೆಯನ್ನು ತಳಹದಿಯಾಗಿ ಹೊಂದಿರುವ ಪರಂಪರೆಯ ಮುಂದುವರಿಕೆಯಾಗಿದೆ ಎಂದು ಶ್ಲಾಘಿಸಿದರು.

ವೇಮಗಲ್ ಚುನಾವಣೆ: ಮತ ಖರೀದಿ!

ಕೋಲಾರ: ವೇಮಗಲ್-ಕುರುಗಲ್ ಪಟ್ಟಣ ಪಂಚಾಯತಿ ಚುನಾವಣೆಯಲ್ಲಿ ಹಣ,ಉಡುಗೊರೆ,ಸೀರೆ ಲೆಕ್ಕದಲ್ಲಿ ಕೋಟ್ಯಂತರ ರೂ. ಹಣ ಖರ್ಚಾಗಿದ್ದು ಮೈತ್ರಿಕೂಟ ಹಾಗೂ ಕಾಂಗ್ರೆಸ್ ನಡುವೆ ಹಣಾಹಣಿ ಜೋರಾಗಿತ್ತು. ಹಮ್ ಆದ್ಮಿ ಪಾರ್ಟಿಯ ನಾಲ್ವರು ಅಭ್ಯರ್ಥಿಗಳ ಸ್ಪರ್ಧೆ ಸಾಂಕೇತಿಕವಾಗಿತ್ತು.
ಚುನಾವಣೆಯಲ್ಲಿ ಒಂದು ಮತಕ್ಕೆ ಕನಿಷ್ಠ 3 ಸಾವಿರದಿಂದ 15 ಸಾವಿರದವರೆಗೆ ಅಭ್ಯರ್ಥಿಗಳು ಖರ್ಚು ಮಾಡಿ ಓಟ್ ಖರೀದಿ ಮಾಡಿದರು. ಇದರ ಜತೆಗೆ ಬೆಳ್ಳಿ ನಾಣ್ಯ, ಗಣೇಶ, ರೇಷ್ಮೆ ಸೀರೆ, ಸಿಹಿ, ಕಾರದ ಬಾಕ್ಸ್ ಮತದಾರರ ಮನೆ ಸೇರಿದ್ದು ಸುಳ್ಳಲ್ಲ. ಮತ ಒಂದಕ್ಕೆ 15 ಸಾವಿರ ರೂ. ನೀಡಿದ ರಾಷ್ಟ್ರೀಯ ಪಕ್ಷದ ಅಭ್ಯರ್ಥಿಯೊಬ್ಬರು ಈಶ್ವರನ ಮೇಲೆ ಪ್ರಮಾಣ ಮಾಡಿಸಿಕೊಂಡರೆಂಬುದು ಎಂಎಲ್‌ಸಿಯೊಬ್ಬರು ಆರೋಪ ಮಾಡಿದ್ದರು.

ವೇಮಗಲ್,ಕುರುಗಲ್ ಸೇರಿದಂತೆ ಸುತ್ತಮುತ್ತ ರೈತರ ಜಮೀನು ಕೈಗಾರಿಕೆಗಳಿಗೆ ಭೂ ಸ್ವಾಧೀನವಾಗಿದ್ದು ಇದರ ಬಾಬ್ತು ಕೋಟಿಗಳ ಲೆಕ್ಕದಲ್ಲಿ ಕೈ ಸೇರಿದ್ದು ಹೀಗಾಗಿ ಎಲೆಕ್ಷನ್‌ಗೆ ಸ್ಪರ್ಧೆ ಮಾಡಿದ್ದ ಪಕ್ಷೇತರರೂ ಸಹಾ ಮತ ಖರೀದಿಗೆ ಮುಂದಾಗಿದ್ದು ಕೋಟಿ ಗಟ್ಟಲೆ ವ್ಯಯಿಸಿ ಬಿಂದಾಸ್ ಆಗಿ ಚುನಾವಣೆ ಮಾಡಿದರು.

ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಮಾಜಿ ಶಾಸಕ ವರ್ತೂರ್ ಪ್ರಕಾಶ್ ಹಾಗೂ ದಳಪತಿ ಸಿಎಂಆರ್ ಶ್ರೀನಾಥ್ ಅವರಿಗೆ ಎಲೆಕ್ಷನ್ ಸವಾಲಾಗಿದೆ. ಅಂತೆಯೇ ಕಾಂಗ್ರೆಸ್ ಶಾಸಕ ಕೊತ್ತೂರು ಮಂಜುನಾಥ್, ಎಂಎಲ್‌ಸಿ ಅನಿಲ್ ಕುಮಾರ್ ಅಸ್ತಿತ್ವದ ಪ್ರಶ್ನೆಯೇ ಆಗಿದೆ ಎಂದರೆ ತಪ್ಪಾಗಲಾರದು. ಉಳಿದಂತೆ ಎಂಎಲ್‌ಸಿ ಇಂಚರ ಗೋವಿಂದರಾಜು ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಚಲಪತಿ ಸಹಾ ಪ್ರಚಾರದಲ್ಲಿ ಕಾಣಿಸಿಕೊಂಡಿದ್ದರು. ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಅವರು ಅಭ್ಯರ್ಥಿಗಳ ಆಯ್ಕೆಯಿಂದ ಹಿಡಿದು ಪ್ರಚಾರದವರೆಗೆ ಎಲ್ಲ ಕಡೆ ಸಾರಥ್ಯ ವಹಿಸಿದ್ದು ಪಟ್ಟಣ ಪಂಚಾಯತಿಯನ್ನು ಕಾಂಗ್ರೆಸ್ ವಶ ಮಾಡಿಕೊಳ್ಳಬೇಕೆಂದು ಶ್ರಮವಹಿಸಿ ಕೆಲಸ ಮಾಡಿದ್ದಾರೆ.

ಮೈತ್ರಿಕೂಟದ ಅಭ್ಯರ್ಥಿ ಲೋಕೇಶ್‌ಮರಿಯಪ್ಪ ಪತ್ನಿ, ತಾಯಿ ಜತೆ ಹಕ್ಕು ಚಲಾಯಿಸಿದರು.

ವೇಮಗಲ್ ಪಪಂ ಚುನಾವಣೆ: ಶೇ.92ಮತದಾನ

ಕೋಲಾರ: ವೇಮಗಲ್-ಕುರುಗಲ್ ಪಟ್ಟಣ ಪಂಚಾಯತಿ ಚುನಾವಣೆ ಶಾಂತಿಯುತವಾಗಿ ನಡೆದಿದ್ದು ಶೇ.92.56 ಹಕ್ಕುಚಲಾವಣೆಯಾಯಿತು. ಬೆಳಗ್ಗೆ 7 ಗಂಟೆಗೆ ಆರಂಭವಾದ ಮತದಾನ ಮಧ್ಯಾಹ್ನದ ನಂತರ ಚುರುಕುಗೊಂಡಿತಾದರೂ ಸಂಜೆ ಆಗಮಿಸಿದ ಮಳೆಯಿಂದಾಗಿ ಪುನಃ ಮಂದಗತಿಯಿಂದ ಸಾಗಿತು.

6ನೇ ವಾರ್ಡಿನಲ್ಲಿ ಗರಿಷ್ಠ 98.52 ಹಕ್ಕು ಚಲಾವಣೆ ಆಗಿದ್ದು 13ನೇ ವಾರ್ಡ್‌ನಲ್ಲಿ ಕನಿಷ್ಟ 86.68 ಮತದಾನ ಆಗಿದೆ. ಕಾಂಗ್ರೆಸ್‌ನ ಕೆ.ಆರ್.ಕುಮಾರ್ ಮತ್ತು ಮೈತ್ರಿಕೂಟದ ಸಿ.ಎಸ್.ವೆಂಕಟೇಶ್ ಸ್ಪರ್ಧೆ ಮಾಡಿದ್ದ ಸುಳದೇನಹಳ್ಳಿ-ಕ್ಯಾಲನೂರು ಕ್ರಾಸ್ ಕ್ಷೇತ್ರದಲ್ಲಿ ಹಣಾಹಣಿ ಏರ್ಪಟ್ಟಿದ್ದು ಹೀಗಾಗಿ ಈ ಕ್ಷೇತ್ರದಲ್ಲಿ ರಿಸರ್ವ್ ಪೊಲೀಸ್ ಜತೆಗೆ ಹೆಚ್ಚಿನ ಪೊಲೀಸರನ್ನು ನಿಯೋಜನೆ ಮಾಡಲಾ ಗಿತ್ತಾದರೂ ಎಲೆಕ್ಷನ್ ಸೂಸೂತ್ರವಾಗಿ ಜರುಗಿತು. ಕಾಂಗ್ರೆಸ್ ಪರವಾಗಿ ಶಾಸಕ ಕೊತ್ತೂರು ಮಂಜುನಾಥ್, ಎಂಎಲ್‌ಸಿ ಅನಿಲ್ ಕುಮಾರ್, ಕೋಮುಲ್ ನಿರ್ದೇಶಕ ಚಂಜಿಮಲೆ ರಮೇಶ್, ಮುಖಂಡ ಮೈಲಾಂಡಹಳ್ಳಿ ಮುರಳಿ ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಅಭ್ಯರ್ಥಿಗಳಿಗೆ ಶುಭ ಕೋರಿದರು. ಮೈತ್ರಿಕೂಟದಿಂದ ಸಿಎಂಆರ್ ಶ್ರೀನಾಥ್, ಬೆಗ್ಲಿಸೂರ್ಯಪ್ರಕಾಶ್, ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಚಲಪತಿ ಮತದಾನ ಕೇಂದ್ರಗಳಿಗೆ ಭೇಟಿ ನೀಡಿದ್ದರು.

ಜಿಲ್ಲಾಧಿಕಾರಿ ಡಾ.ರವಿ, ಅಪರ ಜಿಲ್ಲಾಧಿಕಾರಿ ಮಂಗಳಾ, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ವೆಂಕಟೇಶ್ ಅವರು ಕೆಲವು ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ವೇಮಗಲ್‌ನಲ್ಲಿ ಹಕ್ಕು ಚಲಾಯಿಸಿದರು. ಆ.20 ರಂದು ಕೋಲಾರದ ಜ್ಯೂನಿಯರ್ ಕಾಲೇಜಿನಲ್ಲಿ ಮತ ಎಣಿಕೆ ನಡೆಯಲಿದೆ.

ವೇಮಗಲ್-ಕುರುಗಲ್ ಪಟ್ಟಣ ಪಂಚಾಯತಿ ಚುನಾವಣೆಯಲ್ಲಿ ಡಿಸಿ ಡಾ.ರವಿ ನೇತೃತ್ವದ ತಂಡದವರು ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ವಿದ್ಯಾರ್ಥಿಗಳಲ್ಲಿ ದೊಡ್ಡ ಕನಸು, ಪ್ರಯತ್ನ ಇರಲಿ

ಬಾಗೇಪಲ್ಲಿ: ಯುವ ಜನತೆ ಈ ದೇಶದ ಸಂಪತ್ತು, ಭವಿಷ್ಯದ ಆಶಾಕಿರಣ, ದೇಶ ಕಟ್ಟುವ ಜವಾಬ್ದಾರಿ ಯುವ ಜನತೆಯ ಮೇಲಿದ್ದು ದೊಡ್ಡ ಕನಸಿನೊಂದಿಗೆ ಅದನ್ನು ನನಸು ಮಾಡುವ ಕಡೆ ಸಾಗಬೇಕು ಎಂದು ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ತಿಳಿಸದಿರು.

ಪಟ್ಟಣದ ಹೊರವಲಯದ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಲ್ಯಾಪ್ ಟಾಪ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ತಂತ್ರಜ್ಞಾನ ಯುಗದಲ್ಲಿ ಪ್ರತಿಯೊಬ್ಬರೂ ಅದನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಲ್ಯಾಪ್‌ಟಾಪ್ ಗಳನ್ನು ಸರ್ಕಾರ ನೀಡುತ್ತಿದ್ದು ಅದನ್ನು ಶೈಕ್ಷಣಿಕ ಉದ್ದೇ ಶಕ್ಕಾಗಿ ಉಪಯೋಗಿಸಿಕೊಳ್ಳಬೇಕು. ನಿಮ್ಮ ಜೀವನ ಚೆನ್ನಾಗಿರಬೇಕು ಎಂಬ ಆಸೆ,ಆಕಾಂಕ್ಷೆ,ಹಂಬಲ ಇದ್ದಾಗ ಅದಕ್ಕೆ ಪೂರಕವಾಗಿ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದಾಗ ಯಶಸ್ಸು ಪಡೆಯಲು ಸಾಧ್ಯ. ಆಸೆ ಮತ್ತು ಗುರಿ ದೊಡ್ಡದಾಗಿರಲಿ, ಅದಕ್ಕೆ ಬೇಕಾದ ಪ್ರಾಮಾಣಿಕ ಪ್ರಯತ್ನ ನಿರಂತರವಾಗಿ ಇದ್ದರೆ ಒಂದು ದೊಡ್ಡ ಸ್ಥಾನದಲ್ಲಿ ನೀವು ನಿಲ್ಲಲು ಸಾಧ್ಯವಾಗುತ್ತದೆ. ಯುವ ಶಕ್ತಿ ಒಳ್ಳೆಯದಕ್ಕಾಗಿ ಸದಾ ಬಳಕೆಯಾಗಬೇಕು ಎಂದರು.

45 ಲ್ಯಾಪ್‌ಟಾಪ್ ಗಳನ್ನು ವಿದ್ಯಾರ್ಥಿಗಳಿಗೆ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ರವರು ವಿತರಿಸಿದರು.ಈ ಸಂದರ್ಭದಲ್ಲಿ

ಪಾಲಿಟೆಕ್ನಿಕ್ ಪ್ರಾಂಶುಪಾಲ ರಾಜ್ ಕುಮಾರ್, ಗುಡಿಬಂಡೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಆದಿರೆಡ್ಡಿ, ಶಾಂತಕುಮಾರಿ, ಸೂಪರ್‌ಡೆಂಟ್, ರಾಜಲಕ್ಷ್ಮೀ ವೀಣಾಪಾಣಿ, ಲತಾ ಮತ್ತಿತರರು ಉಪಸ್ಥಿತರಿದ್ದರು.

ಸಂಭ್ರಮದ ಶ್ರೀಕೃಷ್ಣ ಜನ್ಮಾಷ್ಟಮಿ

ಚಿಕ್ಕಬಳ್ಳಾಪುರ: ತಾಲೂಕಿನ ಕಡಶೀಗೇಹಳ್ಳಿ ಗ್ರಾಮಸ್ಥರು ಮತ್ತು ಶ್ರೀಕೃಷ್ಣದೇವಾಲಯ ಸಮಿತಿ ಶ್ರೀಕೃಷ್ಣಜನ್ಮಾಷ್ಟಮಿ ಹಾಗೂ ದೇವಾಲಯ ಸ್ಥಾಪನೆಯ 3ನೇ ವರ್ಷದ ವಾರ್ಷಿಕೋತ್ಸವವನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಿದರು.

ಇಡೀ ಗ್ರಾಮದಲ್ಲಿ ಹಬ್ಬದ ವಾತಾವರಣ ಮನೆ ಮಾಡಿದ್ದು ನಾನಾ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು ಜನತೆ ಶ್ರದ್ಧಾಭಕ್ತಿಯಿಂದ ಭಾಗಿಯಾಗಿ ಭಕ್ತಿಭಾವ ಮೆರೆದು ಭಗವಂತನ ಕೃಪೆಗೆ ಪಾತ್ರವಾದರು.

ದೇವಾಲಯದಲ್ಲಿ ಅರ್ಚಕರಿಂದ ದೇವತಾ ಕಾರ್ಯಗಳು ಸಾಂಗವಾಗಿ ನಡೆದವು.ಬೆಳ್ಳಂಬೆಳಿಗ್ಗೆ ದೇವರಿಗೆ ಪಂಚಾಮೃತ ಅಭಿಷೇಕ,ಹೊವಿನ ಅಲಂಕಾರ,ಆಭರಣ ಅಲಂಕಾರ, ಧಾರ್ಮಿಕ ಕೈಂಕರ್ಯಗಳು ನಡೆದಿದ್ದು ಬಳಿಕ ತೀರ್ಥ ಪ್ರಸಾದ ವಿನಿಯೋಗ ಹಾಗೂ ಅನ್ನಸಂತರ್ಪಣೆ ನಡೆಯಿತು.

ಜಿಪಂ ಮಾಜಿ ಸದಸ್ಯ, ಕೆ.ಎಂ.ಮುನೇಗೌಡ ಮಾತನಾಡಿ, ನಮ್ಮ ಗ್ರಾಮವೇ ಅಲ್ಲದೆ ಸುತ್ತ ಮುತ್ತಲಿನ ಗ್ರಾಮಸ್ಥರು ಕೂಡ ಈ ದೈವಕಾರ್ಯದಲ್ಲಿ ಭಾಗಿಯಾಗುರುವುದು ಸಂತೋಷತಂದಿದೆ.ದೇವಾಲಯದಲ್ಲಿ ನಡೆದಿರುವ ಎಲ್ಲಾ ಕಾರ್ಯಕ್ರಮಗಳಲ್ಲಿ ಕೈಜೋಡಿಸಿ ಸಹಕಾರ ನೀಡಿದ್ದಾರೆ. ಕೃಷ್ಣನ ಬಾಲಲೀಲೆಗಳನ್ನು ಗ್ರಾಮಸ್ಥರು ಕೂಡಿ ಆಡುವ ಮೂಲಕ ದೇವರಿಗೆ ಪ್ರಿಯರಾಗುವ ಕ್ರಮ ನಿಜಕ್ಕೂ ಚೆನ್ನಾಗಿದೆ ಎಂದರು.

ಸೇವಾಕರ್ತರಾದ ಗ್ರಾಮದ ಮುನಿರಾಜು, ದೇವಾಲಯದ ಪ್ರಧಾನ ಅರ್ಚಕ ಶ್ರೀನಿವಾಸಾಚಾರಿ,ಕೆ.ಎಂ.ದೇವರಾಜ್, ಶಾಂತಕುಮಾರ್,ಶಿವಕುಮಾರ್, ನಾರಾಯಣಸ್ವಾಮಿ, ಆನಂದ ಕುಮಾರ್,ಮಂಜು ಇತರರು ಉಪಸ್ಥಿತರಿದ್ದರು.

ಕೊಟ್ಟ ಗ್ರಾಮಸ್ಥರಿಗೆ ಶೀಘ್ರ ನಿವೇಶನ: ಶಾಸಕ ಪ್ರಕಾಶ್

ಹಾಸನ: ತಾಲೂಕಿನ ಗೇಕರಹಳ್ಳಿ ಗ್ರಾಮದಲ್ಲಿ ಚೆನ್ನಮ್ಮ, ಹೆಚ್.ಡಿ ದೇವೇಗೌಡರ ಸಮುದಾಯ ಭವನವನ್ನು ಶಾಸಕ ಸ್ವರೂಪ್ ಪ್ರಕಾಶ್ ಅವರು ಉದ್ಘಾಟಿಸಿದರು. ಗ್ರಾಮಕ್ಕೆ ಆಗಮಿಸಿದ ಶಾಸಕ ಸ್ವರೂಪ್ ಪ್ರಕಾಶ್ ಸಮುದಾಯ ಭವನ ಉದ್ಘಾಟನೆಗೂ ಮುನ್ನ ಗ್ರಾಮದ ಹುಚ್ಚಮ್ಮ ದೇವಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮದ ಜನರ ಬಹುದಿನಗಳ ಬೇಡಿಕೆ ಆಗಿದ್ದ ಸಮುದಾಯ ಭವನ ಇಂದು ಉದ್ಘಾಟನೆ ಆಗಿದೆ. ಇಲ್ಲಿನ ಜನರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಗ್ರಾಮದಲ್ಲಿ ಇನ್ನು ಹಲವು ಸಮಸ್ಯೆಗಳ ಬಗ್ಗೆ ಜನರು ನನ್ನ ಗಮನಕ್ಕೆ ತಂದಿದ್ದಾರೆ, ತಮ್ಮೆಲ್ಲರ ಸಹಕಾರದಿಂದ ತಾನು ಶಾಸಕನಾಗಿದ್ದೇನೆ, ತಮ್ಮ ಋಣ ತೀರಿಸುವ ಸಲುವಾಗಿ ತನ್ನ ಅವಧಿಯಲ್ಲಿ ನನ್ನ ಕ್ಷೇತ್ರದ ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸುವ ಸಲುವಾಗಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

ಜಿಪಂ ಮಾಜಿ ಅಧ್ಯಕ್ಷ ಸ್ವಾಮಿ ಗೌಡ ಮಾತನಾಡಿ, ದಿ. ಮಾಜಿ ಶಾಸಕ ಪ್ರಕಾಶ್ ಅವರ ಅವಧಿಯಲ್ಲೇ ಈ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿತ್ತು.

ಆದರೆ ಸುಮಾರು ಮೂವತ್ತು ವರ್ಷಗಳಿಂದ ಉದ್ಘಾಟನೆ ಆಗದೆ ಬಾಕಿ ಉಳಿದಿತ್ತು. ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಸುಸಜ್ಜಿತ ಕಟ್ಟಡ ಗ್ರಾಮದ ಜನರ ಶುಭ ಸಮಾರಂಭಗಳಿಗೆ ಸಜ್ಜಾಗಿದೆ ಇದಕ್ಕೆ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ ತಿಳಿಸುವುದಾಗಿ ಹೇಳಿದರು.

ಬಿಜೆಪಿಯವರು ಚಾಟ್ ಜಿಪಿಟಿ ನೋಡಲಿ:ಸಚಿವ

ತುಮಕೂರು: ಗೃಹ ಸಚಿವನಾಗಿ ನಾನು ಜವಾಬ್ದಾರಿ ಹೇಳಿಕೆ ನೀಡಬೇಕಾಗುತ್ತದೆ. ಗೊತ್ತಿಲ್ಲದ ವಿಚಾರದ ಬಗ್ಗೆ ಗೊತ್ತಿಲ್ಲ ಎಂದು ಹೇಳಬೇಕು, ಬಿಜೆಪಿಯವರು ಚಾಟ್ ಜಿಪಿಟಿ ನೋಡಿದರೆ ಪರಮೇಶ್ವರ್ ಸ್ಥಾನ ಏನು ಎಂದು ಅರ್ಥವಾಗುತ್ತದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ಗೃಹ ಸಚಿವರು ಗೊತ್ತಿಲ್ಲ ಸಚಿವರು ಎಂದು ಸಾಮಾಜಿಕ ಜಾಲತಾಣದಲ್ಲಿ ಟ್ರೋಲ್ ಆಗುತ್ತಿದ್ದಾರೆ ಎಂದು ಬಿಜೆಪಿಯವರು ಹೇಳುತ್ತಿರುವ ವಿಚಾರಕ್ಕೆ, ಬಿಜೆಪಿಯವರಿಗೆ ಚಾಟ್ ಜಿಪಿಟಿ ನೋಡಲು ಹೇಳಿ.

ಈ ದೇಶದಲ್ಲಿ ಪ್ರಥಮ ಸ್ಥಾನದಲ್ಲಿರುವುದು ಗೃಹ ಸಚಿವ ಇರುವುದು ಡಾ.ಜಿ.ಪರಮೇಶ್ವರ್. ಎಲ್ಲ ಪ್ರಶ್ನೆಗಳಿಗೂ ಉತ್ತರ ನೀಡಲು ಆಗುವುದಿಲ್ಲ. ಸ್ವಾಭಾವಿಕವಾಗಿ ಗೊತ್ತಿಲ್ಲ ಎಂದು ಹೇಳುತ್ತೇನೆ.

ಗೃಹ ಸಚಿವನಾಗಿ ನಾನು ಕೊಡುವಂತಹ ಹೇಳಿಕೆ ಜವಾಬ್ದಾರಿ ಯುತವಾಗಿ ಇರಬೇಕು ಗೊತ್ತಿಲ್ಲದ ವಿಷಗಳನ್ನು ಸುಮ್ಮನೆ ಹೇಳಲು ಆಗುವುದಿಲ್ಲ ಎಂದರು.

ಉಚಿತ ನೋಟ್ ಬುಕ್ ವಿತರಣೆ

ಮಧುಗಿರಿ: ಗೃಹ ಸಚಿವ ಡಾ.ಜಿ. ಪರಮೇಶ್ವರ್ ರವರ ಆಶಯದಂತೆ ನೋಟ್ ಬುಕ್ ವಿತರಣೆ ಮಾಡುತ್ತಿದ್ದೇವೆ ಎಂದು ಗ್ರಾಪಂ ಅಧ್ಯಕ್ಷ ದಿಲೀಪ್ ಕುಮಾರ್ ತಿಳಿಸಿದರು. ಮಧುಗಿರಿ ತಾಲೂಕಿನ ಪುರವರ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಬುಕ್ ವಿತರಿಸಿ ಮಾತನಾಡಿದರು. ಮುಂದಿನ ದಿನಗಳಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ನಮ್ಮ ಕೈಲಾದಷ್ಟು ಸಹಾಯ ಮಾಡಲಿದ್ದೇವೆ ಎಂದು ಗ್ರಾಪಂ ಪಿಡಿಒ ಧನಂಜಯ ಹೇಳಿದರು. ನೋಟ್ ಬುಕ್ ಗಳಿಂದ ಶೈಕ್ಷಣಿಕವಾಗಿ ನಮಗೆ ಓದಲು ಸಹಕಾರಿಯಾಗುತ್ತಿದೆ ಎಂದು ವಿದ್ಯಾರ್ಥಿಗಳು ಅಭಿಪ್ರಾಯ ವ್ಯಕ್ತಪಡಿಸಿದರು. ಪುರವರ ಹೋಬಳಿಯ ಕಸಾಪ ಅಧ್ಯಕ್ಷ ಪಿ.ಕೆ. ರಂಗಸ್ವಾಮಿ, ಶಾಲೆಯ ಶಿಕ್ಷಕರು ಇದ್ದರು.

ಒಳ ಮೀಸಲು ವರದಿ ಜಾರಿಗೆ ಆಗ್ರಹ

ಕೊರಟಗೆರೆ: ರಾಜ್ಯದಲ್ಲಿ ಮಾದಿಗ ಸಮುದಾಯ ಬಹುಸಂಖ್ಯಾತರಾಗಿದ್ದು, ಒಳಮೀಸಲಾತಿ ಜಾರಿಗೊಳಿಸದಿದ್ದರೆ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಜನಾಂದೋಲನ ಎಬ್ಬಿಸಿ ಮುಂದಿನ ಚುನಾವಣೆಯಲ್ಲಿ ಶಾಸಕರನ್ನು ಸೋಲಿಸಲು ದೃಢ ನಿರ್ಧಾರ ಮಾಡಿದ್ದೇವೆ ಎಂದು ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಗೌರವಾಧ್ಯಕ್ಷ ಕೇಶವಮೂರ್ತಿ ಎಚ್ಚರಿಕೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಾದಿಗ ಸಮುದಾಯದ ಸ್ವಾಭಿಮಾನದ ಒಕ್ಕೂಟದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

ಆ.19ರ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಜಾರಿಗೆ ತುರ್ತಾಗಿ ತೀರ್ಮಾನ ಕೈಗೊಳ್ಳಬೇಕು. ಕಾನೂನು ಸಚಿವ ಹೆಚ್.ಕೆ ಪಾಟೀಲ್ ನೇತೃತ್ವದಲ್ಲಿ ಸಣ್ಣ ಉಪ ಸಮಿತಿ ರಚಿಸಿ ಕೇವಲ 3-4ದಿನಗಳಲ್ಲಿ ಎಲ್ಲಾ ಸಮುದಾಯಗಳ ಅಹವಾಲು ಸ್ವೀಕರಿಸಿ ನಾಗಮೋಹನ್ ದಾಸ್‌ರವರ ಪ.ಜಾತಿ ವರದಿಯ ಆಧಾರದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡಲೇ ಜಾರಿಗೊಳಿಸಬೇಕು ಎಂದು ಹೇಳಿದರು.

ವಿಶ್ವ ಆದಿ ಜಾಂಬವ ಸಂಘ ರಾಜ್ಯಾಧ್ಯಕ್ಷ ಡಾ.ಭೀಮರಾಜ್ ಮಾತನಾಡಿ, ಒಳ ಮೀಸಲಾತಿಗಾಗಿ 30ವರ್ಷಗಳ ಕಾಲ ನಿರಂತರ ಹೋರಾಟ ಮಾಡಿಕೊಂಡು ಬಂದಿದ್ದೇವೆ. ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಮೀಸಲಾತಿ ಜಾರಿಯಾಗಬೇಕು ಎಂದು ಹೇಳಿದರು.

ಎಂಆರ್‌ಎಚ್‌ಎಸ್ ಜಿಲ್ಲಾಧ್ಯಕ್ಷ ಸಿದ್ದಗಂಗಯ್ಯ ಮಾತನಾಡಿ, ಮಾದಿಗ ಮತ್ತು ಹೊಲೆಯ ಸಮುದಾಯಕ್ಕೆ ಎಲ್ಲಾ ವಿಧದಿಂದಲೂ ಅನ್ಯಾಯವಾಗಿದೆ. ಗೃಹ ಸಚಿವ ಡಾ.ಜಿ ಪರಮೇಶ್ವರ್, ನಾರಾಯಣಸ್ವಾಮಿ ಅವರು ಸ್ವ ಇಚ್ಛೆ ಹೇಳಿಕೆ ನೀಡುವುದನ್ನು ನಿಲ್ಲಿಸಿ ಒಳ ಮೀಸಲಾತಿ ಜಾರಿಗೆ ಧ್ವನಿ ಎತ್ತಬೇಕಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡ ದಾಡಿ ವೆಂಕಟೇಶ್, ಡಿಎಸ್‌ಎಸ್ ಅಧ್ಯಕ್ಷ ಶಿವರಾಮಣ್ಣ, ದಲಿತ ಮುಖಂಡ ದಾಡಿ ವೆಂಕಟೇಶ್, ಗೋವಿಂದರಾಜು, ದಾಸಲುಕುಂಟೆ ರಘು ಡಿ.ಎನ್, ಗಂಗಣ್ಣ, ರಾಜು, ಶಿವಣ್ಣ , ಶಿವಣ್ಣ, ಹನುಮಂತರಾಯಪ್ಪ ಇದ್ದರು.



ಸುದ್ದಿಗೋಷ್ಠಿಯಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಗೌರವಾಧ್ಯಕ್ಷ ಕೇಶವಮೂರ್ತಿ ಮಾತನಾಡಿದರು.

ಅನ್ಯ ಭಾಷೆ ಕೃತಿಗಳು ಕನ್ನಡಕ್ಕೆ ಹೆಚ್ಚು ಬರಲಿ

ಗೌರಿಬಿದನೂರು: ದ್ರಾವಿಡ ನೆಲದಲ್ಲಿ ಹುಟ್ಟಿ ಬೆಳೆದಿರುವ ನಾವೆಲ್ಲರೂ ಈ ನೆಲದ ಸಾಹಿತ್ಯವನ್ನು ಓದಿ ಅರ್ಥ ಮಾಡಿಕೊಳ್ಳುವ ಅಗತ್ಯವಿದೆ.ದಕ್ಷಿಣ ದಿಕ್ಕಿಗೆ ಕೃತಿ ಅನುವಾದಿಸಿದ ಪದ್ಮಪ್ರಕಾಶ್ ಅವರಂತಹ ಯುವ ಸಾಹಿತಿಗಳು ಮತ್ತಷ್ಟು ಕಥೆ, ಕಾದಂಬರಿಗಳನ್ನು ರಚಿಸುವಂತಾಗಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜನಾರ್ಧನ್ ಮೂರ್ತಿ ತಿಳಿಸಿದರು. ಅವರು ತಾಲೂಕಿನ ನಾಮಗೊಂಡ್ಲು ಗ್ರಾಮದಲ್ಲಿ ಸಾಹಿತಿ ಪದ್ಮಪ್ರಕಾಶ್ ಅನುವಾದಿಸಿರುವ ‘ದಕ್ಷಿಣ ದಿಕ್ಕಿಗೆ’ ಕಾದಂಬರಿಯನ್ನು ಲೋಕಾರ್ಪಣೆ ಮಾಡಿ ಮಾತನಾಡುತ್ತಿದ್ದರು. ತೆಲುಗಿನ ಮೂಲ ಕಾದಂಬರಿಯನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡುವ ಮೂಲಕ ದಕ್ಷಿಣ ದಿಕ್ಕಿನೆಡೆಗೆ ಕಾದಂಬರಿಗೆ ಹೊಸ ರೂಪ ನೀಡಿರುವ ಪದ್ಮ ಪ್ರಕಾಶ್ ಅವರ ಪ್ರಯತ್ನ ನಿಜಕ್ಕೂ ಶ್ಲಾಘನೀಯವಾಗಿದೆ. ಈ ರೀತಿಯಾಗಿ ಹೆಚ್ಚು ಕೃತಿ, ಕಾದಂಬರಿ ಮತ್ತು ಲೇಖನಗಳು ಕನ್ನಡ ಭಾಷೆಗೆ ಪರಿಚಯವಾದಲ್ಲಿ ಮತ್ತಷ್ಟು ಸಾಹಿತ್ಯ ಕಾಣಲು ಸಾಧ್ಯ ಎಂದು ಹೇಳಿದರು. ದಕ್ಷಿಣದಿಕ್ಕಿನೆಡೆಗೆ ಪುಸ್ತಕದ ಅನುವಾದಕಿ ಪದ್ಮ ಪ್ರಕಾಶ್ ಮಾತನಾಡಿ, ಮೊದಲ ಪ್ರಯತ್ನದಲ್ಲಿ ತೆಲುಗಿನ ಒಂದು ಕಾದಂಬರಿಯನ್ನು ಕನ್ನಡ ಭಾಷೆಗೆ ಅನುವಾದ ಮಾಡುವ ಪ್ರಯತ್ನವನ್ನು ಮಾಡಿದ್ದೇನೆ ಎಂದು ಹೇಳಿದರು. ವಕೀಲ ಎಚ್.ಎಲ್.ವಿ.ವೆಂಕಟೇಶ್,ಪೊಲೀಸ್ ವೃತ್ತ ನಿರೀಕ್ಷ ಕೆಪಿ ಸತ್ಯನಾರಾಯಣ್, ನಾಗರತ್ನಮ್ಮ,ಡಾ.ಕೆ.ಪ್ರಭಾ ನಾರಾಯಣಗೌಡ,ಗೌರೀಶ್, ಎಂ.ಆರ್.ಲಕ್ಷ್ಮಿನಾರಾಯಣ, ಆನೂಡಿ ನಾಗರಾಜ್, ಆರ್.ಆರ್.ರೆಡ್ಡಿ, ನಾಗೇಂದ್ರ ಇದ್ದರು.

ಸಮಾಚಾರ ಸಣ್ಣದಲ್ಲ

ಧರ್ಮಸ್ಥಳ: ಕೇಸರಿ ಬೆಂಬಲ

ಮೊದಲಪುಟದಿಂದ

ಇನ್ನೊಂದೆಡೆ ಕಾಂಗ್ರೆಸ್‌ನ ಹಲವು ಶಾಸಕರೂ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಎನ್ನುವ ಆರೋಪವನ್ನು ಹೆಚ್ಚಿಸಿದ್ದಾರೆ.

ಎಸ್‌ಐಟಿ ಮುಖ್ಯಸ್ಥರೊಂದಿಗೆ ಪರಂ ಚರ್ಚೆ: ಗುಂಡಿ ತೋಡುವಿಕೆಗೆ ತೀವ್ರ ವಿರೋಧ ವ್ಯಕ್ತವಾದ ಬೆನ್ನಲ್ಲೇ, ವಿಶೇಷ ತನಿಖಾ ತಂಡ ತನ್ನ ಕಾರ್ಯಚರಣೆಯನ್ನು ಸ್ಥಗಿತಗೊಳಿಸಿದೆ. ಎಸ್‌ಐಟಿಯನ್ನೇ ವಿಸರ್ಜನೆ ಮಾಡಲು ತೀರ್ಮಾನಿಸಿದ್ದ ಸರಕಾರ, ಕಾನೂನಾತ್ಮಕ ತೊಡಕು ನಿವಾರಿಸಿಕೊಂಡು ಅಧಿಕೃತವಾಗಿ ಘೋಷಿಸಲು ತೀರ್ಮಾನಿಸಿದೆ. ಈ ನಡುವೆ ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಅವರು ಭಾನುವಾರ ಗೃಹ ಸಚಿವ ಪರಮೇಶ್ವರ ಅವರನ್ನು ಭೇಟಿಯಾಗಿ, ಇಡೀ ಪ್ರಕರಣವನ್ನು ವಿವರಿಸಿದ್ದು ಮಧ್ಯಂತರ ವರದಿ ಸಲ್ಲಿಸಿದ್ದಾರೆ ಎನ್ನಲಾಗಿದೆ. ಸೋಮವಾರ ಬೆಳಗ್ಗೆ ಈ ವರದಿ ಹಾಗೂ ಮೊಹಂತಿ ಅವರ ವಿವರಣೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದ ಬಳಿಕ ವಿಧಾನಸಭೆಯಲ್ಲಿ ಉತ್ತರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಸ್‌ಐಟಿ ವಿಸರ್ಜನೆಗೂ ಕಾನೂನಾತ್ಮಕ ಸಮಸ್ಯೆ: ಅನಾಮಿಕ ವ್ಯಕ್ತಿಯ ಮಾತು ಕೇಳಿಕೊಂಡು ರಚಿಸಿದ್ದ ವಿಶೇಷ ತನಿಖಾ ತಂಡವನ್ನು ವಿಸರ್ಜನೆಗೊಳಿಸಲು ಸರಕಾರ ತೀರ್ಮಾನಿಸಿದ್ದರೂ, ವಿಸರ್ಜನೆ ಮಾಡುವುದಕ್ಕೂ ಕೆಲ ಕಾನೂನಾತ್ಮಕ ತೊಡಕುಗಳಿವೆ ಎನ್ನಲಾಗಿದೆ. ಈಗಾಗಲೇ ಅನಾಮಿಕ ವ್ಯಕ್ತಿ ನ್ಯಾಯಾಧೀಶರ ಮುಂದೆ ನೀಡಿರುವ ಹೇಳಿಕೆಗೆ ಸಂಬಂಧಿಸಿದಂತೆ ತನಿಖೆ ನಡೆಸುವಂತೆ ನ್ಯಾಯಾಲಯ ಹೇಳಿದೆ. ಇದೀಗ ಎಸ್‌ಐಟಿ ರದ್ದುಪಡಿಸಿದರೂ, ಇಡೀ ಪ್ರಕರಣವನ್ನು ಸ್ಥಳೀಯ ಪೊಲೀಸರು ನಡೆಸಲೇಬೇಕು. ಇದರೊಂದಿಗೆ ಅನಾಮಧೇಯ ವ್ಯಕ್ತಿಯ ಹಿನ್ನೆಲೆ, ಆತ ಆರೋಪ ಮಾಡಿದ ಸಮಯದಲ್ಲಿ ತಂದಿದ್ದ ಬುರುಡೆಯ ಹಿನ್ನೆಲೆ ಹಾಗೂ ಆತನಿಗೆ ಬೆಂಬಲವಾಗಿರುವವರು ಯಾರು ಎನ್ನುವ ಬಗ್ಗೆ ತನಿಖೆ ನಡೆಸಬೇಕಿದೆ. ಆದ್ದರಿಂದ ಗುಂಡಿ ಅಗೆಯುವುದನ್ನು ಬಿಟ್ಟು, ಇನ್ನೊಂದು ಆಯಾಮದಲ್ಲಿ ತನಿಖೆ ಮುಂದುವರಿಸುವಂತೆ ಸೂಚನೆ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಕನ್ನಡ ಹೋರಾಟಗಾರ ಸುದರ್ಶನ ನಿಧನ

ಮೈಸೂರು: ಇಲ್ಲಿನ ಕನ್ನಡ ಪರ ಹೋರಾಟಗಾರ, ಕನ್ನಡ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಮಕೃಷ್ಣನಗರದ ನೃಪತುಂಗ ಕನ್ನಡ ಶಾಲೆಯ ಸ್ಥಾಪಕರಲ್ಲೊಬ್ಬರಾದ ಸ.ರ. ಸುದರ್ಶನ್ (73) ಭಾನುವಾರ ಬೆಳಗ್ಗೆ ಹೃದಯಾಘಾತದಿಂದ ವಿಜಯನಗರದ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ ಪುತ್ರಿ ಎಂಜಿನಿಯರ್ ಹಾಗೂ ರಂಗ ಕಲಾವಿದೆ ನುಡಿ ಸುದರ್ಶನ್ ಇದ್ದಾರೆ. ಕಳೆದ ಐವತ್ತು ವರ್ಷಗಳಿಗೂ ಹಿಂದಿನಿಂದ ಕನ್ನಡ ಚಳವಳಿಯಲ್ಲಿ ಸುದರ್ಶನ್ ಪಾಲ್ಗೊಳ್ಳುತ್ತಿದ್ದರು. ಕನ್ನಡ ನಾಡು-ನುಡಿಗೆ ಧಕ್ಕೆಯಾದಾಗ ಸಿಡಿದೇಳುತ್ತಿದ್ದರು. ಎಂಬತ್ತರ ದಶಕದಲ್ಲಿ ಪ್ರಾರಂಭವಾದ ಗೋಕಾಕ್ ಚಳವಳಿಯಲ್ಲಿ ಕನ್ನಡ ಕ್ರಿಯಾ ಸಮಿತಿ ವತಿಯಿಂದ ಭಾಗವಹಿಸಿದ್ದರು. ಮೂರು ದಿನ ಬಂಧನಕ್ಕೂ ಒಳಗಾಗಿದ್ದರು. ಈವರೆಗೂ ಕನ್ನಡ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಕನ್ನಡದ ಅಸ್ಮಿತೆಗಾಗಿ ದುಡಿಯುತ್ತಿದ್ದರು. ಕನ್ನಡ ಪರವಾದ ಹಲವು ಧರಣಿಗಳು, ಪ್ರತಿಭಟನೆಗಳಲ್ಲಿ ಭಾಗಿಯಾಗುತ್ತಿದ್ದರು. ಮೂರು ವರ್ಷಗಳ ಕಾಲ ರಾಜ್ಯ ಸರಕಾರದ ಕರ್ನಾಟಕ ವಿಜ್ಞಾನ ಅಕಾಡೆಮಿಯಲ್ಲಿ ಸದಸ್ಯನಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಕಾಡೆಮಿ ವತಿಯಿಂದ ಪ್ರತಿ ವರ್ಷ ಕನ್ನಡ ವಿಜ್ಞಾನ ಸಮ್ಮೇಳನ ಮತ್ತು ಕನ್ನಡದಲ್ಲಿ ವಿಜ್ಞಾನ ಸಾಹಿತ್ಯವನ್ನು ಬದುಕಾಗಿ ಅಳವಡಿಸಿಕೊಂಡು, ಲೇಖನ ಕೃಷಿ ಮಾಡಿದ ವಿಜ್ಞಾನ ಲೇಖಕರಿಗೆ ಜೀವಮಾನ ಸಾಧನೆ ಪ್ರಶಸ್ತಿ ಬಂದಿದೆ. ಇಂಗ್ಲಿಷ್ ಕನ್ನಡ ವಿಜ್ಞಾನ ನಿಘಂಟು ಮೊದಲಾದವುಗಳ ಪ್ರಸ್ತಾವನೆ ಮಂಡಿಸಿ, ಪ್ರೇರಕನ ಪಾತ್ರ ನಿರ್ವಹಿಸಿದ್ದಾರೆ.

ಶಿರಸಿಯ ಮಕ್ಕಳು ಮುಂಬೈನಲ್ಲಿ ಪತ್ತೆ

ಶಿರಸಿ: ಮನೆಯಿಂದ ಚಿತ್ರಕಲೆ ತರಗತಿಗೆ ಹೋಗುವುದಾಗಿ ಹೇಳಿ ನಾಪತ್ತೆಯಾಗಿದ್ದ ನಗರದ ಕಸ್ತೂರಬಾ ನಗರದ ನಿವಾಸಿಗಳಾಗಿರುವ ಇಬ್ಬರು ವಿದ್ಯಾರ್ಥಿನಿಯರು ಮುಂಬೈನಲ್ಲಿ ಪತ್ತೆಯಾಗಿ ದ್ದಾರೆ. ಶಿರಸಿ ಪೊಲೀಸರ ಶ್ಲಾಘನೀಯ ಕಾರ್ಯಾಚರಣೆಯಿಂದ ಕಾಣೆಯಾದ ಒಂದು ದಿನದಲ್ಲಿ ಪತ್ತೆ ಹಚ್ಚಲು ಸಾಧ್ಯವಾಗಿದೆ. 8ನೇ ತರಗತಿ ಹಾಗೂ 6ನೇ ತರಗತಿಯಲ್ಲಿ ಓದುತ್ತಿದ್ದ ಇಬ್ಬರು ಬಾಲಕಿಯರು, ಚಿತ್ರಕಲೆ ತರಗತಿಗೆ ಹೋಗಿ ಬರುವುದಾಗಿ ಹೇಳಿ ಶನಿವಾರ ಮಧ್ಯಾಹ್ನ ಮನೆಯಿಂದ ಹೊರಟಿದ್ದು, ಬಳಿಕ ಕಾಣೆಯಾಗಿದ್ದರು. ನಂತರ ಕಾಣೆಯಾದ ವಿದ್ಯಾರ್ಥಿಗಳ ಪೋಷಕರು ಶಿರಸಿ ಮಾರುಕಟ್ಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ಶೋಧ ನಡೆಸಿದ್ದರು. ಮೊದಲಿಗೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಶಿರಸಿಯ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ವಿದ್ಯಾರ್ಥಿನಿಯರು ಓಡಾಡಿರುವ ದೃಶ್ಯ ದಾಖಲಾಗಿತ್ತು. ಶನಿವಾರ ಸಾಯಂಕಾಲ 4.10 ಸೆರೆಯಾಗಿದ್ದು, ಅದರ ಜಾಡು ಹಿಡಿದು ತನಿಖೆ ನಡೆಸಲಾಯಿತು. ಅಂತಿಮವಾಗಿ ವಿದ್ಯಾರ್ಥಿನಿಯರನ್ನು ಪತ್ತೆ ಹಚ್ಚಲು ಪೊಲೀಸರು ಯಶಸ್ವಿಯಾದರು.

ಜಾವಗಲ್ ಶ್ರೀನಾಥ್‌ಗೆ ಮಾತೃ ವಿಯೋಗ

ಮೈಸೂರು: ಭಾರತೀಯ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅವರ ತಾಯಿ, 88 ವರ್ಷದ ಭಾಗ್ಯಲಕ್ಷ್ಮೀ ಭಾನುವಾರ ಮೈಸೂರಿನಲ್ಲಿ ವಿಧಿವಶ ರಾದರು. ಮೈಸೂರಿನ ಕುವೆಂಪು ನಗರ ಬಡಾವಣೆಯಲ್ಲಿ ನೆಲೆಸಿದ್ದ ಅವರು ತಮ್ಮ ಸ್ವಗೃಹದಲ್ಲಿ ಬೆಳಗ್ಗೆ ನಿಧನ ಹೊಂದಿದರು. ಮಧ್ಯಾಹ್ನ 1 ಗಂಟೆಗೆ ಚಾಮುಂಡಿ ಬೆಟ್ಟದ ಪಾದದ ಬಳಿಯ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿತು.

ವಿರಾಮ
ಪ್ರತಿ ಭಾನುವಾರ

ಧರ್ಮಸ್ಥಳ ಅನಾಮಧೇಯ ವ್ಯಕ್ತಿಯ ಬುರುಡೆ ಪ್ರಕರಣ

ಏನೇ ಆದರೂ ಮುಸುಕುಧಾರಿಗೆ ಸಂಕಷ್ಟ?

ಬೆಂಗಳೂರು: ರಾಷ್ಟ್ರಮಟ್ಟದಲ್ಲಿ ಭಾರಿ ಸದ್ದು ಮಾಡಿದ ಧರ್ಮಸ್ಥಳ ಅನಾಮಧೇಯ ವ್ಯಕ್ತಿಯ 'ಬುರುಡೆ' ಪ್ರಕರಣದ ಮುಂದಿನ ತನಿಖೆ ಹೇಗೇ ನಡೆದರೂ, ಮುಸುಕುಧಾರಿ ವ್ಯಕ್ತಿಗೆ ಸಂಕಷ್ಟ ಎದುರಾಗುವುದು ಸ್ಪಷ್ಟವಾಗಿದೆ.

ವಿಶ್ವವಾಣಿ ವಿಶೇಷ

ಹೌದು, ಶವಗಳನ್ನು ಹೂತಿಟ್ಟಿದ್ದೆ ಎನ್ನುವ ಆರೋಪ ಮಾಡಿ ತೋರಿಸಿದ್ದ ಯಾವ ಸ್ಥಳದಲ್ಲಿಯೂ ಯಾವುದೇ ಕುರುಹುಗಳು ಸಿಕ್ಕಿಲ್ಲ. ಆದರೆ ವ್ಯಕ್ತಿಯೇ ಈಗಾಗಲೇ ನೂರಾರು ಶವಗಳನ್ನು ಹೂತಿಟ್ಟಿದ್ದೆ ಎಂದು ಒಪ್ಪಿಕೊಂಡಿರುವುದರಿಂದ ಇದೇ ಹೇಳಿಕೆಯ ಆಧಾರದಲ್ಲಿ ಆತನ ವಿರುದ್ಧ ಕಾನೂನಾತ್ಮಕ ಕ್ರಮವಹಿಸಬಹುದು. ಏಕೆಂದರೆ, ಆತನೇ ಹೇಳಿರುವಂತೆ ಇನ್ನ್ಯಾರೋ ಕೊಲೆ ಮಾಡಿದ್ದ ಶವಗಳನ್ನು ಈತ ಹೂತಿಟ್ಟಿದ್ದಾರೆ. ಇಷ್ಟು ವರ್ಷಗಳ ಕಾಲ ಅದನ್ನು ಬಹಿರಂಗ ಪಡಿಸದೇ ಇದಿದ್ದು ಹಾಗೂ ಶವವನ್ನು ಹೂತಿಡುವ ಮೂಲಕ ಕೊಲೆಗೆ ಸಹಕರಿಸಿದ್ದಾನೆ ಎನ್ನುವ ಆರೋಪದಲ್ಲಿ ಶಿಕ್ಷೆ ವಿಧಿಸಬಹುದು.

ಇದರೊಂದಿಗೆ ಆರಂಭದಲ್ಲಿ ನ್ಯಾಯಾಧೀಶರ ಮುಂದೆ ಹಾಜರಾಗುವ ಸಮಯದಲ್ಲಿ ಬುರುಡೆಯೊಂದನ್ನು ಹಿಡಿದುಕೊಂಡು ಹೇಳಿಕೆ ನೀಡಿದ್ದ. ಇದೀಗ ಎಸ್‌ಐಟಿ ಅಧಿಕಾರಿಗಳು ಈ ಬುರುಡೆಗೂ ಈ ವ್ಯಕ್ತಿಗೂ ಸಂಬಧವೇನು ಎನ್ನುವ ತನಿಖೆಯನ್ನು ಆರಂಭಿಸುತ್ತಾರೆ. ಈ ಬುರುಡೆಯನ್ನು ತಂದಿದ್ದು ಸಹ ಅಪರಾಧವಾಗಿ ರುವುದರಿಂದ ಈ ಪ್ರಕರಣದಲ್ಲಿಯೂ ಕ್ರಮವಹಿಸಲು ಅವಕಾಶವಿರುತ್ತದೆ. ಈ ಎರಡನ್ನೂ ಮೀರಿ, ವ್ಯಕ್ತಿ ಹೇಳಿದ ಯಾವ ಜಾಗದಲ್ಲಿಯೂ ಸಾಕ್ಷ್ಯ ಸಿಗದಿರುವುದರಿಂದ ಇದನ್ನೇ ಮುಂದಿಟ್ಟುಕೊಂಡು ಸುಳ್ಳು ಸಾಕ್ಷ್ಯ, ಸುಳ್ಳು ಹೇಳಿಕೆ ನೀಡಿದ ಆರೋಪದಲ್ಲಿಯೂ ಆತನ ವಿರುದ್ಧ ಕ್ರಮವಹಿಸಲು ಅವಕಾಶವಿದೆ.

ಇನ್ನು ಯಾವುದೇ ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯವನ್ನು ನೀಡುವ ಅಥವಾ ಸೃಷ್ಟಿಸುವ ಯಾರೇ ಆಗಲಿ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಎರಡರಲ್ಲಿ ಒಂದು ವಿವರಣೆಯ ಜೈಲು ಶಿಕ್ಷೆಗೆ ಗುರಿಯಾಗುತ್ತಾರೆ ಮತ್ತು ಐದು ಸಾವಿರ ರು.ವರೆಗೆ ವಿಸ್ತರಿಸಬಹುದಾದ ದಂಡಕ್ಕೂ ಗುರಿಯಾಗುತ್ತಾರೆ. ಇದೀಗ ಅನಾಮಧೇಯ ವ್ಯಕ್ತಿ ನ್ಯಾಯಾದೀಶರ ಮುಂದೆ ಹೇಳಿಕೆ ದಾಖಲಿಸಿರುವುದರಿಂದ, ಎಸ್‌ಐಟಿ ತನಿಖೆಯಲ್ಲಿ ಅನಾಮಧೇಯ ವ್ಯಕ್ತಿಯ ಆರೋಪದಲ್ಲಿ ಹುರುಳಿಲ್ಲ ಎನ್ನುವುದು ಸಾಬೀತಾದರೆ ಶಿಕ್ಷೆ ವಿಧಿಸಲು ಅವಕಾಶವಿದೆ ಎನ್ನುತ್ತಾರೆ ಕಾನೂನು ತಜ್ಞರು.

ಸುಳ್ಳು ಸಾಕ್ಷ್ಯ ನೀಡಿದ್ದರೂ ಶಿಕ್ಷೆಗೆ ಅವಕಾಶ

ಯಾವುದೇ ವ್ಯಕ್ತಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಹಾಗೂ ಪೊಲೀಸರಿಂದ ನ್ಯಾಯ ಸಿಗುವುದಿಲ್ಲ ಎನ್ನುವ ಆತಂಕವಿದ್ದರೆ ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಲು ಕಾನೂನಿನಲ್ಲಿ ಅವಕಾಶವಿರುತ್ತದೆ. ಒಂದು ವೇಳೆ ಸರಕಾರಿ ವ್ಯವಸ್ಥೆಯನ್ನು ಹಾಗೂ ಸಾರ್ವಜನಿಕರಿಗೆ ಸಮಸ್ಯೆಯಾಗುವಂತೆ ಸುಳ್ಳು ಹೇಳಿಕೆ ಅಥವಾ ಸಾಕ್ಷ್ಯ ನೀಡಿದರೆ ಆತನ ವಿರುದ್ಧ ಕ್ರಮವಹಿಸಲು ಕಾನೂನಿನಲ್ಲಿ ಅವಕಾಶವಿದೆ. ಅದರಲ್ಲಿಯೂ ನ್ಯಾಯಾಂಗ ಪ್ರಕ್ರಿಯೆಯಲ್ಲಿ ಉದ್ದೇಶಪೂರ್ವ ಕವಾಗಿ ಸುಳ್ಳು ಸಾಕ್ಷ್ಯವನ್ನು ನೀಡುವ ಅಥವಾ ಸೃಷ್ಟಿಸುವ ಪ್ರಯತ್ನ ಮಾಡಿದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಜೈಲು ಶಿಕ್ಷೆ ಮತ್ತು ಹತ್ತು ಸಾವಿರ ರು.ವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಲು ಅವಕಾಶವಿದೆ.

ನ್ಯಾಯಾಲಯದಲ್ಲಿಯೂ ಪ್ರಶ್ನಿಸುವ ಸಾಧ್ಯತೆ

ಆರಂಭದಲ್ಲಿ ಅನಾಮಧೇಯ ವ್ಯಕ್ತಿ ಹೇಳಿದ ಕಡೆಯಲ್ಲ ಗುಂಡಿ ಅಗೆದು ಸಾರ್ವಜನಿಕ ವಲಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾದ ಎಸ್‌ಐಟಿ ನಡೆಯಿಂದ ಸರಕಾರಕ್ಕೂ ಮುಜುಗರ ಉಂಟಾಯಿತು. ಆರಂಭದಲ್ಲಿ ಅನಾಮಧೇಯ ವ್ಯಕ್ತಿ ಹೇಳಿದ್ದ ಗುಂಡಿಗಳೊಂದಿಗೆ ಹೆಚ್ಚುವರಿ ಮೂರು ಗುಂಡಿಗಳನ್ನು ತೋಡಿದರೂ ಯಾವುದೇ ಕುರುಹು ಸಿಗಲಿಲ್ಲ. ರಾಜಕೀಯವಾಗಿ ಹಾಗೂ ಸಾರ್ವಜನಿಕವಾಗಿ ವಿರೋಧ ವ್ಯಕ್ತವಾಗಿದ್ದರಿಂದ ಎಸ್‌ಐಟಿಯನ್ನು ವಿಸರ್ಜನೆ ಮಾಡುವ ತೀರ್ಮಾನಕ್ಕೆ ಸರಕಾರ ಬಂದಿತ್ತು. ಆದರೀಗ ಏಕಾಏಕಿ ಎಸ್‌ಐಟಿಯನ್ನು ರದ್ದುಪಡಿಸಿದರೆ ತನಿಖಾ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ವಿಸರ್ಜನೆ ಮಾಡಿರುವುದನ್ನು ಪ್ರಶ್ನಿಸಿ ಅನಾಮಧೇಯ ವ್ಯಕ್ತಿ ಹಾಗೂ ಆತನ 'ಬೆನ್ನಿಗೆ' ಇರುವ ಶಕ್ತಿಗಳು ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆಯಿದೆ. ಇದರೊಂದಿಗೆ, ಈ ಹಿಂದೆ ಮುಸುಕುಧಾರಿ ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಿದಾಗ ಪ್ರಕರಣದ ವಿಚಾರಣೆ ನಡೆಸುವಂತೆ ಸೂಚನೆ ನೀಡಿದ್ದರು. ಇದೀಗ ಏಕಾಏಕಿ ಎಸ್‌ಐಟಿ ರದ್ದಾದರೆ ಸ್ಥಳೀಯ ಪೊಲೀಸರಾದರೂ ಪ್ರಕರಣವನ್ನು ಕೈಗೆತ್ತಿಕೊಳ್ಳಬೇಕು. ಆದ್ದರಿಂದ ಈ ಗೊಂದಲಗಳಿಗೆ ಆಸ್ಪದ ನೀಡುವ ಬದಲು, 'ಗುಂಡಿ' ಅಗೆಯುವುದನ್ನು ಬಿಟ್ಟು ಇನ್ನುಳಿದ ತನಖೆ ನಡೆಸುವುದು ಸೂಕ್ತ ಎನ್ನುವ ಚರ್ಚೆಗಳು ಕೇಳಿಬಂದಿದೆ. ಮುಂದಿನ ದಿನದಲ್ಲಿ ಅನಾಮಿಕ ವ್ಯಕ್ತಿ ನ್ಯಾಯಾಧೀಶರ ಮುಂದೆ ತಂದಿದ್ದ ಬುರುಡೆಯ ತನಿಖೆ ಸೇರಿದಂತೆ ಆತನ ಹಿನ್ನಲೆ ಹಾಗೂ ಆತನ ಹಿಂದಿರುವ ಶಕ್ತಿಗಳು ಯಾವುದು ಎನ್ನುವ ವಿಷಯದ ಮೇಲೆ ಹೆಚ್ಚು ಗಮನಹರಿಸಲು ಎಸ್‌ಐಟಿಗೆ ಸೂಚನೆ ನೀಡುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಟ್ರಾಫಿಕ್ ಮಧ್ಯೆಯೇ ಸಿಲುಕಿದ ಆಂಬ್ಯುಲೆನ್ಸ್

ನೆಲಮಂಗಲ ಬೈಪಾಸ್ ಬಳಿ ಟ್ರಾಫಿಕ್ ಜಾಮ್

ಬೆಂಗಳೂರು: ಸಾಲು ಸಾಲು ರಜೆ ಬಳಿಕ ಊರಿಗೆ ತೆರಳಿದ್ದ ಜನರು ಬೆಂಗಳೂರಿನತ್ತ ಬರುತ್ತಿದ್ದು, ಈ ಹಿನ್ನೆಲೆ ನೆಲಮಂಗಲದ ಕುಣಿಗಲ್ ಬೈಪಾಸ್ ಬಳಿ ಟ್ರಾಫಿಕ್ ಜಾಮ್ ಆಗಿದೆ. ಶುಕ್ರವಾರದಿಂದ ಭಾನುವಾರದವರೆಗೆ ಮೂರು ದಿನ ಸಾಲು ಸಾಲು ರಜೆಯಿದ್ದ ಕಾರಣ ಹೆಚ್ಚಿನವರು ಊರಿಗೆ ತೆರಳಿದ್ದರು. ಇದೀಗ ರಜೆ ಮುಗಿಸಿ ಊರಿನಿಂದ ಬೆಂಗಳೂರಿನತ್ತ ಜನರು ಬರುತ್ತಿದ್ದು, ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಭಾರೀ ಟ್ರಾಫಿಕ್ ಜಾಮ್ ಉಂಟಾಗಿದೆ.

ಬೆಂಗಳೂರು ಹೊರವಲಯದ ನೆಲಮಂಗಲದ ಕುಣಿಗಲ್ ಬೈಪಾಸ್ ಬಳಿ ವಾಹನಗಳು ಸಾಲುಗಟ್ಟಿ ನಿಂತಿದ್ದು, ಮಳೆಯೇ ನಡುವೆ ದ್ವಿಚಕ್ರ ವಾಹನ ಸವಾರರು ಪರದಾಡುವಂತಾಗಿದೆ. ಮೂರು ದಿನಗಳ ರಜೆ ಮುಗಿಸಿ ಹೆಚ್ಚಿನ ಜನರು ಬೆಂಗಳೂರಿಗೆ ಮರಳುತ್ತಿರುವ ಹಿನ್ನೆಲೆ ಟ್ರಾಫಿಕ್ ಜಾಮ್ ಆಗಿದೆ. ಇದೆಲ್ಲದರ ಮಧ್ಯೆಯೇ ಆಂಬ್ಯುಲೆನ್ಸ್ ಸಿಲುಕಿಕೊಂಡಿದ್ದು, ಪ್ರಯಾಣಿಕರು ಹೈರಾಣಾಗಿದ್ದಾರೆ.

ದರೋಡೆ ಮಾಡಿದ್ದನ್ನು ನೋಡಿದ ಹೋಟೆಲ್ ಮಾಲೀಕನ ಹತ್ಯೆ

ಮಂಡ್ಯ: ಚಿನ್ನದ ಅಂಗಡಿಯಲ್ಲಿ ಕಳ್ಳತನ ಮಾಡಲು ಬಂದಿದ್ದ ದರೋಡೆಕೋರರ ತಂಡವು ತಮ್ಮ ಕೃತ್ಯವನ್ನು ಕಂಡ ವ್ಯಕ್ತಿಯನ್ನು ಹತ್ಯೆ ಮಾಡಿ ಚಿನ್ನಾಭರಣ ದೋಚಿ ಪರಾರಿಯಾಗಿರುವ ಘಟನೆ ತಾಲ್ಲೂಕಿನ ಕಿರುಗಾವಲು ಗ್ರಾಮದಲ್ಲಿ ನಡೆದಿದೆ.

ಕಿರುಗಾವಲು ಗ್ರಾಮದ ಮಹದೇಶ್ವರ ಹೋಟೆಲ್ ಮಾಲೀಕ ಮಾದಪ್ಪ (72 ವ) ಕೊಲೆಯಾದ ವ್ಯಕ್ತಿ. ಭಾನುವಾರ ಬೆಳಗಿನ ಜಾವ ಘಟನೆ ನಡೆದಿದೆ. ಗ್ರಾಮದ ಮುಖ್ಯರಸ್ತೆಯ ಮಹಾಲಕ್ಷ್ಮಿ ಜ್ಯೂವೆಲರ್ಸ್ ಆಂಡ್ ಬ್ಯಾಂಕರ್ಸ್ ನಲ್ಲಿ ಬೆಳಗಿನ 2 ಗಂಟೆ ಸಮಯದಲ್ಲಿ ದರೋಡೆಕೋರ ತಂಡ ಅಂಗಡಿ ಬಾಗಿಲನ್ನು ಗ್ಯಾಸ್ ಕಟ್ಟರ್ ನಿಂದ ಕಟ್ ಮಾಡಿ ಒಳ ನುಗ್ಗಿ ಚಿನ್ನಾಭರಣಗಳನ್ನು ದೋಚುತ್ತಿದ್ದರು. ಈ ವೇಳೆ ಪಕ್ಕದಲ್ಲಿದ್ದ ಮಹದೇಶ್ವರ ಹೋಟೆಲ್ ಮಾಲೀಕ ಮಾದಪ್ಪ ಅವರು ಶಬ್ದ ಕೇಳಿ ಹೊರ ಬಂದಿದ್ದಾರೆ. ಇದ್ದರಿಂದ ಗಾಬರಿಗೊಂಡ ದರೋಡೆಕೋರರು ಮಾದಪ್ಪ ಅವರ ಮೇಲೆ ಹಲ್ಲೆ ನಡೆಸಿ ಕತ್ತು ಹಿಸುಕಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ದರೋಡೆಕೋರರು ಜ್ಯುವೆಲ್ಲರಿ ಶಾಪ್ ನ ಸಿಸಿಟಿವಿಯ ಡಿವಿಆರ್ ಅನ್ನು ಹೊತ್ತು ಪರಾರಿಯಾಗಿದ್ದು, ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್ಪಿ ವಿ.ಕೃಷ್ಣಪ್ಪ, ಸಿಪಿಐ ಬಿ.ಎಸ್.ಶ್ರೀಧರ್, ಪಿಎಸ್‌ಐ ಡಿ.ರವಿಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪತಿ ವಿರುದ್ಧ ಕೊಲೆ ಆರೋಪ | ಗೋಕುಲ್ ರೋಡ್ ಠಾಣೆಯಲ್ಲಿ ಕೇಸ್

ನೇಣು ಬಿಗಿದ ಸ್ಥಿತಿಯಲ್ಲಿ ಪತ್ನಿ ಶವ ಪತ್ತೆ

ಹುಬ್ಬಳ್ಳಿ: ಜಿಲ್ಲೆಯ ನಂದಗೋಕುಲ ಬಡಾವಣೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿಯೋರ್ವಳ ಶವ ಪತ್ತೆಯಾಗಿದ್ದು, ಕೊಲೆ ಮಾಡಿ ನೇಣಿಗೆ ಹಾಕಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ನಂದಗೋಕುಲ ಬಡಾವಣೆಯ ನಿವಾಸಿ ಜಯಶ್ರೀ ಬಡಿಗೇರ್ (31) ಮೃತ ಗೃಹಿಣಿ. ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಶಿವಾನಂದ ಎಂಬುವವರ ಜೊತೆ ಕಳೆದ ಮೇ 21ರಂದು ವಿವಾಹವಾಗಿತ್ತು. ಮದುವೆಗೂ ಮುಂಚೆ ಪತಿ ಶಿವಾನಂದ ಬೇರೆ ಯುವತಿಯನ್ನು ಪ್ರೀತಿಸುತ್ತಿದ್ದ. ತನ್ನ ಹದಿಮೂರು ವರ್ಷಗಳ ಪ್ರೀತಿಯನ್ನು ಮುಚ್ಚಿಟ್ಟು ಶಿವಾನಂದ ಮದುವೆಯಾಗಿದ್ದ. ಈ ಕುರಿತು ಮದುವೆಯಾದ ಬಳಿಕ ಮೃತ ಜಯಶ್ರೀಗೆ ಮಾಹಿತಿ ನೀಡಿದ್ದ. ಈ ವಿಷಯವಾಗಿ ಇಬ್ಬರ ನಡುವೆ ಗಲಾಟೆಯಾಗಿತ್ತು. ಆದರೂ ಕೂಡ ಜಯಶ್ರೀ ಪತಿಯ ಜತೆಗೆ ಇರಲು ನಿರ್ಧರಿಸಿದ್ದಳು. ಸಾಯುವ ಮುನ್ನ ರಾತ್ರಿಯೂ ಕೂಡ ಇಬ್ಬರ ನಡುವೆ ಜಗಳವಾಗಿತ್ತು ಎಂದು ತಿಳಿದುಬಂದಿದೆ.

ಜಯಶ್ರೀಗೆ ಶಿವಾನಂದ ಮಾನಸಿಕ ಕಿರುಕುಳ ನೀಡ್ತಿದ್ದ. ಇದೀಗ ನನ್ನ ಮಗಳನ್ನು ಕೊಲೆ ಮಾಡಿ ನೇಣು ಹಾಕಿದ್ದಾರೆ ಎಂದು ಮೃತರ ಕುಟುಂಬಸ್ಥರು ಆರೋಪಿಸಿದ್ದಾರೆ. ಸದ್ಯ ಹುಬ್ಬಳ್ಳಿಯ ಗೋಕುಲ್ ರೋಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತ್ಯೇಕ ಅಪಘಾತ: ಆರು ಜನ ಸಾವು

ಬಳ್ಳಾರಿ: ರಸ್ತೆ ಬದಿ ನಿಂತಿದ್ದ ಲಾರಿಗೆ ಬಸ್ ಡಿಕ್ಕಿ ಹೊಡೆದು ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಬೈರಾಪುರ ಕ್ರಾಸ್ ಬಳಿ ನಡೆದಿದೆ.

ಮಂಡ್ಯ ಮೂಲದ ಶ್ವೇತಾ(38), ಕನಕಪುರ ಮೂಲದ ಬಾಲನಾಯಕ(42) ಮೃತರು. ಘಟನೆಯಲ್ಲಿ 10ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಮೃತರಿಬ್ಬರು ಮಂತ್ರಾಲಯ ರಾಯರ ದರ್ಶನಕ್ಕೆ ಬಂದಿದ್ದರು. ರಾಯರ ದರ್ಶನ ಮುಗಿಸಿ ಮಸ್ಕಿಯಿಂದ ಬೆಂಗಳೂರಿಗೆ ಸರಕಾರಿ ಬಸ್ಸಿನಲ್ಲಿ ತೆರಳುತ್ತಿದ್ದರು. ಈ ವೇಳೆ ನಿಂತಿದ್ದ ಲಾರಿಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿದೆ. ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

110 ಕಿ.ಮೀ ವೇಗದಲ್ಲಿ ಡಿವೈಡರ್‌ಗೆ ಕಾರು ಡಿಕ್ಕಿ

ಕೂಲಿ ಸಿನಿಮಾ ನೋಡಲು 110 ಕಿ.ಮೀ ವೇಗದಲ್ಲಿ ಕಾರು ಚಲಾಯಿಸಿ ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಯುವಕರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಬಸವಾಪಟ್ಟಣದ ಸಮೀಪದಲ್ಲಿ ನಡೆದಿದೆ. ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ದರ್ಶನ್ (25), ಬಡಿಗೆ ಕೆಲಸ ಮಾಡುತ್ತಿದ್ದ ರಂಗನಾಥ ಪ್ರಸಾದ್ (22) ಮೃತ ಯುವಕರು. ಇನ್ನೂ ಅಪಘಾತದಲ್ಲಿ ಮೃತ ದರ್ಶನ್ ಸಹೋದರ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಈ ಕುರಿತು ಸಿರಿಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಕೂಟಿಗೆ ಟಾಟಾ ಏಸ್ ಡಿಕ್ಕಿ ಇಬ್ಬರು ಸಾವು: ಟಿವಿಎಸ್ ಸ್ಕೂಟಿಗೆ ಟಾಟಾ ಏಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿದ್ದು, ಮತ್ತಿಬ್ಬರು ಗಂಭೀರ ಗಾಯಗೊಂಡ ಘಟನೆ ಬೆಳಗಾವಿ ಜಿಲ್ಲೆಯ ರಾಮದುರ್ಗ ಪಟ್ಟಣದ ಹೊರ ವಲಯದ ಶಿವನಮೂರ್ತಿ ದೇವಸ್ಥಾನದ ಹತ್ತಿರ ಭಾನುವಾರ ನಡೆದಿದೆ. ಪಟ್ಟಣದ ಪಡಕೋಟಿ ಓಣಿಯ ನಿವಾಸಿ ಶಿವನಮೂರ್ತಿ ದೇವಸ್ಥಾನದ ಅರ್ಚಕ ವಿಜಯಕುಮಾರ ಗಣಪತಿ ಗೋಡಬೋಲೆ (54) ಹಾಗೂ ಟಾಟಾ ಏಸ್ ವಾಹನ ಚಾಲಕ ಗುಲ್ಬರ್ಗದ ಅನೀಲ ರಮೇಶ ಬಿರಾದಾರ (21) ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ರಾಮದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಖರಣ ದಾಖಲಿಸಿದ್ದಾರೆ.

ಆನೆಗಳಿಗೆ ಲಾಂಗ್ ವಾಕ್

ಮೈಸೂರು: ಭಾನುವಾರ ದಸರಾ ಗಜಪಡೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಆನೆಗಳು, ಬನ್ನಿಮಂಟಪದವರೆಗೆ ಸಾಗಿದ್ದು, ಆನೆಗಳನ್ನು ನೋಡಲು ಜನಸಾಗರವೇ ನಿಂತಿದ್ದು ವಿಶೇಷವಾಗಿತ್ತು. ಗಜಪಡೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ ದಸರಾ ಆನೆಗಳಾದ ಧನಂಜಯ, ಕಂಜನ್, ಭೀಮ, ಏಕಲವ್ಯ, ಪ್ರಶಾಂತ, ಮಹೇಂದ್ರ, ಕಾವೇರಿ, ಲಕ್ಷ್ಮಿ ಸೇರಿದಂತೆ ಒಂಭತ್ತು ಆನೆಗಳು ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಕ್ರೀಡಾಂಗಣದವರೆಗೆ ತೆರಳಿದವು. ಅರಮನೆಯಿಂದ 5ಕಿಲೋ ಮೀಟರ್ ದೂರ ಇರುವ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಕ್ರೀಡಾಂಗಣವರೆಗೆ ಹೋಗಿ ಬಂದವು. ಅರಮನೆಯಿಂದ ಪಂಜಿನ ಕವಾಯತು ಮೈದಾನದ ಕ್ರೀಡಾಂಗಣವರೆಗೆ ಹೋಗಿ ವಾಪಸ್ ಬರುವುದರಿಂದ 10 ಕಿ.ಮೀ. ಆಗಲಿದೆ. ಅರಮನೆಯಿಂದ ಬನ್ನಿಮಂಟಪದ ರಸ್ತೆಯ ಎರಡು ಬದಿಯಲ್ಲಿ ದಸರಾ ಮೆರವಣಿಗೆ ನೋಡಿದರೆ, ಆನೆಗಳನ್ನು ನೋಡಿದರು.

ನಾಯಿಗಳ ದಾಳಿ: 23 ಕುರಿಮರಿಗಳು ಸಾವು

ಹೂವಿನಹಡಗಲಿ: ತಾಲೂಕಿನ ಹೊಳಗುಂದಿ ಗ್ರಾಮದ ನಿಜಲಿಂಗಪ್ಪ ನಗರದ ಬಳಿಯ ಕುರಿಹಟ್ಟಿಯ ಮೇಲೆ ಬೀದಿನಾಯಿಗಳು ದಾಳಿ ನಡೆಸಿದ ಪರಿಣಾಮ 23 ಕುರಿಮರಿಗಳು ಸತ್ತಿರುವ ಘಟನೆ ಸಂಭವಿಸಿದೆ.

ಗ್ರಾಮದ ಕುರಿಗಾಹಿ ಹುಲುಗಪ್ಪ ಎಂಬುವವರ ಕುರಿಹಟ್ಟಿಯ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿವೆ. ಹುಲುಗಪ್ಪ ಅವರ 20 ಕುರಿಮರಿ, ಕಂದಗಲ್ ಶಿವರಾಜ್ ಅವರ ಎರಡು, ದೊಡ್ಡಬಸಪ್ಪ ಅವರಿಗೆ ಸೇರಿದ ಒಂದು ಮರಿ ಸತ್ತಿದೆ. ಮರಿಗಳನ್ನು ಹಟ್ಟಿಯಲ್ಲಿ ಕೂಡಿಹಾಕಿ, ಕುರಿಗಳನ್ನು ಮೇಯಿಸಲು ಅಡವಿಗೆ ತೆರಳಿದ್ದಾಗ ನಾಯಿಗಳ ದಾಳಿ ನಡೆದಿದೆ. ಗ್ರಾಮ ವ್ಯಾಪ್ತಿಯ ಕುರಿಹಟ್ಟಿಗಳ ಮೇಲೆ ಪದೇ ಪದೇ ಬೀದಿನಾಯಿಗಳ ದಾಳಿ ನಡೆಸುತ್ತಿವೆ. ಇದರಿಂದ ಕುರಿಗಾಹಿಗಳಿಗೆ ಸಂಕಷ್ಟ ಎದುರಾಗಿದ್ದು, ಸರಕಾರ ಪರಿಹಾರ ನೀಡಬೇಕು' ಎಂದು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಶಿವರಾಜ್ ಒತ್ತಾಯಿಸಿದ್ದಾರೆ.

ರಾಜಾಸೀಟ್ ಗ್ಲಾಸ್ ಬ್ರಿಡ್ಜ್ ಯೋಜನೆ ಹಿಂಪಡೆದ ಸರಕಾರ

ಮಡಿಕೇರಿ: ನಗರದ ಪ್ರಸಿದ್ಧ ಪ್ರವಾಸಿ ತಾಣ ರಾಜಾಸೀಟ್ ಗ್ಲಾಸ್ ಬ್ರಿಡ್ಜ್ ಯೋಜನೆಯನ್ನು ರಾಜ್ಯ ಸರಕಾರ ಹಿಂಪಡೆದಿದೆ. ಇತ್ತೀಚೆಗೆ ರಾಜಾಸೀಟ್‌ನಲ್ಲಿ 15 ಕೋಟಿ ರು. ವೆಚ್ಚದಲ್ಲಿ ಗಾಜಿನ ಸೇತುವೆ ಮತ್ತು ಫುಡ್ ಕೋರ್ಟ್ ನಿರ್ಮಾಣ ಯೋಜನೆಗೆ ತೋಟಗಾರಿಕೆ ಇಲಾಖೆ ಟೆಂಡರ್ ಆಹ್ವಾನಿಸಿತ್ತು. ಇದಕ್ಕೆ ಜಿಲ್ಲೆಯ ಜನರಿಂದ ಸಾಕಷ್ಟು ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಇದೀಗ ಸರಕಾರ ಆ ಯೋಜನೆಯನ್ನು ಹಿಂಪಡೆದಿದೆ.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಮಡಿಕೇರಿ ಶಾಸಕ ಮಂಥರ್ ಗೌಡ, ರಾಜಾಸೀಟ್ ಗ್ಲಾಸ್ ಬ್ರಿಡ್ಜ್ ಯೋಜನೆ ರಾಜ್ಯ ಸರಕಾರ ಹಿಂಪಡೆದಿದೆ. ಗ್ಲಾಸ್ ಬ್ರಿಡ್ಜ್ ಸಾರ್ವಜನಿಕ ವಲಯದಲ್ಲಿ ವಿರೋಧ ವ್ಯಕ್ತವಾಗಿದೆ. ಗ್ಲಾಸ್ ಬ್ರಿಡ್ಜ್ ನಿರ್ಮಾಣವಾದರೆ ಅಪಾಯವಾಗುವ ಸಾಧ್ಯತೆ ಇದೆ. ಹಾಗಾಗಿ ಈ ಯೋಜನೆ ರದ್ದು ಮಾಡಲಾಗಿದೆ ಎಂದು ಹೇಳಿದರು.

ಧರ್ಮಸ್ಥಳ: ನ್ಯಾಯ ಒದಗಿಸುವ ಸೌಜನ್ಯ ಜನಪ್ರತಿನಿಧಿಗಳಿಗಿಲ್ಲವೇ?

ಜಿತೇಂದ್ರ ಕುಂದೇಶ್ವರ, ಮಂಗಳೂರು

ಧರ್ಮಸ್ಥಳದಲ್ಲಿ ತಲೆ ಬುರುಡೆ ಪ್ರಕರಣ ಕ್ಲೈಮ್ಯಾಕ್ಸ್ ಹಂತ ತಲುಪಿದೆ. ವಿಧಾನಸಭೆ ಅಧಿವೇಶನದಲ್ಲಿ ಗೃಹಸಚಿವ ಡಾ.ಜಿ. ಪರಮೇಶ್ವರ್ ಕಥೆಗೆ ಒಂದು ಮಂಗಳ ಹಾಡಲಿದ್ದಾರೆ. ಆದರೆ ಇಡೀ ಪ್ರಕರಣಕ್ಕೆ ತಾರ್ಕಿಕ ಅಂತ್ಯ ಸಿಗಬೇಕಾದರೆ ಕಾಂತಾರ ಸಿನಿಮಾ ಬಂದ ಬಳಿಕ ಅದರ ಪೂರ್ವದ ಕಥೆ ತೋರಿಸುವ ಕಾಂತಾರ 1 ಸಿನಿಮಾದಂತೆ ಸದ್ಯಕ್ಕೆ ದುಃಖಾಂತ್ಯಗೊಂಡಿರುವ ಸೌಜನ್ಯ ಪ್ರಕರಣಕ್ಕೊಂದು ನ್ಯಾಯಯುತ ಅಂತ್ಯ ತೋರಿಸಬೇಕಾಗಿದೆ. ನೂರಾರು ಹೆಣ ಹೂತ ಪ್ರಕರಣ ಕಥೆ ಹೊರ ಬರಲು ಸೌಜನ್ಯ ಅತ್ಯಾಚಾರ ಹತ್ಯೆಗೆ ನಿಜವಾದ ನ್ಯಾಯ ಸಿಗದೇ ಇರುವುದೇ ಆಗಿದೆ.

ಪ್ರಕರಣದಲ್ಲಿ ಬಂಧಿತ ಕಾರ್ಕಳ ಕುಕ್ಕುಂದೂರಿನ ಸಂತೋಷ್ ವಿರುದ್ಧದ ಆರೋಪವನ್ನು ಪ್ರಾಸಿಕ್ಯೂಶನ್ ಸಾಬೀತು ಪಡಿಸುವಲ್ಲಿ ವಿಫಲವಾದ ಕಾರಣ ಸಿಬಿಐ ವಿಶೇಷ ನ್ಯಾಯಾಲಯವು ಆರೋಪಿಯನ್ನು ದೋಷಮುಕ್ತಗೊಳಿಸಿ ತೀರ್ಪು ನೀಡಿತ್ತು. ಪ್ರತ್ಯಕ್ಷದರ್ಶಿಗಳು ಯಾರೂ ಇಲ್ಲದ ಕಾರಣ ಇಡೀ ಪ್ರಕರಣವು ಸಾಂದರ್ಭಿಕ ಸಾಕ್ಷಿಗಳನ್ನು ಅವಲಂಬಿಸಿತ್ತು. ಒಟ್ಟು 86 ಸಾಕ್ಷಿಗಳಲ್ಲಿ ಆರಂಭಿಕ 7 ಮಂದಿ ಸೌಜನ್ಯ ಮನೆಯವರು, ಸಂಬಂಧಿಕರೇ ಸಾಕ್ಷಿಗಳಾಗಿದ್ದರು. ಆದರೆ ವಿಚಾರಣೆ ವೇಳೆ ಇವರು ಪ್ರತಿಕೂಲ ಸಾಕ್ಷಿಗಳಾಗಿ, ಆರೋಪಿ ಪರವಾಗಿ ಸಾಕ್ಷ್ಯ ನುಡಿದಿದ್ದರು. ಜತೆಗೆ ಆರಂಭದಲ್ಲಿ ಸಮರ್ಪಕ ದಾಖಲೆ ಸಂಗ್ರಹದಲ್ಲಿ ಪೊಲೀಸರು ಎಡವಿರುವುದನ್ನು ನ್ಯಾಯಾಲಯವೂ ಉಲ್ಲೇಖಿಸಿದೆ.

ಇದಾದ ಬಳಿಕ ಪ್ರಕರಣದ ಮರು ತನಿಖೆಗೆ ಆದೇಶಿಸಬೇಕು ಎಂದು ಕೋರಿ ಸೌಜನ್ಯಳ ತಂದೆ ಚಂದಪ್ಪ ಗೌಡ ಸೇರಿದಂತೆ ಹೈಕೋರ್ಟಿನಲ್ಲಿ ಮೂರು ರಿಟ್ ಅರ್ಜಿ ದಾಖಲಾಗಿತ್ತು. ''ಪ್ರಕರಣ ಸಂಬಂಧ ಯಾವುದೇ ಪ್ರತ್ಯಕ್ಷ ಸಾಕ್ಷಿಗಳಿಲ್ಲ. ವೈದ್ಯಕೀಯ ಪುರಾವೆಗಳನ್ನು ಸುಧಾರಿಸಲು ಸಾಧ್ಯವಿಲ್ಲ, ವಿಧಿವಿಜ್ಞಾನ ಸಾಕ್ಷ್ಯಗಳನ್ನು ಸಹ ಸುಧಾರಿಸಲು ಸಾಧ್ಯವಿಲ್ಲ. ಗೋಲ್ಡನ್ ಅವರ್‌ನಲ್ಲಿ ಸಂಗ್ರಹಿಸಲಾಗದ ಪುರಾವೆಗಳು ಇನ್ನೂ ಲಭ್ಯವಿದೆಯೇ ಎಂಬುದು ಸಂದೇಹವಾಗಿದೆ ಎಂದು ಹೇಳಿ ಮರು ತನಿಖೆ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿತ್ತು.

ಕಾರ್ಯಾಂಗ ಮತ್ತು ನ್ಯಾಯಾಂಗದಲ್ಲಿ ಈ ಪ್ರಕರಣಕ್ಕೆ ಸರಿಯಾದ ನ್ಯಾಯ ಸಿಗದೇ ಇದ್ದಾಗ ನ್ಯಾಯ ಸಿಗಲು ಏನು ದಾರಿ ಎನ್ನುವುದನ್ನು ಶಾಸಕಾಂಗ ಆಲೋಚಿಸಬೇಕು. ಈಗ ಪ್ರಕರಣಕ್ಕೆ ಜೀವ ಬರುವಂತೆ ವಿಧಾನಸಭೆಯಲ್ಲಿ ಇರುವ ಜನಪ್ರತಿನಿಧಿಗಳು ಮಾಡಬೇಕೇ ಹೊರತು ಧರ್ಮಸ್ಥಳ ಚಲೋ ಮಾಡುವುದು ಅವರ ಕಾರ್ಯವಲ್ಲ. ವಿಧಾನಸಭೆಯಲ್ಲಿ ಯಾರೂ ಕೂಡಾ ಈ ಪ್ರಕರಣದ ಬಗ್ಗೆ ಮಾತನಾಡುತ್ತಿಲ್ಲ. ಸೌಜನ್ಯ ಪ್ರಕರಣಕ್ಕೆ ನ್ಯಾಯ ಸಿಗದ ಹೋದರೆ, ಧರ್ಮಸ್ಥಳ ವಿರುದ್ಧದ ಸುಳ್ಳು ಸುದ್ದಿಗಳು ಮುಂದುವರಿಯಬಹುದು.

ಗೆದ್ದೆತ್ತಿನ ಬಾಲ: ಧರ್ಮಸ್ಥಳ ಪ್ರಕರಣದ ಹಿಂದೆ ಷಡ್ಯಂತ್ರವಿದೆ ಎಂದು ಸ್ವತಃ ಡಿಸಿಎಂ ಡಿಕೆ ಶಿವಕುಮಾರ್ ಅವರೇ ಹೇಳಿದ್ದಾರೆ. 'ಶ್ರೀಕ್ಷೇತ್ರ ಧರ್ಮಸ್ಥಳದ ಕುರಿತಾದ ಅಪಪ್ರಚಾರಕ್ಕೆ ಕಡಿವಾಣ ಹಾಕದೇ ಇರುವುದು ಕಾಂಗ್ರೆಸ್ ಸರಕಾರದ ಪ್ರಮಾದ. ಇದಕ್ಕಾಗಿ ಮುಖ್ಯಮಂತ್ರಿಗಳು ರಾಜ್ಯದ ಜನತೆಯ ಕ್ಷಮೆಯಾಚಿಸಬೇಕು' ಎಂದು ಬಿ.ವೈ. ವಿಜಯೇಂದ್ರ ಮತ್ತು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಧರ್ಮಸ್ಥಳಕ್ಕೆ ಆಗಮಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಬಿಜೆಪಿಯವರು ದೂರು ದಾಖಲಾದಾಗ ಯಾಕೆ ಮಾತನಾಡಲಿಲ್ಲ? ಈಗ ರಾಜಕೀಯಕ್ಕಾಗಿ ಧರ್ಮಸ್ಥಳಕ್ಕೆ ಚಲೋ ಎಂದು ರ‍್ಯಾಲಿಗಳನ್ನು ಆಯೋಜಿಸುತ್ತಿದ್ದಾರೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಯಾಗಿ ಗುಡುಗಿದ್ದಾರೆ. ಆದರೆ ಇದರ ಬೆನ್ನಲ್ಲೇ, ಕಾಂಗ್ರೆಸ್ ಶಾಸಕರೂ ಧರ್ಮಸ್ಥಳದ ಪರ ಮಾತನಾಡುತ್ತಿದ್ದಾರೆ. ಸಂಚು ಹೂಡಿದವರಿಗೆ ಶಿಕ್ಷೆಯಾಗಲಿ ಎಂದು ಹೇಳುತ್ತಿದ್ದಾರೆ.

ಧರ್ಮಸ್ಥಳ ಪರ ಹೋರಾಟದಲ್ಲಿ ಹಿಂದುತ್ವವಾದಿಗಳು ಅನೇಕರಿದ್ದರು. ಇದೇ ರೀತಿ ಸೌಜನ್ಯಪರ ಹೋರಾಟದಲ್ಲೂ ಹಿಂದುತ್ವ ಕಾರ್ಯಕರ್ತರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಈ ಕಾರಣದಿಂದ ಬಿಜೆಪಿ ಮತ್ತು ಆರೆಸ್ಸೆಸ್ ಆರಂಭದಲ್ಲಿ ಸ್ಪಷ್ಟ ಹೆಜ್ಜೆ ಇಟ್ಟಿರಲಿಲ್ಲ. ಇತ್ತೀಚೆಗೆ ಆರೆಸ್ಸೆಸ್ ವರಿಷ್ಠ ಬಿಎಲ್. ಸಂತೋಷ್ ಅವರು ಜಾಲತಾಣದಲ್ಲಿ ಹಾಕಿದ ಎರಡು ಪೋಸ್ಟ್‌ಗಳು ಧರ್ಮಸ್ಥಳ ಪರ ಹೋರಾಟಗಾರರಿಗೆ ಬಲ ನೀಡಿದೆ. ಸಮೀರ ಎಂಬಾತನ ಕಪೋಲ ಕಲ್ಪಿತ ಅತ್ಯಾಚಾರ, ಸಾಮೂಹಿಕ ದಫನದ ಕಥೆಗಳಿಂದಾಗಿ ರಾಜ್ಯಾದ್ಯಂತ ಬೆಂಬಲದ ಮಹಾಪೂರ ಬಂದಾಗ ಹುಚ್ಚೆದ್ದು ಕುಣಿದಿದ್ದ ಹೋರಾಟಗಾರರು ಬದಲಾದ ಸನ್ನಿವೇಶ ನೋಡಿ ಕಂಗಾಲಾಗಿದ್ದಾರೆ.

ಇದೀಗ ಹಿಂದೂಜಾಗರಣ ವೇದಿಕೆ ಮುಖಂಡ ತಿಮರೋಡಿ ಮಹೇಶ್ ಶೆಟ್ಟಿ ಸಂಘ ಪರಿವಾರದ ವರಿಷ್ಠ ಆರೆಸ್ಸೆಸ್ ವರಿಷ್ಠ ಬಿ.ಎಲ್. ಸಂತೋಷ್ ವಿರುದ್ಧ ಕೆಂಡ ಕಾರಿದ್ದಾರೆ. ನಮ್ಮ ಪರವಾಗಿದ್ದ ಹೋರಾಟವನ್ನು ಹಿಂದೂ ಭಾವನೆ ಬಳಸಿ ಧರ್ಮಸ್ಥಳ ಪರವಾಗಿಸಿದ್ದಾರೆ ಎಂದು ಗುಡುಗಿದ್ದಾರೆ. ಬಿಜೆಪಿ ನಾಯಕನಾಗಿ ಗುರುತಿಸಿಕೊಂಡಿರುವ ಮಾಜಿ ಪೊಲೀಸ್ ಅಧಿಕಾರಿ ಗಿರೀಶ್ ಮಟ್ಟಣ್ಣನವರ್ ಕೂಡ ಪೊಲೀಸ್ ಅಧಿಕಾರಿಗಳು ಶಾಮೀಲು ಎಂದು ಆರೋಪಿಸುವ ಮೂಲಕ ತಲೆ ಬುರುಡೆ ಪ್ರಕರಣದಿಂದ ಹಿನ್ನಡೆಯಾಗುವುದನ್ನು ತಪ್ಪಿಸಲು ಹೊಸ ವಿಷಯ ಎತ್ತಿದ್ದಾರೆ. ಅನಾಮಿಕ ಮುಸುಕುಧಾರಿಯೂ ಆಯ್ದ ರಾಷ್ಟ್ರೀಯ ಮಾಧ್ಯಮಗಳಿಗೆ ಸಂದರ್ಶನ ನೀಡುತ್ತಿದ್ದಾನೆ. ಇದೆಲ್ಲವೂ ಹೋರಾಟಗಾರರ ವ್ಯವಸ್ಥಿತ ಅಪಪ್ರಚಾರದ ಉದ್ದೇಶ ಎನ್ನುವುದು ಬಹಿರಂಗವಾಗುತ್ತಿದೆ

ಇದರೊಂದಿಗೆ ಬುರುಡೆ ಪ್ರಕರಣವನ್ನು ಜೀವಂತವಾಗಿಡಲು ಸತತ ಪ್ರಯತ್ನಗಳು ನಡೆಯುತ್ತಿವೆ. ಹೊಸ ಕಥೆಯೊಂದಿಗೆ ಬಂದಿರುವ ಜಯಂತ್ ಟಿ. ಎನ್ನುವ ದೂರುದಾರ ಧರ್ಮಸ್ಥಳ ಗ್ರಾಮದಲ್ಲಿ 13-15 ವರ್ಷದ ಬಾಲಕಿಯ ಶವವನ್ನು ಯಾವುದೇ ಮಹಜರು ನಡೆಸದೆ ವಿಲೇವಾರಿ ಮಾಡಲಾಗಿದೆ ಎಂದು ದೂರು ನೀಡಿದ್ದರು. ಇದೀಗ, 15 ವರ್ಷದ ಹಿಂದೆ ಗ್ರಾಮದ ವಸತಿಗೃಹ ಒಂದರಲ್ಲಿ 35-40 ವರ್ಷದ ಮಹಿಳೆಯ ಕೊಲೆಯಾಗಿದ್ದು ಪ್ರಕರಣವನ್ನು ತರಾತುರಿಯಲ್ಲಿ ಮುಗಿಸಲಾಗಿದೆ .ಇದು ಕೊಲೆ ಮತ್ತು ಸಾಕ್ಷಿ ನಾಶದ ಪ್ರಕರಣ ಎಂದು ಮತ್ತೊಂದು ದೂರು ನೀಡಿದ್ದಾರೆ.

ದೂರಿನ ಹೆಸರಲ್ಲಿ ದಿನಕ್ಕೊಂದು ಕಥೆ

ಅನನ್ಯಾ ಭಟ್ ಎಂಬ ವೈದ್ಯಕೀಯ ವಿದ್ಯಾರ್ಥಿನಿಯ ಕಥೆ ಹಿಡಿದುಕೊಂಡು ಬಂದಿದ್ದ ಸುಜಾತ ಭಟ್ ಎಂಬ ಮಹಿಳೆ ದಿನಕ್ಕೊಂದು ಕಥೆ ಹೆಣೆಯುತ್ತಿದ್ದಾರೆ. ಅನನ್ಯಾ ಮಣಿಪಾಲದ ಕೆಎಂಸಿಯಲ್ಲಿ ವೈದ್ಯ ವಿದ್ಯಾರ್ಥಿನಿಯಾಗಿದ್ದಳು ಎಂದು ಹೇಳಿಕೆ ನೀಡಿದ್ದ ಸುಜಾತ ಭಟ್, ಕನಿಷ್ಠ ಪಕ್ಷ ತನಗೆ ಈ ಹೆಸರಿನ ಮಗಳಿದ್ದಳು ಎಂಬುದನ್ನು ಸಾಬೀತುಪಡಿಸುವ ದಾಖಲೆಯನ್ನೂ ಸಲ್ಲಿಸಿಲ್ಲ. ಮಣಿಪಾಲ ಕೆಎಂಸಿಯಲ್ಲಿ 2002, 2003 ರಲ್ಲಿ ಅನನ್ಯಾ ಭಟ್ ಎಂಬ ವಿದ್ಯಾರ್ಥಿನಿಯೇ ಇರಲಿಲ್ಲ ಎಂಬ ಸತ್ಯ ಹೊರ ಬಿದ್ದಿದೆ. ಕಮಲವಾಣಿ ಪತ್ರಿಕೆಗೆ 22 ವರ್ಷಗಳ ಹಿಂದೆ ನೀಡಿರುವ ಸಂದರ್ಶನದಲ್ಲಿ ಸುಜಾತ ಭಟ್, 'ನನಗೇ ಮಕ್ಕಳೇ ಇಲ್ಲ, ಸಾಕುನಾಯಿಗಳೇ ನನ್ನ ಮಕ್ಕಳು' ಎಂಬ ಹೇಳಿಕೆ ನೀಡಿದ್ದ ದಾಖಲೆಯೂ ಮಾಧ್ಯಮಗಳಿಗೆ ಲಭ್ಯವಾಗಿದೆ. ಈ ನಡುವೆ ಸುಜಾತ ಪರ ವಕೀಲರು, ' ಸುಜಾತ ಭಟ್ ತೋರಿಸಿದ ಮಗಳ ಫೋಟೊ ನೋಡಿ ನಾನು ವಾದಕ್ಕೆ ಒಪ್ಪಿಕೊಂಡಿದ್ದೇನೆ' ಎಂದು ಹೇಳಿ ಇಡೀ ಪ್ರಕರಣದಿಂದ ಜಾರಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಆದರೆ ಹೋರಾಟಗಾರರ ದಂತ ಕಥೆಗಳೀಗ ಅಜ್ಜಿ ಕಥೆಗಳಾಗಿ ಮಾರ್ಪಾಟಾಗಿ ಕೊನೆಯಲ್ಲಿ ವದಂತಿಯೂ ಆಗದೆ ಷಡ್ಯಂತ್ರದ ಭಾಗವಾಗತೊಡಗಿದೆ.

ಸಮಾಚಾರ ಸಣ್ಣದಲ್ಲ

ಧರ್ಮಸ್ಥಳ: ಹಿಂದೂ ಸಮಾಜಕ್ಕೆ ಅಪಮಾನ

ಶಿವಮೊಗ್ಗ: ಧರ್ಮಸ್ಥಳ ಪ್ರಕರಣದಲ್ಲಿ ಇಡೀ ಹಿಂದೂ ಸಮಾಜಕ್ಕೆ ಅಪಮಾನವಾಗುವಂತೆ ನಡೆದುಕೊಳ್ಳಲಾಗಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಸಂಚಾಲಕ ಕೆ.ಎಸ್. ಈಶ್ವರಪ್ಪ ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳದಲ್ಲಿ ನೂರಾರು ಹೆಣಗಳನ್ನು ಹೂತು ಹಾಕಿದ್ದೇನೆ ಎಂದು ಅನಾಮಿಕ ವ್ಯಕ್ತಿ ಹೇಳುವ ಮೂಲಕ ಧರ್ಮಸ್ಥಳ, ವೀರೇಂದ್ರ ಹೆಗ್ಗಡೆ ಹಾಗೂ ಇಡೀ ಹಿಂದೂ ಸಮಾಜಕ್ಕೆ ಅಪಮಾನ ಮಾಡಲಾಗಿದೆ. ಧರ್ಮಸ್ಥಳ ಪ್ರಕರಣದಲ್ಲಿ ದುಷ್ಟ ಶಕ್ತಿಗಳ ಪ್ರಯತ್ನ ಸಂಪೂರ್ಣ ವಿಫಲವಾಗಿದೆ ಎಂದರು. ರಾಜ್ಯ ಸರಕಾರ ಯಾರ ಮಾತು ಕೇಳಿ ಎಸ್‌ಐಟಿ ರಚಿಸಿದೆ ಎಂಬುದು ಗೊತ್ತಿಲ್ಲ. ಆದರೆ ಎಸ್‌ಐಟಿ ಅಧಿಕಾರಿಗಳು ಪ್ರಮಾಣಿಕವಾಗಿ ಕೆಲಸ ಮಾಡಿದ್ದಾರೆ. ಎಸ್‌ಐಟಿ ತನಿಖೆಯಿಂದ ಎಲ್ಲರಿಗೂ ನ್ಯಾಯ ಸಿಗಬೇಕು. ಅನಾಮಿಕ ವ್ಯಕ್ತಿಯನ್ನು ತಕ್ಷಣ ಬಂಧಿಸಿ ತನಿಖೆ ನಡೆಸಿದರೆ ಎಲ್ಲವೂ ಹೊರಬರಲಿದೆ ಎಂದರು.

ಮುಸುಕುಧಾರಿಯ ಮಂಪರು ಪರೀಕ್ಷೆ ಮಾಡಿ

ಬೆಳಗಾವಿ: ಧರ್ಮಸ್ಥಳ ಬುರುಡೆ ಕೇಸ್‌ನ ಮುಸುಕುಧಾರಿಯ ಮಂಪರು ಪರೀಕ್ಷೆಯನ್ನು ಮಾಡಬೇಕು ಎಂದು ಕೈ ಶಾಸಕ ಲಕ್ಷ್ಮಣ ಸವದಿ ಒತ್ತಾಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುಳ್ಳು ಆರೋಪ ಮಾಡುವವರಿಗೆ ಇದು ಎಚ್ಚರಿಕೆ ಗಂಟೆ ಆಗಬೇಕು. ಮುಸುಕುಧಾರಿಯನ್ನಿಟ್ಟುಕೊಂಡು ಒಳ ಸಂಚು ಮಾಡ್ತಿದ್ದಾರಾ ನೋಡಬೇಕು. ಕಳಂಕ ತರುವ ಕೆಲಸ ಯಾರೂ ಮಾಡಿದರೂ ಒಳಸಂಚು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಮುಸುಕುದಾರಿ ಹಿನ್ನೆಲೆ ಏನು ಎನ್ನುವುದು ಪತ್ತೆಯಾಗಬೇಕು. ಇಲ್ಲಿಯವರೆಗೂ ಸರಕಾರದ ಹಣ ಎಷ್ಟು ವೆಚ್ಚವಾಗಿದೆಯೋ ಅದನ್ನು ವಸೂಲಿ ಮಾಡಬೇಕು. ಮಂಪರು ಪರೀಕ್ಷೆಯಲ್ಲಿ ಅತನ ಒಪ್ಪಿಗೆ ಬೇಕಾಗುತ್ತದೆ. ಬೇರೆ ದಾರಿಯಲ್ಲಿ ತನಿಖೆ ಮಾಡಿ ಸಂಚು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇದು ಸರಕಾರ ಅಥವಾ ಪಕ್ಷದ ನಿಲುವಲ್ಲ ಇದು ನನ್ನ ವೈಯಕ್ತಿಕ ಹೇಳಿಕೆ ಎಂದು ಸವದಿ ಹೇಳಿದ್ದಾರೆ.

ಗವಿಸಿದ್ದಪ್ಪ ಹೆತ್ತವರ ಮೇಲೆ ಪೋಕ್ಸೊ ಕೇಸ್

ಕೊಪ್ಪಳ: ಕೊಪ್ಪಳದಲ್ಲಿ ಇತ್ತೀಚೆಗೆ ಪ್ರೇಮ ಪ್ರಕರಣವೊಂದರಲ್ಲಿ ಹತ್ಯೆಗೀಡಾದ ಯಾದ ಗವಿಸಿದ್ದಪ್ಪ ನಾಯಕ್ ಅವರ ಹೆತ್ತವರ ಮೇಲೆ ಪೋಕ್ಸೊ ಕೇಸ್ ದಾಖಲಾಗಿದೆ. ಕೊಪ್ಪಳದ ನಿರ್ಮಿತಿ ಕೇಂದ್ರದ ಮಸೀದಿಯ ಬಳಿ ಆ.3 ರಂದು ಮುಸ್ಲಿಂ ಬಾಲಕಿ ಪ್ರೇಮ ಪ್ರಕರಣದಲ್ಲಿ ಗವಿಸಿದ್ದಪ್ಪ ನಾಯಕ್ನ ಕೊಲೆಯಾಗಿತ್ತು. ಈ ಕೊಲೆ ಪ್ರಕರಣ ರಾಜ್ಯ ಮಟ್ಟದಲ್ಲಿ ಸದ್ದು ಮಾಡಿತ್ತು. ಪ್ರೇಮ ಪ್ರಕರಣದಲ್ಲಿ ಗವಿಸಿದ್ದಪ್ಪ ನಾಯಕ್ ಅಪ್ರಾಪ್ತೆ ಯನ್ನು ಪ್ರೀತಿ ವಿಚಾರ ಸೇರಿದಂತೆ ಹಲವು ವಿಷಯದ ಕುರಿತು ಪ್ರಕರಣದಲ್ಲಿನ ಕಾನೂನು ಸಂಘರ್ಷಕ್ಕೆ ಒಳಗಾದ ಅಪ್ರಾಪ್ತ ವಯಸ್ಕ ಬಾಲಕಿಯ ತಾಯಿ ನೀಡಿದ ದೂರಿನ ಅನ್ವಯ ಗವಿಸಿದ್ದಪ್ಪ ಹಾಗೂ ಅವರ ತಂದೆ-ತಾಯಿ, ಅಕ್ಕನ ಮೇಲೆ ಕೊಪ್ಪಳ ಮಹಿಳಾ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಯತ್ನಾಳ್ ಕಾರಿಗೆ ಘೇರಾವ್‌ಗೆ ಯತ್ನ

ವಿಜಯಪುರ: ಮುಸ್ಲಿಂ ಯುವತಿಯರನ್ನು ಮದುವೆಯಾದರೆ 5 ಲಕ್ಷ ರು. ಕೊಡುವುದಾಗಿ ಹೇಳಿಕೆ ನೀಡಿದ್ದನ್ನು ಖಂಡಿಸಿ ಯುವಕರ ತಂಡವೊಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಕಾರಿಗೆ ಘೇರಾವ್ ಹಾಕಲು ಯತ್ನಿಸಿದ ಘಟನೆ ನಡೆದಿದೆ. ಜಿಲ್ಲೆಯ ಆಲಮೇಲ ಪಟ್ಟಣದಲ್ಲಿ ಬೆಂಗಾವಲು ಕಾರುಗಳೊಂದಿಗೆ ಹೋಗುತ್ತಿದ್ದಾಗ ಕೆಲ ಯುವಕರು ಯತ್ನಾಳ್ ಕಾರಿನ ಎದುರಿಗೆ ಬಂದು ಸುತ್ತವರಿಯಲು ಯತ್ನಿಸಿದ್ದಾರೆ. ಈ ವೇಳೆ ಪೊಲೀಸರು ಯುವಕರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಇತ್ತೀಚಿಗೆ ಕೊಪ್ಪಳದಲ್ಲಿ ಹಿಂದೂ ಯುವಕನ ಕೊಲೆಯಾಗಿತ್ತು. ಈ ವೇಳೆ ಯತ್ನಾಳ್ ಅವರು ಮುಸ್ಲಿಂ ಯುವತಿಯರನ್ನು ಹಿಂದೂ ಯುವಕರು ಮದುವೆ ಆದರೆ 5 ಲಕ್ಷ ರು. ನೀಡುವುದಾಗಿ ಘೋಷಣೆ ಮಾಡಿದ್ದರು. ಈ ಮೂಲಕ ಹಿಂದೂಗಳನ್ನು ಕೊಲೆ ಮಾಡುವ ಮನಸ್ಥಿತಿಯುಳ್ಳ ಮುಸ್ಲಿಮರಿಗೆ ಉತ್ತರ ನೀಡಬೇಕಿದೆ ಎಂದು ತಿಳಿಸಿದ್ದರು. ಯತ್ನಾಳ್ ನೀಡಿದ್ದ ಈ ಹೇಳಿಕೆ ಖಂಡಿಸಿ ಯುವಕರು ಘೇರಾವ್ ಹಾಕಲು ಯತ್ನಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ ಕ್ಲಬ್ ಹೌಸ್
18.08.2025
ಬೆಳಿಗ್ಗೆ: 06.55 ರಿಂದ 08.05 ರವರೆಗೆ
ಸೋಮವಾರದ ಅತಿಥಿ
ಪ್ರೊ.ಪ್ರಶಾಂತ್ ಹೆಗಡೆ
ವಿಷಯ
ಮರುಳ ಮುನಿಯನ ಕಗ್ಗ
vishwavani.news

ಧರ್ಮಸ್ಥಳಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ನೇತೃತ್ವದ ಶಾಸಕರ ತಂಡ ಭೇಟಿ

ಧರ್ಮಸ್ಥಳದ ಬಗ್ಗೆ ಅಪಪ್ರಚಾರಕ್ಕೆ ಕಡಿವಾಣ ಹಾಕಿ

ಉಜಿರೆ: ಎಂಟು ಶತಮಾನಗಳ ಭವ್ಯ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ನಾಡಿನ ಪವಿತ್ರ ಕ್ಷೇತ್ರ ಹಾಗೂ ಸರ್ವಧರ್ಮ ಸಮನ್ವಯ ಕೇಂದ್ರವಾದ ಧರ್ಮಸ್ಥಳದ ಬಗ್ಗೆ ಕಳೆದ ಕೆಲವು ದಿನಗಳಿಂದ ಸಮೂಹ ಮಾಧ್ಯಮಗಳಲ್ಲಿ ಎಸ್‌ಐಟಿ ತನಿಖೆಯ ನೆಪದಲ್ಲಿ ನಡೆಯುತ್ತಿರುವ ಅಪಪ್ರಚಾರದ ಬಗ್ಗೆ ಸರಕಾರ ತಕ್ಷಣ ಕಡಿವಾಣ ಹಾಕಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿದರು.

ಅವರು ಭಾನುವಾರ ಧರ್ಮಸ್ಥಳಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆದು, ವಿಶೇಷ ಸೇವೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಧರ್ಮಸ್ಥಳ, ಅಣ್ಣಪ್ಪಸ್ವಾಮಿ ಹಾಗೂ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ತೇಜೋವಧೆ ಬಗ್ಗೆ ಸಮೂಹ ಮಾಧ್ಯಮಗಳಲ್ಲಿ ಆಧಾರ ರಹಿತ ಸುಳ್ಳು ವದಂತಿಗಳ ಅಪಪ್ರಚಾರದಿಂದ ಅಸಂಖ್ಯಾತ ಭಕ್ತರು ಹಾಗೂ ಅಭಿಮಾನಿಗಳಲ್ಲಿ ಗೊಂದಲದ ವಾತಾವರಣ ಮೂಡಿದೆ.

ಎಸ್‌ಐಟಿ ತನಿಖೆಯನ್ನು ಬಿಜೆಪಿ ಸ್ವಾಗತಿಸುತ್ತದೆ. ಆದರೆ, ತನಿಖೆ ಪಾರದರ್ಶಕವಾಗಿ ನಡೆಯಬೇಕು ಎಂದು ಅವರು ಸಲಹೆ ನೀಡಿದರು.

ಶವಗಳನ್ನು ಹೂತು ಹಾಕಿದ ಪ್ರಕರಣ ಕಪೋಲಕಲ್ಪಿತ ವಿಚಾರವಾಗಿದ್ದು, ಹದಿನೇಳು ಕಡೆಗಳಲ್ಲಿ ಹೊಂಡ ತೋಡಿದರೂ ಸಾಕ್ಷಿ, ಪುರಾವೆ ಏನೂ ಸಿಗಲಿಲ್ಲ. ಇದರಿಂದಾಗಿ, ಪ್ರಕರಣದ ವ್ಯವಸ್ಥಿತ ಷಡ್ಯಂತ್ರದ ಹಿಂದೆ ಅಪಪ್ರಚಾರ ಹಾಗೂ ಶ್ರದ್ಧಾ ಭಂಗದ ಹುನ್ನಾರವೂ ಇದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಬಿಜೆಪಿಯ ಶಾಸಕರಾದ ಹರೀಶ್ ಪೂಂಜ, ಛಲವಾದಿ ನಾರಾಯಣಸ್ವಾಮಿ, ಕ್ಯಾಪ್ಟನ್ ಬ್ರಿಜೇಶ್ ಚೌಟ, ಸಿ.ಟಿ. ರವಿ, ಭಾಗೀರಥಿ ಮುರುಳ್ಯ, ಭರತ್ ಶೆಟ್ಟಿ, ವೇದವ್ಯಾಸ ಕಾಮತ್, ರಾಜೇಶ್ ನಾಯ್ಕ್, ಯಶ್‌ಪಾಲ್ ಸುವರ್ಣ, ಗುರ್ಮೆ ಸುರೇಶ್ ಶೆಟ್ಟಿ, ಗುರುರಾಜ್ ಗಂಟಿಹೋಳಿ, ಎಸ್.ಆರ್. ವಿಶ್ವನಾಥ್, ಧನಂಜಯ ಸರ್ಜಿ, ಕಿಶೋರ್ ಕುಮಾರ್ ಬೊಟ್ಯಾಡಿ, ಕೊರಗ್ ಕೊಡ್ಗಿ, ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್, ಉಮಾನಾಥ ಕೋಟ್ಯಾನ್, ರವಿಕುಮಾರ್, ಮೈಸೂರು ಶ್ರೀವತ್ಸ ಹಾಗೂ ಅಪಾರ ಸಂಖ್ಯೆಯಲ್ಲಿ ಬಿಜೆಪಿ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು. ಬಳಿಕ ಬಿ.ವೈ ವಿಜಯೇಂದ್ರ ಅವರು ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು.

ಧರ್ಮಸ್ಥಳಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ನೇತೃತ್ವದ ಶಾಸಕರ ತಂಡ ಭೇಟಿ ನೀಡಿ, ದೇವರ ದರ್ಶನ ಪಡೆದರು.

ಧರ್ಮಸ್ಥಳದ ಬುರುಡೆ ಪ್ರಕರಣದ ಅನಾಮಿಕನ ಹಿಂದೆ ಕಾಂಗ್ರೆಸ್ ಸಂಸದ ಶಶಿಕಾಂತ್ ಸೆಂಥಿಲ್ ಇದ್ದಾರೆ. ಈ ಷಡ್ಯಂತ್ರ ಮಾಡಿದವರ ಮೂಲಕ್ಕೆ ಹೋಗಬೇಕು. ದಕ್ಷಿಣ ಕನ್ನಡದ ಮಾಜಿ ಜಿಲ್ಲಾಧಿಕಾರಿ ಶಶಿಕಾಂತ್ ಸೆಂಥಿಲ್ ಅವರನ್ನು ತನಿಖೆಗೆ ಒಳಪಡಿಸಿದರೆ ಸತ್ಯ ಸಂಗತಿ ಬಯಲಾಗಲಿದೆ.
-ಯಶ್ಪಾಲ್ ಸುವರ್ಣ, ಶಾಸಕ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಷಡ್ಯಂತ್ರ ಇದೆ ಎಂದು ಹೇಳಿದ್ದಾರೆ. ಆದರೆ ಈ ಬಗ್ಗೆ ಯಾವುದೇ ಮಾಹಿತಿ ಅವರು ಬಹಿರಂಗಪಡಿಸಿಲ್ಲ. ಈ ಷಡ್ಯಂತ್ರದ ಹಿಂದೆ ಯಾರಿದ್ದಾರೆ ಎಂಬ ಬಗ್ಗೆಯೂ ತನಿಖೆಯಾಗಬೇಕು. ದೂರುದಾರನ ಹಿನ್ನೆಲೆ ಬಗ್ಗೆ ಹಾಗೂ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುವವರ ಬಗ್ಗೆಯೂ ತನಿಖೆಯಾಗಲಿ.
-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಮುಖ್ಯಮಂತ್ರಿಗಳೇ, ನಿಮಗೆ ಸಂವಿಧಾನದ ಮೇಲೆ ನಂಬಿಕೆ ಇದ್ದರೆ, ನಿಮಗೆ ಧರ್ಮಸ್ಥಳದ ಬಗ್ಗೆ ಗೌರವವಿದ್ದರೆ, ಧರ್ಮಸ್ಥಳದ ಭಕ್ತರ ಭಾವನೆಗಳನ್ನು ಗೌರವಿಸುವುದಾದರೆ ಅನಾಮಿಕ ವ್ಯಕ್ತಿಯ ತನಿಖೆ ಆಗಬೇಕು ಮತ್ತು ಅನಾಮಿಕ ವ್ಯಕ್ತಿಯ ಹಿಂದೆ ಇರುವವರ ತನಿಖೆ ಮಾಡಬೇಕು.
-ಸಿ.ಟಿ. ರವಿ, ವಿಧಾನಪರಿಷತ್ ಸದಸ್ಯ

ಧರ್ಮಸ್ಥಳ ಕುರಿತ ಷಡ್ಯಂತ್ರ ಬಹಿರಂಗಪಡಿಸಿ

ಶ್ರೀ ಕ್ಷೇತ್ರ ಧರ್ಮಸ್ಥಳದ ಕುರಿತ ಷಡ್ಯಂತ್ರ ಏನು ಎಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಹಿರಂಗಪಡಿಸಬೇಕು. ಈಗಾಗಲೇ ಉಪಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್‌ಅವರು ಷಡ್ಯಂತ್ರ ಇದೆ ಎಂದು ಹೇಳಿದ್ದಾರೆ. ಆ ಷಡ್ಯಂತ್ರ ಏನು ಎಂಬುದನ್ನು ಬಹಿರಂಗಪಡಿಸಬೇಕು; ಸತ್ಯ ಹೇಳುವುದಕ್ಕೆ ನಿಮಗೆ ಹೆದರಿಕೆಯೇ ಉಪಮುಖ್ಯಮಂತ್ರಿಗಳೇ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಪ್ರಶ್ನಿಸಿದರು.

ಎಡಪಂಥೀಯರ ಜತೆ ಸೇರಿದೆ ಸರಕಾರ

ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಕಳಂಕ ಹಚ್ಚುವ ಕಾರ್ಯವನ್ನು ಎಡಪಂಥೀಯರು ಮಾಡುತ್ತಿದ್ದು, ಅವರ ಜತೆ ಕಾಂಗ್ರೆಸ್ ಸರಕಾರವು ಸೇರಿದೆ ಎಂಬುದು ಭಕ್ತರ ಅನಿಸಿಕೆ. ಇದನ್ನು ಸರಕಾರ ತಿಳಿಗೊಳಿಸಬೇಕು. ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಏನೂ ಸಿಕ್ಕಿಲ್ಲ ಆಪಾದನೆ ಎಲ್ಲ ಸುಳ್ಳು. ಇದು ಒಂದು ಷಡ್ಯಂತ್ರ ಎಂದು ಟೀಕಿಸಿದರು. ಗೌರವಾನ್ವಿತ ಡಾ. ವೀರೇಂದ್ರ ಹೆಗ್ಗಡೆ ಜೀ ಅವರನ್ನು ನಾವು ಇಂದು ಭೇಟಿ ಮಾಡಿದ್ದೇವೆ. ಅವರು ಬಹಳ ನೊಂದಿದ್ದಾರೆ ಎಂಬುದು ನಮಗೆ ಮನವರಿಕೆಯಾಗಿದೆ. ಶ್ರೀ ಕ್ಷೇತ್ರದ ಭಕ್ತರಲ್ಲೂ ಇದೇ ರೀತಿಯ ನೋವಿದೆ ಎಂದು ಛಲವಾದಿ ನಾರಾಯಣಸ್ವಾಮಿ ಬೇಸರ ವ್ಯಕ್ತಪಡಿಸಿದರು.

ತನಿಖೆಗೆ ವಿಪಕ್ಷ ನಾಯಕ ಆರ್.ಅಶೋಕ್ ಆಗ್ರಹ

ಮುಸುಕುಧಾರಿಗೆ ವಿದೇಶದಿಂದ ಹಣ

ಚಿತ್ರದುರ್ಗ: ಧರ್ಮಸ್ಥಳದ ವಿಚಾರವಾಗಿ ಸಿದ್ದರಾಮಯ್ಯನವರು ಯಾವನೋ ಅಮಾಯಕ ದೂರು ಕೊಟ್ಟದ್ದನ್ನು ತೆಗೆದುಕೊಂಡು ಅದನ್ನು ದೊಡ್ಡದು ಮಾಡಿ ಅದೇನೋ ಧರ್ಮಸ್ಥಳದಲ್ಲಿ ನೂರಾರು ಅತ್ಯಾಚಾರಗಳು, ಕೊಲೆಗಳಾಗಿ ಬಿಟ್ಟಿವೆ. ಇಡೀ ಧರ್ಮಸ್ಥಳನೇ ಅದರಲ್ಲಿ ಭಾಗಿಯಾಗಿದೆ ಎನ್ನುವ ರೀತಿ ಮಾಡಿದ್ದಾರೆ ಎಂದು ವಿಪಕ್ಷದ ನಾಯಕ ಆರ್.ಅಶೋಕ್ ಕಿಡಿ ಕಾರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರತಿ ದಿನವೂ ರಾಜ್ಯದ ಒಂದೊಂದು ಜಿಲ್ಲೆಯಿಂದಲೂ ಸಾವಿರ ದೂರು ಬರುತ್ತದೆ. ಅದನ್ನೆಲ್ಲ ಎಸ್‌ಐಟಿ ಮಾಡತ್ತಾರಾ? ಇಲ್ಲಿ ಏಕಾಏಕಿ ಯಾವನೋ ಅನಾಮಧೇಯ ಇಲ್ಲಿ ನೂರಾರು ಕೊಲೆಗಳು ಆಗಿವೆ ಎಂದ ತಕ್ಷಣನೇ ನೀವು ಎಸ್‌ಐಟಿ ರಚನೆ ಮಾಡಿದ್ರಿ. ರಚನೆ ಮಾಡಿ 15-20 ದಿನ ಬೆಳಗಿನಿಂದ ಸಂಜೆವರೆಗೂ ಇಡೀ ಧರ್ಮಸ್ಥಳವನ್ನು ಅವಹೇಳನ ಮಾಡುವುದೇ ಆಗಿದೆ ಎಂದರು.

ಮುಸುಕುಧಾರಿಗೆ ಹಣ ನೀಡಿ ಕರೆದುಕೊಂಡು ಬಂದಂತಿದೆ.ಅವನು ಮುಖ್ಯವಲ್ಲ. ಇದನ್ನು ಯಾರು ಮಾಡುತ್ತಿದ್ದಾರೆ ಎಂಬುದು ಮುಖ್ಯ. ಇದಕ್ಕೆ ವಿದೇಶದಿಂದ ಹಣ ಬರುತ್ತಿದೆ ಅದು ಮುಖ್ಯ.ಜೆಡಿಎಸ್, ಬಿಜೆಪಿ ಸರಕಾರದ ವೇಳೆ ಈ ರೀತಿ ಆಗಿಲ್ಲ.ಸಿದ್ದರಾಮಯ್ಯ ಸರಕಾರದಲ್ಲಿ ಟಿಪ್ಪು ಗ್ಯಾಂಗ್ ನಿಂದ ಷಡ್ಯಂತ್ರ ನಡೆಯುತ್ತಿದೆ ಎಂದು ದೂರಿದರು.

ಸೋಷಿಯಲ್ ಮೀಡಿಯಾ, ಯುಟ್ಯೂಬ್ ಮೂಲಕ ಅಪಪ್ರಚಾರ ಮಾಡುತ್ತಿದ್ದಾರೆ.ಯುಟ್ಯೂಬರ್ ಸಮೀರ್ ಸಹ ಟಿಪ್ಪು ಗ್ಯಾಂಗ್‌ಗೆ ಸೇರಿದವನು. ಈ ಎಸ್‌ಐಟಿ ತನಿಖೆ ಇಲ್ಲಿಗೆ ನಿಲ್ಲಬಾರದು. ಧರ್ಮದ ಬಗ್ಗೆ ಕಾಳಜಿ ಇದ್ದರೆ ಇದನ್ನು ಕೂಡ ಒಪ್ಪಿಸಬೇಕು. ಷಡ್ಯಂತ್ರಕ್ಕೆ ಪ್ರೇರಣೆ ನೀಡಿದವರು ಯಾರು ಎಂಬುದು ಬಯಲಾಗಬೇಕು.
-ಆರ್.ಅಶೋಕ್, ವಿಪಕ್ಷ ನಾಯಕ

ಡಿಸಿಎಂ ಡಿಕೆಶಿ ವಿರುದ್ಧ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆಕ್ರೋಶ

ಹಿಂದೂಗಳಿಗೆ ಧಕ್ಕೆಯಾದರೆ ಸುಮ್ಮನಿರಲ್ಲ

ಹುಬ್ಬಳ್ಳಿ: ಧರ್ಮಸ್ಥಳ ನಮ್ಮ ಸೊತ್ತು ಎಂದು ನಾವೆಲ್ಲಿ ಹೇಳಿದ್ದೇವೆ. ಹಾಗೆಂದು ಹಿಂದೂಗಳ ಭಾವನೆಗೆ ಧಕ್ಕೆಯಾದರೆ ಸುಮ್ಮನಿರಬೇಕಾ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೀವು ದೇಶದ ಗುಡಿ ಗುಂಡಾರ ಹೊಡೆಯುವ ಪ್ರಯತ್ನ ಮಾಡಿದ್ದೀರಿ. ಮುಸ್ಲಿಂ ಲೀಗ್ ಸೇರಿ ಹಲವು ಮುಸ್ಲಿಂ ಸಂಘಟನೆಗಳೊಂದಿಗೆ ನಿಮ್ಮ ಸಂಪರ್ಕವಿದೆ ಎಂದು ಗಂಭೀರ ಆರೋಪ ಮಾಡಿದರು.

ಧರ್ಮಸ್ಥಳ ವಿಷಯವಾಗಿ ಷಡ್ಯಂತ್ರ ನಡೆದಿದೆ ಎಂದು ಡಿ.ಕೆ. ಶಿವಕುಮಾರ್ ಹೇಳುವ ಮೂಲಕ ಎರಡು ದಡದ ಮೇಲೆ ಕಾಲಿಟ್ಟು ಹೋಗುವ ಕೆಲಸ ಮಾಡುತ್ತಿದ್ದಾರೆ ಎಂದು ಜರಿದರು.

ರಾಮೇಶ್ವರಂ ಕೆಫೆ ಬ್ಲಾಸ್ಟ್ ಆದಾಗ ಭಯೋತ್ಪಾದನೆ ಕೃತ್ಯ ಅಲ್ಲ ಎಂದರು. ಅದೇ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅತ್ಯಂತ ಅಸಭ್ಯವಾಗಿ ಮಾತನಾಡಿದ್ದಾರೆ. ಇದುವರೆಗೂ ಅವರ ವಿರುದ್ಧ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಹರಿಹಾಯ್ದರು.

ಸ್ವತಂತ್ರ ಹೋರಾಟದಲ್ಲಿ ಆರ್‌ಎಸ್‌ಎಸ್ ಪಾತ್ರ ಇಲ್ಲ ಅನ್ನುವ ಕಾಂಗ್ರೆಸ್ ನಾಯಕರ ಹೇಳಿಕೆ ವಿಚಾರವಾಗಿ, ಕಾಂಗ್ರೆಸ್‌ನವರು ಅಯೋಗ್ಯರು. ಅವರು ಆಡಳಿತ ನಡೆಸಲಿಕ್ಕೆ ಲಾಯಕ್ ಇಲ್ಲ. ಮೂಲ ಕಾಂಗ್ರೆಸ್ ಕಬಳಿಸಿ ಕೊಂಡಿದ್ದೀರಿ. ನೀವು ನುಸುಳುಕೋರರರು. ಅವರಿಗೆ ಇತಿಹಾಸ ಗೊತ್ತಿಲ್ಲ. ಇದು ನಿಜವಾದ ಕಾಂಗ್ರೆಸ್ ಅಲ್ಲ. ಕಾಂಗ್ರೆಸ್ ಅಂದರೆ ನೀವಾ? ಎಂದು ಕಿಡಿಕಾರಿದರು.

ಸ್ವತಂತ್ರ ಹೋರಾಟ ಗಾರರಿಗಿಂತ ಹತ್ತು ಪಟ್ಟು ಹೆಚ್ಚಿನ ಸ್ಥಳಕ್ಕೆ ಬೋಸ್‌ರನ್ನು ಯಾವ ರೀತಿ ನಡೆಸಿಕೊಂಡಿದ್ದಾರೆ. ಅವರು ಇಂದಿರಾ ಗಾಂಧಿಗಿಂತ ಹತ್ತು ಪಟ್ಟು ತ್ಯಾಗ ಮಾಡಿದ್ದಾರೆ. ಸರಕಾರಿ ಯೋಜನೆಗಳಿಗೆ ಎಷ್ಟು ಜನರ ಹೆಸರು ಇಟ್ಟಿದ್ದೀರಿ. ಬರಿ ಇಂದಿರಾ ಗಾಂಧಿ, ರಾಜೀವ ಗಾಂಧಿ ಹೆಸರು ಇಟ್ಟಿದ್ದೀರಿ.
-ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ನಂದಿ ಬೆಟ್ಟಕ್ಕೆ ಹರಿದು ಬಂದ ಪ್ರವಾಸಿಗರ ದಂಡು

ಚಿಕ್ಕಬಳ್ಳಾಪುರ: ವೀಕೆಂಡ್ ಹಿನ್ನೆಲೆ ನಂದಿಗಿರಿಧಾಮಕ್ಕೆ ಪ್ರವಾಸಿಗರು ದಂಡು ಹರಿದು ಬಂದಿದ್ದು, ಸಕಾಲಕ್ಕೆ ಪ್ರವೇಶ ಟಿಕೆಟ್ ಸಿಗದೇ ಪ್ರವಾಸಿಗರು ಪರದಾಡಿದ್ದಾರೆ.

ಚಿಕ್ಕಬಳ್ಳಾಪುರ ತಾಲೂಕಿನ ನಂದಿಗಿರಿಧಾಮಕ್ಕೆ ವೀಕೆಂಡ್ ಹಿನ್ನೆಲೆ 10 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಆಗಮಿಸಿದ್ದರು. ಈ ಹಿನ್ನೆಲೆ ವಾಹನ ದಟ್ಟನೆಯಿಂದಾಗಿ ಗಿರಿಧಾಮ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಉಂಟಾಗಿ, ಪ್ರವಾಸಿಗರು ಪರದಾಡುವಂತಾಗಿತ್ತು. ಅಲ್ಲದೇ ಪ್ರವೇಶ ಟಿಕೆಟ್ ವಿತರಿಸುವಲ್ಲಿ ಅವ್ಯವಸ್ಥೆ ಉಂಟಾಗಿ, ಟಿಕೆಟ್ ಪಡೆಯಲು ಪ್ರವಾಸಿಗರು ಮುಗಿಬಿದ್ದರು. ಸಾವಿರಾರು ಜನ ಪ್ರವಾಸಿಗರಿಗೆ 2 ಕೌಂಟರ್‌ನಲ್ಲಿ ಮಾತ್ರ ಟಿಕೆಟ್ ವಿತರಿಸಲಾಗಿತ್ತು. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಈ ಅವ್ಯವಸ್ಥೆಯ ವಿರುದ್ಧ ಪ್ರವಾಸಿಗರು ಆಕ್ರೋಶ ಹಾಕಿದ್ದಾರೆ. ಸುರಿಯುವ ಮಳೆಯನ್ನೂ ಲೆಕ್ಕಿಸದೇ ಟಿಕೆಟ್‌ಗಾಗಿ ಮಹಿಳೆಯರು, ಮಕ್ಕಳು, ಯುವಕ-ಯುವತಿಯರೆನ್ನದೇ ಪ್ರವಾಸಿಗರು ಸಾಲುಗಟ್ಟಿ ನಿಂತಿದ್ದರು.

ಉಡುಪಿಯ ಶ್ರೀ ಕೃಷ್ಣಮಠಕ್ಕೆ ಮಾಜಿ ಸಚಿವ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್. ವಿ ದೇಶಪಾಂಡೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಈ ವೇಳೆ ಪರ್ಯಾಯ ಶ್ರೀಪಾದರಿಂದ ಅನುಗ್ರಹ ಪಡೆದರು.

ಮಹಿಳಾ ಪೇದೆಯರಿಗೆ ಅಶ್ಲೀಲ ಸನ್ನೆ: ಬಂಧನ

ಉಳ್ಳಾಲ: ತೊಕ್ಕೊಟ್ಟಿನಲ್ಲಿ ಶನಿವಾರ ನಡೆದ ಮೊಸರುಕುಡಿಕೆ ಉತ್ಸವದ ಶೋಭಾಯಾತ್ರೆಯಲ್ಲಿ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ ಮಹಿಳಾ ಪೊಲೀಸ್ ಪೇದೆಗಳಿಗೆ ಅಶ್ಲೀಲ ಕೈ ಸನ್ನೆ ಮಾಡಿದ ಇಬ್ಬರು ಆರೋಪಿಗಳನ್ನು ಉಳ್ಳಾಲ ಪೊಲೀಸರು ಬಂಧಿಸಿದ್ದಾರೆ. ಬಂಧಿತರು ಅಸೈಗೋಳಿ ನಿವಾಸಿ ದೀಪಕ್ ಮತ್ತು ತೊಕ್ಕೊಟ್ಟು ನಿವಾಸಿ ಕಿರಣ್ ಎನ್ನುವವರಾಗಿದ್ದಾರೆ.

ಮೊಸರು ಕುಡಿಕೆ ಉತ್ಸವದ ಶೋಭಾಯಾತ್ರೆಯ ಸಂದರ್ಭದಲ್ಲಿ ಘಟನೆ ನಡೆದಿದ್ದು, ರಾತ್ರಿ 11.50 ರ ತೊಕ್ಕೊಟ್ಟು ಒಳಪೇಟೆಯಲ್ಲಿ ಮೆರವಣಿಗೆ ಮುಂದೆ ಹೋಗಲು ಅವಕಾಶ ನೀಡದೆ ಜೋರಾಗಿ ಬ್ಯಾಂಡ್ ಬಾರಿಸುತ್ತಾ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದರು. ಈ ವೇಳೆ ಮಹಿಳಾ ಪೇದೆಗಳು ಯುವಕರಲ್ಲಿ ಮುಂದಕ್ಕೆ ಹೋಗುವಂತೆ ಹೇಳಿದಾಗ ಆರೋಪಿಗಳ ಪೈಕಿ ಒಬ್ಬ ಕೈಬೆರಳುಗಳಲ್ಲಿ ಅಶ್ಲೀಲ ಸನ್ನೆ ಮಾಡಿ, ನಿಂದಿಸಿದ್ದು, ಮತ್ತೊಬ್ಬ ಮಹಿಳಾ ಪೇದೆಯ ಸೊಂಟಕ್ಕೆ ಕೈ ಹಾಕಿ ತಳ್ಳಿ,ಮೈಗೆ ಕೈ ಹಾಕಿರುವುದಾಗಿ ಆರೋಪಿಸಿ ಉಳ್ಳಾಲ ಠಾಣೆಯಲ್ಲಿ ದೂರು ದಾಖಲಾಗಿದೆ.

ಮಳೆಯ ಅಬ್ಬರಕ್ಕೆ ಮಲೆನಾಡಿನಲ್ಲಿ ಜನಜೀವನ ಅಸ್ತವ್ಯಸ್ತ | ತೋಟಗಳಿಗೆ ನುಗ್ಗಿದ ನೀರು | ವಾಹನ ಸವಾರರು ಪರದಾಟ

ಮಲೆನಾಡು, ಕಲ್ಯಾಣ ಕರ್ನಾಟಕದಲ್ಲಿ ಭಾರಿ ಮಳೆ

ಬೆಂಗಳೂರು: ರಾಜ್ಯದ ಚಿಕ್ಕಮಗಳೂರು, ಕೊಡಗು ಹಾಗೂ ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಭಾನುವಾರ ಧಾರಾಕಾರ ಮಳೆಯಾಗಿದೆ. ಮಳೆಯ ಅಬ್ಬರಕ್ಕೆ ಮಲೆನಾಡಿನಲ್ಲಿ ಜನಜೀವನ ಅಸ್ತವ್ಯಸ್ತವಾಗಿದೆ. ಕುದುರೆ ಮುಖ ಭಾಗದಲ್ಲಿ ಭಾರಿ ಮಳೆ ಇದ್ದು, ತುಂಗಾ ನದಿ ಮೈದುಂಬಿ ಹರಿಯುತ್ತಿದೆ.

ಶೃಂಗೇರಿ ಪಟ್ಟಣದ ಗಾಂಧಿ ಮೈದಾನ, ದೇಗುಲದ ವಾಹನ ನಿಲುಗಡೆ ತಾಣದಲ್ಲಿದ್ದ ವಾಹನಗಳು ನೀರಿನಲ್ಲಿ ಮುಳುಗಿವೆ. ಆಸುಪಾಸಿನ ಜಮೀನು, ತೋಟಗಳಿಗೆ ನೀರು ನುಗ್ಗಿದೆ.

ಕೊಪ್ಪ, ಕಳಸ, ಎನ್.ಆರ್.ಪುರ, ಮೂಡಿಗೆರೆ ವ್ಯಾಪ್ತಿಯಲ್ಲಿ ಜೋರು ಮಳೆ ಇದೆ. ಚಾರ್ಮಾಡಿ ಘಾಟಿಯಲ್ಲಿ ಜೋರು ಮಳೆಯಿಂದಾಗಿ ವಾಹನ ಸವಾರರು ಪರದಾಡಿದರು. ಮೂಡಿಗೆರೆ, ಕಳಸ, ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ತಾಲ್ಲೂಕು ಮತ್ತು ಚಿಕ್ಕಮಗಳೂರು ತಾಲೂಕಿನ ಐದು ಹೋಬಳಿ ವ್ಯಾಪ್ತಿಯಲ್ಲಿ ಶಾಲೆ, ಅಂಗನವಾಡಿ ಮತ್ತು ಶಿಶುಪಾಲನಾ ಕೇಂದ್ರಗಳಿಗೆ ಸೋಮವಾರ ರಜೆ ಘೋಷಿಸಲಾಗಿದೆ.

ಕೊಡಗಿನಲ್ಲಿ ಆರೆಂಜ್ ಅಲರ್ಟ್: ಕೊಡಗು ಜಿಲ್ಲೆಯ ಮಡಿಕೇರಿ ನಗರ, ವಿರಾಜಪೇಟೆ ಭಾಗಗಳಲ್ಲಿ ಮಳೆ ಬಿರುಸಾಗಿದೆ. ಸೋಮವಾರ ಶಾಲೆ,ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಮಡಿಕೇರಿ ತಾಲೂಕಿನ ಹೆರವನಾಡುನಲ್ಲಿ ವಿದ್ಯುತ್ ಕಂಬ ಬಿದ್ದು, ಕೊಟ್ಟಿಗೆ ಸಂಪೂರ್ಣ ಹಾನಿಯಾಗಿದೆ.

ಕಲಬುರಗಿ, ಯಾದಗಿರಿಯಲ್ಲಿ ಭಾರಿ ಮಳೆ: ಕಲ್ಯಾಣ ಕರ್ನಾಟಕದ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ ವಿವಿಧೆಡೆ ಭಾನುವಾರ ಉತ್ತಮ ಮಳೆ ಸುರಿಯಿತು. ಬೀದರ್-ಶ್ರೀರಂಗಪಟ್ಟಣ ಹೆದ್ದಾರಿಯಲ್ಲಿ ಭಾರಿ ಮಳೆಯಿಂದಾಗಿ ರಸ್ತೆ ಮೇಲೆ ನೀರು ಹರಿಯಿತು.

ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಇಡೀ ದಿನ ಮಳೆ ಇದ್ದು, ತುಂಗ-ಭದ್ರಾ ಹಾಗೂ ಲಿಂಗನಮಕ್ಕಿ ಜಲಾಶಯಗಳಿಗೆ ಒಳಹರಿವು ಹೆಚ್ಚಿದ್ದು, ತುಂಗಾ ಜಲಾಶಯ ಭರ್ತಿ ಆಗಿದೆ. ದಾವಣಗೆರೆ ನಗರದಲ್ಲೂ ಭಾನುವಾರ ಬೆಳಿಗ್ಗೆಯಿಂದ ಸಂಜೆವರೆಗೂ ಬಿಟ್ಟು ಬಿಟ್ಟು ವರ್ಷಧಾರೆಯಾಗಿದೆ. ಚಿತ್ರದುರ್ಗ ನಗರದಲ್ಲಿ ಸೋನೆ ಮಳೆಯಾಗಿದೆ.

ಕಮಲನಗರ ತಾಲ್ಲೂಕಿನ ಬಸನಾಳ-ಕೋರಿಯಾಳ ಗ್ರಾಮದ ಮಧ್ಯದ ಸೇತುವೆ ಜಲಾವೃತ್ತಗೊಂಡಿದೆ.

ಉಕ್ಕಿ ಹರಿದ ಮಾಂಜ್ರಾ ನದಿ

ಕಳೆದ ಎರಡು ದಿನಗಳಿಂದ ನಿರಂತರ ಸುರಿಯುತ್ತಿರುವ ಮಳೆಯಿಂದಾಗಿ ಬೀದರ್ ಪಟ್ಟಣ ಸೇರಿ ಗ್ರಾಮೀಣ ಭಾಗದಲ್ಲಿ ಪ್ರಸಕ್ತ ಮುಂಗಾರಿಗೆ ಅನ್ನದಾತ ಕಷ್ಟಪಟ್ಟು ಬೆಳೆದಿದ್ದ ಹೆಸರು, ಉದ್ದು ಬೆಳೆಗಳು ಕೈಗೆ ಬಂದರೂ ಬಾಯಿಗೆ ಬಾರದಂತಾಗಿದೆ.

ತಾಲ್ಲೂಕಿನಲ್ಲಿ ಬಿದ್ದ ಮಳೆಗೆ ಮನೆಗಳು ಕುಸಿಯತೊಡಗಿರುವುದು ಒಂದೆಡೆಯಾದರೆ, ಮಾಂಜ್ರಾ ನದಿ ತುಂಬಿ ಹರಿದು ಬೆಳೆ ನಷ್ಟಕ್ಕೀಡಾಗಿರುವುದು ಇನ್ನೊಂದೆಡೆ ಸೇರಿ ರೈತರ ಬದುಕು ದುಸ್ತರವಾಗಿದೆ. ನೆರೆಯ ಮಹಾರಾಷ್ಟ್ರದಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ತಾಲೂಕಿನ ಧನೇಗಾಂವ್ ಜಲಾಶಯದಿಂದ 1500ಕ್ಕೂ ಅಧಿಕ ಕ್ಯೂಸೆಕ್ ನೀರನ್ನು ಹರಿಬಿಡಲಾಗಿದೆ. ಇದರಿಂದಾಗಿ ಮಾಂಜ್ರಾ ನದಿ ಆಪಾಯ ಮಟ್ಟದಲ್ಲಿ ಹರಿಯುತ್ತಿದೆ.

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್ ವಿಸಿಟ್ ಮಾಡಿ
www.pravasiprapancha.com

ವಿಶ್ವವಾಣಿ

ಸಂಪಾದಕೀಯ

ಸನಾತನ ಎಂದರೆ ಸದರವೇ?

ಕೆಲವು ವರ್ಷಗಳಿಂದ ಈಚೆಗಿನ ಒಂದಷ್ಟು ಬೆಳವಣಿಗೆಗಳನ್ನು ಗಮನಿಸಿದರೆ, ಸನಾತನ ಧರ್ಮದ ಅಥವಾ ಅದನ್ನು ಆಧರಿಸಿರುವ ಸ್ಥಾಪಿತ ಅಸ್ತಿತ್ವಗಳ ವಿಷಯದಲ್ಲಿ 'ಟೇಕನ್ ಫಾರ್ ಗ್ರಾಂಟೆಡ್' ಅಥವಾ 'ಲಘುವಾಗಿ ತೆಗೆದುಕೊಳ್ಳುವಿಕೆ' ಎಂಬ ಪರಿಪಾಠವನ್ನು ಕೆಲವರು ಸಲೀಸಾಗಿ ಜಾರಿಗೆ ತಂದಂತಿದೆ. ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಸುಪುತ್ರರೂ, ಅಲ್ಲಿನ ಉಪಮುಖ್ಯಮಂತ್ರಿಯೂ ಆಗಿರುವ ಉದಯನಿಧಿ ಸ್ಟಾಲಿನ್ ಅವರು 'ಸನಾತನ ಧರ್ಮದ ಮೂಲೋತ್ಪಾಟನೆಯತಾಗಬೇಕು' ಎಂಬರ್ಥದ ಹೇಳಿಕೆಯನ್ನು ಕಳೆದ ವರ್ಷ ನೀಡಿದ್ದು ಇದಕ್ಕೊಂದು ಉದಾಹರಣೆ. ತಮಿಳುನಾಡಿನ ಉದ್ದಗಲಕ್ಕೂ ಹಾಸುಹೊಕ್ಕಾಗಿರುವ ದೇವಾಲಯಗಳಿಂದ ಹರಿದುಬರುವ ಆದಾಯವನ್ನು ಮಡಿಲಿಗೆ ತುಂಬಿಸಿಕೊಳ್ಳುವಲ್ಲಿ ಯಾವುದೇ ಲಜ್ಜೆಯಿಲ್ಲದ ಅವರ ಸರಕಾರಕ್ಕೆ, ಆ ದೇವಾಲಯಗಳಿಗೆ ಆಧಾರವಾಗಿರುವ ಸನಾತನ ಧರ್ಮದ ಮೇಲೆ ಕೆಂಗಣ್ಣೇಕೋ ಎಂಬುದು ಅರ್ಥವಾಗದ ಪ್ರಶ್ನೆ. ಅವರ ಈ ನಡೆಯು ಅನುಕೂಲಸಿಂಧು ರಾಜಕಾರಣದ ಮತ್ತೊಂದು ಮಗ್ಗುಲೂ ಆಗಿರಬೇಕು, ಇರಲಿಬಿಡಿ. ಈ ಸಾಲಿಗೆ ಸೇರುವ ಮತ್ತೊಂದು ಬೆಳವಣಿಗೆಯೆಂದರೆ ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಪಚಾರದ ಕುರಿತಾಗಿ ಪುಂಖಾನುಪುಂಖವಾಗಿ ಹೊಮ್ಮಿದ ಆರೋಪಗಳು-ಅಪಪ್ರಚಾರಗಳು. ಇಲ್ಲಿ ಒಂದು ವಿಷಯವಂತೂ ಸ್ಪಷ್ಟ- ಹೀಗೆ ಆರೋಪಿಸುವವರು ಹೇಳುವಂತೆ ಸರಣಿ ಅನುಮಾನಾಸ್ಪದ ಸಾವುಗಳು ನಡೆದಿರುವುದೇ ಹೌದಾದಲ್ಲಿ, ಅದಕ್ಕೆ ಕಾರಣರಾದವರಿಗೆ ಈ ನೆಲದ ಕಾನೂನಿನಂತೆ ಶಿಕ್ಷೆಯಾಗಲೇಬೇಕು. ಆದರೆ, ಈ ಚರ್ಚಾವಿಷಯದ ಒಂದು 'ಎಳೆ'ಯನ್ನಷ್ಟೇ ಇಟ್ಟುಕೊಂಡು ಧರ್ಮಸ್ಥಳದ ಸ್ಥಾಪಿತ ವ್ಯವಸ್ಥೆಯ ಮೇಲೆ ಗೂಬೆ ಕೂರಿಸುವ ಹುನ್ನಾರವನ್ನು ಬಿಲ್‌ಕುಲ್ ಸಹಿಸಲಾಗದು. ಅಲ್ಲಿನ ನೇತ್ರಾವತಿ ನದಿಯ ತಟದಲ್ಲಿ ತಾನು ನೂರಾರು ಶವಗಳನ್ನು ಹೂತಿರುವುದಾಗಿ ಹೇಳಿಕೊಂಡ ಅನಾಮಿಕನ ಮಾತನ್ನು ಕೇಳಿಕೊಂಡು ಅಗೆದಾಗ ಸಿಕ್ಕಿರುವುದು ಬರೀ ಮಣ್ಣು, ಅಷ್ಟೇ! ಹಾಗಾದರೆ, ಈ ಒಂದಿಡೀ ಕಸರತ್ತನ್ನು ಹಾಗೂ ಸನಾತನ ಧರ್ಮದ ಅಸ್ತಿತ್ವಗಳನ್ನು ಕೆಲವರು ಸದರವಾಗಿ ತೆಗೆದುಕೊಂಡಿದ್ದಾರೆ ಎಂದಾಯಿತಲ್ಲವೇ? ಇಂಥ ಚಿತ್ತಸ್ಥಿತಿಗಳಿಗೆ ಇನ್ನಾದರೂ ಲಗಾಮು ಹಾಕಬೇಕಿದೆ.

ಸೊಂಪಾದಕೀಯ

ಹೆಣಗಾಡಿದ ಹೆಣ

ನಮ್ಮ ಸಮಾಜದಲ್ಲಿ ಜಾತಿ ಅನ್ನೋದು ಕೆಲವು ಜನರ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬುದರ ಬಗ್ಗೆ ಹೊಸದಾಗಿ ಏನೂ ಹೇಳಬೇಕಾಗಿಲ್ಲ. ಆದರೆ, 'ಪ್ರಾಣ ಬಿಟ್ಟೇವು, ಜಾತಿ ಬಿಡೆವು' ಅನ್ನೋ ಕೆಲವರು, ಸಾವಿನ ವಿಷಯದಲ್ಲೂ ಸಣ್ಣತನ ತೋರಿದ ಎರಡು ಉದಾಹರಣೆಗಳನ್ನು ನೋಡಿದಾಗ ಮತ್ತೆ ಮತ್ತೆ ಜಾತಿ ಭೂತ, ಮೂಢನಂಬಿಕೆಗಳ ಭೂತ ನೆನಪಾಗೋದು ಸಹಜ. ಊರೊಂದರಲ್ಲಿ ಹೆಂಗಸೊಬ್ಬರು ಸತ್ತಾಗ, ಆಕೆಯ ಹೆಣ್ಣುಮಕ್ಕಳು ಬೇರೆ ಜಾತಿಯವರನ್ನು ಮದುವೆ ಆಗಿದ್ದಾರೆ ಅನ್ನೋ ಕಾರಣಕ್ಕೆ ಸಂಬಂಧಿಕರು ಯಾರೂ ತಿರುಗಿ ನೋಡಲಿಲ್ಲವಂತೆ. ಕೊನೆಗೆ, ಗ್ರಾಮಸ್ಥರೇ ಮುಂದೆ ನಿಂತು ಅಂತಿಮಕಾರ್ಯ ಮಾಡಿದರಂತೆ. ಹಾಗಾಗಿ ನಿಜವಾದ ಸಂಬಂಧಿಕರು ಯಾರು ಅನ್ನೋ ಪ್ರಶ್ನೆ ಇಂಥ ಸಂದರ್ಭದಲ್ಲಿ ಹುಟ್ಟೋದು ಸಹಜ. ಅದಕ್ಕೆ ಉತ್ತರವೂ ಸುಲಭ. ಇನ್ನೊಂದು ಅಮಾನವೀಯ ಘಟನೆಯಲ್ಲಿ ಜನ ತಮ್ಮ ಮೂಢನಂಬಿಕೆಗಳನ್ನು ಯಾವ ಲೆವೆಲ್ಲಿಗೆ ಬೇಕಾದ್ರೂ ತಗೊಂಡ್ ಹೋಗ್ತಾರೆ ಅನ್ನೋದು ಪ್ರೂವ್ ಆಯಿತು. ತೊನ್ನು ಸಮಸ್ಯೆ ಇದ್ದ ಹೆಂಗಸೊಬ್ಬರು ಸತ್ತು, ಅವರನ್ನು ಊರಲ್ಲಿ ಹೂಳಲಾಗಿತ್ತು. ಆದರೆ ಆ ಊರಿನ ಸುತ್ತಮುತ್ತ ಮಳೆ ಬಂದರೂ, ಆ ಊರಲ್ಲಿ ಮಾತ್ರ ಮಳೆ ಬಾರದೇ ಇದ್ದಾಗ, ಸೋ-ಕಾಲ್ಡ್ ನಾಗರಿಕ ಸಮಾಜದ ಜನರು, ತೊನ್ನು ಬಂದವರನ್ನು ಸುಟ್ಟು ಹಾಕಬೇಕು, ಅವರನ್ನು ಹೂತಿದ್ದಕ್ಕೇ ಊರಿಗೆ ಬರ ಬಂದಿದೆ ಎಂದು ಹೇಳಿ ಹೂತಿದ್ದ ಶವವನ್ನು ಹೊರತೆಗೆದು ಸುಟ್ಟು ಹಾಕಿದರಂತೆ. ಇಂಥ ಮೂಢನಂಬಿಕೆಗಳನ್ನು ನೋಡಿಯೇ ದೊಡ್ಡವರು 'ಹುಟ್ಟುಗುಣ ಸುಟ್ಟರೂ ಹೋಗಲ್ಲ' ಅತ ಹೇಳಿದ್ದರೋ ಏನೋ. ಆದರೆ ಈ ಕೇಸಿನಲ್ಲಿ ಹುಟ್ಟುವ ಮಗುವಿನ ಕಾಲ್ಗುಣ ನೋಡುವವರು ಒಂದು ಕಡೆಯಾದರೆ ಸತ್ತವರ ಕಾಲ್ಗುಣವನ್ನೂ ಬಿಡದವರು ಇನ್ನೊಂದು ಕಡೆ. ಒಟ್ಟಿನಲ್ಲಿ, 'ಇವರ ಹುಟ್ಟುಗುಣ ಸತ್ತರೂ ಹೋಗಲ್ಲ, ಹೂತಿದ್ದ ಹೆಣವನ್ನು ಹೊರತೆಗೆದು ಸುಟ್ಟರೂ ಹೋಗಲ್ಲ' ಅಂತ ಜನ ಮಾತಾಡಿಕೊಳ್ಳುವ ಹಾಗಾಗಿದ್ದಂತೂ ನಿಜ. ಈ ಮೂಲಕ ಮೂಢನಂಬಿಕೆಯ ಜನ, ಗಾದೆಮಾತನ್ನು ಅಕ್ಷರಶಃ ನಿಜ ಮಾಡಿಬಿಟ್ಟರು. ಬದುಕಿರುವವರನ್ನು ಬದುಕೋಕೆ ಬಿಡದ ಈ ಮೂಢನಂಬಿಕೆಗಳ ಸರದಾರರು, ಸತ್ತು ಹೆಣವಾದವರನ್ನೂ ಹೀಗೆ ಹೆಣಗಾಡಿಸಿದ್ದು ವಿಷಾದನೀಯ ಸಂಗತಿ.

ಸಂಪಾದಕರ ಸದ್ಯಶೋಧನೆ

ವಿಮಾನದಲ್ಲಿ ಪ್ರಯಾಣಿಕ ಕಿರುಚಿದರೆ..

ವಿಮಾನ ಟೇಕಾಫ್ ಆಗುತ್ತಿದ್ದಂತೆ, ಪ್ರಯಾಣಿಕನೊಬ್ಬ ತನಗೆ ಭಯವಾಗುತ್ತಿದೆ ಎಂದು ಕಿರುಚಿದರೆ ಏನು ಮಾಡುತ್ತಾರೆ? ವಿಮಾನ ಟೇಕಾಫ್ ಆಗುವುದು ವಿಮಾನಯಾನದ ಒಂದು ನಿರ್ಣಾಯಕ ಹಂತ. ಈ ಸಮಯದಲ್ಲಿ ಪೈಲಟ್ ಮತ್ತು ಸಿಬ್ಬಂದಿ ಸಂಪೂರ್ಣವಾಗಿ ವಿಮಾನದ ನಿಯಂತ್ರಣದ ಮೇಲೆ ಮತ್ತು ರನ್‌ವೇ ಪರಿಸ್ಥಿತಿಗಳ ಮೇಲೆ ಗಮನ ಕೇಂದ್ರೀಕರಿಸಿರುತ್ತಾರೆ. ಹೀಗಾಗಿ, ಯಾವುದೇ ರೀತಿಯ ಅಡೆತಡೆ ಅಥವಾ ಗೊಂದಲಗಳನ್ನು ತಪ್ಪಿಸಲು ಹೆಚ್ಚಿನ ಮುತುವರ್ಜಿ ವಹಿಸಲಾಗುತ್ತದೆ. ಸಾಮಾನ್ಯವಾಗಿ ವಿಮಾನದ ಕಾಕ್‌ಪಿಟ್, ಪ್ರಯಾಣಿಕರ ಕ್ಯಾಬಿನ್‌ನಿಂದ ಪ್ರತ್ಯೇಕವಾಗಿರುತ್ತದೆ. ಹಾಗಾಗಿ, ಒಬ್ಬ ಪ್ರಯಾಣಿಕ ಕಿರುಚಿಕೊಂಡರೂ ಅದು ನೇರವಾಗಿ ಪೈಲಟ್‌ಗೆ ಕೇಳಿಸುವುದಿಲ್ಲ. ಈ ಪರಿಸ್ಥಿತಿಯನ್ನು ನಿಭಾಯಿಸಲು ತರಬೇತಿ ಪಡೆದಿರುವ ಕ್ಯಾಬಿನ್ ಸಿಬ್ಬಂದಿ ಮಧ್ಯ ಪ್ರವೇಶಿಸುತ್ತಾರೆ. ಪ್ರಯಾಣಿಕನೊಬ್ಬ ಭಯದಿಂದ ಕಿರುಚಿದ ತಕ್ಷಣ, ಹತ್ತಿರದಲ್ಲಿರುವ ಕ್ಯಾಬಿನ್ ಸಿಬ್ಬಂದಿ ತಕ್ಷಣವೇ ಆ ಪ್ರಯಾಣಿಕನ ಬಳಿ ಹೋಗಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಾರೆ. ಸಿಬ್ಬಂದಿ ಆ ಪ್ರಯಾಣಿಕನೊಂದಿಗೆ ಮಾತನಾಡಿ, ಅವರ ಭಯಕ್ಕೆ ಕಾರಣವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಪರಿಸ್ಥಿತಿಯು ಟೇಕಾಫ್‌ನ ಒಂದು ಸಾಮಾನ್ಯ ಭಾಗ ಎಂದು ವಿವರಿಸಿ, ಅವರನ್ನು ಶಾಂತಗೊಳಿಸಲು ಪ್ರಯತ್ನಿಸುತ್ತಾರೆ. ಜತೆಗೆ, ವಿಮಾನವು ಸಂಪೂರ್ಣವಾಗಿ ಸುರಕ್ಷಿತವಾಗಿದೆ ಎಂದು ಭರವಸೆ ನೀಡುತ್ತಾರೆ. ಒಂದು ವೇಳೆ ಪ್ರಯಾಣಿಕರು ಅತಿಯಾಗಿ ಗೊಂದಲ ಸೃಷ್ಟಿಸಿದರೆ ಅಥವಾ ನಿಯಂತ್ರಿಸಲಾಗದ ಸ್ಥಿತಿಯಲ್ಲಿದ್ದರೆ, ಸಿಬ್ಬಂದಿ ತಕ್ಷಣವೇ ಹಿರಿಯ ಕ್ಯಾಬಿನ್ ಸಿಬ್ಬಂದಿ (Senior Cabin Crew) ಅಥವಾ ವಿಮಾನದ ಮುಖ್ಯಸ್ಥರಿಗೆ (Purser) ಮಾಹಿತಿ ನೀಡುತ್ತಾರೆ. ಕ್ಯಾಬಿನ್‌ನಲ್ಲಿನ ಪರಿಸ್ಥಿತಿ ಗಂಭೀರವಾಗಿದ್ದರೆ ಮಾತ್ರ ಸಿಬ್ಬಂದಿ ಪೈಲಟ್‌ಗೆ ಮಾಹಿತಿ ನೀಡುತ್ತಾರೆ. ಸಣ್ಣ ಪ್ರಮಾಣದ ಗೊಂದಲವನ್ನು ಪೈಲಟ್‌ಗೆ ತಿಳಿಸುವುದಿಲ್ಲ. ಏಕೆಂದರೆ ಟೇಕಾಫ್ ಸಮಯದಲ್ಲಿ ಪೈಲಟ್‌ಗೆ ಯಾವುದೇ ರೀತಿಯ ತೊಂದರೆಯಾಗಬಾರದು ಎಂಬುದು ಉದ್ದೇಶ. ಒಂದು ವೇಳೆ ಪ್ರಯಾಣಿಕನ ವರ್ತನೆ ವಿಮಾನದ ಸುರಕ್ಷತೆಗೆ ಅಪಾಯ ಉಂಟುಮಾಡುವಂತಿದ್ದರೆ (ಉದಾಹರಣೆಗೆ, ಜೀವ ರಕ್ಷಕ ಸಾಧನಗಳಿಗೆ ಹಾನಿಮಾಡಲು, ಬಾಗಿಲು ತೆರೆಯಲು ಪ್ರಯತ್ನಿಸುವುದು), ಆಗ ಮಾತ್ರ ಸಿಬ್ಬಂದಿ ಪೈಲಟ್‌ಗೆ ಮಾಹಿತಿ ನೀಡುತ್ತಾರೆ. ಯಾವುದೇ ಒಂದು ವಿಷಯ ಪೈಲಟ್‌ಗೆ ತಲುಪಿದಾಗ, ಅವರು ವಿಮಾನದ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತಾರೆ. ಹೆಚ್ಚಾಗಿ, ವಿಮಾನ ಟೇಕಾಫ್ ಆಗುತ್ತಿರುವಾಗ, ಪೈಲಟ್‌ಗಳು ತಮ್ಮ ಕಾರ್ಯಾಚರಣೆಯನ್ನು ಮುಂದುವರಿಸುತ್ತಾರೆ. ಏಕೆಂದರೆ ಟೇಕಾಫ್ ನಿಲ್ಲಿಸುವುದು ಅಥವಾ ರದ್ದು ಮಾಡುವುದು ವಿಮಾನದ ಸುರಕ್ಷತೆಗೆ ಮತ್ತಷ್ಟು ಅಪಾಯ ಉಂಟುಮಾಡಬಹುದು. ಪರಿಸ್ಥಿತಿ ತೀರಾ ಗಂಭೀರವಾಗಿದ್ದರೆ, ಟೇಕಾಫ್ ರದ್ದು ಮಾಡಿ ವಿಮಾನವನ್ನು ಮತ್ತೆ ಏರ್‌ಪೋರ್ಟ್‌ಗೆ ಮರಳಿಸಲು ಪೈಲಟ್ ನಿರ್ಧರಿಸಬಹುದು. ಈ ನಿರ್ಧಾರವನ್ನು ಸಾಮಾನ್ಯವಾಗಿ Return to Gate ಎಂದು ಕರೆಯಲಾಗುತ್ತದೆ. ಆದರೆ ಇದು ಅತಿ ವಿರಳವಾಗಿ ಸಂಭವಿಸುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ, ವಿಮಾನ ಟೇಕಾಫ್ ಆಗುವ ಸಮಯದಲ್ಲಿ ಪೈಲಟ್‌ನ ಸಂಪೂರ್ಣ ಗಮನವು ವಿಮಾನದ ಸುರಕ್ಷತೆಯ ಮೇಲೆ ಇರುತ್ತದೆ. ಯಾವುದೇ ರೀತಿಯ ಸಣ್ಣಪುಟ್ಟ ಘಟನೆಗಳಿಗೆ ಕ್ಯಾಬಿನ್ ಸಿಬ್ಬಂದಿ ಜವಾಬ್ದಾರರಾಗಿರುತ್ತಾರೆ. ಹೀಗಾಗಿ, ಪ್ರಯಾಣಿಕನೊಬ್ಬ ಕಿರುಚಿಕೊಂಡರೂ ಅದು ನೇರವಾಗಿ ಪೈಲಟ್‌ನ ಕಾರ್ಯಚಟುವಟಿಕೆಗಳ ಮೇಲೆ ಪರಿಣಾಮ ಬೀರುವುದಿಲ್ಲ. ಆ ಪರಿಸ್ಥಿತಿಯನ್ನು ನಿಭಾಯಿಸಲು ಸಿಬ್ಬಂದಿ ಸಂಪೂರ್ಣವಾಗಿ ತರಬೇತಿ ಪಡೆದಿರುತ್ತಾರೆ. ಇನ್ನು ಕೆಲ ಸಂದರ್ಭಗಳಲ್ಲಿ ವಿಮಾನ ಪ್ರಯಾಣ ಭಯದಿಂದ, ಕೆಳಗೆ ನೋಡಿ, ತಲೆ ಸುತ್ತಿಬಂದು ಭಯದಿಂದ ಕಿರುಚಬಹುದು. ಅಂಥ ಸಂದರ್ಭದಲ್ಲಿ ಸಿಬ್ಬಂದಿ ಧಾವಿಸಿ ಬಂದು ಪ್ರಯಾಣಿಕರಿಗೆ ಭರವಸೆ ಮಾತುಗಳನ್ನು ಹೇಳಿ, ಧೈರ್ಯ ತುಂಬುತ್ತಾರೆ. ಪರಿಸ್ಥಿತಿ ಕೈಮೀರಿ ಹೋದಾಗ, ಟೇಕಾಫ್ ಆದ ವಿಮಾನವನ್ನು ಲ್ಯಾಂಡ್ ಮಾಡಿ, ಆ ಪ್ರಯಾಣಿಕನನ್ನು ಇಳಿಸಿ ಹೋಗುತ್ತಾರೆ.

ಪರಮೇಶ್ವರ್ ಬೆನ್ನಲ್ಲಿ ಕಾಣುತ್ತಿದೆ ರಾಮ ಬಾಣ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದೊಂದು ವಾರದಿಂದ ದಿಲ್ಲಿಯ ಕಾಂಗ್ರೆಸ್ ವರಿಷ್ಠರಿಗೆ ಹಲವು ಸಂದೇಶಗಳು ರವಾನೆಯಾಗುತ್ತಿವೆ. ಆದರೆ ವರಿಷ್ಠರ ಕಿವಿಗೆ ಅವು ಹಿತಕರವಾಗಿ ಕೇಳಿಸುತ್ತಿಲ್ಲ. ಅಂದ ಹಾಗೆ, ಇಂಥ ಸಂದೇಶಗಳಿಗೆ ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರ ಎಪಿಸೋಡು ಕಾರಣ ಎಂಬುದು ರಹಸ್ಯವಲ್ಲ. ಇವತ್ತು ಮೇಲ್ನೋಟಕ್ಕೆ, ರಾಹುಲ್ ಗಾಂಧಿಯವರ ಹೇಳಿಕೆಗೆ ಉಲ್ಟಾ ಹೊಡೆದರು ಎಂಬ ಕಾರಣಕ್ಕಾಗಿ ರಾಜಣ್ಣ ಅವರು ಸಂಪುಟದಿಂದ ವಜಾ ಆಗಿದ್ದಾರೆ. ಆದರೆ ಆಳಕ್ಕಿಳಿದು ನೋಡಿದರೆ ಅವರು ಸುರ್ಜೇವಾಲ ಅವರಿಗೆ ತಿರುಗೇಟು ಹೊಡೆದಿದ್ದರು ಎಂಬುದೇ ಅವರ ವಜಾ ಹಿಂದಿನ ಮೂಲಕಾರಣ.

ಹೈಕಮಾಂಡ್ ಮತ್ತು ರಾಜ್ಯ ಕಾಂಗ್ರೆಸ್ ನಡುವಣ ಕೊಂಡಿಯಾಗಿ ನೇಮಕಗೊಂಡಿರುವ ಸುರ್ಜೇವಾಲ ಸ್ವತಃ ಶಾಸಕರು, ಸಚಿವರು ಮತ್ತು ಅಧಿಕಾರಿಗಳ ಜತೆ ಪ್ರತ್ಯೇಕ ಸಭೆ ನಡೆಸಿದರಲ್ಲ? ಇದನ್ನು ಸಚಿವ ರಾಜಣ್ಣ ಪ್ರಶ್ನಿಸಿದ್ದರು. ಎಐಸಿಸಿ ಉಸ್ತುವಾರಿಗೆ ತೆಲಂಗಾಣದಲ್ಲಿ ಸಿಎಂ ರೇವಂತ್ ರೆಡ್ಡಿ ಮಾಡಿದ ಸನ್ಮಾನವನ್ನೇ ಇಲ್ಲಿ ಸುರ್ಜೇವಾಲ ಅವರಿಗೆ ಮಾಡುವಂತೆ ಸಿಎಂ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದರು. ಯಾವಾಗ ಸಚಿವ ರಾಜಣ್ಣ ಈ ರೀತಿ ಮುಗಿಬಿದ್ದರೋ, ಆಗ ದಿಲ್ಲಿ ವರಿಷ್ಠರು ಎಚ್ಚರಿಕೆಯಿಂದ ಹೆಜ್ಜೆ ಇಡತೊಡಗಿದರು.

ವಾಸ್ತವವಾಗಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಸಿಎಂ ಸಿದ್ದರಾಮಯ್ಯ ಅವರ ಪರವಾಗಿಯೇ ಇದ್ದವರು. ಆದರೆ ಯಾವಾಗ ರಾಜಣ್ಣ ಅವರು ಸುರ್ಜೇವಾಲ ಅವರ ಮೇಲೆ ಮುಗಿಬಿದ್ದರೋ, ಆಗ ಅವರು ಸುರ್ಜೇವಾಲ ಪರ ನಿಂತರು. ಅಷ್ಟೇ ಅಲ್ಲ, ಮತಗಳ್ಳತನದ ವಿರುದ್ಧ ರಾಹುಲ್ ಗಾಂಧಿ ಆಡಿದ ಮಾತಿಗೆ ರಾಜಣ್ಣ ಉಲ್ಟಾ ಹೊಡೆದ ಕೂಡಲೇ ಖೆಡ್ಡಾ ರೂಪಿಸಲು ಸುರ್ಜೇವಾಲಾ ಅವರಿಗೆ ಸಹಾಯ ಮಾಡಿದರು. ದಿಲ್ಲಿ ಮೂಲಗಳ ಪ್ರಕಾರ, ರಾಜಣ್ಣ ಎಪಿಸೋಡಿನ ಬಗ್ಗೆ ರಾಹುಲ್ ಗಾಂಧಿಯವರಿಗೆ ಕನ್ವಿನ್ಸ್ ಮಾಡಿದವರೇ ಕೆ.ಸಿ.ವೇಣುಗೋಪಾಲ್. ಕಾರಣ? ಒಂದು ಸಲ ಉಸ್ತುವಾರಿ ಹೊಣೆ ಹೊತ್ತುಕೊಂಡವರ ಪವರ್ರು ಕಡಿಮೆಯಾದರೆ ಇದೇ ಸಂಪ್ರದಾಯ ಬೇರೆ ರಾಜ್ಯಗಳಲ್ಲೂ ಶುರುವಾಗುತ್ತದೆ. ಅದರಲ್ಲೂ ಹೈಕಮಾಂಡ್‌ನ ಬೇಕು-ಬೇಡಗಳನ್ನು ನೋಡಿಕೊಳ್ಳುವ ಸಲುವಾಗಿಯೇ ಉಸ್ತುವಾರಿಗಳನ್ನು ಹೈಕಮಾಂಡ್ ನೇಮಕ ಮಾಡಿರುತ್ತದೆ. ಹೀಗಿದ್ದಾಗ ಅವರಿಗೆ ಒಂದು ರಾಜ್ಯದಲ್ಲಿ ಅವಮಾನವಾದರೆ ಭವಿಷ್ಯದಲ್ಲಿ ಸಂಕಷ್ಟ ಎದುರಿಸುವುದು ಹೈಕಮಾಂಡ್ ತಾನೇ? ಹೀಗಾಗಿಯೇ ವೇಣುಗೋಪಾಲ್ ಅವರು ಧ್ವನಿ ಬದಲಿಸಿ, ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡುವಂತೆ ರಾಹುಲ್ ಮೂಲಕ ಸಿದ್ದರಾಮಯ್ಯ ಅವರಿಗೆ ಹೇಳಿಸಿದರು. ಇವತ್ತು ಕೆ.ಸಿ.ವೇಣುಗೋಪಾಲ್ ಏನು ಹೇಳುತ್ತಾರೋ, ರಾಹುಲ್ ಗಾಂಧಿ ಅದನ್ನು ಕೇಳುತ್ತಾರೆ. ಅರ್ಥಾತ್ ವೇಣುಗೋಪಾಲ್ ಅವರ ಇಶಾರೆಯಿಲ್ಲದೆ ರಾಹುಲ್ ಗಾಂಧಿ ಒಂದು ಹೆಜ್ಜೆ ಮುಂದಿಡುವುದಿಲ್ಲ. ರಾಜಣ್ಣ ಎಪಿಸೋಡಿಗೆ ಸಂಬಂಧಿಸಿದಂತೆ ರಾಹುಲ್ ಗಾಂಧಿಯವರ ಜತೆ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರಿಗೂ ಇದು ಸ್ಪಷ್ಟವಾಗಿದೆ.

ರಾಜಣ್ಣ ಎಪಿಸೋಡಿನ ಪರಿಣಾಮ ಏನು?: ಅಂದ ಹಾಗೆ, ಮಂತ್ರಿಮಂಡಲದಿಂದ ಕೆ.ಎನ್.ರಾಜಣ್ಣ ವಜಾ ಆದರಲ್ಲ? ಇದಾದ ನಂತರ ಡಿಸಿಎಂ ಡಿಕೆಶಿ ಕ್ಯಾಂಪಿನಲ್ಲಿ ಉತ್ಸಾಹ ಗರಿಗೆದರಿದೆ. ಅಧಿಕಾರ ಹಂಚಿಕೆಯ ಮಾತಿಗೆ ಸಿದ್ದರಾಮಯ್ಯ ದಿಲ್ಲಿಯಲ್ಲೇ ಗುದ್ದು ಕೊಟ್ಟ ನಂತರ ಮಂಕಾಗಿದ್ದ ಈ ಕ್ಯಾಂಪು ಪುನಃ ಮೇಲೆದ್ದಿದೆಯಲ್ಲದೆ, ಡಿಸೆಂಬರ್‌ನಲ್ಲಿ ಡಿಕೆಶಿ ಸಿಎಂ ಆಗುವುದು ಗ್ಯಾರಂಟಿ ಅಂತ ಹೇಳತೊಡಗಿದೆ. ಹೀಗೆ ಅದು ಅಧಿಕಾರ ಹಂಚಿಕೆಯ ಮಾತನ್ನು ಪುನಃ ಪ್ರಸ್ತಾಪಿಸಲು ರಾಜಣ್ಣ ವಜಾ ಎಪಿಸೋಡು ಕೊಟ್ಟ ಶಕ್ತಿಯೇ ಕಾರಣ. ಅದರ ಪ್ರಕಾರ, ಅಧಿಕಾರ ಹಂಚಿಕೆಯ ಬಗ್ಗೆ ಪದೇ ಪದೆ ಮಾತನಾಡುತ್ತಿದ್ದವರೇ ರಾಜಣ್ಣ. ಎರಡೂವರೆ ವರ್ಷಗಳ ನಂತರ ಡಿಕೆಶಿ ಸಿಎಂ ಆಗುತ್ತಾರೆ ಎಂಬ ಪ್ರಸ್ತಾಪವಾದರೆ, ''ಇಲ್ಲ ಇಲ್ಲ, ಅಧಿಕಾರ ಹಂಚಿಕೆಯ ಮಾತೇ ಇಲ್ಲ. ಐದು ವರ್ಷಗಳ ಕಾಲವೂ ಸಿದ್ದರಾಮಯ್ಯ ಅವರೇ ಸಿಎಂ ಆಗಿರುತ್ತಾರೆ'' ಅಂತ ರಾಜಣ್ಣ ತಿರುಗೇಟು ಹೊಡೆಯುತ್ತಿದ್ದರು.

ಮೂಲಗಳ ಪ್ರಕಾರ, ಕರ್ನಾಟಕದಲ್ಲಿ ಸುರ್ಜೇವಾಲ ಅವರ 'ಬಾಸಿಸಂ' ಎಪಿಸೋಡು ಶುರುವಾಯಿತಲ್ಲ? ಇದು ಸಿದ್ದರಾಮಯ್ಯ ಅವರನ್ನು ಪದಚ್ಯುತಗೊಳಿಸಲು ನಡೆಯುತ್ತಿರುವ ಷಡ್ಯಂತ್ರ ಎಂಬ ತೀರ್ಮಾನಕ್ಕೆ ಬಂದಿದ್ದ ರಾಜಣ್ಣ ಅವರು ದಿಲ್ಲಿಗೇ ನುಗ್ಗಲು ತಯಾರಿ ನಡೆಸಿದ್ದರು. ಹೀಗೆ ದಿಲ್ಲಿಗೆ ನುಗ್ಗಿ ವರಿಷ್ಠರನ್ನು ಭೇಟಿ ಮಾಡಲು ತೀರ್ಮಾನಿಸಿದ್ದ ರಾಜಣ್ಣ ಅವರು, ''ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಆಗಬೇಕು ಎಂದಾದರೆ ಸರಕಾರವನ್ನು ವಿಸರ್ಜಿಸಿ ಮಧ್ಯಂತರ ಚುನಾವಣೆಗೆ ಹೋಗುವುದು ಒಳ್ಳೆಯದು. ಡಿಕೆಶಿ ಸಿಎಂ ಆಗಬೇಕು ಎಂಬುದಾದರೆ ಅವರ ನೇತೃತ್ವದಲ್ಲೇ ಪಕ್ಷ ಚುನಾವಣೆ ಎದುರಿಸಿ ಗೆಲ್ಲಲಿ'' ಎಂದು ಹೇಳಲು ಸಜ್ಜಾಗಿದ್ದರು.

ಆದರೆ ಹೀಗೆ ಸಜ್ಜಾದ ರಾಜಣ್ಣ ದಿಲ್ಲಿಗೆ ನುಗ್ಗುವ ಮುನ್ನವೇ ಸಂಪುಟದಿಂದ ಗೇಟ್‌ಪಾಸ್ ಪಡೆದಿದ್ದಾರೆ. ಹೀಗೆ ಅವರು ಗೇಟ್‌ಪಾಸ್ ಪಡೆದ ಬೆಳವಣಿಗೆಯಿಂದ ಖುಷಿಯಾಗಿರುವ ಡಿಕೆಶಿ ಕ್ಯಾಂಪು, ''ಇದು ಭವಿಷ್ಯದಲ್ಲಿ ನಾಯಕತ್ವ ಬದಲಾವಣೆಗೆ ಹೈಕಮಾಂಡ್ ಸಜ್ಜಾಗಿದೆ ಎಂಬುದರ ಸಂಕೇತ. ನಾವು ಹೇಳಿದಂತೆ ಕೇಳಬೇಕು. ಇಲ್ಲದಿದ್ದರೆ ಕ್ರಮ ಗ್ಯಾರಂಟಿ ಎಂಬುದು ವರಿಷ್ಠರ ಸಂದೇಶ. ಇದಕ್ಕೆ ಯಾರೇ ವ್ಯತಿರಿಕ್ತವಾಗಿ ಮಾತನಾಡಿದರೂ ವರಿಷ್ಠರು ಸಹಿಸುವುದಿಲ್ಲ. ರಾಜಣ್ಣ ಎಪಿಸೋಡೇ ಅದಕ್ಕೆ ಸಾಕ್ಷಿ'' ಎನ್ನುತ್ತಿದೆ.

ಆದರೆ ಡಿಕೆಶಿ ಕ್ಯಾಂಪಿನ ಈ ಉತ್ಸಾಹದ ನಡುವೆ ಸಿಎಂ ಸಿದ್ದರಾಮಯ್ಯ ಬ್ರಿಗೇಡ್ ಬೇರೆ ರೀತಿ ಯೋಚಿಸುತ್ತಿದೆ. ಬರೀ ಯೋಚಿಸುವುದಷ್ಟೇ ಅಲ್ಲ, ದಿಲ್ಲಿಗೆ ಹೋಗಿ ವರಿಷ್ಠರಿಗೆ ಆತಂಕದ ಸಂದೇಶವನ್ನು ರವಾನಿಸಲು ನಿರ್ಧರಿಸಿದೆ. ಅದರ ಪ್ರಕಾರ, ರಾಜಣ್ಣ ವಜಾ ಎಪಿಸೋಡಿನ ನಂತರ ಕರ್ನಾಟಕದ ವಾಲ್ಮೀಕಿ ಮತಬ್ಯಾಂಕು ಕುದಿಯುತ್ತಿದೆ. ಇವತ್ತು ತುಮಕೂರು, ಚಿತ್ರದುರ್ಗ, ಬಳ್ಳಾರಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ನಿರ್ಣಾಯಕವಾಗಿರುವ ವಾಲ್ಮೀಕಿ ಮತಬ್ಯಾಂಕು ಈ ಬೆಳವಣಿಗೆಯಿಂದ ಬಿಜೆಪಿ ಕಡೆ ಹೊರಳಿಕೊಳ್ಳುವ ಸಾಧ್ಯತೆ ಇದೆ. ಇವತ್ತು ಬಿಜೆಪಿಯಲ್ಲಿ ರೆಡ್ಡಿ-ಶ್ರೀರಾಮುಲು ಡೆಡ್ಲಿ ಕಾಂಬಿನೇಷನ್ ಮುರಿದುಬಿದ್ದಿರುವುದೇನೋ ನಿಜ. ಆದರೆ ಇವರನ್ನು ಒಂದುಮಾಡಲು ಬಿಜೆಪಿ ಪ್ರಯತ್ನಿಸುತ್ತಿದೆ. ಒಂದು ವೇಳೆ ಈ ಡೆಡ್ಲಿ ಕಾಂಬಿನೇಷನ್ ಪುನಃ ಮೇಲೆದ್ದು ನಿಂತರೆ ವಾಲ್ಮೀಕಿ ಮತಬ್ಯಾಂಕು ಬಿಜೆಪಿ ಕಡೆ ಹೊರಳಿಕೊಳ್ಳುವುದು ಕಷ್ಟವಲ್ಲ. ಹಾಗಾಗಬಾರದು ಎಂದರೆ ರಾಜಣ್ಣ ಎಪಿಸೋಡಿನ ಹಿಂದೆ ನಡೆದಿರುವ ಷಡ್ಯಂತ್ರಗಳನ್ನು ಗಮನಿಸಬೇಕು. ಆಗಿರುವ ಡ್ಯಾಮೇಜನ್ನು ಸರಿಪಡಿಸುವ ಕೆಲಸವಾಗಬೇಕು ಎಂಬುದು ಸಿದ್ದರಾಮಯ್ಯ ಕ್ಯಾಂಪಿನ ವರಸೆ.

ಇನ್ನು, ಕಳೆದ ಎರಡು ವರ್ಷಗಳಿಂದ ಶಾಮನೂರು ಶಿವಶಂಕರಪ್ಪ ಸೇರಿದಂತೆ ಬಲಿಷ್ಠ ವರ್ಗಗಳ ಹಲವು ನಾಯಕರು ಕಾಂಗ್ರೆಸ್ ಹೈಕಮಾಂಡ್ ವಿರುದ್ಧವೇ ಗುಡುಗಿದ್ದಾರೆ. ಆದರೆ ಅವರಿಗೆ ಒಂದು ನೋಟಿಸ್ ಕೊಡದ ಹೈಕಮಾಂಡ್, ದುರ್ಬಲ ವರ್ಗಗಳ ನಾಯಕರ ಮೇಲೆ ಪ್ರಹಾರ ಮಾಡುವುದು ಎಷ್ಟು ಸರಿ? ಎಂಬುದು ಅದರ ವರಾತ. ಹಾಗಂತಲೇ ಕಳೆದ ಎರಡು ವರ್ಷಗಳಿಂದ ಏನೇನು ನಡೆದಿದೆ? ಎಂಬುದರ ವಿವರವನ್ನು ಪಟ್ಟಿ ಮಾಡಿರುವ ಸಿದ್ದು ಬ್ರಿಗೇಡ್ ಸದ್ಯದಲ್ಲೇ ದೆಹಲಿಗೆ ತೆರಳಲಿದೆ ಮತ್ತು ಅದರ ನೇತೃತ್ವವನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ವಹಿಸಿಕೊಳ್ಳಲಿದ್ದಾರೆ.

ರಘುಮೂರ್ತಿಗೆ ಲಕ್ಕು?: ಈ ಮಧ್ಯೆ ರಾಜಣ್ಣ ಅವರ ವಜಾ ನಂತರ ತೆರವಾಗಿರುವ ಜಾಗಕ್ಕೆ ಚಳ್ಳಕೆರೆ ಶಾಸಕ ರಘುಮೂರ್ತಿ ಅವರನ್ನು ತರಲು ಸಿದ್ದು ಕ್ಯಾಂಪು ಬಯಸಿದೆ. ಇವತ್ತು ಕ್ಷೇತ್ರದ ಅಭಿವೃದ್ಧಿಯ ವಿಷಯದಲ್ಲಿ 'ರೋಲ್ ಮಾಡೆಲ್' ಆಗಿರುವ ರಘುಮೂರ್ತಿ ಈ ಹಿಂದೆ ಬಿಜೆಪಿ ಅಲೆ ಇದ್ದ ಕಾಲದಲ್ಲೂ ಜಗ್ಗದೆ ಗೆದ್ದು ಬಂದವರು. ವಾಲ್ಮೀಕಿ ಸಮುದಾಯದ ನಾಯಕ ಎಂಬ ಖ್ಯಾತಿಗೆ ಪಾತ್ರರಾಗಿದ್ದ ಬಿ.ಶ್ರೀರಾಮುಲು ಅಂಥವರ ಹೊಡೆತಕ್ಕೂ ಬಗ್ಗದ ರಘುಮೂರ್ತಿ 2018ರಲ್ಲಿ ಕಾಂಗ್ರೆಸ್ ಬಾವುಟ ಹಾರಿಸಿದ್ದರು. ಈ ಸಲವೂ ನಿರಾಯಾಸವಾಗಿ ಗೆದ್ದು ಬಂದಿರುವ ರಘುಮೂರ್ತಿ ಅವರಲ್ಲಿ ಭವಿಷ್ಯದ ನಾಯಕನನ್ನು ಕಂಡಿರುವ ಸಿದ್ದು ಕ್ಯಾಂಪು, ರಾಜಣ್ಣ ತೆರವು ಮಾಡಿದ ಜಾಗಕ್ಕೆ ಅವರು ಬರಲಿ ಅಂತ ಬಯಸಿದೆ.

ಬೆನ್ನ ಹಿಂದೆ ರಾಮಬಾಣ: ಕುತೂಹಲದ ಸಂಗತಿ ಎಂದರೆ, ರಾಜಣ್ಣ ಎಪಿಸೋಡಿನ ನಂತರ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೆಸರು ಮುನ್ನೆಲೆಗೆ ಬಂದಿದೆ. ಅಂದ ಹಾಗೆ, ಪರ್ಯಾಯ ನಾಯಕತ್ವದ ರೇಸಿನಲ್ಲಿ ಈ ಹಿಂದೆಯೂ ಪರಮೇಶ್ವರ್ ಅವರ ಹೆಸರು ಕೇಳಿಬಂದಿತ್ತು ಮತ್ತು ಇದಕ್ಕೆ ಪೂರಕವಾಗಿ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಸಹಕಾರ ಸಚಿವರಾಗಿದ್ದ ಕೆ.ಎನ್.ರಾಜಣ್ಣ ಅವರು ಪರಮೇಶ್ವರ್ ಅವರೊಂದಿಗೆ ಸೀಕ್ರೆಟ್ ಮೀಟಿಂಗುಗಳನ್ನು ನಡೆಸುತ್ತಿದ್ದರು. ಆದರೆ ಒಂದು ಹಂತದಲ್ಲಿ ಪರ್ಯಾಯ ನಾಯಕತ್ವದ ರೇಸಿನಿಂದ ಪರಮೇಶ್ವರ್ ಹೆಸರು ಹಿಂದೆ ಸರಿದಿತ್ತಲ್ಲದೆ ಕ್ರಮೇಣ ಆ ಕುರಿತ ಮಾತೇ ತಣ್ಣಗಾಗಿತ್ತು. ಆದರೆ ಈಗ ವರಿಷ್ಠರ ಕಿವಿಗೆ ತಲುಪಿರುವ ಮಾಹಿತಿಯ ಪ್ರಕಾರ, ಪರ್ಯಾಯ ನಾಯಕತ್ವದ ರೇಸಿನಲ್ಲಿ ಪರಮೇಶ್ವರ್ ಹೆಸರು ಮುನ್ನೆಲೆಗೆ ಬಂದಿದೆ.

ಅಂದ ಹಾಗೆ, ಅಧಿಕಾರ ಹಂಚಿಕೆಯ ಮಾತಿಗೆ ಇವತ್ತೂ ಸಿದ್ದರಾಮಯ್ಯ ಒಪ್ಪುವುದಿಲ್ಲ. ಆದರೆ ಅಧಿಕಾರ ಬಿಟ್ಟುಕೊಡಿ ಅಂತ ರಾಹುಲ್ ಗಾಂಧಿ ಕೇಳಿಕೊಂಡರೆ ಉಲ್ಟಾ ಹೊಡೆಯುವ ಮನಃಸ್ಥಿತಿಯೂ ಅವರಲ್ಲಿಲ್ಲ. ಹೀಗಾಗಿ ಸನ್ನಿವೇಶ ಬಿಗಡಾಯಿಸಿದರೆ ಅವರು ನಾಯಕತ್ವ ಬದಲಾವಣೆಯ ವಿಷಯದಲ್ಲಿ ಒಂದು ಷರತ್ತು ಹಾಕಲಿದ್ದಾರೆ. ಅದೆಂದರೆ ಭವಿಷ್ಯದ ನಾಯಕನ ಆಯ್ಕೆ ಶಾಸಕಾಂಗ ಪಕ್ಷದಲ್ಲೇ ತೀರ್ಮಾನವಾಗಬೇಕು ಎಂಬುದು. ಒಂದು ವೇಳೆ ಈ ಪ್ರಪೋಸಲ್ಲನ್ನು ಒಪ್ಪಿದರೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಸಿದ್ದು ಬ್ರಿಗೇಡ್‌ನ ಅಭ್ಯರ್ಥಿಯಾಗಲಿದ್ದಾರೆ. ಒಂದು ವೇಳೆ ಇದನ್ನು ನಿರಾಕರಿಸಿದರೆ ಸರಕಾರ ಅಲುಗಾಡಲಿದೆ ಎಂಬುದು ವರಿಷ್ಠರಿಗಿರುವ ಮಾಹಿತಿ. ಹೀಗೆ ದಿಲ್ಲಿಗೆ ತಲುಪಿರುವ ಮಾಹಿತಿಯು ಮುಂದೆ ಯಾವ್ಯಾವ ತಿರುವು ಪಡೆಯುತ್ತದೋ? ಅದು ಬೇರೆ ವಿಷಯ. ಆದರೆ ಇದರ ನಡುವೆ ಪರಮೇಶ್ವರ್ ಹೆಸರು ಮುನ್ನೆಲೆಗೆ ಬಂದಿದೆಯಲ್ಲ? ಅದೇ ಸದ್ಯದ ವಿಶೇಷ.

ವಿಜಯೇಂದ್ರರಿಗೆ ನಡ್ಡಾ ಹೇಳಿದ್ದೇನು?: ಇನ್ನು ವೆಬ್ ಸೀರೀಸ್‌ನಂತಾಗಿರುವ ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆಯ ವಿಷಯ ಬಿಹಾರ ವಿಧಾನಸಭೆ ಚುನಾವಣೆಯವರೆಗೆ ಸೆಟ್ಲಾಗುವಂತೆ ಕಾಣುತ್ತಿಲ್ಲ. ಹಾಲಿ ಅಧ್ಯಕ್ಷರು ಬದಲಾಗುವುದು ಗ್ಯಾರಂಟಿ ಎಂಬ ಮಾತು ಕೇಳಿ ಕೇಳಿ ರೋಸತ್ತು ಹೋಗಿರುವ ಬಿ.ವೈ.ವಿಜಯೇಂದ್ರ ಅವರು ಮೊನ್ನೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರನ್ನು ಸಂಪರ್ಕಿಸಿದ್ದರಂತೆ. ''ಸರ್, ಪಕ್ಷದ ಅಧ್ಯಕ್ಷರ ಘೋಷಣೆ ವಿಷಯ ಪೆಂಡಿಂಗ್ ಇದ್ದರೆ ಹೇಗೆ? ದಿನ ಬೆಳಗಾದರೆ ಅಧ್ಯಕ್ಷರು ಬದಲಾಗುತ್ತಾರೆ ಅಂತ ಯಾರೋ ಹೇಳುತ್ತಿದ್ದರೆ ಕೆಲಸ ಮಾಡುವುದು ಹೇಗೆ?'' ಅಂತ ಈ ಸಂದರ್ಭದಲ್ಲಿ ಕೇಳಿದಾಗ ಜಗತ್ ಪ್ರಕಾಶ್ ನಡ್ಡಾ ಅಚ್ಚರಿ ವ್ಯಕ್ತಪಡಿಸಿದರಂತೆ. ''ಅಲ್ಲ, ನಿಮ್ಮನ್ನು ಅಧ್ಯಕ್ಷರು ಅಂತ ತಾನೇ ಈ ಹಿಂದೆ ಘೋಷಿಸಿದ್ದು! ಹೀಗಿರುವಾಗ ಇನ್ನೇನಿದೆ ಗೊಂದಲ? ವಿರೋಧಿಗಳು ಏನಾದರೊಂದು ಹೇಳುತ್ತಲೇ ಇರುತ್ತಾರೆ. ಹಾಗಂತ ಯೋಚಿಸುತ್ತಾ ಕೂತರೆ ಹೇಗೆ? ಇವತ್ತು ನೀವೇ ರಾಜ್ಯ ಬಿಜೆಪಿಯ ಅಧ್ಯಕ್ಷರು. ನಿಮ್ಮ ಪಾಡಿಗೆ ನೀವು ಕೆಲಸ ಮಾಡಿಕೊಂಡು ಹೋಗುತ್ತಿರಿ'' ಅಂತ ನಡ್ಡಾ ಕಟ್ಟುನಿಟ್ಟಾಗಿ ಹೇಳಿದ ಮೇಲೆ ವಿಜಯೇಂದ್ರ ಕೂಲ್ ಆಗಿದ್ದಾರೆ. ಅಲ್ಲಿಗೆ ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆಯ ವಿಷಯ ಬಿಹಾರ ವಿಧಾನಸಭೆ ಚುನಾವಣೆ ಮುಗಿಯುವವರೆಗೆ ಸೆಟ್ಲಾಗುವುದಿಲ್ಲ ಎಂಬುದು ನಿಕ್ಕಿಯಾಗಿದೆ. ಯಾಕೆಂದರೆ ಬಿಹಾರ ವಿಧಾನಸಭೆ ಚುನಾವಣೆ ಮುಗಿಯುವವರೆಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ವಿಷಯ ಸೆಟ್ಲಾಗುವುದಿಲ್ಲ. ಅದು ಸೆಟ್ಲಾಗುವವರೆಗೆ ರಾಜ್ಯ ಬಿಜೆಪಿಯ ಅಧ್ಯಕ್ಷ ಸ್ಥಾನದ ವಿಷಯವೂ ಸೆಟ್ಲಾಗುವುದಿಲ್ಲ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇದು 'ಟಿವಿ' ರಾಮಾಯಣ!

ಟಿವಿಯ ಮುಂದೆ ಕುಳಿತ ನಮ್ಮಂಥವರು ವಾರ್ತೆಗಳ ಚಾನಲ್ ಅನ್ನು ಆನ್ ಮಾಡುತ್ತೇವೆ. ಈಗ ಬಹುತೇಕ ಖಾಸಗಿ ಚಾನಲ್‌ಗಳೇ. ಪ್ರತಿಯೊಂದು ಚಾನಲ್‌ನವರೂ, ತಮಗೆ ದಕ್ಕಿದ ವಾರ್ತೆಗಳ ಸಾರಾಸಾರವನ್ನು ವಿವೇಚನೆ ಮಾಡದೆ, 'ನಾ ಮುಂದು, ತಾ ಮುಂದು' ಅಂತ ಜಿದ್ದಿಗೆ ಬಿದ್ದವರಂತೆ ಅರೆಬೆಂದ ಸಂಗತಿಗಳನ್ನೇ ಬಿತ್ತರಿಸಿಬಿಡುತ್ತಾರೆ. ಒಂದೊಂದರಲ್ಲಿ ಒಂದೊಂದು ರೀತಿಯ ವಿಶ್ಲೇಷಣೆ ಮುಂದುವರಿಯುತ್ತದೆ. ಪ್ರತಿ ಚಾನಲ್‌ನವರೂ 'ಗುಂಪುಚರ್ಚೆ' ಅಂತ ಹೇಳಿ ನಾಲ್ಕೈದು ಮಂದಿ 'ತಥಾಕಥಿತ' ಪರಿಣತರನ್ನು ತಂದು ಕೂರಿಸಿ ವಾಗ್ವಾದಕ್ಕೆ ಶುರುಹಚ್ಚಿಕೊಂಡಿರುತ್ತಾರೆ.

ಇಂಥ ಚರ್ಚೆಯಲ್ಲಿ ಒಬ್ಬನ ಮಾತಿಗೆ ಪೂರ್ಣವಿರಾಮ ಬೀಳುವ ಮೊದಲೇ ಇನ್ನೊಬ್ಬ ಏರುದನಿಯಲ್ಲಿ ಖಂಡಿಸುತ್ತಾನೆ. ಇವನು 'ಒಂದು ನಿಮಿಷ' ಅಂತ ಸಮಯ ಕೇಳುವುದು, ಅಷ್ಟರಲ್ಲೇ ಇನ್ನೊಬ್ಬ ದನಿಯೆತ್ತುವುದು ಹೀಗೆ ಯಾವ ವಿಚಾರವೂ ಸ್ಪಷ್ಟವಾಗುವುದಿಲ್ಲ. ಈ ನಡುವೆ 'ಆ್ಯಂಕರ್' ಎತ್ತುವ ಪ್ರಶ್ನೆ ಯಾರ ಗಮನಕ್ಕೂ ಬರುವುದಿಲ್ಲ! ಆಗ, ಟಿವಿ ಮುಂದೆ ಕುಳಿತವರು ಬೇರೆ ಚಾನಲ್‌ಗೆ ಹಾರುತ್ತಾರೆ. ಅಲ್ಲಿ ಧರ್ಮಸ್ಥಳದ ಬುರುಡೆ ವಿಚಾರ, ಉತ್ಖನನ, ಮುಸುಕುಧಾರಿಯ ನಿರ್ದೇಶನದ ವಿಚಾರವನ್ನು ಹಿಡಿದು ಜಗಿಯುತ್ತಿರುತ್ತಾರೆ. ಅದು ಬೇಜಾರಾಗಿ ಮತ್ತೊಂದು ಚಾನಲ್‌ಗೆ ಬದಲಿಸಿದರೆ, 'ದರ್ಶನ್-ರೇಣುಕಾಸ್ವಾಮಿ' ಕಥೆಯ ಇಂಚಿಂಚೂ ಮಾಹಿತಿ ಕೊಡಲು ತೊಡಗಿರುತ್ತಾರೆ. ಅದು ಬೇಡ ಅಂತ ಮತ್ತೊಂದಕ್ಕೆ ಹೋದರೆ, ಅಲ್ಲಿ ಬಿಸಿಬಿಸಿ ವೈರಲ್ ಸುದ್ದಿ, ಆಕ್ಸಿಡೆಂಟ್‌ಗಳು, ಇರಿಟೇಟಿಂಗ್ ವಿಡಿಯೋಗಳು. ಇದರ ಸಹವಾಸವೇ ಬೇಡ ಅಂತ ಬೇರೆಡೆ ನೋಡಿದರೆ, ಯಾರದೋ ಸಿನಿಮಾದವರ ಡಿವೋರ್ಸ್ ಸುದ್ದಿ, ಮತ್ತಾವುದೋ ಕೊಲೆ, ಅದು ಹೇಗಾಯಿತು ಯಾಕಾಯಿತು ಅಂತ ಅದರ ಹಿಂದೆಬಿದ್ದು ತಲೆಚಿಟ್ಟು ಹಿಡಿಸುತ್ತಾರೆ. ಮತ್ತೊಂದು ಚಾನಲ್‌ಗೆ ಜಿಗಿದರೆ, ಅಲ್ಲಿ ಮಂತ್ರಿ-ಮಹೋದಯರು ಪ್ರತಿಪಕ್ಷವನ್ನೂ, ಪ್ರತಿಪಕ್ಷದವರು ಆಡಳಿತಾರೂಢ ಸರಕಾರ ಮತ್ತು ಶಾಸಕರನ್ನೂ ತರಾಟೆಗೆ ತೆಗೆದುಕೊಳ್ಳುವ ಮತ್ತದೇ ರೇಜಿಗೆ ಹುಟ್ಟಿಸುವ ಸಂಗತಿ. ಇದೂ ಬೇಡ ಅಂತ ಮೊದಲಿನ ಚಾನಲ್‌ಗೆ ಹೋದರೆ, ಸಾಕಷ್ಟು ಹಿಂದೆ ಶುರುವಾಗಿದ್ದ ಡಿಬೇಟ್ ಮುಂದುವರಿದಿದ್ದು ಗದ್ದಲ ತಾರಕಕ್ಕೇರಿರುತ್ತದೆ.

ನಮಗೆ ಯಾವುದೂ ಹೊಂದಾಣಿಕೆಯೇ ಆಗುವುದಿಲ್ಲ ಅಂತಾದರೆ, ನಾವು ನೋಡಬೇಕಾದ ವಾರ್ತೆ ಯಾವುದು? ಯಾವುದನ್ನು ನೋಡಬೇಕೆಂದು ನಾವು ಟಿವಿಯ ವಾರ್ತೆಯನ್ನು ಹಚ್ಚಿದ್ದು? ಎನ್ನುವುದೇ ಕೊನೆಗೂ ನಿರ್ಣಯವಾಗುವುದಿಲ್ಲ. ಹೀಗಾಗಿ ವಾರ್ತೆಯ ಸಹವಾಸವೇ ಬೇಡ ಅಂತ ಹೆಂಗಸರು ನೋಡುವ ಧಾರಾವಾಹಿಗೆ ಬಂದರೆ, ಅದು ಒಂದು ತಿಂಗಳ ಹಿಂದೊಮ್ಮೆ ಹೀಗೆಯೇ ಬೇಜಾರು ಬಂದಾಗ ಹಚ್ಚಿದಾಗ ಇದ್ದ ಅದೇ ಜಾಗದಲ್ಲೇ, ಅಲ್ಲಿಯೇ ಕಥೆ ಬಿದ್ದಿರುತ್ತದೆ. ಸೊಸೆಗೆ ಅತ್ತೆಯೋ, ಅತ್ತಿಗೆಗೆ ಮೈದುನನೋ ತೋರುತ್ತಿರುವ ಹುಳುಕು ಬುದ್ಧಿಯ ಕಥೆಯದು! ಇಡೀ ಮನೆಯಲ್ಲಿ ಯಾರಿಗೂ ಗೊತ್ತಾಗದೇ ನಡೆವ ಕರಾಮತ್ತಿನ ಅದೇ ಧಾರಾವಾಹಿ ನಡೆಯುತ್ತಲೇ ಇರುತ್ತದೆ, ಈ ಧಾರಾವಾಹಿಗಳು ಎಲ್ಲಾ ಚಾನಲ್‌ಗಳಲ್ಲೂ ಅದೇ ರೂಪದ ಕಥೆಯಿಂದ ಕೂಡಿರುತ್ತವೆ. ತಲೆ ಚಿಟ್ಟುಹಿಡಿದು ಟಿವಿ ಬಂದ್ ಮಾಡಿದರೆ, ಮನೆಯ ಮತ್ತೊಬ್ಬ ಸದಸ್ಯರು ನಾವು ಅದುವರೆಗೂ ಮಾಡಿದ ಕೆಲಸವನ್ನೇ ಪುನರಾವರ್ತನೆ ಮಾಡುತ್ತಿರುತ್ತಾರೆ!

ಇನ್ನು ಟಿವಿಯಲ್ಲಿ ಸಿನಿಮಾವನ್ನು ಹಚ್ಚೋಣವೆಂದರೆ, ಇಡೀ ಮನೆಯ ಸದಸ್ಯರು ಸಾಮೂಹಿಕವಾಗಿ ಒಂದನ್ನೇ ಮೆಚ್ಚಲಾರರು. ಅದೂ ಹಳೆಯ ಕಾಲದಂತೆ ಈಗ ಸಿನಿಮಾವನ್ನು ನೋಡುವವರೇ ವಿರಳ. ಕ್ರೀಡೆ ಅಂದರೆ ಕ್ರಿಕೆಟ್ ಮಾತ್ರ, ಅದೂ ಒನ್‌ಡೇ ಅಥವಾ ಟಿ-ಟ್ವೆಂಟಿ ಇರಬೇಕು. ಅದೂ ಲೈವ್ ಇರಬೇಕು, ಒಂದೊಮ್ಮೆ ಇರದಿದ್ದರೆ ಮತ್ತೆ ಮೊಬೈಲ್ ಹಿಡಿದು ಕುಳಿತುಕೊಳ್ಳದೇ ವಿಧಿಯಿಲ್ಲ. ಕೊನೆಗೆ, 56 ಇಂಚಿನ ದೊಡ್ಡ ಟಿವಿ ಇದ್ದುಕೊಂಡೂ, ಅದನ್ನು ಬಂದ್ ಮಾಡಿಟ್ಟು ಅದರ ಖಾಲಿಪರದೆಯನ್ನೇ ನೋಡಿದಾಗ ಸಿಗುವ ಖುಷಿಯು, ಟಿವಿಯನ್ನು ಆನ್ ಮಾಡಿಟ್ಟಾಗ ಸಿಗುವುದಿಲ್ಲ ಎಂಬ ಪರಮಸತ್ಯದ ಅರಿವಾಗುವಷ್ಟರ ಹೊತ್ತಿಗೆ ಸಾಕಷ್ಟು ಸಮಯದ ಅಪವ್ಯಯ ಆಗಿರುತ್ತದೆ! ಎಂಬಲ್ಲಿಗೆ ಆಧುನಿಕ 'ಟಿವಿ' ರಾಮಾಯಣ ಸಮಾಪ್ತಿಯಾದುದು...!

- ನಿತ್ಯಾನಂದ ಹೆಗಡೆ, ಮುರೂರು

ದತ್ತಕ ಸ್ವೀಕಾರ ಮತ್ತು ಪ್ರದಾನ: ನಂಬಿಕೆಗಳು ಮತ್ತು ನಿಬಂಧನೆಗಳು

ಕಾನೂನ್ ಸೆನ್ಸ್

ತಿಮ್ಮಣ್ಣ ಭಾಗ್ವತ್
vveditoped@gmail.com

Doctrine of Lapse- ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಯ ಹುನ್ನಾರದೊಂದಿಗೆ, ಅಂದಿನ ವೈಸರಾಯ್ ಆಗಿದ್ದ ಲಾರ್ಡ್ ಡಾಲ್‌ಹೌಸಿ ಜಾರಿಮಾಡಿದ ಈ ನಿಯಮ, ಪರಂಪರಾಗತ ದತ್ತಕ ಸ್ವೀಕಾರ ಪದ್ಧತಿಯನ್ನು ಅಸಿಂಧುಗೊಳಿಸಿದ್ದನ್ನು ಇತಿಹಾಸದಲ್ಲಿ ಓದಿದ್ದೇವೆ. ದತ್ತಕವನ್ನು ಮಾನ್ಯ ಮಾಡದ ಬ್ರಿಟಿಷರ ವಿರುದ್ಧ ಕಿತ್ತೂರಿನ ವೀರರಾಣಿ ಚನ್ನಮ್ಮ 1857ರ ಸಂಗ್ರಾಮಕ್ಕಿಂತ ಮೊದಲೇ ಸ್ವಾತಂತ್ರ್ಯ ಸಂಗ್ರಾಮ ನಡೆಸಿದ್ದು ಕನ್ನಡಿಗರಾದ ನಮಗೆಲ್ಲ ಹೆಮ್ಮೆಯ ವಿಷಯ. ಹಿಂದೂ ಧರ್ಮದಲ್ಲಿ ದತ್ತಕಕ್ಕೆ ದೀರ್ಘ ಹಿನ್ನೆಲೆಯಿದೆ. ಮನುಸ್ಮೃತಿ ಹಾಗೂ ವಾಸಿಷ್ಠ ಧರ್ಮಸೂತ್ರಗಳಲ್ಲಿ ಈ ಕುರಿತು ಅನೇಕ ನಿಬಂಧನೆಗಳಿವೆ. ಮನು ಮತ್ತು ವಾಸಿಷ್ಠ ಇಬ್ಬರೂ ಹೆಣ್ಣು ಮಗುವನ್ನು ದತ್ತಕ ಪಡೆಯುವ ಬಗ್ಗೆ ಯಾವುದೇ ಪ್ರತಿಬಂಧ ಹೇಳದಿದ್ದರೂ, ಪುತ್ರನ ದತ್ತಕ ಸ್ವೀಕಾರದ ಕುರಿತೇ ಶ್ಲೋಕಗಳು ಹೇಳಲ್ಪಟ್ಟಿವೆ. ಆದರೆ ಪುರಾತನ ಹಿಂದೂ ಸಂಸ್ಕೃತಿಯಲ್ಲಿ ಮಗಳನ್ನು ದತ್ತಕ ಪಡೆಯುವುದು ರೂಢಿಯಲ್ಲಿ ಇತ್ತು ಎನ್ನುವುದಕ್ಕೆ ಸೀತೆಯನ್ನು ಜನಕರಾಜ ದತ್ತಕ ಪಡೆದದ್ದು ಸಾಕ್ಷಿ. ಮಗಳ ಮಗನಿಗೂ ಪಿಂಡಪ್ರದಾನದ ಅರ್ಹತೆ ಬರುವುದರಿಂದ ಪುತ್ರಿಯನ್ನು ದತ್ತಕ ಪಡೆಯುವುದು ಶಾಸ್ತ್ರ ಸಮ್ಮತ (ದತ್ತಕ ಮೀಮಾಂಸ-ನಂದ ಪಂಡಿತ). ಹಿಂದೂ ಪುರಾಣಗಳಲ್ಲಿನ ಸೀತೆ, ಕರ್ಣ ಮುಂತಾದವರು ದತ್ತಕ ಪಡೆದವರಾಗಿದ್ದರು ಎಂಬುದು ಗಮನಾರ್ಹ. ಹಾಗೆ ನೋಡಿದರೆ ನಮ್ಮ ಗಣಪತಿ ಕೂಡಾ ಈಶ್ವರನ ಜೈವಿಕ ಪುತ್ರನೆನ್ನಲು ಸಾಧ್ಯವಿಲ್ಲ. ರಾಮನ ಮಗ ಕುಶನ ಕುರಿತು ಕೂಡಾ 'ದರ್ಭೆಯಿಂದ ಹುಟ್ಟಿದವ' ಎಂಬ ಕಥೆಯಿದೆ. ಶ್ಯುನಶ್ಯೇಪ ಎಂಬುವನನ್ನು ಬಲಿ ಕೊಡುವ ಸಲುವಾಗಿ ರಾಜಾ ಹರಿಶ್ಚಂದ್ರ ಕ್ರಯ ಕೊಟ್ಟು ದತ್ತು ಪಡೆದಿದ್ದನಂತೆ. ಅದು ದತ್ತಕ ಪದ್ಧತಿಯ ಘೋರ ದುರುಪಯೋಗ. ಇಸ್ಲಾಂ, ಯಹೂದಿಯಂಥ ಪಾಶ್ಚಾತ್ಯ ಧರ್ಮಗಳಲ್ಲಿ ದತ್ತಕ ಪಡೆಯುವ ಕ್ರಮ ಇರಲಿಲ್ಲ. ಆದರೆ ಪುರಾತನ ಗ್ರೀಕ್ ಮತ್ತು ರೋಮನ್ ಸಂಸ್ಕೃತಿಯಲ್ಲಿ ದತ್ತಕ ಪಡೆಯುವ ಪದ್ಧತಿ ಇದ್ದುದಕ್ಕೆ ಉಲ್ಲೇಖಗಳಿವೆ. ಕ್ರೈಸ್ತರಲ್ಲಿ ದತ್ತಕದ ಕುರಿತು ಯಾವುದೇ ಧಾರ್ಮಿಕ ಕ್ರಮ ಇಲ್ಲ. ಅವರು 1890ರ Guardian and Wards Act ಪ್ರಕಾರ ತಮ್ಮನ್ನು ಮಗುವಿನ ಪಾಲಕರೆಂದು ನೇಮಿಸಿಕೊಳ್ಳಬಹುದು. ಆದರೆ ಅಂಥ ಮಗುವಿಗೆ ವಾರಸುದಾರಿಕೆ ಹಕ್ಕು ತಾನೇತಾನಾಗಿ ಬರುವುದಿಲ್ಲ. ವಿಲ್ ಮಾಡಬಹುದಷ್ಟೆ.

ದತ್ತಕ ಪಡೆಯುವುದೆಂದರೆ ಬೇರೆ ತಂದೆ-ತಾಯಿಯರಿಗೆ ಹುಟ್ಟಿದ ಮಗುವೊಂದನ್ನು ತಮ್ಮ ಮಗುವನ್ನಾಗಿ ಸ್ವೀಕರಿಸಿ ತಂದೆ/ತಾಯಿ ಮತ್ತು ಮಗುವಿನ ಸಂಬಂಧ ಕಲ್ಪಿಸಿ ಆ ಸಂಬಂಧವನ್ನು ಕಾನೂನುಬದ್ಧಗೊಳಿಸುವ ಪ್ರಕ್ರಿಯೆ. ಹಿಂದೂಗಳಲ್ಲಿ ದತ್ತಕದ ಮುಖ್ಯ ಉದ್ದೇಶ ಸಂತಾನವಿಲ್ಲದ ಸಂದರ್ಭದಲ್ಲಿ ಧಾರ್ಮಿಕ ಕ್ರಿಯೆಯ ಮೂಲಕ ದತ್ತುಪುತ್ರನನ್ನು ಪಡೆದು ಆತ ನೀಡುವ ತರ್ಪಣವೇ ಮುಂತಾದವುಗಳಿಂದ ಸದ್ಗತಿ ಪಡೆಯುವುದಾಗಿದೆ. ವಾರಸುದಾರರನ್ನು ಪಡೆಯುವುದು ಹಾಗೂ ವೃದ್ಧಾಪ್ಯದಲ್ಲಿ ತಮ್ಮ ಆರೈಕೆಯ ಉದ್ದೇಶ ಕೂಡಾ ಅಲ್ಲಿರುವುದು ಸಹಜ. ದತ್ತಕ ಪಡೆದ ಮಗ ತನ್ನ ಜೈವಿಕ ತಂದೆಯ ಕುಟುಂಬದ ಹೆಸರು (ಅಡ್ಡ ಹೆಸರು) ಮತ್ತು ಗೋತ್ರವನ್ನಲ್ಲದೆ ಆಸ್ತಿಯ ಹಕ್ಕನ್ನೂ ಕಳೆದುಕೊಳ್ಳುತ್ತಾನೆ ಮತ್ತು ದತ್ತಕ ತಂದೆಯ ಗೋತ್ರ, ಆಸ್ತಿಯ ಹಕ್ಕು ಮತ್ತು ದತ್ತಕ ತಂದೆ, ತಾಯಿ ಹಾಗೂ ಆತನ ಪಿತೃಗಳಿಗೆ ಪಿಂಡ ಪ್ರದಾನ ಮಾಡುವ ಅರ್ಹತೆ ಪಡೆಯುತ್ತಾನೆ.

ಭಾರತವು ಸ್ವಾತಂತ್ರ್ಯ ಪಡೆದ ನಂತರ ವಿವಿಧ ಪದ್ಧತಿಗಳನ್ನು ಕ್ರೋಡೀಕರಿಸಿ 1956ರ ಹಿಂದೂ ದತ್ತಕ ಮತ್ತು ಜೀವನಾಂಶ ಕಾಯಿದೆಯನ್ನು ಜಾರಿಗೆ ತರಲಾಯಿತು. ಆನಂತರ ಕಾನೂನುಗಳಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವ ಮಕ್ಕಳ ರಕ್ಷಣೆ, ಕಾಳಜಿ ಮತ್ತು ಪುನರ್ವಸತಿಯ ಜತೆಗೆ ಅನಾಥ ಮಕ್ಕಳ ದುರುಪಯೋಗವನ್ನು ತಡೆಯುವ ಉದ್ದೇಶದಿಂದ ಬಾಲಾಪರಾಧಿ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಆರೈಕೆ) ಕಾಯಿದೆ (Juvenile Justice Act) 2015ನ್ನು ಜಾರಿಗೆ ತರಲಾಯಿತು.

ಹಿಂದೂ ದತ್ತಕ ಮತ್ತು ಜೀವನಾಂಶ ಕಾಯಿದೆಯ 2ನೇ ಅಧ್ಯಾಯವು ದತ್ತಕದ ನಿಯಮಗಳ ಕುರಿತಾಗಿದೆ. ದತ್ತಕ ನೀಡುವ ಅಥವಾ ಪಡೆಯುವ ಪುರುಷ ಅಥವಾ ಮಹಿಳೆ ಕಾನೂನಿನ ಪ್ರಕಾರ ವಯಸ್ಕರಾಗಿರಬೇಕು, ಮಾನಸಿಕ ಅಸ್ವಸ್ಥತೆಯಂಥ ಅನರ್ಹತೆ ಇರಬಾರದು. ದತ್ತಕ ನೀಡಲ್ಪಡುವ ಮಗ ಅಥವಾ ಮಗಳಿಗೆ 15 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರಬಾರದು. ಮದುವೆಯಾಗಿರಬಾರದು. ಯಾವುದೇ ಪುರುಷನು ಮಗಳನ್ನು ದತ್ತಕ ಪಡೆಯುವುದಾದರೆ ಅಂಥ ಹೆಣ್ಣುಮಗು ಆತನಿಗಿಂತ ಕನಿಷ್ಠ 21ವರ್ಷ ಚಿಕ್ಕವಳಾಗಿರಬೇಕು ಮತ್ತು ಮಹಿಳೆಯು ದತ್ತಕ ಪಡೆಯುವ ಮಗನು ಅವಳಿಗಿಂತ ಕನಿಷ್ಠ 21ವರ್ಷ ಚಿಕ್ಕವನಾಗಿರಬೇಕು. ದತ್ತಕ ಹೋಮ ಕಡ್ಡಾಯವಲ್ಲದಿದ್ದರೂ, ಹಡೆದ ಪಾಲಕರು ಮಗುವನ್ನು ದತ್ತಕವಾಗಿ ನೀಡುವ ಭೌತಿಕ ಪ್ರಕ್ರಿಯೆ ಕಡ್ಡಾಯ. ಕಾಯಿದೆಯ 11ನೇ ಕಲಮಿನ ಪ್ರಕಾರ ಯಾವುದೇ ಹಿಂದೂ ಪುರುಷ ಅಥವಾ ಮಹಿಳೆ ಒಬ್ಬ ಮಗನನ್ನು ದತ್ತಕ ಪಡೆಯುವುದಾದಲ್ಲಿ ಅವರಿಗೆ ಇನ್ನೊಬ್ಬ ಜೈವಿಕ ಅಥವಾ ದತ್ತಕ ಮಗ ಅಥವಾ ಮೊಮ್ಮಗ/ಮರಿಮಗ (ಮಗನ ಮಗ/ಅವನ ಮಗ) ಜೀವಿತ ಇರಬಾರದು. ಅಂತೆಯೇ ಮಗಳನ್ನು ದತ್ತಕ ಪಡೆಯುವುದಾದಲ್ಲಿ ಇನ್ನೊಬ್ಬಳು ಜೈವಿಕ ಅಥವಾ ದತ್ತಕ ಮಗಳು ಅಥವಾ ಮೊಮ್ಮಗಳು/ಮರಿಮಗಳು (ಮಗನ ಸಂತತಿಯಿಂದ) ಇರಬಾರದು. ದತ್ತಕ ಪಡೆಯುವ ಗಂಡ ಅಥವಾ ಹೆಂಡತಿಯರ ಪೈಕಿ ಯಾರೊಬ್ಬರೂ ದತ್ತಕ ಪಡೆಯುವುದಿದ್ದರೂ ಇನ್ನೊಬ್ಬರ ಒಪ್ಪಿಗೆ ಕಡ್ಡಾಯ. ಮಗ ಅಥವಾ ಮಗಳನ್ನು ದತ್ತಕಕ್ಕೆ ಕೊಡಲು ತಾಯಿ ಮತ್ತು ತಂದೆ ಇಬ್ಬರೂ ಒಪ್ಪಬೇಕು. ತಾಯಿ-ತಂದೆ ಇಬ್ಬರೂ ಜೀವಂತ ಇಲ್ಲದಿದ್ದರೆ ಅಥವಾ ಮಾನಸಿಕವಾಗಿ ಅಸ್ವಸ್ಥರಾಗಿದ್ದರೆ, ಅಥವಾ ತಂದೆ-ತಾಯಿಯರು ಮಗುವನ್ನು ಪರಿತ್ಯಜಿಸಿದ್ದರೆ ಅಥವಾ ತಂದೆ-ತಾಯಿ ಯಾರೆಂದು ತಿಳಿದಿರದಿದ್ದರೆ ಕೋರ್ಟಿನ ಪೂರ್ವಾನುಮತಿಯ ಮೇರೆಗೆ ಅಧಿಕೃತ ಪಾಲಕರು (Guardian) ದತ್ತಕ ನೀಡಬಹುದು ಅಥವಾ ತಾವೇ ದತ್ತಕ ಪಡೆಯಬಹುದು. ಮಲತಾಯಿ/ತಂದೆಗೆ ಅಥವಾ ದತ್ತಕ ಪಾಲಕರಿಗೆ ಮಗುವನ್ನು ದತ್ತಕ ಕೊಡುವ ಅಧಿಕಾರವಿಲ್ಲ (ಧನರಾಜ ವರ್ಸಸ್ ಸೂರಜ್ ಬಾಯಿ ಪ್ರಕರಣ- ಸುಪ್ರೀಂ ಕೋರ್ಟ್).

ದತ್ತಕ ಪಡೆದ ಮಗು ಎಲ್ಲಾ ಉದ್ದೇಶಗಳಿಗೆ ದತ್ತಕ ತಂದೆ-ತಾಯಿಯರ ಮಗ ಅಥವಾ ಮಗಳೆಂದು ಪರಿಗಣಿಸಲ್ಪಡುತ್ತಾನೆ/ಳೆ ಮತ್ತು ತನ್ನನ್ನು ಹಡೆದ ತಂದೆ-ತಾಯಿಯರ ಹಾಗೂ ಆ ಕುಟುಂಬದ ಸಂಬಂಧಗಳನ್ನು ಹಾಗೂ ಆಸ್ತಿ ಹಕ್ಕುಗಳನ್ನು ಕಳೆದುಕೊಳ್ಳುತ್ತಾನೆ/ಳೆ. ಆದರೂ ಆ ಕುಟುಂಬಕ್ಕೆ ಸಂಬಂಧಿಸಿ ನಿಷೇಧಿತ ಸಂಬಂಧಗಳಲ್ಲಿ ವಿವಾಹವಾಗಲು ಇರುವ ನಿಷೇಧ ಮುಂದುವರಿಯುತ್ತದೆ. ದತ್ತಕ ತಂದೆಯ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ದತ್ತಕ ಪಡೆದ ಮಗುವಿಗೆ ದತ್ತಕದ ತಾರೀಕಿನಿಂದ ಹಿಸ್ಸೆದಾರ ಹಕ್ಕು ಪ್ರಾಪ್ತವಾಗುತ್ತದೆ ಮತ್ತು ಆತನು ಜೈವಿಕ ಮಗನಂತೆ ಎಲ್ಲ ಹಕ್ಕುಗಳನ್ನೂ ಪಡೆಯುತ್ತಾನೆ. ಕಾಯಿದೆಬದ್ಧವಾಗಿ ನಡೆದ ದತ್ತಕವನ್ನು ಯಾವುದೇ ಕಾರಣಕ್ಕೆ ರದ್ದುಪಡಿಸಲಾಗುವುದಿಲ್ಲ. ಈ ಕಾಯಿದೆಯ 17ನೇ ಕಲಮಿನ ಪ್ರಕಾರ ದತ್ತಕದ ಕುರಿತಂತೆ ಯಾರಿಗೂ ಯಾವುದೇ ರೀತಿಯ ಹಣ ಅಥವಾ ಪ್ರತಿಫಲ ನೀಡುವುದು ನಿಷಿದ್ಧ ಮತ್ತು ಅದು ಶಿಕ್ಷಾರ್ಹ ಅಪರಾಧವಾಗಿರುತ್ತದೆ.

ದತ್ತಕ ಪತ್ರ (Adoption Deed): ಜೈವಿಕ ಮತ್ತು ದತ್ತಕ ತಂದೆ-ತಾಯಿಯರ ನಡುವೆ ನಡೆಯುವ ದತ್ತಕ ಪ್ರಕ್ರಿಯೆಯ ದಾಖಲೆಯನ್ನು ದತ್ತಕ ಪತ್ರವೆನ್ನಬಹುದು. ಅದನ್ನು ಸೂಕ್ತ ಸ್ಟಾಂಪ್ ಶುಲ್ಕ ಭರಿಸಿ ನೋಂದಾಯಿಸಬೇಕು. ಅದು ಕಡ್ಡಾಯವಲ್ಲದಿದ್ದರೂ ಆಪೇಕ್ಷಣೀಯ. ಅಂತೆಯೇ ನ್ಯಾಯಾಲಯದಿಂದ ದತ್ತಕ ಆದೇಶ ಪಡೆಯುವುದೂ ಸೂಕ್ತ.

Juvenile Justice Act 2015: ಈ ಕಾಯಿದೆಯು ಮುಖ್ಯವಾಗಿ ಬಾಲಾಪರಾಧಿಗಳು ಮತ್ತು ಇತರ ಪರಿತ್ಯಕ್ತ ಮಕ್ಕಳ ಪಾಲನೆ ಮತ್ತು ರಕ್ಷಣೆಗೆ ಸಂಬಂಧಿಸಿದ್ದಾದರೂ ದತ್ತಕದ ಕುರಿತೂ ನಿಬಂಧನೆಗಳನ್ನು ವಿಧಿಸುತ್ತದೆ. 8ನೇ ಅಧ್ಯಾಯದ 56(3) ಕಲಮಿನ ಪ್ರಕಾರ ಈ ಕಾಯಿದೆಯು 1956ರ ಹಿಂದೂ ದತ್ತಕ ಕಾಯಿದೆಯನ್ವಯ ನಡೆದ ದತ್ತಕಗಳಿಗೆ ಅನ್ವಯವಾಗುವುದಿಲ್ಲ. ಆದರೆ ಹಿಂದೂಗಳೂ ಸೇರಿ ಎಲ್ಲರೂ ಈ ಕಾಯಿದೆಯನ್ವಯ ದತ್ತಕ ಪಡೆಯಬಹುದು. CARA ಅಂದರೆ ''ಕೇಂದ್ರೀಯ ದತ್ತಕ ಸಂಪನ್ಮೂಲ ಪ್ರಾಧಿಕಾರ'' ಜಾರಿಮಾಡಿದ ನಿಯಮಾವಳಿಗಳ ಪ್ರಕಾರ ಈ ಕಾಯಿದೆಯನ್ವಯ ನಡೆಯುವ ದತ್ತಕಗಳಲ್ಲಿ CARINGS ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿ ತಮ್ಮ ಸರದಿ ಬರುವವರೆಗೆ ಕಾಯಬೇಕು. ಇದು ಸಂಬಂಧಿಕರಿಂದ ಅಥವಾ ವೈಯಕ್ತಿಕ ಮೂಲಗಳಿಂದ ದತ್ತಕ ಪಡೆಯಲೂ ಅನ್ವಯವಾಗುತ್ತದೆ. ಸೂಕ್ತ ಮಗುವಿನ ಆಯ್ಕೆಗಾಗಿ ಶಿಶು ಹೊಂದಾಣಿಕೆ ಎಂಬ ವ್ಯವಸ್ಥೆ ಕೂಡಾ ಇದೆ. ಅಂಥ ಅರ್ಜಿ ಬಂದಾಗ ಸರಕಾರದಿಂದ ನಿಯುಕ್ತವಾದ ವಿಶೇಷ ದತ್ತಕ ಸಂಸ್ಥೆಗಳಿಂದ ಕುಟುಂಬ ಸರ್ವೇಕ್ಷಣೆ ಹಾಗೂ ಶಿಶುವಿನ ಅಧ್ಯಯನ ನಡೆಸಿ ಸೂಕ್ತವೆಂದು ಕಂಡುಬಂದ ನಂತರ, ಮಗುವನ್ನು ದತ್ತಕ ಪೂರ್ವ ಕಾಳಜಿ ಸಲುವಾಗಿ ಉದ್ದೇಶಿತ ದತ್ತಕ ಪಾಲಕರಿಗೆ ನೀಡಲಾಗುವುದು. ಪಾಲಕರ ಒಪ್ಪಿಗೆ ಪಡೆದು ದತ್ತಕದ ಕುರಿತು ಆದೇಶ ಪಡೆಯಲು ಅಧಿಕೃತ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗುವುದು. ನ್ಯಾಯಾಲಯಗಳು ದತ್ತಕ ಆದೇಶ (Adoption Order) ನೀಡುವಾಗ ಮುಖ್ಯವಾಗಿ ಶಿಶುವಿನ ಹಿತಾಸಕ್ತಿ, ಉದ್ದೇಶಿತ ಪಾಲಕರಿಗೆ ದತ್ತಕ ಪಡೆಯಲು ಇರುವ ಅರ್ಹತೆ, ನಿಜವಾದ ಆಸಕ್ತಿ, ಆರ್ಥಿಕ ಮತ್ತು ಕೌಟುಂಬಿಕ ಹಿನ್ನೆಲೆಗಳನ್ನು ಗಮನಿಸುತ್ತವೆ. ಕೋರ್ಟಿನ ಆದೇಶ ಬಂದ ನಂತರ ಅವಶ್ಯಕ ಕಾಗದ ಪತ್ರಗಳ ಪ್ರಕ್ರಿಯೆ ಮುಗಿಸಿ ಮಗುವನ್ನು ದತ್ತಕ ನೀಡಲಾಗುತ್ತದೆ. ಕೋರ್ಟಿನ ಆದೇಶದ ಮೂಲಕ ನಡೆಯುವ ದತ್ತಕಗಳು ಸುರಕ್ಷಿತ ಮತ್ತು ಯಾವುದೇ ಕಾನೂನು ಸಮಸ್ಯೆಗಳುಂಟಾಗುವುದಿಲ್ಲ.

ವಿದೇಶದಲ್ಲಿರುವ ದಂಪತಿಗಳು ಅಥವಾ ವ್ಯಕ್ತಿಗಳು ಭಾರತದಿಂದ ದತ್ತಕ ಪಡೆಯಲು ಈ ಕಾಯಿದೆಯಲ್ಲಿಯೇ ಪ್ರತ್ಯೇಕ ಕಾನೂನು ವ್ಯವಸ್ಥೆ ಇದೆ. ಅದರ ವಿವರ CARINGS ವೆಬ್ ಸೈಟ್‌ನಲ್ಲಿ ಲಭ್ಯವಿದೆ.

ವಿಚ್ಛೇದಿತ ಪ್ರಕರಣಗಳಲ್ಲಿ ದತ್ತಕದ ನಿಯಮಗಳು: 1956ರ ದತ್ತಕ ಕಾಯಿದೆ ಮತ್ತು 2015ರ Juvenile Justice Actಎರಡರಲ್ಲಿಯೂ ವಿಚ್ಛೇದಿತ ಮಹಿಳೆ ಅಥವಾ ಪುರುಷರಿಗೆ ದತ್ತಕ ಪಡೆಯುವ ಅಧಿಕಾರವಿದೆ. ಆದರೆ ವಿಚ್ಛೇದಿತ ದಂಪತಿಗಳಿಗೆ ಮಗುವಿದ್ದಲ್ಲಿ ಆ ಮಗುವಿನ ಸುರಕ್ಷೆಯ ವಿಷಯ ಕೋರ್ಟಿನಲ್ಲಿ ತೀರ್ಮಾನವಾಗದೆ ದತ್ತಕ ನೀಡುವುದು ಸಾಧ್ಯವಿಲ್ಲ. ಸುರಕ್ಷೆಯ (Custody) ವಿಷಯ ತೀರ್ಮಾನವಾದರೂ ದತ್ತಕ ಕೊಡಲು ಇಬ್ಬರ ಒಪ್ಪಿಗೆಯೂ ಅಗತ್ಯ. ಉದಾಹರಣೆಗೆ, ವಿಚ್ಛೇದಿತ ಮಹಿಳೆಯೊಬ್ಬಳಿಗೆ ವಿಚ್ಛೇದಿತ ಗಂಡನಿಂದ ಹುಟ್ಟಿದ ಮಗುವಿದ್ದ ಸಂದರ್ಭದಲ್ಲಿ ಅವಳು ಪುನರ್ವಿವಾಹವಾದ ಪತಿಯು ಅಂಥ ಮಗುವಿನ ದತ್ತಕ ತಂದೆಯೆಂದು ಪರಿಗಣಿಸಲು ವಿಚ್ಛೇದಿತ ಪತಿಯ ಒಪ್ಪಿಗೆಯೂ ಅಗತ್ಯ (ಅಮ್ಮು ಅಜಿತ್ ವರ್ಸಸ್ CARA ಪ್ರಕರಣ- ಕೇರಳ ಹೈಕೋರ್ಟ್). ಇದು ಮಗುವಿನ ಸುರಕ್ಷೆಯನ್ನು ಕೋರ್ಟು ತಾಯಿಗೆ ಒದಗಿಸಿದ್ದರೂ ಅಗತ್ಯ.

ಒಂದುವೇಳೆ ವಿಧವೆಯೊಬ್ಬಳಿಗೆ ಮಗುವಿದ್ದು ಆಕೆ ಪುನರ್ವಿವಾಹವಾದಾಗ ಅಂಥ ಮಗುವಿಗೆ ಪುನರ್ವಿವಾಹದ ಪತಿ ದತ್ತಕ ತಂದೆಯಾಗಲು ಆಕೆಯ ಒಪ್ಪಿಗೆ ಪಡೆದು ಆತ ಮಗುವನ್ನು ದತ್ತಕ ಪಡೆಯಬೇಕು ಮತ್ತು ಜನ್ಮ ದಾಖಲೆಗಳಲ್ಲಿ ಅಗತ್ಯ ತಿದ್ದುಪಡಿ ಮಾಡಿಸಬೇಕು. ಹೀಗೆ ಮಾಡಿದಾಗ ಮಾತ್ರ ಆ ಮಗುವಿಗೆ ದತ್ತಕ ತಂದೆಯ ಆಸ್ತಿ ಹಕ್ಕು ದೊರೆಯುತ್ತದೆ. ಅಂಥ ಪ್ರಕರಣಗಳಲ್ಲಿ ನ್ಯಾಯಾಲಯದಿಂದ ದತ್ತಕ ಆದೇಶ ಪಡೆಯುವುದು ಅಗತ್ಯ.

ಮಕ್ಕಳಿಲ್ಲ ಎಂಬುದು ಭಾವನಾತ್ಮಕ ವಿಷಯವಾದರೂ ಮಗುವನ್ನು ದತ್ತಕವಾಗಿ ಪಡೆಯುವಾಗ ಸೂಕ್ತ ಆಯ್ಕೆ ಮತ್ತು ಕಾನೂನಿನ ಅಂಶಗಳನ್ನು ಜಾಗರೂಕತೆಯಿಂದ ಪಾಲಿಸುವುದು ಅತ್ಯಗತ್ಯ. ಯಾವುದೇ ಅನಧಿಕೃತ ಸಂಸ್ಥೆಗಳು ಮತ್ತು ಏಜೆನ್ಸಿಗಳ ಮೋಸದ ಜಾಲಕ್ಕೂ ಬೀಳದಂತೆ ಎಚ್ಚರಿಕೆ ವಹಿಸಬೇಕು. CARINGS ಪೋರ್ಟಲ್ ಮತ್ತು CARAದ ನಿಯಮಾವಳಿಗಳನ್ನು ಪಾಲಿಸಿ ದತ್ತಕ ಪಡೆದುಕೊಂಡರೆ ಯಾವುದೇ ಸಮಸ್ಯೆಗಳಾಗುವುದಿಲ್ಲ.

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಭಟ್ಟರ್ ಸ್ಕಾಚ್

- **ಸಂಜಯನಗರ ಕಿಟ್ಟಿ, ಬೆಂಗಳೂರು**
ಭಟ್ರೇ, 'ಗುಡ್ಡ ಅಗೆದು ಇಲಿ ಹಿಡಿದರು' ಅಂದ್ರೆ ಏನು?
– **ಇಲಿ ಎಲ್ಲಿ ಸಿಕ್ಕಿತು ಮೊದಲು ಹೇಳು!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಏನೂ ಕೆಲಸ ಇಲ್ಲ ಅಂದ್ರೆ ಏನ್ ಮಾಡ್ಬೇಕು?
– **ಏನಾದರೂ ಸಿಗುತ್ತಾ ಅಂತ ಗುಂಡಿ ಅಗೆಯಬಾರದು!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ರಾಜಣ್ಣ ಮಾಡಿದ ಅಪರಾಧವಾದರೂ ಏನು?
– **ಸತ್ಯವನ್ನು ಅಷ್ಟು ನೇರಾನೇರ ಹೇಳಬಾರದಿತ್ತು!**

- **ರಾಜೇಂದ್ರ ಪಾಟೀಲ, ವಿಜಯಪುರ**
ಭಟ್ರೇ, ಎಸ್ಐಟಿಗೆ ವಹಿಸಿದ ಜವಾಬ್ದಾರಿ ಏನು?
– **ಹೊಂಡ ತೋಡುವುದು ಮತ್ತು ಮುಚ್ಚುವುದು!**

- **ವೀರೇಶ ಸುಣಗಾರ, ರಾಯಚೂರು**
ಭಟ್ರೇ, ಆತ ಸುಳ್ಳು ಹೇಳುತ್ತಿದ್ದಾನೆ ಅಂತ ಗೊತ್ತಿದ್ದರೂ ಸರಕಾರ ಆತ ಹೇಳಿದಂತೆ ನಡೆಯುತ್ತಿರುವುದೇಕೆ?
– **ಈ ಪ್ರಶ್ನೆಯನ್ನು ನ್ಯಾಯಮೂರ್ತಿ ಗೋಪಾಲ ಗೌಡರಿಗೆ ಫಾರ್ವರ್ಡ್ ಮಾಡಲಾಗಿದೆ!**

- **ವೆಂಕಟೇಶ ನಾಯಕ, ಸಿದ್ದಾಪುರ**
ಭಟ್ರೇ, ಧರ್ಮಸ್ಥಳದ ಬಗ್ಗೆ ಮಾತಾಡದವರು ಯಾರಾದ್ರೂ ಇದ್ದಾರಾ?
– **ಮಾತಾಡದವನೇ ಪಾಪಿ ಅಂತೀಯಾ?!**

- **ರಾಮಕೃಷ್ಣ ಸಿ.ಗೌಡ, ತುಮಕೂರು**
ಭಟ್ರೇ, ಧರ್ಮಸ್ಥಳ ತಲೆಬುರುಡೆ ವಿವಾದದ ಬಗ್ಗೆ ಸಾಹಿತಿಗಳು, ಕವಿಗಳು ಮಾತಾಡುತ್ತಿಲ್ಲವಲ್ಲ?
– **ಅವರಿಗೆ ಮಾತು ಮರೆತುಹೋಗಿದೆಯಂತೆ!**

- **ಮಮತಾ ಮಣ್ಣೂರು, ಹುಬ್ಬಳ್ಳಿ**
ಭಟ್ರೇ, ಕಾಂಗ್ರೆಸ್ ಮತ್ತು ಬಿಜೆಪಿ ಒಂದು ವಿಷಯದ ಬಗ್ಗೆ ಒಂದೇ ನಿಲುವು ತಾಳಿದ್ದುಂಟಾ?
– **ನೋಡ್ತಾ ಇದ್ದೀಯಲ್ಲ... ಧರ್ಮಸ್ಥಳ ವಿಷಯದಲ್ಲಿ ಮಾತ್ರ ಒಬ್ಬರೂ ಒಂದೇ!**

- **ನಾರಾಯಣ ಮಧ್ಯಸ್ಥ, ಬೆಂಗಳೂರು**
ಭಟ್ರೇ, ಹುಡುಗಿಯ ಪ್ರೀತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾ?
– **ಸದಾ ಬಫರಿಂಗ್ ಅಂತಾನೆ ಬರುತ್ತೆ!**

- **ವಿನೋದ ಶಾಸ್ತ್ರಿ, ಹೊನ್ನಾವರ**
ಭಟ್ರೇ, ಕೆಲವರು ಮಾತಾಡಿದರೆ ಸುಟ್ಟು ಹೋಗುವಂತಿದ್ದರೆ?
– **ಆಗ ಎಲ್ಲರೂ ತಮ್ಮ ಹೆಸರಿನ ಮೊದಲು 'ಅಗ್ನಿ' ಅಂತ ಇಟ್ಟುಕೊಳ್ತಾ ಇದ್ದರು!**

ಅಡುಗೆಮನೆಯಿಂದ ಅಡಿಯಿಟ್ಟ ಅಡೀಡಸ್

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ನಿಮಗೆ ಖುಷಿ ಖರೀದಿಸಲು ಸಾಧ್ಯವಿಲ್ಲದಿದ್ದರೆ ಏನಂತೆ? ಖುಷಿ ಕೊಡುವ ಪಾದರಕ್ಷೆ ಖರೀದಿಸಬಹುದಲ್ಲ?' ಎಂಬ ಮಾತಿದೆ. ನಿಮ್ಮ ಪಾದರಕ್ಷೆಯ ಆಯ್ಕೆ ನಿಮಗೇ ಬಿಟ್ಟಿದ್ದು. ನನ್ನ ಕಳಕಳಿಯ ವಿನಂತಿ ಒಂದೇ, ನೀವು ಧರಿಸುವ ಉಡುಗೆಗೆ ತಕ್ಕಂತೆ ಪಾದರಕ್ಷೆ ಧರಿಸಿ. ಕೋಟು, ಪ್ಯಾಂಟಿನ ಮೇಲೆ ಹವಾಯಿ ಚಪ್ಪಲ್ ತೊಡುವುದಾಗಲಿ, ಶೇರವಾನಿ, ಕುರ್ತಾ ಪೈಜಾಮಾ ಮೇಲೆ ಕ್ಯಾನ್‌ವಾಶ್ ಶೂ ತೊಡುವುದಾಗಲಿ ಮಾಡಬೇಡಿ. ಯಾವುದಕ್ಕೂ ನಿಮ್ಮ ಪಾದರಕ್ಷೆ ನಿಮ್ಮ ಕಾಲನ್ನು ರಕ್ಷಿಸುವಂತಿರಲಿ, ಮುದ ನೀಡುವಂತಿರಲಿ, ಹಿತವಾಗಿರಲಿ.

'ADIDAS' ಹೆಸರು ಕೇಳದವರು ಬಹಳ ಕಡಿಮೆ. ಅದರಲ್ಲೂ ಕ್ರೀಡಾ ವಲಯದಲ್ಲಿ ಇದು ಜನಪ್ರಿಯ ಹೆಸರು. ಮೂಲತಃ ಪಾದರಕ್ಷೆಗಳನ್ನು ತಯಾರಿಸುತ್ತಿದ್ದ ಈ ಸಂಸ್ಥೆ ಇತ್ತೀಚಿನ ವರ್ಷಗಳಲ್ಲಿ ಕ್ರೀಡಾಪಟುಗಳಿಗೆ ಬೇಕಾಗುವ ಉಡುಪುಗಳನ್ನೂ, ಕ್ರೀಡಾ ಸಾಮಗ್ರಿಗಳನ್ನೂ ತಯಾರಿಸುವುದಷ್ಟೇ ಅಲ್ಲ, ಅವು ಜನಪ್ರಿಯವೂ ಆಗಿವೆ. ರಷ್ಯಾ, ಉತ್ತರ ಕೊರಿಯಾ, ಅಫ್ಘಾನಿಸ್ತಾನ, ದಕ್ಷಿಣ ಸುಡಾನ್, ಪ್ಯಾಲೆಸ್ತೀನ್, ಟರ್ಕ್‌ಮನಿಸ್ತಾನ್ ಮತ್ತು ಚಾಡ್ ದೇಶಗಳನ್ನು ಹೊರತುಪಡಿಸಿದರೆ, ಇಂದು ವಿಶ್ವದ ಎಲ್ಲ ದೇಶಗಳಲ್ಲೂ ತನ್ನ ಅಸ್ತಿತ್ವ ಸ್ಥಾಪಿಸಿಕೊಂಡಿರುವ ಸಂಸ್ಥೆ ಇದು. ಸುಮಾರು 60,000 ಜನರಿಗೆ ಉದ್ಯೋಗಾವಕಾಶವನ್ನೂ ಒದಗಿಸಿದೆ.

ಸುಮಾರು ಒಂದು ವರ್ಷದ ಹಿಂದೆ ಸ್ನೇಹಿತರೊಬ್ಬರ ಜತೆ ಪಾದರಕ್ಷೆಯ ಕುರಿತು ಮಾತಾಡುತ್ತಿರುವಾಗ 'ಅದಿದಾಸ್' ಯಾನೆ 'ಅಡೀಡಸ್' ವಿಷಯ ಚರ್ಚೆಗೆ ಬಂತು. ನಿಜವಾಗಿ ಆ ಸಂಸ್ಥೆಯ ಹುಟ್ಟು, ಸಂಘರ್ಷ, ಬೆಳವಣಿಗೆ ಇತ್ಯಾದಿಗಳ ಕುರಿತು ಹೆಚ್ಚಿನ ಚರ್ಚೆಯಾಗಬೇಕಿತ್ತು. ಆದರೆ ಅಡೀಡಸ್ ಎಂಬ ಹೆಸರು ಹೇಗೆ ಬಂತು? ಅದರ ಸರಿಯಾದ ಉಚ್ಚಾರ ಹೇಗೆ? ಅದರ ಸರಿಯಾದ ಲೋಗೋ ಯಾವುದು? ಎನ್ನುವುದರ ಕುರಿತಾಗಿಯೇ ಹೆಚ್ಚು ಚರ್ಚೆಯಾಯಿತು.

ನನ್ನ ಸ್ನೇಹಿತನ ಪ್ರಕಾರ, 'ADIDAS' ಎನ್ನುವುದು 'All Day I Dream About Sports' ಎನ್ನುವ ಸಾಲಿನಲ್ಲಿ ಬರುವ ಎಲ್ಲ ಮೊದಲ ಅಕ್ಷರಗಳನ್ನು ಸೇರಿಸಿ ಮಾಡಿದ ಪದ. ಬಹಳ ವರ್ಷಗಳವರೆಗೆ ನಾನೂ ಅದೇ ಸರಿ ಎಂದು ನಂಬಿದ್ದೆ. ಆ ರೀತಿಯ ಒಂದು ಟ್ರೆಂಡ್ ಇದ್ದದ್ದು ಸುಳ್ಳಲ್ಲ. ಆದರೆ ಎಲ್ಲ ವಿಷಯದಲ್ಲೂ ಅದು ಸತ್ಯವೂ ಅಲ್ಲ. ಇತ್ತೀಚೆಗೆ 'NEWS' ಎನ್ನುವುದು 'North-East-West-South' ನಿಂದ ಬಂದದ್ದು, ನ್ಯೂಸ್ ಅಥವಾ ಸುದ್ದಿ, ಭೂಮಿಯ ನಾಲ್ಕೂ ದಿಕ್ಕಿನ ವಿಷಯವನ್ನು ತಿಳಿಸುತ್ತದೆ, ಅದಕ್ಕಾಗಿ ಈ ಹೆಸರು ಎಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿತ್ತು. ಇದು ಎಷ್ಟು ಹುಸಿಯೋ, ಅಡೀಡಸ್ ಹೆಸರಿನ ಹಿಂದಿನ ತರ್ಕವೂ ಅಷ್ಟೇ ಮಿಥ್ಯ.

ಇನ್ನು ಲೋಗೋ ವಿಷಯ. ಅಡೀಡಸ್ ಸಂಸ್ಥೆಯ ಮೂರು ವಿಧದ ಲೋಗೋ ಅಥವಾ ಲಾಂಛನವನ್ನು ನೀವು ನೋಡಿರುತ್ತೀರಿ. ಮೂರು ದಳದ ಹೂವಿನ ಆಕಾರದ ನಡುವೆ ಮೂರು ಗೆರೆಗಳು, ತ್ರಿಕೋನಾಕಾರದಲ್ಲಿ ಮೂರು ಗೆರೆಗಳು ಮತ್ತು ವೃತ್ತಾಕಾರದ ಮಧ್ಯದಲ್ಲಿ ಮೂರು ಗೆರೆಗಳು. ಈ ಮೂರೂ ಸಂಸ್ಥೆಯ ಅಧಿಕೃತ ಲಾಂಛನಗಳೇ. ಕಾಲಕ್ಕೆ ತಕ್ಕಂತೆ ಅವು ಬದಲಾದವು ಅಷ್ಟೇ. ಹಾಗೆಯೇ ಅದರ ಉಚ್ಚಾರ. ಮೂಲತಃ ಇದು ಜರ್ಮನ್ ಪದ. ಯಾರು ಮಾಡಿದರೋ, ಹೇಗಾಯಿತೋ ಗೊತ್ತಿಲ್ಲ, ಜರ್ಮನ್ ಭಾಷೆಯ 'ಅದಿದಾಸ್' ಕನ್ನಡಕ್ಕೆ ಬರುವಾಗ 'ಅಡೀಡಸ್' ಆಗಿತ್ತು. 'ಅದೋಲ್ಫ್ ಹಿಟ್ಲ' (ಹಿಟ್ಲರ್‌ನ 'ರ್' ಇಲ್ಲಿ ಗೌಣ) ಕನ್ನಡಕ್ಕೆ ಬರುವಾಗ 'ಅಡಾಲ್ಫ್ ಹಿಟ್ಲರ್' ಆದಂತೆ. ಅದು ಬಿಡಿ, ಅಡೀಡಸ್ ಹೆಸರು ಬಂದದ್ದು ಹೇಗೆ? ಅದನ್ನು ತಿಳಿಯಬೇಕು, ಅದಕ್ಕೂ ಮೊದಲು ಅಡೀಡಸ್‌ನ ಸಂಘರ್ಷಗಾಥೆಯನ್ನು ತಿಳಿಯಬೇಕು.

1900ರ ಸೆಪ್ಟೆಂಬರ್‌ನಲ್ಲಿ ಜರ್ಮನಿಯ ಬವೇರಿಯನ್ ಪ್ರಾಂತ್ಯದಲ್ಲಿ ಹುಟ್ಟಿದ ಅದಾಲ್ಫ್ ದಾಸ್ಲರ್‌ನನ್ನು ಜನ 'ಅದಿ' ಎಂದೂ ಕರೆಯುತ್ತಿದ್ದರು. ತಂದೆ ಪಾದರಕ್ಷೆ ತಯಾರಿಸುವ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ತಾಯಿ ಮನೆ ಕೆಲಸದೊಂದಿಗೆ ಹೊಲಿಗೆ ಕೆಲಸ ಮಾಡಿಕೊಂಡಿದ್ದಳು.

ಅದಾಲ್ಫ್‌ನಿಗೆ ರುದಾಲ್ಫ್ ಹೆಸರಿನ ಒಬ್ಬ ಸಹೋದರನೂ ಇದ್ದ. ಈತನೇ ಮುಂದೊಂದು ದಿನ 'ಪೂಮಾ' ಪಾದರಕ್ಷೆ ತಯಾರಿಸುವ ಸಂಸ್ಥೆಯನ್ನು ಹುಟ್ಟುಹಾಕಿದ. ಇದು ಸಹೋದರರೇ ಒಬ್ಬರಿಗೊಬ್ಬರು ಪ್ರತಿಸ್ಪರ್ಧಿಗಳಾದ ಮೊದಲ ಕ್ರೂರಕಥೆ ಎಂದರೂ ತಪ್ಪಲ್ಲ. ಇಬ್ಬರೂ ಪಾದರಕ್ಷೆಯ ಕ್ಷೇತ್ರದಲ್ಲಿ ಹೆಸರು ಮಾಡಿ ವಿಶ್ವದಾದ್ಯಂತ ತಮ್ಮ ಛಾಪು ಮೂಡಿಸಿದರು ಎನ್ನುವುದೊಂದೇ ಸಮಾಧಾನ.

ಸಹೋದರರಲ್ಲಿ ಕಿರಿಯವನಾದ ಅದಾಲ್ಫ್ ಸಣ್ಣ ವಯಸ್ಸಿನಲ್ಲೇ ಜರ್ಮನಿಯ ಸೇನೆಗೆ ಸೇರಿಕೊಂಡಿದ್ದ. ಆಗಷ್ಟೇ ಮೊದಲ ವಿಶ್ವಯುದ್ಧ ಮುಗಿದಿತ್ತು. ಆಗ ಅವನಿನ್ನೂ ಇಪ್ಪತ್ತು ವರ್ಷದ ಯುವಕ. ಯುದ್ಧದಿಂದ ಹಿಂತಿರುಗಿ ಬಂದ ನಂತರ ಮನೆಯ ಮುಂದೆ ಒಂದು ಸಣ್ಣ ಬೇಕರಿ ಆರಂಭಿಸಬೇಕು ಎಂದು ಯೋಚಿಸಿದ. ಹಣದ ಅಭಾವ ಮತ್ತು ಇತರ ಸಾಮಗ್ರಿಗಳ ಕೊರತೆಯಿಂದ ಅದು ಈಡೇರಲಿಲ್ಲ. ಆಗ ಮನೆಯಲ್ಲಿಯೇ ಪಾದರಕ್ಷೆ ತಯಾರಿಸಲು ನಿರ್ಧರಿಸಿದ. ಹೇಗಿದ್ದರೂ ಅಪ್ಪ, ಚಿಕ್ಕಪ್ಪ ಅದೇ ವೃತ್ತಿಯಲ್ಲಿದ್ದರಲ್ಲ, ತಂದೆಯ ಸಹಕಾರ, ಮಾರ್ಗದರ್ಶನವೂ ಅವನಿಗೆ ದೊರಕಿತು. ಆದರೆ ಸಣ್ಣ ಮನೆಯಾದದ್ದರಿಂದ ಪಾದರಕ್ಷೆ ತಯಾರಿಸಲು ಸ್ಥಳವಿರಲಿಲ್ಲ. ಮೊದಲು ಒಂದಷ್ಟು ದಿನ ಅಮ್ಮನ ಜತೆ ಅಡುಗೆಮನೆಯಲ್ಲಿ ಕುಳಿತು ಅಲ್ಲಿಯೇ ಪಾದರಕ್ಷೆ ತಯಾರಿಸಲು ಆರಂಭಿಸಿದ. ಕೆಲವು ದಿನಗಳ ನಂತರ ಅಮ್ಮ ಅವನಿಗೆ ಬಟ್ಟೆ ತೊಳೆಯುವ ಜಾಗದಲ್ಲಿಯೇ ಒಂದು ಸ್ಥಳ ಮಾಡಿಕೊಟ್ಟಳು.

ನಾಲ್ಕು ವರ್ಷವಾಗುವಷ್ಟರಲ್ಲಿ ಅಣ್ಣನೂ ಅವನೊಂದಿಗೆ ಸೇರಿಕೊಂಡ. 1924ರ ವೇಳೆಗೆ ಸಣ್ಣ ಕಟ್ಟಡವೊಂದರಲ್ಲಿ ದಾಸ್ಲರ್ ಬ್ರದರ್ಸ್ ಶೂ ಫ್ಯಾಕ್ಟರಿ ಹೆಸರಿನಲ್ಲಿ, ಕ್ರೀಡಾಪಟುಗಳಿಗೆ ಬೇಕಾಗುವ ಪಾದರಕ್ಷೆ ತಯಾರಿಸಲು ಆರಂಭಿಸಿದರು. ಸಣ್ಣಪುಟ್ಟ ಯಂತ್ರಗಳನ್ನು ತಂದು ಬೂಟು ತಯಾರಿಸಲು ಆರಂಭಿಸಿದ್ದು ಹೌದಾದರೂ ಸಾಕಷ್ಟು ಸಂಘರ್ಷ ಎದುರಿಸಬೇಕಾಯಿತು. ಹೇಳಿ ಕೇಳಿ ಇಪ್ಪತ್ತು ಸಾವಿರದಷ್ಟು ಜನಸಂಖ್ಯೆ ಹೊಂದಿದ್ದ ಊರಿನಲ್ಲಿ ಆಗಾಗ ವಿದ್ಯುತ್ ವ್ಯತ್ಯಯ ಉಂಟಾಗುತ್ತಿತ್ತು. ಆಗ ಸೈಕಲ್‌ನ ಗಾಲಿ ತಿರುಗಿಸಿ, ವಿದ್ಯುತ್ ಉತ್ಪಾದಿಸಿ ಸಹೋದರರು ಕೆಲಸ ಪೂರೈಸುತ್ತಿದ್ದರು.

ಕ್ರೀಡಾಪಟುಗಳಿಗೆ ಅನುಕೂಲವಾಗಲು ಪಾದರಕ್ಷೆಯಲ್ಲಿ ಸಾಕಷ್ಟು ಪ್ರಯೋಗಗಳನ್ನು ಸಹೋದರರು ಮಾಡಿದರು. ಮೊದಲೆಲ್ಲ ಬರುತ್ತಿದ್ದ ಬೂಟುಗಳಿಗಿಂತ ಹಗುರವಾಗಿಸಲು ಶ್ರಮಿಸಿದರು. ಓಡುವಾಗ ಜಾರಿ ಬೀಳದೆ ಸಮತೋಲನ ಕಾಯ್ದುಕೊಳ್ಳಲು, ಹಿಡಿತ ಸಾಧಿಸಲು ಅನುಕೂಲವಾಗುವಂತೆ ಬೂಟಿನ ಕೆಳಭಾಗದಲ್ಲಿ ಲೋಹದ ಮುಳ್ಳಿನ ಬದಲು ರಬ್ಬರ್ ಮುಳ್ಳುಗಳನ್ನು ಜೋಡಿಸಿದರು. ಏನೇ ಪ್ರಯೋಗ ಮಾಡಿದರೂ, ಸಂಸ್ಥೆ ಆರಂಭವಾಗಿ ಹನ್ನೆರಡು ವರ್ಷವಾದರೂ ಹೇಳಿಕೊಳ್ಳುವಂಥ ಏಳ್ಗೆ ಕಂಡಿರಲಿಲ್ಲ.

1936ರಲ್ಲಿ ಜರ್ಮನಿಯ ರಾಜಧಾನಿ ಬರ್ಲಿನ್‌ನಲ್ಲಿ ಒಲಿಂಪಿಕ್ ಪಂದ್ಯಾಟವನ್ನು ಏರ್ಪಡಿಸಲಾಗಿತ್ತು. ಆ ವರ್ಷ ಅದಿದಾಸ್‌ನ ದಿಕ್ಕು ಬದಲಾಯಿತು. ಆ ವರ್ಷ ಒಲಿಂಪಿಕ್‌ನಲ್ಲಿ ಭಾಗವಹಿಸಲು ಅಮೆರಿಕದಿಂದ ಬಂದಿದ್ದ ಓಟಗಾರ ಜೆಸ್ಸಿ ಓವೆನ್ಸ್‌ನನ್ನು ಭೇಟಿಯಾಗಿ ತಾವು ತಯಾರಿಸಿದ ಬೂಟನ್ನು ಕೊಟ್ಟರು. ಅದಿದಾಸ್ ಬೂಟು ಧರಿಸಿ ಓಡಿದ ಓವೆನ್ಸ್ ಆ ವರ್ಷ ನಾಲ್ಕು ಚಿನ್ನದ ಪದಕ ಗೆದ್ದಿದ್ದ. ಇದು ಜರ್ಮನಿ ಮತ್ತು ಅಮೆರಿಕದಲ್ಲಿ ದೊಡ್ಡ ಸುದ್ದಿಯಾಯಿತು. ಅಂದಿನಿಂದ ಸಂಸ್ಥೆ ಪ್ರತಿ ವರ್ಷ 2 ಲಕ್ಷಕ್ಕೂ ಹೆಚ್ಚು ಬೂಟುಗಳನ್ನು ಮಾರಾಟ ಮಾಡುವಂತಾಯಿತು. ಅಷ್ಟೇ ಅಲ್ಲ, ಆ ಕಾಲದಲ್ಲಿ ಜರ್ಮನಿಯಲ್ಲಿ ಕ್ರೀಡಾಪಟುಗಳಿಗೆಂದೇ ಪಾದರಕ್ಷೆ ತಯಾರಿಸುವ ಏಕಮಾತ್ರ ಸಂಸ್ಥೆ ಅದಾಗಿತ್ತು.

ಅದಾಗಲೇ ಸಹೋದರರಿಬ್ಬರೂ ಜರ್ಮನಿಯ ನಾಜಿ ಪಕ್ಷವನ್ನು ಸೇರಿಕೊಂಡು, ನಾಜಿ ಯುವಪಡೆಯೊಂದಿಗೆ ಕೆಲಸವನ್ನೂ ಮಾಡುತ್ತಿದ್ದರು. ಎರಡನೆಯ ಮಹಾಯುದ್ಧ ಆರಂಭವಾದಾಗ ನಾಜಿ ಪಡೆ ಇವರ ಕಾರ್ಖಾನೆಯಲ್ಲಿ ಬೂಟು ತಯಾರಿಸುವುದನ್ನು ನಿಲ್ಲಿಸಿ ಯುದ್ಧದ ಟ್ಯಾಂಕರ್ ಧ್ವಂಸಗೊಳಿಸಲು ಬಳಸುವ ರಾಕೆಟ್ ಲಾಂಚರ್ ತಯಾರಿಸಲು ಆರಂಭಿಸಿತು. ರುಡಿ ಸೇನೆಗೆ ಬೇಕಾಗುವ ಬೂಟು ತಯಾರಿಸಿಕೊಡುವುದಾಗಿ ಕೇಳಿಕೊಂಡರೂ ನಾಜಿ ಪಡೆ ಒಪ್ಪಲಿಲ್ಲ. ಯುದ್ಧ ಮುಗಿದು ಅಮೆರಿಕದ ಸೇನಾಪಡೆ ಈ ಕ್ಷೇತ್ರವನ್ನು ತನ್ನ ಹದ್ದುಬಸ್ತಿನಲ್ಲಿ ತೆಗೆದುಕೊಂಡ ನಂತರ ಇದು ನಿಂತಿತು. ಆ ಸಂದರ್ಭದಲ್ಲಿ ಕೆಲವು ದಿನ ಇಬ್ಬರೂ ಸಹೋದರರನ್ನು ಅಮೆರಿಕ ವಿಚಾರಣೆಗೆಂದು ತನ್ನ ಸುಪರ್ದಿಯಲ್ಲಿ ಇಟ್ಟುಕೊಂಡು, ನಂತರ ಬಿಟ್ಟು ಕಳುಹಿಸಿತ್ತು.

ಈ ನಡುವೆ ಸಹೋದರರ ನಡುವೆ ಯಾವುದೋ ಕಾರಣಕ್ಕೆ ಘೋರ ಮನಸ್ತಾಪ ಉಂಟಾಯಿತು. ಪರಿಣಾಮವಾಗಿ 1947ರಲ್ಲಿ ಅದಿ, ತನ್ನ ಹೆಸರಿನ 'ಅದಿ'ಯ ಜತೆಗೆ ಪರಿವಾರದ ಹೆಸರು 'ದಾಸ್ಲರ್'ನ 'ದಾಸ್' ಸೇರಿಸಿ 'ಅದಿದಾಸ್' ಎಂಬ ಹೆಸರಿನ ಸಂಸ್ಥೆ ಆರಂಭಿಸಿದ. 'ಅದಿದಾಸ್' ಹೆಸರು ಬಂದದ್ದು ಹಾಗೆ, ಹೊರತು 'ಆಲ್ ಡೇ ಐ ಡ್ರೀಮ್ ಅಬೌಟ್ ಸ್ಪೋರ್ಟ್ಸ್' ಎಂದಲ್ಲ. ಇನ್ನೊಬ್ಬ ಸಹೋದರ ರುಡಿ ಕೂಡ 'ರುದಾ' ಹೆಸರಿನ ಸಂಸ್ಥೆ ಸ್ಥಾಪಿಸಿದ. ಮುಂದೆ ಇದಕ್ಕೆ 'ಪ್ಯೂಮಾ' ಎಂದು ಮರುನಾಮಕರಣ ಮಾಡಿದ.

ಸಹೋದರರ ನಡುವಿನ ಭಿನ್ನಾಭಿಪ್ರಾಯಕ್ಕೆ ನಿಜಕಾರಣ ಏನು ಎಂಬುದು ಇಂದಿಗೂ ದೊಡ್ಡ ಪ್ರಶ್ನೆಯಾಗಿಯೇ ಉಳಿದಿದೆ. ಆದರೆ ಅವರ ನಡುವೆ ವೈರತ್ವ ಎಷ್ಟರ ಮಟ್ಟಿಗೆ ಇತ್ತು ಎಂದರೆ, ಊರಿನಲ್ಲಿ ಎರಡು ಪಂಗಡಗಳೇ ಆದವು. ಒಂದು ಅದಿದಾಸ್ ಅಭಿಮಾನಿಯಾದರೆ ಇನ್ನೊಂದು ಪಂಗಡ ಪ್ಯೂಮಾವನ್ನು ಬೆಂಬಲಿಸುತ್ತಿತ್ತು. ಊರಿನಲ್ಲಿದ್ದ ಎರಡು ಫುಟ್‌ಬಾಲ್ ಕ್ಲಬ್‌ಗಳಲ್ಲಿ ಒಂದು ಅದಿದಾಸ್ ಬಳಸಿದರೆ ಇನ್ನೊಂದು ಪ್ಯೂಮಾ ಬಳಸುತ್ತಿತ್ತು. ತಮ್ಮ ಬಳಿ ಬಂದವರು ಅದಿದಾಸ್ ಬೂಟು ತೊಟ್ಟಿದ್ದು ಕಂಡರೆ ರುದಾಲ್ಫ್, ಪ್ಯೂಮಾ ಬೂಟನ್ನು ಪುಕ್ಕಟೆಯಾಗಿ ಅವರಿಗೆ ಕೊಟ್ಟು ಕಳಿಸುತ್ತಿದ್ದ. ಕೆಲವು ಆಟಗಾರರು ಪ್ಯೂಮಾ ಅಂಗಡಿಗೆ ಹೋಗುವಾಗ ಅಥವಾ ರುದಿಯನ್ನು ಭೇಟಿಯಾಗಲು ಹೋಗುವಾಗ ಬೇಕೆಂದೇ ಅದಿದಾಸ್ ಬೂಟು ಧರಿಸಿ ಹೋಗುತ್ತಿದ್ದರಂತೆ! ಸಾಲದು ಎಂಬಂತೆ ಕೊನೆಯಲ್ಲಿ ಮರಣದ ನಂತರವೂ ಅವರ ಸಮಾಧಿಯನ್ನು ಒಂದೇ ಸ್ಮಶಾನದಲ್ಲಿ ಮಾಡಿದರೂ ಸಾಕಷ್ಟು ದೂರ ದೂರದಲ್ಲಿ ಮಾಡಿದರಂತೆ.

ಅವರ ಮರಣಾನಂತರ ಸಂಸ್ಥೆಯಲ್ಲಿ ನಡೆದದ್ದೆಲ್ಲ ಪಕ್ಕಾ ವ್ಯವಹಾರದ ವಿಷಯ. ಇಂದು ಅದಿದಾಸ್‌ನೊಂದಿಗೆ ಪ್ಯೂಮಾ ಕೂಡ ವಿಶ್ವದಾದ್ಯಂತ ಸಾಕಷ್ಟು ಹೆಸರು ಮಾಡಿದ ಸಂಸ್ಥೆ. ಆದರೆ ಈ ಎರಡೂ ದಿಗ್ಗಜ ಸಂಸ್ಥೆಗಳು ಒಂದೇ ಕುಟುಂಬದಿಂದ ಬಂದಂಥವು. ಒಂದೇ ಮನೆಯಲ್ಲಿ ಹುಟ್ಟಿಕೊಂಡ ಸಂಸ್ಥೆಗಳು. ಆದರೂ ಒಂದಕ್ಕೊಂದು ಟಕ್ಕರ್ ಕೊಟ್ಟಿಕೊಂಡೇ ಬೆಳೆದು ನಿಂತವು.

ನಂತರದ ದಿನಗಳಲ್ಲಿ ಅದಿದಾಸ್‌ಗೆ ಪ್ಯೂಮಾ ಒಂದೇ ಅಲ್ಲ, ರೀಬಾಕ್ ಸಂಸ್ಥೆಯೊಂದಿಗೂ ಸಾಕಷ್ಟು ಪೈಪೋಟಿ ನಡೆಸಬೇಕಾಯಿತು. ಬೇರೆ ಬೇರೆ ಸಂಸ್ಥೆಗಳು ಮಾರುಕಟ್ಟೆಯನ್ನು ಪ್ರವೇಶಿಸಿದ್ದರಿಂದ ಅದಿದಾಸ್ ಸಾಕಷ್ಟು ನಷ್ಟವನ್ನೂ ಅನುಭವಿಸಬೇಕಾಯಿತು. ಆದರೂ ಇಂದು ಅದಿದಾಸ್ ಯಾನೆ ಅಡೀಡಸ್ ಸಂಸ್ಥೆ 21 ಬಿಲಿಯನ್ ಅಮೆರಿಕನ್ ಡಾಲರ್‌ಗೂ ಹೆಚ್ಚಿನ ಆದಾಯ ಹೊಂದಿದ್ದು, 16 ಬಿಲಿಯನ್ ಡಾಲರ್‌ಗೂ ಹೆಚ್ಚಿನ ಮೌಲ್ಯದ ಆಸ್ತಿ ಹೊಂದಿದೆ. ಪ್ರತಿವರ್ಷ ಹೆಚ್ಚು ಕಮ್ಮಿ ಎರಡು ಬಿಲಿಯನ್ ಡಾಲರ್ ನಿವ್ವಳ ಲಾಭ ಮಾಡುತ್ತಿದೆ. ಅಮ್ಮನ ಅಡುಗೆಮನೆಯಲ್ಲಿ ಆರಂಭವಾದ ಅದಿದಾಸ್ ಸಂಸ್ಥೆ ಇಂದು ಈ ಮಟ್ಟಿಗೆ ಬೆಳೆದು ನಿಂತಿದೆ ಎಂದರೆ ಸಾಮಾನ್ಯ ಸಂಗತಿಯಲ್ಲದಿದ್ದರೂ ಸತ್ಯವಂತೂ ಹೌದು.

ಚೇತನ-ಚಿಂತನ
ಲಿಂಗದಹಳ್ಳಿ ಚೇತನ್‌ಕುಮಾರ್
vveditoped@gmail.com

ಅಬ್ಬರ ಮಾಡಿದರೂ ಅಭಿಮಾನಿಗಳು ಬರುತ್ತಿಲ್ಲ!

ಕನ್ನಡ ಚಿತ್ರರಂಗವು ಇಂದು ತಿರುವಿನ ಘಟ್ಟದಲ್ಲಿ ನಿಂತಿದೆಯೇ? ಇನ್ನಿಲ್ಲದ ಸವಾಲು ಮತ್ತು ಸಂಕಷ್ಟಗಳನ್ನು ಅದು ಎದುರಿಸುತ್ತಿದೆಯೇ? ಉದ್ಯಮದ ವಿವಿಧ ವಲಯಗಳ ಅಳಲಿಗೆ ಕಿವಿಯಾಗಿ, ಸಂಬಂಧಪಟ್ಟ ವರಿಂದ ಅದಕ್ಕೆ ಪರಿಹಾರವನ್ನು ದೊರಕಿಸಿಕೊಡುವ ಭರವಸೆ ನೀಡುವಂಥ ನಾಯಕನಿಲ್ಲದೆ ಕನ್ನಡ ಚಿತ್ರರಂಗ ಬರಡಾಗಿದೆಯೇ...?

ಮೇಲಿನ ಪ್ರಶ್ನೆಗಳು ನನ್ನಂತೆಯೇ ಹಲವರನ್ನು ಕಾಡುತ್ತಿರಬಹುದು. ಆದರೆ ಇದಕ್ಕೆ ಉತ್ತರಿಸುವಂಥವರು ಕೂಡ ಸದ್ಯಕ್ಕೆ ಕಾಣಿಸುತ್ತಿಲ್ಲ ಎಂಬುದು ವಿಪರ್ಯಾಸ. ವರ್ಷಕ್ಕೆ ಐದೋ ಹತ್ತೋ ಚಿತ್ರಗಳು ಬಿಡುಗಡೆಯಾಗುವುದೇ ದುಸ್ತರವಾಗಿದ್ದ ಕಾಲಘಟ್ಟದಿಂದ ಮೊದಲ್ಗೊಂಡು, ವರ್ಷವೊಂದರಲ್ಲಿ ನೂರಕ್ಕೂ ಹೆಚ್ಚು ಚಿತ್ರಗಳು ಬಿಡುಗಡೆಗೊಳ್ಳುವವರೆಗಿನ ವಿವಿಧ ಪರಿಸ್ಥಿತಿಗಳನ್ನು ಕನ್ನಡ ಚಿತ್ರರಂಗ ಕಂಡಿದೆ. ಆದರೆ, ಇವೆಲ್ಲ ಕಾಲಘಟ್ಟಗಳನ್ನೂ ಪರಸ್ಪರ ತುಲನೆ ಮಾಡಿದಾಗ, ಈಗ ಕಾಣಬರುತ್ತಿರುವ ಪರಿಸ್ಥಿತಿ ಕೊಂಚ ವಿಲಕ್ಷಣವಾಗಿದೆ ಎನ್ನಲಡ್ಡಿಯಿಲ್ಲ.

ಇದಕ್ಕೆ ಸಾಕಷ್ಟು ಉದಾಹರಣೆಗಳನ್ನು ನೀಡಬಹುದು. ಈಗ ಕನ್ನಡ ಚಿತ್ರರಂಗದಲ್ಲಿ ನಾಯಕ-ನಾಯಕಿಯರ, ಪೋಷಕ ಕಲಾವಿದರ ಕೊರತೆಯಿಲ್ಲ. ಸಂಗೀತ ನಿರ್ದೇಶನ, ಛಾಯಾಗ್ರಹಣ, ಸಂಕಲನ, ಹಿನ್ನೆಲೆ ಗಾಯನ, ಸಾಹಸ ಸಂಯೋಜನೆ ಹೀಗೆ ಚಿತ್ರರಂಗದ ವಿವಿಧ ಮಗ್ಗುಲುಗಳಿಗೆ ಬೇಕಾದ ಸಾವಿರಾರು ಸ್ಥಳೀಯ ಪ್ರತಿಭೆಗಳು ನಮ್ಮಲ್ಲಿ ಲಭ್ಯವಿವೆ. ಗಣನೀಯ ಸಂಖ್ಯೆಯಲ್ಲಿ ಚಲನಚಿತ್ರಗಳು ಬಿಡುಗಡೆಯಾಗುತ್ತಿವೆ. ಚಿತ್ರಮಂದಿರಗಳಲ್ಲಿನ ಒಂದು ಅವಧಿಯ ಪ್ರದರ್ಶನದ ನಂತರ ಅವನ್ನು ಪ್ರದರ್ಶಿಸಲು ಮುಂದಾಗುವ ಒಟಿಟಿ ವೇದಿಕೆಗಳಿವೆ. ಇಷ್ಟಾಗಿಯೂ ಕನ್ನಡ ಚಿತ್ರರಂಗ ಮೊದಲಿನಷ್ಟು ಸಂಭ್ರಮ-ಸಡಗರದ ಕ್ಷಣಗಳಿಗೆ ಈಗ ಸಾಕ್ಷಿಯಾಗುತ್ತಿಲ್ಲ. 'ಎಲ್ಲವೂ ಇದ್ದೂ, ಅದೇನೋ ಇಲ್ಲ' ಎಂಬ ಕೊರಗು ಇಂದು ಬಹುತೇಕ ಚಿತ್ರೋದ್ಯಮಿಗಳನ್ನು ಹಾಗೂ ಚಿತ್ರರಸಿಕರನ್ನು ಕಾಡುತ್ತಿರುವುದು ಖರೆ. ಹೆಚ್ಚೇನೂ ಬೇಡ, ಕೆಲವಷ್ಟು ವರ್ಷ ಹಿಂದಿದ್ದ ಸನ್ನಿವೇಶವನ್ನೊಮ್ಮೆ ನೆನಪಿಸಿಕೊಳ್ಳಿ. ಆಗ ಡಾ.ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಶ್ ಮುಂತಾದವರ ಚಿತ್ರಗಳು ಬಿಡುಗಡೆಯಾಗುತ್ತಿವೆ ಎಂದರೆ ಚಿತ್ರಮಂದಿರಗಳ ಮುಂದೆ ಹಬ್ಬದ ಸಡಗರ ಕಾಣುತ್ತಿತ್ತು. ವಿವಿಧ ಬಡಾವಣೆಗಳಿಂದ 'ಸ್ಟಾರ್'ಗಳನ್ನು ಕಟ್ಟಿಕೊಂಡು ಮೆರವಣಿಗೆಯಲ್ಲಿ ತಂದು ಚಿತ್ರಮಂದಿರಕ್ಕೆ ಕಟ್ಟುತ್ತಿದ್ದ ಅಭಿಮಾನಿಗಳಲ್ಲಿ ಸಂಭ್ರಮ ಮನೆಮಾಡಿರುತ್ತಿತ್ತು. ಇದಕ್ಕಿಂತ ಇನ್ನೂ ಒಂದಷ್ಟು ವರ್ಷ ಹಿಂದಕ್ಕೆ ಹೋದರೆ, ತಾಲೂಕು ಪ್ರದೇಶಗಳಲ್ಲಿನ ಚಿತ್ರಮಂದಿರಗಳಲ್ಲಿ ಈ ನಟರ ಚಿತ್ರಗಳು ಬಿಡುಗಡೆಯಾದರೆ, ಹಳ್ಳಿಗಳಿಂದ ಎತ್ತಿನ ಗಾಡಿ ಹೂಡಿಸಿಕೊಂಡು ಬಂದು ಅವನ್ನು ವೀಕ್ಷಿಸಿ ಮನೆಗೆ ಮರಳುತ್ತಿದ್ದ ಅಭಿಮಾನಿಗಳಿಗೆ ನಮ್ಮ ಚಿತ್ರರಂಗ ಸಾಕ್ಷಿಯಾಗಿದ್ದೂ ಇದೆ. ಆಗೆಲ್ಲಾ ಈಗಿನಂತೆ ಸುದ್ದಿವಾಹಿನಿಗಳಾಗಲೀ, ಯುಟ್ಯೂಬ್ ಚಾನೆಲ್‌ಗಳಾಗಲೀ, ಸಾಮಾಜಿಕ ಮಾಧ್ಯಮಗಳಾಗಲೀ ಇರಲಿಲ್ಲ. ಲಭ್ಯವಿರುವ ನಾಲ್ಕಾರು ದಿನಪತ್ರಿಕೆಗಳಲ್ಲಿ ಶುಕ್ರವಾರ ದಂದು ಪ್ರಕಟವಾಗುತ್ತಿದ್ದ ಸಿನಿಮಾ ಸಂಬಂಧಿತ ಸುದ್ದಿಗಳು-ಸಂದರ್ಶನಗಳು-ಛಾಯಾಚಿತ್ರಗಳು ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ಸಿನಿಮಾ ಸಂಬಂಧಿತ ಸಚಿತ್ರ-ಲೇಖನಗಳಷ್ಟೇ ಇರುತ್ತಿದ್ದುದು. ಅಥವಾ ಚಿತ್ರವೊಂದು ಬಿಡುಗಡೆಯಾದಾಗ ಕುದುರೆಗಾಡಿಗೆ ಮೈಕ್ ಕಟ್ಟಿಕೊಂಡು ಪ್ರಚಾರ ಮಾಡಿಸುವ ಭರಾಟೆ ಇರುತ್ತಿತ್ತು ಅಷ್ಟೇ. ಇಷ್ಟು ಬಿಟ್ಟರೆ, ಚಲನಚಿತ್ರವೊಂದರ ಪ್ರಚಾರಕ್ಕೆ ಹೆಚ್ಚೇನೂ ಕಸರತ್ತು ನಡೆಯುತ್ತಿರಲಿಲ್ಲ. ಇಷ್ಟಾಗಿಯೂ ಆಗಿನ ಚಿತ್ರಗಳಿಗೆ ಅಭಿಮಾನಿಗಳು ಹಿಂಡುಹಿಂಡಾಗಿ ಬರುತ್ತಿದ್ದರು, ಬೆಳ್ಳಿತೆರೆಯ ಮೇಲೆ ತಮ್ಮಿಷ್ಟದ ನಟನ ಹಾಡು-ನೃತ್ಯ-ಡೈಲಾಗನ್ನು ಕಂಡು ಶಿಳ್ಳೆ, ಚಪ್ಪಾಳೆ ಹೊಡೆದು ಸಂಭ್ರಮಿಸುತ್ತಾ ವೀಕ್ಷಿಸುತ್ತಿದ್ದರು. ಆಗ ಇದ್ದದ್ದು 'ಮೌತ್ ಪಬ್ಲಿಸಿಟಿ' ಮತ್ತು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಸಿನಿಮಾ ಸುದ್ದಿಗಳು, ವಿಮರ್ಶೆಗಳು ಮಾತ್ರವೇ. ಇಷ್ಟಾಗಿಯೂ ಕನ್ನಡ ಚಿತ್ರರಸಿಕರು ಮತ್ತು ಕಲಾವಿದರು 'ಚಲನಚಿತ್ರ ಕೃಷಿ'ಯನ್ನು ಇನ್ನಿಲ್ಲದಂತೆ ಸಂಭ್ರಮಿಸುತ್ತಿದ್ದರು. ಆದರೆ ಈಗ ಪರಿಸ್ಥಿತಿ ಹಾಗಿದೆಯೇ?

ಇಂದು ಕೂಡ ಚಲನಚಿತ್ರವೊಂದು ಬಿಡುಗಡೆಯಾದ ಸಂದರ್ಭದಲ್ಲಿ, 'ಇದಕ್ಕೆ ಇಷ್ಟು ಕೋಟಿ ಖರ್ಚು ಮಾಡಲಾಗಿದೆ, ಈ ಚಿತ್ರ 100 ಕೋಟಿ ಕ್ಲಬ್ ಸೇರೋದು ಗ್ಯಾರಂಟಿ' ಅಂತೆಲ್ಲಾ ಅಬ್ಬರದ ಪ್ರಚಾರ ಮಾಡಲಾಗುತ್ತದೆ; ಸದರಿ ಚಿತ್ರದ ಚಿತ್ರೀಕರಣದ ವೇಳೆ ಏನೆಲ್ಲಾ ರಸಮಯ ಘಟನೆಗಳು ಜರುಗಿದವು, ಏನೆಲ್ಲಾ ಅಪಾಯ ಒದಗಿತು ಎಂಬುದನ್ನು ಪ್ರಚಾರಕಾರ್ಯದ ವೇಳೆ ಆಯಾ ಚಲನಚಿತ್ರಕ್ಕೆ ಸಂಬಂಧಪಟ್ಟವರು ಬಣ್ಣಾಬಣ್ಣಿಯಾಗಿ ಬಣ್ಣಿಸುವುದಿದೆ. ಇಷ್ಟೆಲ್ಲಾ ಆದರೂ ಬಿಡುಗಡೆಯಾದ ಚಿತ್ರವೊಂದು ಮೊದಲ ವಾರವನ್ನು ದಾಟಿ ಎರಡನೇ ವಾರವನ್ನು ಪ್ರವೇಶಿಸುವುದೇ ದುಸ್ತರವಾಗಿಬಿಟ್ಟಿದೆ. ಮನರಂಜನೆ ಎಂಬುದು ಟಿವಿ, ಒಟಿಟಿ. ಕಂಪ್ಯೂಟರ್‌ಗಳ ಮೂಲಕ ಮನೆಯಂಗಳಕ್ಕೇ ಬಂದಿರುವುದು, ಬಯಸಿದ ಚಿತ್ರ/ದೃಶ್ಯವನ್ನು ಸ್ಮಾರ್ಟ್ ಫೋನ್‌ಗಳಲ್ಲೇ ನೋಡಲು ಸಾಧ್ಯವಾಗಿರುವುದು ಇದಕ್ಕೆ ಕಾರಣವಾ? ಹಾಗಿದ್ದರೆ, ತೆಲುಗು ಮತ್ತು ತಮಿಳಿನಂಥ ಪರಭಾಷಾ ಚಿತ್ರಗಳಿಗೂ ಇಂಥದೇ ಪರಿಸ್ಥಿತಿ ಒದಗಿರಬೇಕಲ್ಲವಾ? ಮೇಲೆ ಉಲ್ಲೇಖಿಸಿರುವ 'ಪರ್ಯಾಯ ಮನರಂಜನಾ ಮಾಧ್ಯಮ'ಗಳ ಉಪಸ್ಥಿತಿಯ ಹೊರತಾಗಿಯೂ ಪರಭಾಷಾ ಚಿತ್ರರಂಗವು ಏಗುತ್ತಿರುವುದು ಹೇಗೆ? ಆ ಮಾದರಿಯು ಸ್ವೀಕಾರಾರ್ಹವಾಗಿದ್ದರೆ ಅದನ್ನು ಕನ್ನಡ ಚಿತ್ರರಂಗಕ್ಕೂ ಮೇಲ್ಪಂಕ್ತಿಯಾಗಿ ಇಟ್ಟುಕೊಳ್ಳಬಹುದಲ್ಲವಾ? ಎಂಬುದು ಬಹುತೇಕರನ್ನು ಕಾಡುವ ಪ್ರಶ್ನೆಗಳು.

ಹಾಗೆಂದ ಮಾತ್ರಕ್ಕೆ, ಇತ್ತೀಚಿನ ವರ್ಷಗಳಲ್ಲಿ ಕನ್ನಡದಲ್ಲಿ ಉತ್ತಮ ಚಲನಚಿತ್ರಗಳು ಬಂದೇ ಇಲ್ಲ ಎಂದೇನಲ್ಲ. ಆದರೆ, 'ಮುಂಗಾರುಮಳೆ', 'ದುನಿಯಾ', 'ಉಳಿದವರು ಕಂಡಂತೆ', 'ಕಿರಿಕ್ ಪಾರ್ಟಿ', 'ಯು-ಟರ್ನ್', 'ಮಿಸ್ಟರ್ ಆ್ಯಂಡ್ ಮಿಸೆಸ್ ರಾಮಾಚಾರಿ', 'ಕೆಜಿಎಫ್', 'ಕಾಂತಾರ', 'ರಾಜಕುಮಾರ' ಮತ್ತು ಇತ್ತೀಚಿನ 'ಸು ಫ್ರಮ್ ಸೋ' ಮುಂತಾದ ಕೆಲವೇ ಉದಾಹರಣೆಗಳನ್ನು ಬಿಟ್ಟರೆ, ಭಾರಿ ಯಶಸ್ಸನ್ನು ಕಂಡ ಚಿತ್ರಗಳು ತೀರಾ ಕಮ್ಮಿ ಎಂದೇ ಹೇಳಬೇಕು. ಒಂದು ಕಾಲಕ್ಕೆ, ಕನ್ನಡ ಚಿತ್ರಗಳು, ಅದರಲ್ಲೂ ನಿರ್ದಿಷ್ಟವಾಗಿ ನಿರ್ದೇಶಕ ಪುಟ್ಟಣ್ಣ ಕಣಗಾಲರ ಚಿತ್ರಗಳು ಬಿಡುಗಡೆಯಾಗುತ್ತಿವೆ ಎಂದರೆ ತಮಿಳಿನ ಕೆ.ಬಾಲಚಂದರ್‌ರಂಥ ನಿರ್ದೇಶಕರು ಬೆಂಗಳೂರಿಗೆ ಬಂದು ಅವನ್ನು ವೀಕ್ಷಿಸಿ ಮರಳುತ್ತಿದ್ದರು. ''ಬೆಂಗಳೂರಿನಿಂದ ಬಂದಿರುವ ಕಲಾವಿದರಿಗೆ ಚಾನ್ಸ್ ಕೊಡ್ರಯ್ಯಾ, ಅಲ್ಲಿನವರಿಗೆ ರಂಗಭೂಮಿಯ ಹಿನ್ನೆಲೆ ಇರುತ್ತದೆ'' ಎಂಬುದಾಗಿ ಕೆ.ಬಾಲಚಂದರ್ ಅವರು ತಮಿಳು ಚಿತ್ರರಂಗದ ತಮ್ಮ ಸಹವರ್ತಿಗಳಿಗೆ ಆಗಾಗ ಹೇಳುತ್ತಿದ್ದರಂತೆ. ಅಂದರೆ, ಕನ್ನಡ ಚಲನಚಿತ್ರಗಳು ಮತ್ತು ಕಲಾವಿದರು ಎಂದರೆ ನೆರೆಹೊರೆಯ ಚಿತ್ರರಂಗಗಳಲ್ಲಿ ಆ ಮಟ್ಟಿಗಿನ ಗೌರವವಿತ್ತು. ಹಿಂದಿಯ ಸೂರಜ್ ಬಾರ್ಜಾತ್ಯಾ ಅವರು ಸಲ್ಮಾನ್ ಖಾನ್ ಅಭಿನಯದ ಮತ್ತು ತಮ್ಮ ನಿರ್ದೇಶನದ 'ಮೈನೆ ಪ್ಯಾರ್ ಕಿಯಾ' ಚಿತ್ರಕ್ಕೆ ಸಂಬಂಧಿಸಿ ಮಾತಾಡುವಾಗ ಒಮ್ಮೆ, ''ಈ ಚಿತ್ರದ ಸಾಕಷ್ಟು ದೃಶ್ಯಗಳಿಗೆ ಕನ್ನಡದ ರವಿಚಂದ್ರನ್ ಅವರ ಚಿತ್ರಗಳ ದೃಶ್ಯಗಳೇ ಪ್ರೇರಣೆ'' ಎಂದು ಹೇಳಿಕೊಂಡಿದ್ದುಂಟು. ನಾಸಿರುದ್ದೀನ್ ಶಾ, ಅಮರೀಶ್ ಪುರಿ, ಕಮಲಹಾಸನ್, ನಾನಾ ಪಾಟೇಕರ್ ಮುಂತಾದ ಪರಭಾಷಾ ಕಲಾವಿದರು ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಹಾತೊರೆಯುತ್ತಿದ್ದ ಕಾಲವೂ ಒಂದಿತ್ತು. ''ಇವೆಲ್ಲ ಗತವೈಭವದ ವಿಷಯಗಳಾದವು. ಇವುಗಳ ಪ್ರಸ್ತಾಪ ಈಗೇಕೆ?'' ಎಂದು ನೀವು ಕೇಳಬಹುದು. ಕನ್ನಡ ಚಿತ್ರರಂಗದ ಇಂದಿನ ಪರಿಸ್ಥಿತಿಯನ್ನು ನೋಡಿದಾಗ ಇಂಥ ಗತವೈಭವವನ್ನು ಮೆಲುಕುಹಾಕುವಂತೆ ಆಯಿತಷ್ಟೇ.

ಈಗಲೂ ಕಾಲ ಮಿಂಚಿಲ್ಲ. ಕನ್ನಡ ಚಿತ್ರರಂಗವು ಸೊರಗಿರುವುದಕ್ಕೆ ಏನೆಲ್ಲ ಕಾರಣಗಳಿರಬಹುದು ಎಂಬುದನ್ನು ಕಂಡುಕೊಳ್ಳಲು, ಕಲಾವಿದರು, ತಂತ್ರಜ್ಞರು, ಚಿತ್ರಮಂದಿರಗಳ ಮಾಲೀಕರು/ಪ್ರದರ್ಶಕರು, ವಿತರಕರು, ನಿರ್ಮಾಪಕರು, ನಿರ್ದೇಶಕರು ಹೀಗೆ ಚಿತ್ರೋದ್ಯಮದ ವಿವಿಧ ವಿಭಾಗಗಳ ಜನರು ಒಂದೆಡೆ ಕಲೆತು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಕನ್ನಡ ಚಿತ್ರರಂಗದಲ್ಲಿ ಮತ್ತೊಮ್ಮೆ ಹಬ್ಬದ ವಾತಾವರಣ ಮೂಡಬೇಕು ಎಂದರೆ ಈ ಕಲೆಯುವಿಕೆ ಮತ್ತು ಚಿಂತನ-ಮಂಥನ ಅನಿವಾರ್ಯ ಎನ್ನಲಡ್ಡಿಯಿಲ್ಲ.

(ಲೇಖಕರು ಪತ್ರಕರ್ತರು ಹಾಗೂ ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಬಸವಚರ್ಮ ಹೊದ್ದ ತೋಳಗಳು ಹೊರಡಿಸಿದ ಫರ್ಮಾನು...



ಬಸವಮಂಟಪ
ರವಿ ಹಂಜ್
vveditoped@gmail.com

ಜಗಜ್ಯೋತಿ ಬಸವಣ್ಣನವರು, ''ಲೋಕದ ಡೊಂಕ ನೀವೇಕೆ ತಿದ್ದುವಿರಿ ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ; ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ'' ಎಂದು ಹೇಳುತ್ತಾ ತಮ್ಮ ಅನೇಕ ವಚನಗಳಲ್ಲಿ ಲೋಕದ ಡೊಂಕ ತಿದ್ದುವ ಪ್ರಯತ್ನ ಮಾಡಿದ್ದಾರೆ. ಉದಾಹರಣೆಗೆ ''ಕಳಬೇಡ ಕೊಲಬೇಡ, ವೇದಕ್ಕೆ ಒರೆಯ ಕಟ್ಟುವೆ (ಕಮ್ಯುನಿಸ್ಟರ ವ್ಯಾಖ್ಯಾನದಂತೆ)'' ಇತ್ಯಾದಿಯಾಗಿ ಲೋಕದ ಡೊಂಕ ತಿದ್ದಿದ ಬಸವಣ್ಣನವರಿಗೆ ತಮ್ಮ ನಿಲುವಿನಲ್ಲೇ ನಿಲುವಿಲ್ಲದ ದ್ವಂದ್ವ ಪುರುಷ ಎನಿಸುತ್ತಾರೆ. ಈ ದ್ವಂದ್ವಗಳು ಬಸವಣ್ಣರಲ್ಲದೇ ಎಲ್ಲ ವಚನಕಾರರ ವಚನಗಳಲ್ಲಿ ಸಹ ಢಾಳಾಗಿ ಕಾಣಿಸುತ್ತವೆ. ಹಾಗಾಗಿಯೇ ವಚನಗಳು ಸ್ಪಷ್ಟ ನಿಲುವು ಬಯಸುವ ಧಾರ್ಮಿಕ ಗ್ರಂಥಗಳಾಗಲು ಅರ್ಹವಲ್ಲ. ಅವು ಸಾಂದರ್ಭಿಕ ಚರ್ಚೆಯ ಉಕ್ತಿಗಳಷ್ಟೇ! ದಾಸ ಸಾಹಿತ್ಯ, ಕೀರ್ತನೆ, ಜನಪದೀಯ ತತ್ವಪದಗಳಂತೆಯೇ ವಚನಗಳನ್ನು ತತ್ವಪದಗಳು ಎನ್ನಬಹುದು. ಹಾಗಾಗಿ ಬಸವಣ್ಣನವರು ಸಹ ಭಕ್ತಿಪಂಥದಲ್ಲಿ ಉದಯಿಸಿದ ಒಬ್ಬ ತತ್ವಜ್ಞಾನಿ ಆಗಿದ್ದಾರೆ. ಅಲ್ಲದೇ ಹಲವಾರು ವಚನಕಾರರೇ ಬಸವಣ್ಣನವರನ್ನು ಭಕ್ತಸ್ಥಲದ ಮೂರ್ತರೂಪ ಎಂದು ಅವರನ್ನು ಷಟ್‌ಸ್ಥಲದ ಮೊದಲ ಮೆಟ್ಟಿಲಾದ ಭಕ್ತಸ್ಥಲಕ್ಕೆ ಸೀಮಿತಗೊಳಿಸಿದ್ದಾರೆ. ಹಾಗಾಗಿಯೇ ಬಸವಣ್ಣನವರು 'ಭಕ್ತಿ ಭಂಡಾರಿ' ಎನಿಸಿರುವುದು. ಹೀಗೆ ಬಸವಣ್ಣನವರನ್ನು ಭಕ್ತಸ್ಥಲಕ್ಕೆ ಸೀಮಿತಗೊಳಿಸಿದ ಕೆಲವು ವಚನಗಳು ಹೀಗಿವೆ:

''ಭಕ್ತಸ್ಥಲ ಸಂಗನ ಬಸವಣ್ಣಂಗಾಯಿತ್ತು. ಮಾಹೇಶ್ವರ ಸ್ಥಲ ಮಡಿವಾಳಯ್ಯಂಗಾಯಿತ್ತು. ಪ್ರಸಾದಿಸ್ಥಲ ಚನ್ನಬಸವಣ್ಣಂಗಾಯಿತ್ತು. ಪ್ರಾಣಲಿಂಗಿಸ್ಥಲ ಚಂದಯ್ಯಂಗಾಯಿತ್ತು. ಶರಣಸ್ಥಲ ಘಟ್ಟಿವಾಳಯ್ಯಂಗಾಯಿತ್ತು. ಐಕ್ಯಸ್ಥಲ ಅಜಗಣ್ಣಂಗಾಯಿತ್ತು. ಇಂತೀ ಷಡುಸ್ಥಲಬ್ರಹ್ಮಿಗಳೆಲ್ಲರೂ ಎನ್ನಂಗದ ಮೊರದ ಮಾರಿಯ ಸಂಗಾತದಲ್ಲೈದಾರೆ. ಆರಂಗದ ಮೂರು ಸಂಗದ ತೋರಿಕೆಯ ತೋರಾ, ಕಾಲಾಂತಕ ಭೀಮೇಶ್ವರಲಿಂಗವೆ'' (ಡಕ್ಕೆಯ ಬೊಮ್ಮಣ್ಣ ಸಮಗ್ರ ವಚನ ಸಂಪುಟ: 7. ವಚನದ ಸಂಖ್ಯೆ: 951).

''ಭಕ್ತಸ್ಥಲ ಸಾಧ್ಯವಾಯಿತ್ತು ಸಂಗನಬಸವರಾಜದೇವರಿಗೆ. ಮಾಹೇಶ್ವರಸ್ಥಲ ಸಾಧ್ಯವಾಯಿತ್ತು ಮಡಿವಾಳಮಾಚಿತಂದೆಗಳಿಗೆ. ಪ್ರಸಾದಿಸ್ಥಲ ಸಾಧ್ಯವಾಯಿತ್ತು ಬಿಬ್ಬಿಬಾಚಯ್ಯಗಳಿಗೆ. ಪ್ರಾಣಲಿಂಗಿಸ್ಥಲ ಸಾಧ್ಯವಾಯಿತ್ತು ಅನುಮಿಷದೇವರಿಗೆ. ಶರಣಸ್ಥಲ ಸಾಧ್ಯವಾಯಿತ್ತು ಅಲ್ಲಮಪ್ರಭುದೇವರಿಗೆ. ಐಕ್ಯಸ್ಥಲ ಸಾಧ್ಯವಾಯಿತ್ತು ಅಜಗಣ್ಣಗಳಿಗೆ. ಸರ್ವಾಚಾರಸ್ಥಲ ಸಾಧ್ಯವಾಯಿತ್ತು, ಚೆನ್ನಬಸವಯ್ಯಗಳಿಗೆ. ಎನಗೆ ಷಟಸ್ಥಲಸರ್ವಾಚಾರವೆ ಸಾಧ್ಯವಾಗಿ ಇಂತಿವರ ನೆನೆದು ಶುದ್ಧನಾದೆನು ಕಾಣಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ'' (ಉರಿಲಿಂಗಪೆದ್ದಿ, ಸಮಗ್ರ ವಚನ ಸಂಪುಟ: 6. ವಚನದ ಸಂಖ್ಯೆ: 1474).

''ಭಕ್ತಸ್ಥಲ ಬಸವಣ್ಣಂಗಾಯಿತ್ತು. ಮಾಹೇಶ್ವರಸ್ಥಲ ಮಡಿವಾಳಂಗಾಯಿತ್ತು. ಪ್ರಸಾದಿಸ್ಥಲ ಚೆನ್ನಬಸವಣ್ಣಂಗಾಯಿತ್ತು. ಪ್ರಾಣಲಿಂಗಿಸ್ಥಲ ಸಿದ್ಧರಾಮಯ್ಯಂಗಾಯಿತ್ತು. ಶರಣಸ್ಥಲ ಪ್ರಭುದೇವರಿಗಾಯಿತ್ತು. ಐಕ್ಯಸ್ಥಲ ಅಜಗಣ್ಣಂಗಾಯಿತ್ತು. ಎನಗಿನ್ನಾವ ಸ್ಥಲವೂ ಇಲ್ಲವೆಂದು ನಾನಿರಲು, ಇಂತಿವರೆಲ್ಲಾ ಷಡುಸ್ಥಲ ಪ್ರಸಾದವನಿತ್ತರಾಗಿ, ನಾನು ಮುಕ್ತನಾದೆನು ಕಾಣಾ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ'' (ಸ್ವತಂತ್ರ ಸಿದ್ಧಲಿಂಗ, ಸಮಗ್ರ ವಚನ ಸಂಪುಟ: 11. ವಚನದ ಸಂಖ್ಯೆ: 938).

ಹೀಗೆ ಸರ್ವ ವಚನಕಾರರೂ ಸರ್ವಸಮ್ಮತರಾಗಿ ಬಸವಣ್ಣನವರನ್ನು ಭಕ್ತಿಗೆ ಆದರ್ಶವಾಗಿಸಿದ್ದಾರೆ. ಅಲ್ಲಿಗೆ ಭಕ್ತಿಯೇ ಬಸವತತ್ವ!

ಇಂಥ ಬಸವತತ್ವವನ್ನು ಅಪವ್ಯಾಖ್ಯಾನಗೊಳಿಸಿ ಕಾರ್ಲ್ ಮಾರ್ಕ್ಸ್, ಪ್ರಜಾಪ್ರಭುತ್ವವಾದಿ, ಸಮಾಜವಾದಿ ಇತ್ಯಾದಿಯಾಗಿ ಅಧ್ಯಾತ್ಮಹೀನ ನಾಸ್ತಿಕನನ್ನಾಗಿಸಿರುವ ಲಿಂಗಾಹತರು ತಮ್ಮ ಸ್ವತತ್ವಕ್ಕೆ ಬಸವ ಕವಚ ತೊಡಿಸಿದ್ದಾರೆ. ''ಮೂತ್ರ ಮಾಡಬಾರದು, ತಾಂಬೂಲ ಉಗಿಯಬಾರದು'' ಎಂದು ಮೂಲೆಗಳಲ್ಲಿ ಹೇಗೆ ದೇವರುಗಳ ಟೈಲ್ಸ್ ಅಳವಡಿಸಿರುತ್ತಾರೋ ಹಾಗೆ ಬಸವಣ್ಣನವರನ್ನು ಬಳಸುತ್ತಾರೆ. ವಚನಗಳನ್ನು ತಾವಷ್ಟೇ ವ್ಯಾಖ್ಯಾನಿಸಬೇಕು, ತಾವು ಹೇಳಿದ್ದೇ ಧರ್ಮ, ತಾವಷ್ಟೇ ಬಸವನ ವಾರಸುದಾರರು ಇತ್ಯಾದಿಯಾದ ಎಲ್ಲಾ ಮೂಲಭೂತವಾದ ಇವರದಾಗಿರುವುದು ಬಸವ ತಾಲಿಬಾನಿತನವೇ ಆಗಿದೆ.

ಇನ್ನು ಇದೇ ಗುಂಪಿನ ಕಾವಿವೇಷದ 'ಲಿಂಗಾಹತ ಲಿಂಗಾಯತ ಮಠಾಧೀಶರರ ಒಕ್ಕೂಟ'ವು ''ಬಸವಣ್ಣನ ವಿರುದ್ಧ ಸೂಡೋ ಲಿಂಗಾಯತರು, ಬಸವಣ್ಣ ವೀರಶೈವ ಧರ್ಮ ಸ್ವೀಕರಿಸಿದ ಎನ್ನುವ ಷಡ್ಯಂತ್ರದ ಬಸವ ವಿರೋಧಿಗಳು...'' ಇತ್ಯಾದಿ ಯಾಗಿ ಅಪಾನವಾಯುಪೀಡಿತವಾಗಿ ಗುಡುಗುತ್ತಿದೆ.

ಭಾಗ-1

ಇವರ ಆರೋಪಗಳು ಪುಂಖಾನುಪುಂಖ ಸುಳ್ಳುಗಳು ಎಂದು ಬಸವಣ್ಣನವರೇ ತಮ್ಮ ವಚನವೊಂದರಲ್ಲಿ ಓರ್ವ ಭಕ್ತನಾದ ತಾನು ಯಾರ ಭಕ್ತ? ತನ್ನ ಗುರು ಯಾರು? ತನ್ನ ಧರ್ಮವಾವುದು? ಎಂಬೆಲ್ಲಾ ಪ್ರಶ್ನೆಗಳಿಗೆ ಸ್ಫಟಿಕದ ಶಲಾಖೆಯಷ್ಟು ಸ್ಪಷ್ಟವಾದ ಉತ್ತರ ನೀಡಿದ್ದಾರೆ. ಅದು ಹೀಗಿದೆ: ''ಎನ್ನ ಬಂದ ಭವಂಗಳನು ಪರಿಹರಿಸಿ, ಎನಗೆ ಭಕ್ತಿಘನವೆತ್ತಿ ತೋರಿ, ಎನ್ನ ಹೊಂದಿದ ಶೈವಮಾರ್ಗಂಗಳನತಿಗಳೆದು, ನಿಜವೀರಶೈವಾಚಾರವನರುಹಿ ತೋರಿ, ಎನ್ನ ಕರಸ್ಥಲದ ಸಂಗಮನಾಥನಲ್ಲಿ ಮಾಡುವ ಜಪ ಧ್ಯಾನ ಅರ್ಚನೆ ಉಪಚರಿಯ ಅರ್ಪಿತ ಪ್ರಸಾದಭೋಗಂಗಳಲ್ಲಿಸಂದಿಸಿದ ಶೈವಕರ್ಮವ ಕಳೆದು, ಭವಮಾಲೆಯ ಹರಿದು, ಭಕ್ತಿಮಾಲೆಯನಿತ್ತು, ಭವಜ್ಞಾನವ ಕೆಡೆಮೆಟ್ಟಿ, ಭಕ್ತಿಜ್ಞಾನವ ಗಟ್ಟಿಗೊಳಿಸಿ, ಭವಮಾಟಕೂಟವ ಬಿಡಿಸಿ, ಭಕ್ತಿಮಾಟಕೂಟವ ಹಿಡಿಸಿ, ಭವಶೇಷವನುತ್ತರಿಸಿ, ಭಕ್ತಿಶೇಷವನಿತ್ತು, ಎನಗೆ, ಎನ್ನ ಬಳಿವಿಡಿದು ಬಂದ ಶರಣಗಣಂಗಳೆಲ್ಲರಿಗೆ ಶಿವಸದಾಚಾರದ ಘನವನರುಹಿ ತೋರಿ, ಮರ್ತ್ಯಲೋಕದಲ್ಲಿ ಸತ್ಯಸದಾಚಾರವನು ಹರಿಸಿ, ಶಿವಭಕ್ತಿಯನುದ್ಧರಿಸಿ, ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣ ಎನ್ನನಾಗುಮಾಡಿ ಉಳುಹಿದನಾಗಿ ಇನ್ನೆನಗೆ ಭವವಿಲ್ಲದೆ, ಬಂಧನವಿಲ್ಲದೆ, ಭಕ್ತಿ ಮಾಟಕೂಟದ ಗೊತ್ತಿನಲ್ಲಿರ್ದು ನಾನು ಚೆನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕುವೆನು''.

ಅಲ್ಲಿಗೆ ಬಸವಣ್ಣ ವೀರಶೈವ ದೀಕ್ಷೆ ಪಡೆದು ಗುರುವಿನ ಅನುಗ್ರಹ ಪಡೆದು ಭಕ್ತನಾಗಿ ಬಾಳುವೆನು ಎಂದು ಘೋಷಿಸಿಕೊಂಡಿದ್ದಾರೆ ಎಂಬುದು ಸರ್ವಮಾನ್ಯ ಸತ್ಯವಾಗಿದೆ.

ಹೀಗೆ ತಾನೇ ಖುದ್ದು ವೀರಶೈವನಾದೆ ಎಂದರೂ, ''ನೀನ್ಯಾವ ವೀರಶೈವ? ನೀನೇನು ಹೇಳುವುದು! ನೀನು ಲಿಂಗಾಯತ. ನೀನು ಸಮಾಜವಾದಿ. ನೀನು ಕಮ್ಯುನಿಸ್ಟ್. ನೀನು ನಮ್ಮ ರಾಜಕೀಯ ಸ್ಫೂರ್ತಿ. ನಾವು ಹೇಳಿದಂತೆ ಕೇಳಿಕೊಂಡು ಉತ್ಸವಮೂರ್ತಿಯಾಗಿರು, ಬಸವಾ'' ಎಂದು ಇಂದಿನ ಬಸವಚರ್ಮ ಹೊದ್ದ ತೋಳಗಳು ಫರ್ಮಾನು ಹೊರಡಿಸಿವೆ. ಅಲ್ಲದೇ ಇವರ ಸುಳ್ಳಿನ ರೋಗವು ಶ್ರಾವಣ ಮಾಸದಲ್ಲಿ ಶುನಕಗಳು ಕುಂಯ್ಗುಡುತ್ತ ಒಂದರ ಹಿಂಬದಿಯನ್ನು ಒಂದು ಮೂಸುತ್ತಾ ಸಾಗುವ ಉಲ್ಬಣಾವಸ್ಥೆಯ ಸ್ಥಿತಿಯಂತೆ ಈ ಶ್ರಾವಣದಲ್ಲಿ ತಲುಪಿದೆ.

ಇದಕ್ಕೆ ಕಾರಣ ಕೇಂದ್ರದ ಜನಗಣತಿ ಎಂಬ ಶ್ರಾವಣ!: ಬಸವಣ್ಣನವರಿಗೆ ಹೇಗೆ ಫರ್ಮಾನು ಹೊಡೆಸಿ ಲಿಂಗಾಯತ ಮಾಡಿದ್ದಾರೋ ಅದೇ ರೀತಿ ಈ ಒಕ್ಕೂಟವು ಜನಗಣತಿಯಲ್ಲಿ 'ಹೀಗೆ ಬರೆಸಿ ಹಾಗೆ ಬರೆಸಿ'' ಎಂದು ಧಾರ್ಮಿಕರಿಗೆ ಈಗ ಫರ್ಮಾನು ಹೊರಡಿಸಿದೆ. ಇವರು ಏನೇ ಫರ್ಮಾನು ಹೊರಡಿಸಿದರೂ ಈ ಒಕ್ಕೂಟದ ಜಾತಿಪೀಠಗಳ ಜಾತಿಯವರು ಬರೆಸುವುದು ಹಿಂದೂ ಸಾದರು, ಹಿಂದೂ ಬೋವಿ, ಹಿಂದೂ ಕ್ಷೌರಿಕ, ಹಿಂದೂ ಅಗಸ, ಹಿಂದೂ ಜಂಗಮ ಇತ್ಯಾದಿ ಮೀಸಲಾತಿ ಪ್ರಣೀತ ಜಾತಿಗಳನ್ನೇ ಹೊರತು ಲಿಂಗಾಯತ ಎಂದಲ್ಲ.

ಅಂದಹಾಗೆ ಈ ಒಕ್ಕೂಟದ ಐದು ಜಾತಿಪೀಠಗಳಲ್ಲದೆ ಉಳಿದ ವಿರಕ್ತರನ್ನೂ ಸೇರಿಸಿ ನೋಡಿದಾಗ ಇವರು ಲಿಂಗಾಯತ ಮಠಾಧೀಶರು ಎನ್ನಿಸಿಕೊಳ್ಳಲು ಅರ್ಹರೇ ಅಲ್ಲ. ಇವರೆಲ್ಲರೂ ಲಿಂಗಾಯತಕ್ಕೆ ಹೊರಗು. ಏಕೆಂದರೆ ಇವರು ಲಿಂಗಾಯತವು ಸ್ಪಷ್ಟವಾಗಿ ಹೇಳಿರುವ ಯಾವ ಮಲತ್ರಯಗಳನ್ನೂ ಕಳೆದುಕೊಂಡಿಲ್ಲ ಮತ್ತು ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನು ನಿರೂಪಿಸಿದ ದೀಕ್ಷಾ ವಿಧಿವಿಧಾನದನ್ವಯ ದೀಕ್ಷೆಯನ್ನೇ ಪಡೆದುಕೊಂಡಿಲ್ಲ! ಹೀಗಿದ್ದಾಗ ಇವರು ಯಾವ ಸೀಮೆಯ ಲಿಂಗಾಯತರು? ಭಕ್ತಸ್ಥಲಕ್ಕೂ ಅರ್ಹರಲ್ಲದ ಇವರು ಅದ್ಯಾವ ಲಿಂಗಾಯತ ಪೀಠದ ಗೂಟಗಳು? ಎಂದು ಅಖಂಡ ವೀರಶೈವ (ಲಿಂಗಾಯತ) ಧರ್ಮೀಯರು ಪ್ರಶ್ನಿಸಿಕೊಂಡು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

ಅಂದ ಹಾಗೆ ಮಲತ್ರಯಗಳು ಎಂದರೆ ಏನು? ಚೆನ್ನಬಸವಣ್ಣನು ರೂಪಿಸಿದ ದೀಕ್ಷಾ ವಿಧಾನ ಯಾವುದು?

ಮಲತ್ರಯಗಳು: ಬಸವಕಾಲೀನನಾದ ಸಕಲೇಶ ಮಾದರಸನ ಮೊಮ್ಮಗನಾದ ಕೆರೆಯ ಪದ್ಮರಸನು 'ದೀಕ್ಷಾ ಬೋಧೆ' ಎಂಬ ಗ್ರಂಥವನ್ನು ಬರೆದು ಮಲತ್ರಯ, ದೀಕ್ಷಾ ವಿಧಿವಿಧಾನಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾನೆ. ಇದನ್ನು ಕರ್ನಾಟಕ ವಿಶ್ವವಿದ್ಯಾಲಯದ ಡಾ. ಬಿ.ಬಿ. ಹೆಂಡಿಯವರು ಸಂಪಾದಿಸಿದ್ದಾರೆ. 12ನೇ ಶತಮಾನದ ವಚನಕಾರರ ಅತ್ಯಂತ ಸಮೀಪದ ಕಾಲದಲ್ಲಿ ಅಂದರೆ ಸುಮಾರು 50 ವರ್ಷಗಳ ಅಂತರದಲ್ಲಿ ಪದ್ಮರಸನು ಬಾಳಿದ್ದನು. ಆದರೆ ಈತನ ಗ್ರಂಥಗಳಲ್ಲಿ ಎಲ್ಲಿಯೂ ಬಸವಣ್ಣ, ಕಲ್ಯಾಣ ಕ್ರಾಂತಿ, ಶರಣರ ಬಗ್ಗೆ ಒಂದೇ ಒಂದು ಪದವಿಲ್ಲ. ಖುದ್ದು ತನ್ನ ಅಜ್ಜ ವಚನಗಳನ್ನು ಬರೆದಿದ್ದ ಎಂದು ಈತನು ಎಲ್ಲಿಯೂ ಉಲ್ಲೇಖಿಸಿಲ್ಲ. ಬಸವಪೂರ್ವದ ಕೊಂಡಗುಳಿ ಕೇಶಿರಾಜ, ದೇವರ ದಾಸಿಮಯ್ಯರ ಕುರಿತಾದ ಐತಿಹಾಸಿಕ ಮಾನ್ಯತೆ ಪಡೆದ ಪುರಾವೆಗಳಿವೆ. ಬಸವೋತ್ತರ ತೋಂಟದ ಸಿದ್ಧಲಿಂಗರ ಕುರಿತಾದ ಮತ್ತು ನಂತರದ ಶರಣರ ಇತಿಹಾಸವಿದೆ. ಆದರೆ ಬಸವಕಾಲೀನ ಶರಣರ ಯಾವುದೇ ಐತಿಹಾಸಿಕ ಮಾನ್ಯತೆ ಪಡೆದ ಪುರಾವೆ ಇಲ್ಲ. ಇದನ್ನು ಪುಷ್ಟೀಕರಿಸಲು ವಚನಗಳ ಒಂದೇ ಒಂದು ತಾಳೆಗರಿ 15ನೇ ಶತಮಾನಕ್ಕೂ ಮುಂಚೆ ಸಿಕ್ಕಿಲ್ಲ. ಈ ಐತಿಹಾಸಿಕ ಪುರಾವೆಗಳ ಗೈರನ್ನೂ ಅಖಂಡ ವೀರಶೈವ (ಲಿಂಗಾಯತ) ಧರ್ಮೀಯರು ಪ್ರಶ್ನಿಸಿಕೊಂಡು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

ಇರಲಿ, ಕೆರೆಯ ಪದ್ಮರಸನು ಸಹ ಚೆನ್ನಬಸವಣ್ಣನು ನಿರೂಪಿಸಿದ್ದಾನೆ ಎನ್ನುವ ದೀಕ್ಷಾ ವಿಧಿವಿಧಾನಗಳನ್ನೇ ಸವಿಸ್ತಾರವಾಗಿ ತನ್ನ 'ದೀಕ್ಷಾ ಬೋಧೆ'ಯಲ್ಲಿ ವಿವರಿಸಿದ್ದಾನೆ. ಈ ಗ್ರಂಥದ ಸಾರವು ಹೀಗಿದೆ: ಮಲತ್ರಯನಿವಾರಣೆಯು ದೀಕ್ಷಾ ಸಂಸ್ಕಾರದಲ್ಲಿ ಜರುಗುವ ಒಂದು ಮುಖ್ಯ ಪ್ರಕ್ರಿಯೆ. ದೀಕ್ಷಾ ಬೋಧೆಯ ಪ್ರಥಮಸ್ಥಲದಲ್ಲಿ ಗುರುವು ಶಿಷ್ಯನಿಗೆ ದೀಕ್ಷೆಯೀಯುವ ಪೂರ್ವದಲ್ಲಿ, ಮಲತ್ರಯಗಳು ಭಕ್ತಿಗೆ ವಿಘ್ನಗಳು, ಅವುಗಳನ್ನು ಕಳೆದಲ್ಲದೆ ದೀಕ್ಷೆ ಘಟಿಸದು ಎಂದು ಹೇಳಿ ಮಲತ್ರಯಸ್ವರೂಪವನ್ನೂ ಅವುಗಳ ನಿವಾರಣೋಪಾಯಗಳನ್ನು ವಿವರಿಸಲಾಗಿದೆ. 'ಆಣವ ಮಲ'ವು ರೇತರಕ್ತದ ಜಠರಜಾತ ಅಥವಾ ಗರ್ಭಸಂಬಂಧಿಯಾಗಿ ಅಣುರೂಪವಾದುದು, 'ಮಾಯಾಮಲ'ವು ಜಾತಿಧರ್ಮಗಳ ಸುಪ್ರೀತಿರೂಪವಾದುದು ಮತ್ತು 'ಕಾರ್ಮಿಕಮಲ'ವು ಧನದ ಮೇಲಿನ ಕಾಂಕ್ಷಾರೂಪವಾದುದು. ಈ ಮಲಗಳನ್ನು ಗುರುವು ಅನುಕ್ರಮವಾಗಿ ವೇಧಾ, ಮಂತ್ರ ಹಾಗೂ ಕ್ರಿಯಾದೀಕ್ಷೆಗಳ ಪ್ರಕ್ರಿಯೆಯಿಂದ ಕಳೆಯುವನೆಂದು ಎಲ್ಲಾ ವೀರಶೈವ (ಲಿಂಗಾಯತ) ಶಾಸ್ತ್ರಗ್ರಂಥಗಳಲ್ಲಿ ನಿರೂಪಿಸಲಾಗಿದೆ.

ಆಣವಮಲವು ತೊಲಗಬೇಕಾದರೆ ದೀಕ್ಷಾಪೇಕ್ಷೆಯಲ್ಲಿ ತನ್ನ ಜನನದ ಬಗೆಗೆ ಸರಿಯಾದ ತಿಳಿವಳಿಕೆ ಇರತಕ್ಕುದು. ತಾನು ತಂದೆ ತಾಯಿಗಳ ಉಭಯ ಬಿಂದುಜಾತನೆಂಬ ಭ್ರಾಂತಿ ಇರತಕ್ಕುದಲ್ಲ. ಉತ್ಪತ್ತಿಗೆ ಪಿತಮಾತೆಯೆಂದೂ ಸ್ಥಿತಿ ಲಯಕ್ಕೆ ಶಿವನೆಂದೂ ಹೇಳುವುದು ಮರುಳತನ. ತಾಯಿತಂದೆಗಳಿಂದ ಮಗುವು ಜನಿಸುವುದಾದರೆ ಜನಿಸುವ ಪೂರ್ವದಲ್ಲಿ ಅದನ್ನು ಗಂಡು ಅಥವಾ ಹೆಣ್ಣು ಎಂದು ಅರಿತು ಹೆಸರಿಡಬಲ್ಲರೆ? ಹಾಗಾಗಿ ಶಿವನಲ್ಲದೆ ಜೀವಿಗಳ ಜನ್ಮಕ್ಕೆ ಬೇರೆ ಯಾರೂ ಕಾರಣರಲ್ಲವೆಂಬುದು ಸ್ಪಷ್ಟವಾಗುತ್ತದೆ ಎನ್ನಲಾಗಿದೆ.

ಇನ್ನು ಮಾಯಾಮಲವನ್ನು ಜಾಳಿಸಲು ಕುಲವೆಂಬ ಕಾಳ್ಮರುಳತನವನ್ನು ತ್ಯಜಿಸತಕ್ಕುದು. ಕುಲದ ನೆಲೆಯನ್ನು ಅರಿಯುವುದಾದರೆ ಹೊಲೆಯೆಂಬುದೆ ಉಂಟಲ್ಲದೆ ಶುದ್ಧ ಕುಲವಿಲ್ಲ. ಕಾಯಕ್ಕೆ ಕುಲವೋ, ಜೀವಕ್ಕೆ ಕುಲವೋ-ಈ ಎರಡರಲ್ಲಿ ಯಾವುದಕ್ಕೆ ಸತ್ಕುಲವಿದೆ? ಕಾಯವಾದರೋ ಹೊಲೆಯಲ್ಲಿ ಹುಟ್ಟಿದುದು; ಜೀವವೋ ನಿರವಯವಾದುದು. ಇವೆರಡಕ್ಕೆ ಸತ್ಕುಲವಿರಲು ಸಾಧ್ಯವಿಲ್ಲ. ಸತ್ಕುಲದ ವಿಚಾರ ಕೇವಲ ಅಹಂಕಾರದ ಮಾತು. ತಾಯಿತಂದೆಗಳಿಂದ ಹುಟ್ಟಿದೆವೆನ್ನುವವರು ಅವರ ಮಲದಿಂದ ಬಂದವರಷ್ಟೆ. ಎಂದಮೇಲೆ ಆ ದುಷ್ಕುಲವನ್ನು ಯಾರು ಕಳೆಯಲು ತಾನೇ ಸಾಧ್ಯ? ಮಗುವು ತಾಯ ಗರ್ಭದಲ್ಲಿ ಹುಟ್ಟುವ ಮೊದಲು ಆಕೆಗೆ ಸೂತಕಗಳಾಗುತ್ತಿರುತ್ತವೆ. ಮುಟ್ಟು ತಡೆದಾಗ ಆ ಸೂತಕದ ರಕ್ತದಲ್ಲಿ ರೇತವು ಕೂಡಿ ಈ ಕುಲಮದದ ಪಿಂಡ ಹುಟ್ಟಿ ಬೆಳೆಯುತ್ತದೆ. ಹೀಗೆ ಹೊಲೆಯಲ್ಲಿ ಉದಿಸಿದ ಶರೀರವನ್ನು ಹಿಡಿದು ಸತ್ಕುಲವೆಂದು ಹೋರಾಡುವವರನ್ನು ಕಂಡು ಜ್ಞಾನಿಗಳು ಹೇಸುವರು. ಹೊಟ್ಟೆಯಲ್ಲಿ ಹೊಲೆ, ಹುಟ್ಟುವಲ್ಲಿ ಹೊಲೆ, ಹೊಂದುವಲ್ಲಿ ಹೊಲೆ, ನಟ್ಟ ನಡುವೆ ಸತ್ಕುಲ ಹೇಗೆ ತಾನೇ ಬಂದೀತು. ಹೊಲೆ ಹೊದ್ದಿದವನು ಕುಲಜನು ಹೇಗೆ ತಾನೇ ಆದಾನು. ಉತ್ತಮಸುವರ್ಣ ಹಿತ್ತಾಳೆಯಾಗಲಾರದು. ಹಿತ್ತಾಳೆಯು ಸುವರ್ಣವಾಗಲಾರದು. ಒಮ್ಮೆ ಹೊಲೆ ಒಮ್ಮೆ ಕುಲವೆಂದು ಹೋರಾಡುವವರು ತುಚ್ಛರು. ಅವರ ಮಾತನ್ನು ಜ್ಞಾನಿಗಳೆಂದೂ ಮೆಚ್ಚರು. ಸತ್ಕುಲದವರಿಗೆ ಹೊಲೆಯೆಂಬುದೆ ಇರುವುದಿಲ್ಲ ಎನ್ನಲಾಗಿದೆ.

(ಮುಂದುವರಿಯುವುದು)

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:216

ಸಮಾಚಾರ ಸಣ್ಣದಲ್ಲ

ಪಾಕ್ ಮೇಘಸ್ಫೋಟ: 300ಕ್ಕೂ ಅಧಿಕ ಸಾವು

ಇಸ್ಲಾಮಾಬಾದ್: ನೆರೆಯ ಪಾಕಿಸ್ತಾನದ ಖೈಬರ್ ಫಖ್ತುಂಖ್ವಾ ಪ್ರದೇಶದಲ್ಲಿಯೂ ಜಮ್ಮು- ಕಾಶ್ಮೀರ ದಲ್ಲಾದಂತೆ ಮೇಘಸ್ಫೋಟವಾಗಿದೆ. ಭಾರೀ ಮಳೆ ಸುರಿದು ದಿಢೀರ್ ಪ್ರವಾಹ ಸೃಷ್ಟಿಯಾಗಿ ನೂರಾರು ಮನೆಗಳು, ಕಟ್ಟಡಗಳು, ವಾಹನಗಳು ಕೊಚ್ಚಿಕೊಂಡು ಹೋಗಿವೆ. 300ಕ್ಕೂ ಅಧಿಕ ಮಂದಿ ಜೀವ ಕಳೆದುಕೊಂಡಿದ್ದಾರೆ. ಖೈಬರ್‌ಫಖ್ತುಂಖ್ವಾ ಪ್ರದೇಶದಲ್ಲಿನ ಬುನೇರ್ ಜಿಲ್ಲೆ ಹೆಚ್ಚು ಹಾನಿಗೊಳಗಾಗಿದೆ. ಬುನೇರ್ ಜಿಲ್ಲೆಯೊಂದರಲ್ಲಿಯೇ 180ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದಾರೆ. ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಸೇನೆ ಹಾಗೂ ಸ್ಥಳೀಯ ಆಡಳಿತ ತಂಡಗಳು ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿವೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ಭಾನುವಾರ ಮಾಹಿತಿ ನೀಡಿದ್ದಾರೆ.

ಪಂಜಾಬ್‌ನಲ್ಲಿ ಎಎಪಿ ನಿಷೇಧಿಸಿ: ಎಸ್‌ಎಡಿ

ಚಂಢೀಗಡ: ದೆಹಲಿಯಲ್ಲಿ ಈ ಹಿಂದೆ ಎಎಪಿ ಸರಕಾರದಲ್ಲಿ ಸಚಿವರಾಗಿದ್ದ ಮನೀಶ್ ಸಿಸೋಡಿಯಾ ಅವರು ಪಂಜಾಬ್ ಕುರಿತು ಪ್ರಚೋದನಕಾರಿ ಹೇಳಿಕೆಗಳನ್ನು ನೀಡಿದ್ದಾರೆ. ಹಾಗಾಗಿ, ದೆಹಲಿ ಎಎಪಿ ಸರಕಾರದ ಭ್ರಷ್ಟಾಚಾರ ಪ್ರಕರಣದಲ್ಲಿ ಈ ಹಿಂದೆ ಬಂಧಿತರಾಗಿದ್ದ ಅವರಿಗೆ ನೀಡಿರುವ ಜಾಮೀನು ರದ್ದುಗೊಳಿಸಬೇಕು. ಸಿಸೋಡಿಯಾ ಪಂಜಾಬ್‌ನಲ್ಲಿ 'ಸೋದರರ ನಡುವೆ ರಕ್ತಪಾತ' ಹೇಳಿಕೆ ಮೂಲಕ ಪ್ರಚೋದನೆ ಮಾಡುತ್ತಿದ್ದಾರೆ. ಸೂಕ್ಷ್ಮ ಗಡಿ ರಾಜ್ಯ ಪಂಜಾಬ್‌ನಲ್ಲಿ ಅಪಾಯಕಾರಿ ಘಟನೆಗಳು ಸಂಭವಿಸುವುದನ್ನು ತಡೆಯಲು ಆಮ್ ಆದ್ಮಿ ಪಕ್ಷ(ಎಎಪಿ) ಪಂಜಾಬ್‌ನಲ್ಲಿ ಮುಂಬರುವ ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಬೇಕು ಎಂದು ಶಿರೋಮಣಿ ಅಕಾಲಿ ದಳ(ಎಸ್‌ಎಡಿ) ನಾಯಕ ಡಾ. ದಲ್ಜಿತ್ ಸಿಂಗ್ ಚೀಮಾ ನ್ಯಾಯಾಲಯ ಮತ್ತು ಚುನಾವಣಾ ಆಯೋಗಕ್ಕೆ ಆಗ್ರಹಿಸಿದ್ದಾರೆ. ದಲ್ಜಿತ್ ಆಗ್ರಹಕ್ಕೆ ಬಿಜೆಪಿ ಪಂಜಾಬ್ ಘಟಕವೂ ದನಿಗೂಡಿಸಿದೆ.

ವಾಷಿಂಗ್ಟನ್: ಟ್ರಂಪ್ ವಿರುದ್ಧ ಪ್ರತಿಭಟನೆ

ವಾಷಿಂಗ್ಟನ್: ವಾಷಿಂಗ್ಟನ್ ಡಿಸಿ ಮಹಾನಗರದಲ್ಲಿನ ಪೊಲೀಸ್ ಇಲಾಖೆಯನ್ನು ಸ್ಥಳೀಯ ಆಡಳಿತದ ಬದಲಾಗಿ ಒಕ್ಕೂಟ ಸರಕಾರದ ನಿಯಂತ್ರಣದಲ್ಲಿ ಇರಿಸುವುದಾಗಿ ಮತ್ತು ನ್ಯಾಷನಲ್ ಗಾರ್ಡ್ಸ್ ಪಡೆಯ 800 ಯೋಧರನ್ನು ಮಹಾನಗರದ ಭದ್ರತೆಗೆ ನಿಯೋಜಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿರುವುದಕ್ಕೆ ನಗರದ ನಾಗರಿಕರು ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಸಿ ವಿರೋಧ ವ್ಯಕ್ತಪಡಿಸಿದ್ದಾರೆ. ವಾರಾಂತ್ಯ ದಿನವಾದ ಶನಿವಾರ ಶ್ವೇತಭವನದ ಎದುರು ಮತ್ತು ಪ್ರಮುಖ ರಸ್ತೆಗಳಲ್ಲಿ ಭಿತ್ತಿಪತ್ರಗಳನ್ನು ಹಿಡಿದು ದೊಡ್ಡ ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ.

ಅಮ್ಮನನ್ನೇ 2 ಬಾರಿ ಅತ್ಯಾಚಾರ ಮಾಡಿದ

ದೆಹಲಿ: ತಾಯಿಯ ಅಕ್ರಮ ಸಂಬಂಧದ ಬಗ್ಗೆ ತಿಳಿದು ಸಿಟ್ಟಿಗೆದ್ದ ಮಗ ತಾಯಿ ಮೇಲೆ ಎರಡು ಬಾರಿ ಅತ್ಯಾಚಾರ ನಡೆಸಿದ್ದು, ಸಂತ್ರಸ್ತ ತಾಯಿಯ ಪರವಾಗಿ ಮಗಳು ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾಳೆ. ಆರೋಪಿ ಪುತ್ರ ಎಂಡಿ ಫಿರೋಜ್ ಅಲಿಯಾಸ್ ಸುಹೇಲ್(29) ಎಂಬಾತನನ್ನು ದೆಹಲಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ. 'ಅಕ್ರಮ ಸಂಬಂಧ ಹೊಂದಿದ್ದಾರೆ ಎಂದು ಶಂಕೆಗೊಂಡಿದ್ದ ಮಗ, 'ನಿಮ್ಮ ಜೊತೆ ಮಾತನಾಡಬೇಕು' ಎಂದು ತಾಯಿಯನ್ನು ಕೋಣೆಗೆ ಕರೆದುಕೊಂಡು ಹೋಗಿ ಕೂಡಿಹಾಕಿ, ಚಾಕುವಿನಿಂದ ಬೆದರಿಸಿ ಅತ್ಯಾಚಾರ ಎಸಗಿದ್ದಾನೆ. ಸಂತ್ರಸ್ತೆ ಈ ವಿಚಾರವನ್ನು ಯಾರಿಗೂ ಹೇಳಿರಲಿಲ್ಲ. ಬಳಿಕ ಭಯದಿಂದ ಮಗಳಿಗೆ ವಿಷಯ ತಿಳಿಸಿದ್ದಾರೆ.

ದ.ಕೊರಿಯ-ಭಾರತ ದ್ವಿಪಕ್ಷ ಸಭೆ ಫಲಪ್ರದ

ದೆಹಲಿ: ದಕ್ಷಿಣ ಕೊರಿಯ ಜತೆಗಿನ ಶನಿವಾರದ ಮಹತ್ವದ ದ್ವಿಪಕ್ಷೀಯ ಸಭೆ ಫಲಪ್ರದವಾಗಿದೆ ಎಂದು ಭಾರತ ಹೇಳಿಕೊಂಡಿದೆ.

ದಕ್ಷಿಣ ಕೊರಿಯ ವಿದೇಶಾಂಗ ಸಚಿವ ಚೋ ಹಯೂನ್ ಅವರು ಸದ್ಯ ಭಾರತ ಪ್ರವಾಸದಲ್ಲಿದ್ದು, ವಿದೇಶಾಂಗ ಸಚಿವ ಎಸ್.ಜೈಶಂಕರ್ ಜತೆ ಶನಿವಾರ ಮಹತ್ವದ ಸಭೆ ನಡೆಸಿ ದರು. ಸೆಮಿ ಕಂಡಕ್ಟರ್, ಕೃತಕ ಬುದ್ಧಿಮತ್ತೆ(ಎಐ), ರಕ್ಷಣಾ ವಲಯ, ಪರಿಸರ ಸ್ನೇಹಿ ಇಂಧನ ಕ್ಷೇತ್ರಗಳ ಕುರಿತು ಪರಸ್ಪರ ಸಹಕಾರ ಕುರಿತು ಚರ್ಚಿಸಲಾಯಿತು. ನಾಲ್ಕೂ ಕ್ಷೇತ್ರಗಳಲ್ಲಿ ಭಾರತದ ಜತೆಗೆ ಎಲ್ಲಾ ರೀತಿಯಲ್ಲಿ ದಕ್ಷಿಣ ಕೊರಿಯಾ ಸಹಕಾರ ನೀಡಲಿದೆ ಎಂದು ಸಚಿವ ಹಯೂನ್ ಭರವಸೆ ನೀಡಿದ್ದಾರೆ ಎಂದೂ ಹೇಳಲಾಗಿದೆ.

{ ನರೇಂದ್ರ ಮೋದಿ } ಪ್ರಧಾನಿ

ಆಮ್ ಆದ್ಮಿ ಪಕ್ಷ (ಎಎಪಿ) ದೆಹಲಿ ಅಭಿವೃದ್ಧಿಯನ್ನೇ ನಿರ್ಲಕ್ಷಿಸಿತ್ತು. ಈಗ ಬಿಜೆಪಿ ರಾಜಧಾನಿಯನ್ನು ಸಮೃದ್ಧಗೊಳಿಸುತ್ತಿದೆ. ಅದರ ಭಾಗವಾಗಿ ದ್ವಾರಕಾ ಎಕ್ಸ್‌ಪ್ರೆಸ್‌ವೇ ಮತ್ತು ಅರ್ಬನ್ ಎಕ್ಸ್‌ಟೆನ್ಷನ್ ರೋಡ್-2 ದೆಹಲಿ ವಿಭಾಗ ಅಭಿವೃದ್ಧಿ ಪಡಿಸಿ ಜನರಿಗೆ ಅರ್ಪಿಸಲಾಗಿದೆ. ದೆಹಲಿ, ಹರಿಯಾಣ, ಉ.ಪ್ರ.ದಲ್ಲಿ ಒಂದೇ ವೇಳೆ ಬಿಜೆಪಿ ಅಧಿಕಾರದಲ್ಲಿರುವುದು ಇದೇ ಮೊದಲು.

ಜಮ್ಮು-ಕಾಶ್ಮೀರ: ಕಿಶ್ತ್ವಾರ್ ಬಳಿಕ ಮತ್ತೊಂದು ಆಘಾತ | 5 ಮಕ್ಕಳು ಸೇರಿದಂತೆ 7 ಜನರ ಸಾವು, 6 ಜನಕ್ಕೆ ಗಾಯ

ಕಥುವಾ ಮೇಘಸ್ಫೋಟ, ಭೂಕುಸಿತ: 7 ಜೀವಬಲಿ

ಶ್ರೀನಗರ: ಜಮ್ಮು-ಕಾಶ್ಮೀರದ ಕಥುವಾ ಜಿಲ್ಲೆಯ ಜೋಡ್‌ಘಾಟಿ ಗ್ರಾಮದಲ್ಲಿ ಶನಿವಾರ ರಾತ್ರಿ ಮತ್ತು ಭಾನುವಾರ ಮುಂಜಾನೆ ಮೇಘಸ್ಫೋಟವಾಗಿ ಧಾರಾಕಾರ ಮಳೆ ಸುರಿದಿದ್ದರಿಂದ ದಿಢೀರ್ ಪ್ರವಾಹ ಸೃಷ್ಟಿಯಾಗಿದೆ. ಪರಿಣಾಮ ಭೂಕುಸಿತವಾಗಿದ್ದು, ಹತ್ತಾರು ಮನೆಗಳು ಧರಾಶಾಯಿಯಾಗಿವೆ. 2ರಿಂದ 15 ವರ್ಷ ವಯೋಮಾನದ 5 ಮಕ್ಕಳು ಸೇರಿದಂತೆ ಒಟ್ಟು 7 ಮಂದಿ ದುರ್ಮರಣಕ್ಕೀಡಾಗಿದ್ದಾರೆ.

ಜಂಗ್ಲೋಟ್‌ನ ಬಾಗ್ರಾ ಪ್ರದೇಶದ ರೇಣುದೇವಿ(39), ಪುತ್ರಿ ರಾಧಿಕಾ(9) ಹಾಗೂ ಜೋದ್ ಘಾಟಿ ಗ್ರಾಮದ ಸುರ್ಮುದಿನ್(30), ಆಕೆಯ ಪುತ್ರರಾದ ಫನು(6) ಮತ್ತು ಶೇದು(5) ಹಾಗೂ ಮತ್ತೊಂದೆಡೆ ತಾಹು(2), ಝುಲ್ಫಾನ್(15) ಮೃತರಾಗಿದ್ದಾರೆ ಎಂದು ಜಿಲ್ಲಾಡಳಿತ ಮಾಹಿತಿ ಹಂಚಿಕೊಂಡಿದೆ. ಸರಣಿಯೋಪಾದಿ ನಡೆದ ಮೇಘಸ್ಫೋಟ-ಭೂಕುಸಿತ ಅವಘಡಗಳಲ್ಲಿ 6 ಮಂದಿ ಗಾಯಗೊಂಡಿದ್ದಾರೆ. ಜುಥಾನಾ ಜೋದ್ ಪ್ರದೇಶದಲ್ಲಿ ಒಂದಿಡೀ ಕುಟುಂಬ ಕುಸಿದ ಮನೆಯಡಿ ಸಿಲುಕಿಕೊಂಡಿದೆ. ಇನ್ನೂ ಹಲವರು ಕಣ್ಮರೆಯಾಗಿದ್ದಾರೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ಭಾನುವಾರ ಬೆಳಗ್ಗೆ ತಿಳಿಸಿದ್ದಾರೆ. ಕಥುವಾ ಮತ್ತು ರಾಜ್ಬಾಗ್ ಪ್ರದೇಶದಲ್ಲಿ ಮೇಘಸ್ಫೋಟವಾಗಿದೆ. ಮೇಘಸ್ಫೋಟದ ಪರಿಣಾಮ ಶನಿವಾರ ರಾತ್ರಿಯಿಡೀ ಭಾರೀ ಮಳೆಯಾಗಿದೆ. ಭಾನುವಾರ ಬೆಳಗಿನ ಜಾವವೂ ಮತ್ತೊಮ್ಮೆ ಮೇಘಸ್ಫೋಟವಾಗಿದೆ. ಧಾರಾಕಾರ ಮಳೆ ಸುರಿದು ಜೋಡ್‌ಘಾಟಿ ಗ್ರಾಮದ ಹಲವೆಡೆ ಭೂಕುಸಿತವಾಗಿದೆ. ಗ್ರಾಮಕ್ಕೆ ರಸ್ತೆ ಸಂಪರ್ಕವೇ ಕಡಿತವಾಗಿದೆ. ಹತ್ತಾರು ಕಟ್ಟಡಗಳು ನೆಲಸಮವಾಗಿವೆ. ಅಪಾರ ಪ್ರಮಾಣದ ಹಾನಿ ಸಂಭವಿಸಿದೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗಳಿಗೆ ಮಾಹಿತಿ ನೀಡಿದ್ದಾರೆ.

4 ಶವ ಹೊರಕ್ಕೆ: ಸ್ಥಳೀಯ ಪೊಲೀಸ್ ಮತ್ತು ರಾಜ್ಯ ವಿಪತ್ತು ಪ್ರತಿಕ್ರಿಯೆ ಪಡೆ(ಎಸ್‌ಡಿಆರ್‌ಎಫ್)ಗಳ ಜಂಟಿ ತಂಡ ರಕ್ಷಣಾ ಕಾರ್ಯಾಚರಣೆ ಆರಂಭಿಸಿದೆ. ಸ್ಥಳೀಯ ಸ್ವಯಂಸೇವಕರೂ ನೆರವಾ ಗುತ್ತಿದ್ದಾರೆ. ಭಾನುವಾರ ಮಧ್ಯಾಹ್ನದವರೆಗೆ ನಾಲ್ಕು ಶವಗಳನ್ನು ಕುಸಿದ ಮನೆಗಳ ಅವಶೇಷಗಳಡಿಯಿಂದ ಹೊರತೆಗೆಯಲಾಗಿದೆ. ಆರು ಮಂದಿ ಗಾಯಗೊಂಡಿದ್ದು, ಅರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಕಥುವಾ ಜಿಲ್ಲಾಡಳಿತ ಪ್ರಾಕೃತಿಕ ವಿಕೋಪ ಪರಿಸ್ಥಿತಿ ಮತ್ತು ಅದರಿಂದ ಉಂಟಾಗಿರುವ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಅಲ್ಲದೇ, ಜಾಗರೂಕ ರಾಗಿರಲು ಮತ್ತು ಜಲಮೂಲಗಳ ಬಳಿ ಹೋಗುವುದನ್ನು ತಪ್ಪಿಸು ವಂತೆ ಮನವಿ ಮಾಡಿದೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

6 ಗಾಯಾಳುಗಳು ಪಂಜಾಬ್‌ಗೆ ಏರ್‌ಲಿಫ್ಟ್

ಕಥುವಾ ಜಿಲ್ಲೆಯಲ್ಲಿನ ಮೇಘಸ್ಫೋಟ-ಭೂಕುಸಿತ ಘಟನೆಗಳ ಸಂಬಂಧ ಪ್ರತಿಕ್ರಿಯೆ ನೀಡಿರುವ ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಕಥುವಾ ಎಸ್‌ಎಸ್‌ಪಿ ಶೋಭಿತ್ ಸಕ್ಸೇನಾ ಜತೆಗೆ ಮಾತನಾಡಿ ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡಿರುವೆ. 7 ಮಂದಿ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ. ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸುವೆ. ಆರು ಗಾಯಾಳುಗಳನ್ನು ಸೇನಾಪಡೆ ಹೆಲಿಕಾಪ್ಟರ್ ಮೂಲಕ ಏರ್‌ಲಿಫ್ಟ್ ಮಾಡಿಸಿ ನೆರೆಯ ಪಂಜಾಬ್ ರಾಜ್ಯದ ಪಠಾಣ್‌ಕೋಟ್ ಜಿಲ್ಲೆಯ ಆಸ್ಪತ್ರೆಗೆ ಸೇರಿಸಲಾಗಿದೆ ಎಂದಿದ್ದಾರೆ.

ರೈಲ್ವೆ ಹಳಿ, ರಾಷ್ಟ್ರೀಯ ಹೆದ್ದಾರಿ ಮತ್ತು ಕಥುವಾ ಪೊಲೀಸ್ ಠಾಣೆಗೂ ಹಾನಿಯಾಗಿದೆ ಎಂದು ತಿಳಿದುಬಂದಿದೆ. ನಾಗರಿಕ ಆಡಳಿತ, ಮಿಲಿಟರಿ ಮತ್ತು ಅರೆಸೇನಾ ಪಡೆಗಳು ಕಾರ್ಯಾಚರಣೆಗೆ ಇಳಿದಿವೆ. ಪರಿಸ್ಥಿತಿಯನ್ನು ನಿರಂತರ ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ಸಚಿವ ಜಿತೇಂದ್ರ ಸಿಂಗ್ 'ಎಕ್ಸ್' ಸಂದೇಶದಲ್ಲಿ ತಿಳಿಸಿದ್ದಾರೆ. ಜಮ್ಮು-ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರೂ ಕಥುವಾದಲ್ಲಿ ಭೂಕುಸಿತಕ್ಕೆ ಬಲಿಯಾಗಿರುವುದಕ್ಕೆ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ. ಜನರ ಸುರಕ್ಷತೆ ಖಚಿತಪಡಿಸಿಕೊಳ್ಳಲು ಮತ್ತು ಪರಿಹಾರ-ರಕ್ಷಣೆ ಕಾರ್ಯಗಳನ್ನು ಚುರುಕುಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಭೂಕುಸಿತ ಪ್ರದೇಶದಲ್ಲಿ ಸಂಕಷ್ಟದಲ್ಲಿರುವ ಜನರ ಸ್ಥಳಾಂತರಕ್ಕೆ ತುರ್ತು ಕ್ರಮಗಳನ್ನು ಕೈಗೊಳ್ಳಲು ನಿರ್ದೇಶನ ನೀಡಿದ್ದಾರೆ.

ಬೇರೆಡೆ 4 ಸ್ಥಳದಲ್ಲೂ ಭೂಕುಸಿತ

ಕಥುವಾ ಪೊಲೀಸ್ ಠಾಣೆ ವ್ಯಾಪ್ತಿಯ ಬಗಾರ್ಡ್ ಮತ್ತು ಚಾಂಗ್ಡಾ ಗ್ರಾಮಗಳಲ್ಲಿ ಹಾಗೂ ಲಖನ್ ಪುರದ ದಿಲ್ವಾನ್-ಹುಟ್ಲಿ ಪ್ರದೇಶಗಳಲ್ಲಿಯೂ ಭೂಕುಸಿತವಾಗಿರುವ ಬಗ್ಗೆ ವರದಿಯಾಗಿದೆ. ಆದರೆ, ಈ ಪ್ರದೇಶಗಳಿಂದ ಯಾವುದೇ ಜೀವಹಾನಿ ಆಗಿಲ್ಲ. ದೊಡ್ಡ ಮಟ್ಟದಲ್ಲಿ ಆಸ್ತಿ ಹಾನಿಯೂ ವರದಿಯಾಗಿಲ್ಲ.ಈ ಪ್ರದೇಶದಲ್ಲಿ ಭಾರೀ ಮಳೆಯಾಗುತ್ತಿರುವು ದರಿಂದ ವಿವಿಧ ನದಿಗಳ ನೀರಿನ ಮಟ್ಟದಲ್ಲಿ ಗಮನಾರ್ಹ ಏರಿಕೆಯಾಗಿದ್ದು, ಉಜ್ ನದಿಯು ಪ್ರಸ್ತುತ ಅಪಾಯದ ಮಟ್ಟಕ್ಕಿಂತ ಹತ್ತಿರ ಹರಿಯುತ್ತಿದೆ ಎಂದು ತಿಳಿದುಬಂದಿದೆ.

ಕಣಿವೆ ಪ್ರದೇಶ ಸರಣಿ ಪ್ರಾಕೃತಿಕ ವಿಕೋಪ

ಹಿಮಚ್ಛಾದಿತ ಪರ್ವತಗಳು, ಹಸಿರು ವನರಾಶಿ, ಪ್ರಶಾಂತ ಕೊಳಗಳಿಂದ ಪ್ರವಾಸಿ ಗರನ್ನು ಆಕರ್ಷಿಸುತ್ತಿದ್ದ ಜಮ್ಮು-ಕಾಶ್ಮೀರದಲ್ಲಿ ಒಂದಾದ ಮೇಲೊಂದರಂತೆ ಪ್ರಾಕೃತಿಕ ಅವಘಡಗಳಾಗುತ್ತಿರುವುದು ಆಘಾತಕಾರಿ ಯಾಗಿದೆ. 3 ದಿನಗಳ ಹಿಂದಷ್ಟೇ ಜಮ್ಮು-ಕಾಶ್ಮೀರದ ಕಿಶ್ತ್ವಾರ್ ನಲ್ಲಿಯೂ ಮೇಘಸ್ಫೋಟವಾಗಿ 60 ಮಂದಿ ಸಾವಿಗೀಡಾಗಿ ನೂರಾರು ಮಂದಿ ಕಾಣೆಯಾಗಿದ್ದಾರೆ, ಕಣ್ಮರೆಯಾದವರಿಗಾಗಿ ಶೋಧ ಕಾರ್ಯ ನಡೆದಿರುವಾಗಲೇ, ಮತ್ತೊಂದೆಡೆಯೂ ಮೇಘಸ್ಫೋಟ-ಭೂಕುಸಿತವಾಗಿರುವುದು ಕಣಿವೆ ಪ್ರದೇಶದ ಜನರನ್ನು ಆಘಾತದ ಮಡುವಿಗೆ ದೂಡಿದೆ.

- ಭರದಿಂದ ಸಾಗಿದೆ ಎಸ್‌ಡಿಆರ್‌ಎಫ್ ರಕ್ಷಣಾ ಕಾರ್ಯ
- ಪೊಲೀಸರು, ಸ್ಥಳೀಯ ಸ್ವಯಂಸೇವಕರ ಸಹಾಯಹಸ್ತ
- 6 ಗಾಯಾಳು ನೆರೆಯ ಪಂಜಾಬ್ ಆಸ್ಪತ್ರೆಗೆ ಏರ್‌ಲಿಫ್ಟ್

ಚೀನಾ ಸಚಿವ ವಾಂಗ್, ದೋವಲ್ ಸಭೆ ಇಂದು

ಬೀಜಿಂಗ್: ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಸೋಮವಾರ ಭಾರತಕ್ಕೆ ಭೇಟಿ ನೀಡುತ್ತಿದ್ದು, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಜತೆಗೆ ಉಭಯ ದೇಶಗಳ ನಡುವಿನ ಗಡಿ ಸಮಸ್ಯೆಗಳ ಕುರಿತು ಮಾತುಕತೆ ನಡೆಸಲಿದ್ದಾರೆ ಎಂದು ವರದಿಯಾಗಿದೆ.

ದೋವಲ್ ಮತ್ತು ವಾಂಗ್ ನಡುವೆ ಗಡಿ ಸಮಸ್ಯೆ ಕುರಿತು ಈಗಾಗಲೇ ಹಲವು ಸುತ್ತು ಚರ್ಚೆ ನಡೆದಿವೆ. ಅದೇ ವಿಚಾರವಾಗಿ ಮಾತುಕತೆ ಮುಂದುವರಿಸಲು 2 ದಿನಗಳ ಭಾರತ ಭೇಟಿಗೆ ವಾಂಗ್ ತೆರಳುತ್ತಿದ್ದಾರೆ ಎಂದು ಬೀಜಿಂಗ್ ವಿದೇಶಾಂಗ ಸಚಿವಾಲಯ ಹೇಳಿದೆ. ಚೀನಾದ ಕಮ್ಯುನಿಸ್ಟ್ ಪಾರ್ಟಿಯ ಪಾಲಿಟ್ ಬ್ಯೂರೊ ಸದಸ್ಯರೂ ಆಗಿರುವ ವಾಂಗ್ ಅವರು ಅಜಿತ್ ದೋವಲ್ ಅವರ ಆಹ್ವಾನದ ಮೇರೆಗೆ ಸೋಮವಾರ ಭಾರತ ಪ್ರವಾಸ ಕೈಗೊಂಡಿದ್ದಾರೆ. ಇದೇ ಭೇಟಿ ವೇಳೆ ವಾಂಗ್ ಮತ್ತು ವಿದೇಶಾಂಗ ಸಚಿವ ಜೈಶಂಕರ್ ನಡುವೆಯೂ ದ್ವಿಪಕ್ಷೀಯ ಸಭೆ ನಡೆಯಲಿದೆ ಎಂದು ತಿಳಿದುಬಂದಿದೆ.

ದೆಹಲಿಯಲ್ಲಿ ಈ ಬಾರಿ ಚೀನಾ-ಭಾರತ ಗಡಿ ಸಮಸ್ಯೆ ಕುರಿತು ವಿಶೇಷ ಪ್ರತಿನಿಧಿಗಳ 24ನೇ ಸಭೆ ಆಯೋಜಿತವಾಗಿದೆ. ಎರಡೂ ದೇಶಗಳ ನಡುವಿನ ವಾಸ್ತವ ಗಡಿ ರೇಖೆ(ಎಎಲ್‌ಸಿ) 3,488 ಕಿ.ಮೀ.ಗಳಷ್ಟು ಉದ್ದವಿದ್ದು, ಪೂರ್ವ ಲಡಾಖ್ ಭಾಗದಲ್ಲಿ ಗಡಿ ಸಮಸ್ಯೆ ಎದುರಾಗಿದೆ.

ಇದಕ್ಕೂ ಮುನ್ನ ರಷ್ಯಾದ ಕಜಾನ್‌ನಲ್ಲಿ ನಡೆದ 'ಬ್ರಿಕ್ಸ್' ದೇಶಗಳ ಶೃಂಗಸಭೆ ವೇಳೆ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ-ಜಿನ್‌ಪಿಂಗ್ ಭೇಟಿಯಾಗಿ, ಉಭಯ ದೇಶಗಳ ಗಡಿ ಸಮಸ್ಯೆಯನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲು ಚರ್ಚಿಸಿದ್ದರು. ಆ ಬಳಿಕ ಡಿಸೆಂಬರ್‌ನಲ್ಲಿ ಅಜಿತ್ ದೋವಲ್ ಚೀನಾಕ್ಕೆ ತೆರಳಿ, ವಾಂಗ್ ಜತೆ ಗಡಿ ಸಮಸ್ಯೆ ಪರಿಹಾರಕ್ಕೆ ಮಾತುಕತೆ 23ನೇ ಸುತ್ತಿನ ಸಭೆ ನಡೆಸಿದ್ದರು.

ಮೋದಿ ಭೇಟಿ: ಚೀನಾದ ಟಿಯಾಂಜಿಯಾನ್ ನಗರದಲ್ಲಿ ಆ.31-ಸೆ.1ರಂದು 'ಶಾಂಘೈ ಸಹಕಾರ ಸಂಘಟನೆ'(ಎಸ್‌ಸಿಒ) ಶೃಂಗಸಭೆ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಅದಕ್ಕೂ ಮುನ್ನವೇ ವಾಂಗ್ ಭಾರತ ಭೇಟಿ ಮಹತ್ವದ್ದಾಗಿದೆ.

ವಿಮಾನ ನಿಲ್ದಾಣದಲ್ಲಿ ಕೇಂದ್ರ ಸಚಿವ, ದೆಹಲಿ ಸಿಎಂ ಸ್ವಾಗತ

ಗಗನಯಾನಿ ಶುಭಾಂಶು ಶುಕ್ಲಾ ತಾಯ್ನಾಡಿಗೆ

ದೆಹಲಿ: ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ(ಐಎಸ್‌ಎಸ್‌ಗೆ) ಐತಿಹಾಸಿಕ ಭೇಟಿ ನೀಡಿ 18 ದಿನಗಳ ಕಾಲ ತಂಗಿದ್ದು, ದೇಶದ ಪರವಾಗಿ ವಿವಿಧ ಪ್ರಯೋಗಗಳನ್ನು ಕೈಗೊಂಡು ಸುರಕ್ಷಿತವಾಗಿ ಮರಳಿದ್ದ ಗಗನಯಾತ್ರಿ ಶುಭಾಂಶು ಶುಕ್ಲಾ, ಹಲವು ವಾರಗಳ ದೈಹಿಕ ವಿಶ್ರಾಂತಿ ಬಳಿಕ ಭಾನುವಾರ ಮುಂಜಾನೆ ತಾಯ್ನಾಡಿಗೆ ವಾಪಸ್ಸಾದರು.

ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಭೇಟಿ ನೀಡಿದ ಮೊದಲ ಭಾರತೀಯ ಎಂಬ ಹೆಮ್ಮೆ ಶುಭಾಂಶು ಶುಕ್ಲಾ ಅವರದ್ದಾಗಿದೆ. ಶುಭಾಂಶು ಅವರೊಂದಿಗೆ 'ಆಕ್ಸಿಯೊ-4 ಮಿಷನ್'ನಲ್ಲಿ ಗಗನಯಾನಕ್ಕೆ ಹೆಚ್ಚುವರಿಯಾಗಿ ಆಯ್ಕೆಯಾಗಿದ್ದ ಭಾರತದ ಮತ್ತೊಬ್ಬ ಗಗನಯಾತ್ರಿ ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ನಾಯರ್ ಕೂಡ ಭಾರತಕ್ಕೆ ಮರಳಿದ್ದಾರೆ. ಬಾಲಕೃಷ್ಣ ಅವರು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳುವ 'ಆಕ್ಸಿಯೊಂ-4 ಮಿಷನ್'ನಲ್ಲಿ ಬ್ಯಾಕಪ್ ಗಗನಯಾನಿ ಆಗಿದ್ದರು.

ಅಮೆರಿಕದಿಂದ ಶನಿವಾರ ಹೊರಟು ಭಾನುವಾರ ಮುಂಜಾನೆ 1.30ರ ವೇಳೆಗೆ ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಶುಭಾಂಶು ಶುಕ್ಲಾ ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು. ಕೇಂದ್ರ ವಿಜ್ಞಾನ-ತಂತ್ರಜ್ಞಾನ ಖಾತೆ ಸಚಿವ ಜಿತೇಂದ್ರ ಸಿಂಗ್, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೋ) ಅಧ್ಯಕ್ಷ ವಿ.ನಾರಾಯಣನ್ ಅವರು ಶುಭಾಂಶು ಶುಕ್ಲಾ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡು ಸಂಭ್ರಮಿಸಿದರು. ಆಕ್ಸಿಯಂ-4 ಮಿಷನ್‌ನಲ್ಲಿ ಭಾರತದಿಂದ ಇಸ್ರೊ ಪರವಾಗಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದ ಶುಕ್ಲಾ, ಅಲ್ಲಿದ್ದ 18 ದಿನಗಳ ಅವಧಿಯಲ್ಲಿ ದೇಶದ ವಿವಿಧ ಸಂಸ್ಥೆಗಳಿಗಾಗಿ 7 ಪ್ರಯೋಗಗಳನ್ನು ಕೈಗೊಂಡಿದ್ದರು.

ಶುಕ್ಲಾ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಲಿದ್ದಾರೆ. 2027ರಲ್ಲಿ ಇಸ್ರೋ ತನ್ನ ಮೊದಲ ಮಾನವ ಬಾಹ್ಯಾಕಾಶ ಹಾರಾಟ ಎದುರು ನೋಡುತ್ತಿರುವುದರಿಂದ ತಮ್ಮ ಅನುಭವಗಳನ್ನು ಇಸ್ರೊ ಸಹೋದ್ಯೋಗಿಗಳು ಮತ್ತು ಸ್ನೇಹಿತರ ಜತೆ ಹಂಚಿಕೊಳ್ಳಲಿದ್ದಾರೆ. ಬಳಿಕ, ಹುಟ್ಟೂರು ಲಖನೌಗೆ ಪ್ರಯಾಣಿಸಿ ಪೋಷಕರನ್ನು ಸೇರಿಕೊಳ್ಳಲಿದ್ದಾರೆ. ಬಳಿಕ, ಆ.22-23ರಂದು ದೆಹಲಿಯಲ್ಲಿ ಆಯೋಜಿತವಾಗಿರುವ 'ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ'ಯಲ್ಲಿ ಭಾಗವಹಿಸಲು ಲಖನೌನಿಂದ ಹಿಂದಿರುಗುತ್ತಾರೆ ಎಂದು ಹೇಳಲಾಗಿದೆ.

ಭಾರತದ ಬಾಹ್ಯಾಕಾಶ ವೈಭವ ದೇಶದ ಮಣ್ಣನ್ನು ಸ್ಪರ್ಶಿಸಿದೆ. ಭಾರತ ಮಾತೆಯ ಹೆಮ್ಮೆಯ ಪುತ್ರ, ಗಗನಯಾನಿ ಶುಭಾಂಶು ಶುಕ್ಲಾ ಭಾನುವಾರ ಮುಂಜಾನೆ ದೆಹಲಿಗೆ ಬಂದಿಳಿದರು. ಅವರೊಂದಿಗೆ ಮತ್ತೊಬ್ಬ ಸಮಾನ ಸಾಧನೆ ಮಾಡಿದ, ಭಾರತದ ಮೊದಲ ಮಾನವ ಗಗನಯಾನಕ್ಕೆ ಆಯ್ಕೆಯಾದ ಗಗನಯಾತ್ರಿಗಳಲ್ಲಿ ಒಬ್ಬರಾದ ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ನಾಯರ್ ಕೂಡ ಭಾರತಕ್ಕೆ ಮರಳಿದ್ದಾರೆ. ಬಾಲಕೃಷ್ಣ ಅವರು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಮಿಷನ್‌ಗೆ ಭಾರತದ ನಿಯೋಜಿತ ಬ್ಯಾಕಪ್ ಗಗನಯಾನಿ ಆಗಿದ್ದರು. ಅವರಿಗೂ ಭಾರತೀಯರ ಪರವಾಗಿ ಪ್ರೀತಿಯ ಸ್ವಾಗತ.

-ಜಿತೇಂದ್ರ ಸಿಂಗ್
ಕೇಂದ್ರ ವಿಜ್ಞಾನ-ತಂತ್ರಜ್ಞಾನ ಸಚಿವ

ಟ್ರಂಪ್-ಝುಲೆನ್‌ಸ್ಕಿ ಸಭೆಗೆ ಪುಟಿನ್ ಸೇರಿಸಿಕೊಳ್ಳಲು ಆಗ್ರಹ | ಉಕ್ರೇನ್ ಮೇಲೆ ಗೆ ಒತ್ತಡ ಹೇರದಿರಲು ಮನವಿ

ಟ್ರಂಪ್ ಶಾಂತಿ ಪ್ರಯತ್ನ: ಯುರೋಪ್ ಒಕ್ಕೂಟದ ಬೆಂಬಲ

ವಾಷಿಂಗ್ಟನ್: ಕಳೆದ ಮೂರು ವರ್ಷಗಳಿಂದ ರಷ್ಯಾ-ಉಕ್ರೇನ್ ಮಧ್ಯೆ ನಿರಂತರವಾಗಿ ನಡೆಯುತ್ತಿರುವ ಯುದ್ಧವನ್ನ ನಿಲ್ಲಿಸಲು ಇನ್ನಿಲ್ಲದ ಪ್ರಯತ್ನ ನಡೆಸುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಯುರೋಪಿಯನ್ ಒಕ್ಕೂಟದ ದೇಶಗಳ ಬೆಂಬಲವೂ ಈಗ ಸಿಕ್ಕಿದೆ.

ಟ್ರಂಪ್ ಜತೆ ದೂರವಾಣಿ ಮಾತುಕತೆ ನಡೆಸಿರುವ ಯುರೋಪಿಯನ್ ಒಕ್ಕೂಟದ ದೇಶಗಳಾ ಫ್ರಾನ್ಸ್, ಜರ್ಮನಿ ಮತ್ತಿತರ ದೇಶಗಳ ನಾಯಕರು, ಅಲಾಸ್ಕದಲ್ಲಿ ಶನಿವಾರ ನಡೆದ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಡೊನಾಲ್ಡ್ ಟ್ರಂಪ್ ಸಭೆಯನ್ನು ಬೆಂಬಲಿಸಿದ್ದಾರೆ.

ಮೂವರ ಸಭೆಗೆ ಆಗ್ರಹ: ಆದರೆ, ಮುಂದಿನ ಸಭೆಯಲ್ಲಿ ಟ್ರಂಪ್ ಮತ್ತು ಪುಟಿನ್ ಮಾತ್ರ ಇರಬಾರದು. ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝುಲೆನ್‌ಸ್ಕಿ ಅವರನ್ನೂ ಸೇರಿಸಿಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಸೋಮವಾರ ಮಧ್ಯಾಹ್ನ ಶ್ವೇತಭವನದಲ್ಲಿ ಟ್ರಂಪ್ ಅವರನ್ನು ವೊಲೊದಿಮಿರ್ ಝುಲೆನ್‌ಸ್ಕಿ ಭೇಟಿ ನಿಗದಿಯಾಗಿದೆ. ರಷ್ಯಾ-ಉಕ್ರೇನ್ ಯುದ್ಧ ಸಮಾಪ್ತಿಗೊಳಿಸುವ ವಿಚಾರದಲ್ಲಿ ಡೊನಾಲ್ಡ್ ಟ್ರಂಪ್ ಮತ್ತು ಝುಲೆನ್‌ಸ್ಕಿ ಜತೆಗೂಡಿ ಕೆಲಸ ಮಾಡಲು ಯುರೋಪಿಯನ್ ಒಕ್ಕೂಟ ಸಿದ್ಧವಿದೆ. ರಷ್ಯಾ ಅಧ್ಯಕ್ಷ ಪುಟಿನ್ ಮಾತು ಕೇಳಿ ಷರತ್ತುಗಳನ್ನು ವಿಧಿಸಬಾರದು. ಉಕ್ರೇನ್ ದೇಶ 'ನ್ಯಾಟೊ' ಒಕ್ಕೂಟಕ್ಕೆ ಸೇರುವ ಪ್ರಕ್ರಿಯೆಗೆ ರಷ್ಯಾದಿಂದ ಅಡ್ಡಿಯಾಗಬಾರದು ಎಂದು ಯುರೋಪ್ ದೇಶಗಳ ನಾಯಕರು ಒಕ್ಕೊರಲಿನಿಂದ ಆಗ್ರಹಿಸಿದ್ದಾರೆ. ಉಕ್ರೇನ್ ವಿರುದ್ಧ ರಷ್ಯಾ ಯುದ್ಧ ನಿಲುಗಡೆ ಆಗುವವರೆಗೂ ರಷ್ಯಾ ಮೇಲೆ ಒತ್ತಡ ಹೇರುವ ಕ್ರಮವನ್ನು ಯುರೋಪ್ ಒಕ್ಕೂಟ ಮುಂದುವರಿಸಲಿದೆ. ಅಲ್ಲದೇ ರಷ್ಯಾ ಮೇಲೆ ಇನ್ನೂ ಕೆಲವು ನಿರ್ಬಂಧ ಹೇರಲಿದ್ದೇವೆ. ರಷ್ಯಾದ ಯುದ್ಧದಿಂದ ಅದರ ಆರ್ಥಿಕತೆ ನೆಲಕಚ್ಚಬೇಕು ಮತ್ತು ಉಕ್ರೇನ್ ಭಾಗದಲ್ಲಿ ಶಾಂತಿ ಸ್ಥಾಪನೆಯಾಗಬೇಕು ಎಂದು ಯುರೋಪ್ ದೇಶಗಳ ನಾಯಕರು ಆಗ್ರಹಿಸಿದ್ದಾರೆ.

ಇಂದು 2 ಮಹತ್ವದ ಸಭೆ

ಅತ್ತ ಅಮೆರಿಕದ ಶ್ವೇತಭವನದಲ್ಲಿ ಸೋಮವಾರ ಮಧ್ಯಾಹ್ನ ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝುಲೆನ್‌ಸ್ಕಿ ಮತ್ತು ಡೊನಾಲ್ಡ್ ಟ್ರಂಪ್ ನಡುವೆ ಯುದ್ಧ ನಿಲುಗಡೆ ಕುರಿತು ಮಹತ್ವದ ಸಭೆ ನಿಗದಿಯಾಗಿದೆ. ಇದೇ ವೇಳೆ, ಯುರೋಪ್ ದೇಶಗಳ ನಾಯಕರೂ ತಮ್ಮೊಳಗೇ ವರ್ಚುವಲ್ ಸಭೆ ನಡೆಸಲಿದ್ದಾರೆ. ಅಲ್ಲದೇ, ಟ್ರಂಪ್ ಮತ್ತು ಝುಲೆನ್‌ಸ್ಕಿ ದ್ವಿಪಕ್ಷೀಯ ಸಭೆ ಮುಗಿದ ಬಳಿಕ ಟ್ರಂಪ್ ಅವರ ಜತೆಗೂ ವರ್ಚುವಲ್ ಸಭೆ ನಡೆಸಿ ಮಾಹಿತಿ ಪಡೆಯಲು ನಿರ್ಧರಿಸಿದ್ದಾರೆ ಎನ್ನಲಾಗಿದೆ.

ಯುಟ್ಯೂಬರ್ ಎಲ್ವಿಸ್ ಮನೆಗೆ ಗುಂಡಿನ ದಾಳಿ

ಗುರುಗ್ರಾಮ್: ಯೂಟ್ಯೂಬ್ ಚಾನೆಲ್ ಮೂಲಕ ಜನಪ್ರಿಯ ವಾಗಿರುವ ಎಲ್ವಿಶ್ ಯಾದವ್‌ನ ಗುರುಗ್ರಾಮ್ ಸೆಕ್ಟರ್-57ರಲ್ಲಿರುವ ಮನೆ ಮೇಲೆ ಭಾನುವಾರ ನಸುಕಿನ 5.30ರಲ್ಲಿ ಗುಂಡಿನ ದಾಳಿ ನಡೆದಿದೆ. ಈ ವೇಳೆ ಎಲ್ವಿಶ್ ಮನೆಯಲ್ಲಿರಲಿಲ್ಲ, ಕುಟುಂಬ ಸದಸ್ಯರಷ್ಟೇ ಇದ್ದರು. ಆದರೆ, ಯಾರಿಗೂ ಹಾನಿಯಾಗಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮೂವರು ಮುಸುಕುಧಾರಿಗಳು ಮೋಟಾರ್ ಬೈಕ್‌ನಲ್ಲಿ ಬಂದು ಮನೆಯತ್ತ 30 ಬಾರಿ ಗುಂಡು ಹಾರಿಸಿ ಬಳಿಕ ನಿರ್ಗಮಿಸಿದರು ಎಂದು ಎಲ್ವಿಸ್ ತಂದೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಹಿಂದಿಯ ಬಿಗ್‌ಬಾಸ್ ಒಟಿಟಿ ವಿಜೇತ ಎಲ್ವಿಶ್ ಯಾದವ್, ವಿವಾದಾತ್ಮಕ ಯೂಟ್ಯೂಬರ್ ಎಂದೇ ಗುರುತಿಸಿಕೊಂಡಿದ್ದಾರೆ.

ಗುಂಡಿನ ದಾಳಿ ನಡೆಸಿದ್ದ ನಮ್ಮದೇ ತಂಡ ಎಂದು ವಿದೇಶದಲ್ಲಿ ನೆಲೆಸಿರುವ ಹಿಮಾಂಶು ಭಾವು ಮತ್ತು ನೀರಜ್ ಫರೀದ್‌ಪುರಿ ಎಂಬವರು ಹೇಳಿಕೊಂಡಿದ್ದಾರೆ. ಎಲ್ವಿಶ್ ಅಕ್ರಮ ಬೆಟ್ಟಿಂಗ್ ಅಪ್ಲಿಕೇಶನ್‌ಗಳ ಪರ ಪ್ರಚಾರ ಮಾಡುತ್ತಿದ್ದ. ಅದಕ್ಕೇ ದಾಳಿ ನಡೆಸಲಾಗಿದೆ ಎಂದಿದ್ದಾರೆ.

ಚು.ಆಯೋಗ ಪ್ರತ್ಯಾರೋಪ | ಮತದಾರರ ಪಟ್ಟಿ ಶುದ್ಧೀಕರಣ ಇಚ್ಛೆ

ಮತಪಟ್ಟಿ ದೋಷ ಗುರುತಿಸಲು ಗಡುವು

ದೆಹಲಿ: ಮತದಾರರ ಪಟ್ಟಿ ದೋಷಗಳ ಬಗ್ಗೆ ರಾಜಕೀಯ ಪಕ್ಷಗಳು ನಿರಂತರ ಆರೋಪ ಮಾಡುತ್ತವೆ. ಆದರೆ, ಪಕ್ಷಗಳಾಗಲೀ, ಅದರ ಬೂತ್ ಮಟ್ಟದ ಏಜೆಂಟರಾಗಲೀ ನಿಗದಿತ ಅವಧಿಯೊಳಗೆ ಮತದಾರರ ಪಟ್ಟಿ ಪರಿಶೀಲಿಸುವುದರಲ್ಲಿ ವಿಫಲವಾಗುತ್ತವೆ. ಈಗ ಆರೋಪಿಸುವ ಅಕ್ರಮಗಳ ಬಗ್ಗೆ ಮೊದಲೇ ಮಾಹಿತಿ ನೀಡುವುದಿಲ್ಲ ಎಂದು ಚುನಾವಣಾ ಆಯೋಗ ಪ್ರತ್ಯಾರೋಪ ಮಾಡಿದೆ.

ಮತದಾರರ ಪಟ್ಟಿಯಲ್ಲಿ ಲೋಪಗಳು ಇದ್ದರೆ ಅದಕ್ಕೆ ರಾಜಕೀಯ ಪಕ್ಷಗಳ ನಿರ್ಲಕ್ಷ್ಯವೇ ಕಾರಣ ಎಂದು ಚುನಾವಣಾ ಆಯೋಗ ಭಾನುವಾರ ದೂಷಿಸಿದೆ. ಈಗಲೂ ರಾಜಕೀಯ ಪಕ್ಷಗಳು ಮತದಾರರ ಪಟ್ಟಿ ಪರಿಶೀಲನೆ ಮಾಡುವುದಾದರೆ ಅದನ್ನು ಸ್ವಾಗತಿಸಿ ಸರಿಪಡಿಸುವುದಾಗಿ ಹೇಳಿದ ಆಯೋಗ, ಮತದಾರರ ಪಟ್ಟಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ಆಯಾ ಭಾಗದ ಚುನಾವಣಾಧಿಕಾರಿಗಳಿಗೆ ಸಹಾಯ ಮಾಡಲು ಪಕ್ಷಗಳು ಮುಂದಾಗಬೇಕು ಎಂದು ಮನವಿ ಮಾಡಿದೆ.

ಕರಡು ಮತದಾರರ ಪಟ್ಟಿ ಪ್ರಕಟಣೆ ನಂತರ ಹಕ್ಕು ಸಲ್ಲಿಸಲು ಅಥವಾ ಆಕ್ಷೇಪಣೆ ಸಲ್ಲಿಸಲು ಆಯೋಗ ಸಮಯ ನೀಡುತ್ತದೆ. ಅದುವೇ ಪಟ್ಟಿಯಲ್ಲಿನ ಲೋಪ ಗುರುತಿಸಿ ಸರಿಪಡಿಸಲು ಸರಿಯಾದ ಸಮಯ. ಆದರೆ, ಕೆಲವು ರಾಜಕೀಯ ಪಕ್ಷಗಳು ಮತ್ತು ಅವುಗಳ ಬೂತ್ ಮಟ್ಟದ ಏಜೆಂಟರು ಆ ಅವಧಿಯಲ್ಲಿ ಮತದಾರರ ಪಟ್ಟಿಗಳನ್ನು ಪರಿಶೀಲಿಸಲೂ ಇಲ್ಲ, ದೋಷಗಳನ್ನು ಎತ್ತಿ ತೋರಿಸಲೂ ಇಲ್ಲ ಎಂದು ಆಕ್ಷೇಪಿಸಿದೆ. ಇತ್ತೀಚೆಗೆ ಕೆಲ ರಾಜಕೀಯ ಪಕ್ಷಗಳು ಮತದಾರರ ಪಟ್ಟಿಯಲ್ಲಿನ ದೋಷಗಳನ್ನು ತೋರಿದ್ದಾರೆ. ಆ ದೂರುಗಳು ಸತ್ಯವಾಗಿದ್ದರೆ ಮತ್ತು ಸರಿಯಾದ ಸಮಯದಲ್ಲಿ ಸೂಕ್ತ ವಿಧಾನದಲ್ಲಿ ತೋರಿಸಿದ್ದರೆ ಸಂಬಂಧಪಟ್ಟ ಚುನಾವಣಾಧಿಕಾರಿ ಗಳು ಅವನ್ನು ಸರಿಪಡಿಸಲು ಸಾಧ್ಯವಾಗುತ್ತಿತ್ತು. ರಾಜಕೀಯ ಪಕ್ಷಗಳ ಬೂತ್ ಮಟ್ಟದ ಏಜೆಂಟರು ಪಟ್ಟಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸದ ಕಾರಣ ಈ ದೋಷಗಳು ಉಳಿದಿರಬಹುದು ಎಂದು ಆಯೋಗ ಹೇಳಿದೆ.

ಮಾರ್ಗಸೂಚಿಗಳ ಅನ್ವಯ ಮತದಾರರ ನೋಂದಣಿ ಅಧಿಕಾರಿ, ಬೂತ್ ಮಟ್ಟದ ಅಧಿಕಾರಿಗಳ ಸಹಾಯದಿಂದ ಪಟ್ಟಿ ಸಿದ್ಧಪಡಿಸುತ್ತಾರೆ, ಅದರ ನಿಖರತೆಗೆ ಜವಾಬ್ದಾರಿ ತೆಗೆದುಕೊಳ್ಳುತ್ತಾರೆ. ಮತದಾರರ ಪಟ್ಟಿ ಸಿದ್ಧಪಡಿಸುವ ಪ್ರತಿ ಹಂತದಲ್ಲೂ ಪಕ್ಷಗಳು ಭಾಗವಹಿಸುತ್ತವೆ. ಬಿಹಾರದಲ್ಲೂ ಇದು ನಡೆದಿದೆ ಎಂದು ಆಯೋಗ ಹೇಳಿದೆ.

ಮತದಾರರ ಪಟ್ಟಿಗಳನ್ನು ಶುದ್ಧೀಕರಿಸಲು ಆಯೋಗವೂ ಇಚ್ಛಿಸುತ್ತದೆ. ಅದಕ್ಕಾಗಿಯೇ ಜುಲೈ 20ರಿಂದ ಬಿಹಾರದ ಎಲ್ಲಾ ರಾಜಕೀಯ ಪಕ್ಷಗಳಿಗೆ ಮತದಾರರ ಪಟ್ಟಿ ನೀಡಲಾಗಿದೆ. ಪಟ್ಟಿಯಿಂದ ಯಾರ ಹೆಸರನ್ನು ತೆಗೆದುಹಾಕಬೇಕು ಎಂದು ಸೂಚಿಸಲಿ ಎಂದು ಆಯೋಗ ತಿಳಿಸಿದೆ.

ಕಾಂಗ್ರೆಸ್‌ಗೆ ಜನಾದೇಶ ಅರಗಿಸಿಕೊಳ್ಳಲಾಗುತ್ತಿಲ್ಲ

ದೆಹಲಿ: ದೇಶದ ರಾಜಧಾನಿ ದೆಹಲಿಯಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಿರುವುದನ್ನು ಎದುರು ಪಕ್ಷದವರಿಗೆ ಅರಗಿಸಿಕೊಳ್ಳುವುದಕ್ಕೇ ಆಗುತ್ತಿಲ್ಲ. ಹಾಗಾಗಿ, ಮತ ಕಳವು ಎಂದು ಸರಣಿಯೋಪಾದಿಯಲ್ಲಿ ಆರೋಪ ಮಾಡುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ.

ಹರಿಯಾಣದಲ್ಲಿ 11,000 ಕೋಟಿ ರು. ವೆಚ್ಚದ ಎರಡು ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳನ್ನು(ದ್ವಾರಕಾ ಎಕ್ಸ್‌ಪ್ರೆಸ್ ವೇ ಮತ್ತು ದೆಹಲಿ ವಿಭಾಗದ ನಗರ ವಿಸ್ತರಣಾ ರಸ್ತೆ-2) ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದ ಪ್ರಧಾನಿ, ದೆಹಲಿ ಸೇರಿದಂತೆ ದೇಶದ ಜನರ ಆಶೀರ್ವಾದ ಬಿಜೆಪಿಗೆ ಇದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ ಕೆಲವರಿಗೆ ಜನರಿಗೆ ಈ ಸಂಗತಿಯನ್ನು ಜೀರ್ಣಿಸಿಕೊಳ್ಳುವುದೇ ಕಷ್ಟ ವಾಗಿದೆ. ಉದರಶೂಲೆ ಬಂದವರಂತೆ ಒಂದಾದ ಮೇಲೊಂದು ಆರೋಪ ಮಾಡುತ್ತಲೇ ಇದ್ದಾರೆ ಎಂದು ಮೋದಿ, ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರನ್ನು ವ್ಯಂಗ್ಯವಾಗಿ ಕುಟುಕಿದರು. ಬಿಜೆಪಿ ದೇಶದ ಜನರಿಗೆ ಅಗತ್ಯವಿರುವ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಲೇ ಇದೆ. ನಮ್ಮ ಜವಾಬ್ದಾರಿಯನ್ನು ಅರ್ಥಮಾಡಿಕೊಳ್ಳುವ ಮೂಲಕ ದೆಹಲಿ-ಎನ್‌ಸಿಆರ್ ಅಭಿವೃದ್ಧಿ ಯಲ್ಲಿ ಮಗ್ನರಾಗಿದ್ದೇವೆ. ಆದರೆ ಕೆಲವು ರಾಜಕೀಯ ಪಕ್ಷಗಳಿಗೆ ಇದನ್ನೆಲ್ಲಾ ಸಹಿಸಿಕೊಳ್ಳುವುದಕ್ಕೇ ಆಗುತ್ತಿಲ್ಲ. ಹಾಗಾಗಿಯೇ ಅವರು ಜನರ ನಂಬಿಕೆ ಕಳೆದುಕೊಂಡಿದ್ದಾರೆ ಎಂದರು.

ಸಮಾಚಾರ ಸಣ್ಣದಲ್ಲ

ಭಿತ್ತಿಫಲಕ ಬಳಕೆ: ಅಣ್ಣಾ ಹಜಾರೆ ಬೇಸರ

ಮುಂಬೈ: ಮತ ಕಳ್ಳತನ ವಿರುದ್ಧ ಆಂದೋಲನ ನಡೆಸುವಂತೆ ಒತ್ತಾಯಿಸಿ ಪುಣೆಯಲ್ಲಿ ತಮ್ಮ ಭಿತ್ತಿಫಲಕಗಳನ್ನು ಅಳವಡಿಸಿರುವುದಕ್ಕೆ ಸಾಮಾಜಿಕ

ಕಾರ್ಯಕರ್ತ ಅಣ್ಣಾ ಹಜಾರೆ ಭಾನುವಾರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಆರೋಪದ ವಿರುದ್ಧ ಎಚ್ಚೆತ್ತುಕೊಳ್ಳಿ. ಯುವ ಸಮೂಹವು ಆಂದೋಲನ ಮುನ್ನಡೆಸುವ ಸಮಯ ಬಂದಿದೆ' ಎಂದಿದ್ದಾರೆ. 'ನನ್ನ ಹೋರಾಟದಿಂದ 10 ಕಾನೂನುಗಳು ಜಾರಿಯಾಗಿವೆ, 90 ವರ್ಷ ದಾಟಿದ್ದೇನೆ. ಜನರು ಗಾಢನಿದ್ದೆಯಲ್ಲಿರುವಾಗ ನಾನೇ ಎಲ್ಲವನ್ನೂ ಮಾಡಬೇಕು ಎಂದು ನಿರೀಕ್ಷಿಸಿದರೆ ಅದು ತಪ್ಪು. ಈ ಹಿಂದೆ ನಾನು ಮಾಡಿದ್ದನ್ನು ಯುವಸಮೂಹವು ಇದೀಗ ಮುನ್ನಡೆಸಬೇಕು' ಎಂದು ಅಣ್ಣಾ ಹಜಾರೆ ಹೇಳಿದರು.

ಎಐ ತಂತ್ರಜ್ಞಾನದಿಂದ ಆರೋಪಿ ಪತ್ತೆ

ನಾಗ್ಪುರ: ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದರು. ಆ ಅಪಘಾತದ ಬಳಿಕ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಎ.ಐ (ಕೃತಕ ಬುದ್ಧಿಮತ್ತೆ) ಬಳಸಿಕೊಂಡು ನಾಗ್ಪುರ ಪೊಲೀಸರು ಬಂಧಿಸಿದ್ದಾರೆ. ರಸ್ತೆ ಅಪಘಾತದಲ್ಲಿ ಮೃತಪಟ್ಟ ಪತ್ನಿಯ ಮೃತದೇಹ ಸಾಗಿಸಲು ಯಾರಿಂದಲೂ ಸಹಾಯ ಸಿಗದ ಕಾರಣ, ದೇಹವನ್ನು ಬೈಕ್‌ಗೆ ಕಟ್ಟಿ ಸಾಗಿಸಿದ ಹೃದಯ ವಿದ್ರಾವಕ ಘಟನೆ ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯಲ್ಲಿ ಕಳೆದ ವಾರ ನಡೆದಿತ್ತು. ಆಗಸ್ಟ್ 9 ರಂದು ನಾಗ್ಪುರ-ಜಬಲ್‌ಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಘಟನೆ ನಡೆದಿದ್ದು, ಬೈಕ್‌ಗೆ ದೇಹವನ್ನು ಕಟ್ಟಿ ಸಾಗಿಸುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಅದರ ಬೆನ್ನಲ್ಲೇ ನಾಗ್ಪುರ ಪೊಲೀಸರು ಕೃತಕ ಬುದ್ಧಿಮತ್ತೆ (ಎಐ) ಬಳಸಿಕೊಂಡು ಚಾಲಕನನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ. ಆರಂಭದಲ್ಲಿ ಪೊಲೀಸರಿಗೆ ಟ್ರಕ್ ಚಾಲಕನ ಬಗ್ಗೆ ಯಾವುದೇ ಸುಳಿವು ಸಿಗಲಿಲ್ಲ, ಆದರೆ ಅಪರಾಧ ತಡೆಗಟ್ಟುವಿಕೆ ಹಾಗೂ ಪೊಲೀಸರ ತನಿಖೆಗೆ ಸಹಾಯ ಮಾಡುವ ಉದ್ದೇಶದಿಂದ ವಿನ್ಯಾಸಗೊಳಿಸಲಾದ ಎ.ಐ ಬಳಸಿಕೊಂಡು ವಿವಿಧ ಸಿಸಿಟಿವಿ ಕ್ಯಾಮೆರಾಗಳಿಂದ ದೃಶ್ಯಾವಳಿಗಳನ್ನು ಸ್ಕ್ಯಾನ್ ಮಾಡುವ ಮೂಲಕ ಆರೋಪಿಯನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪಕ್ಷಪಾತ ಧೋರಣೆ ಜೈರಾಮ್ ರಮೇಶ್

ದೆಹಲಿ: ಚುನಾವಣಾ ಆಯೋಗವು ಅಸಮರ್ಥತೆ ಮಾತ್ರವಲ್ಲದೇ ಸ್ಪಷ್ಟ ಪಕ್ಷಪಾತ ಧೋರಣೆ ಹೊಂದಿದೆ ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿದೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ನಡುವೆ ಯಾವುದೇ ವ್ಯತ್ಯಾಸ ಮಾಡುವುದಿಲ್ಲ ಎಂದು ಚುನಾವಣಾ ಆಯೋಗ ಹೇಳಿಕೆ ನೀಡಿದ ಬೆನ್ನಲ್ಲೇ ಕಾಂಗ್ರೆಸ್ ಪ್ರತಿಕ್ರಿಯಿಸಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಚುನಾವಣಾ ಸಂಸ್ಥೆಯು ಸುಪ್ರೀಂ ಕೋರ್ಟ್‌ನ ಆದೇಶವನ್ನು ಪಾಲಿಸುತ್ತಿದೆಯೇ ಎಂದು ಪ್ರಶ್ನಿಸಿದ್ದಾರೆ. ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಪಟ್ಟಿಯಿಂದ ಕೈಬಿಟ್ಟಿರುವ 65 ಲಕ್ಷ ಮತದಾರರ ಹೆಸರು ಮತ್ತು ವಿವರಗಳನ್ನು ಪ್ರಕಟಿಸುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶನ ನೀಡಿತ್ತು. ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಹಾಗೂ ಮತ ಕಳ್ಳತನ ವಿರೋಧಿಸಿ ಇಂದು ಆರಂಭವಾದ ಮತದಾರನ ಅಧಿಕಾರ (ಮತದಾರರ ಹಕ್ಕು) ಯಾತ್ರೆ'ಯಲ್ಲಿ ರಾಹುಲ್ ಭಾಗಿಯಾದ ಕೆಲವೇ ಹೊತ್ತಿನಲ್ಲಿ ಚುನಾವಣಾ ಆಯೋಗ ಪತ್ರಿಕಾಗೋಷ್ಠಿ ನಡೆಸಿತ್ತು.

ಮಲೆನಾಡಿನಲ್ಲಿ ಮಳೆ ಅಬ್ಬರ

← ಮೊದಲಪುಟದಿಂದ

ಪರ್ಯಾಯ ಮಾರ್ಗ: ಸದ್ಯಕ್ಕೆ ಬೆಂಗಳೂರು-ಮಂಗಳೂರು ಪ್ರಯಾಣಿಕರು ಶಿರಾಡಿ ಘಾಟ್ ಮಾರ್ಗದ ಬದಲಿಗೆ, ಚಾರ್ಮಾಡಿ ಘಾಟ್ ಅಥವಾ ಬಿಸಿಲೆ ಘಾಟ್, ಮಡಿಕೇರಿ ಮೂಲಕ ಪ್ರಯಾಣ ಮಾಡುವಂತೆ ಪೊಲೀಸರು ಸೂಚನೆ ನೀಡಿದ್ದಾರೆ.

ರೈಲುಗಳ ಮಾರ್ಗ ತುರ್ತು ಬದಲಾವಣೆ

ಶನಿವಾರ ಸಂಜೆ ಘಾಟಿ ರೈಲು ಮಾರ್ಗದಲ್ಲಿಯೂ ಭೂಕುಸಿತ ಸಂಭವಿಸಿದ್ದು, ಕೆಲ ರೈಲುಗಳ ಮಾರ್ಗದಲ್ಲಿ ತುರ್ತು ಬದಲಾವಣೆ ಮಾಡಲಾಗಿದೆ. ಸಿರಿಬಾಗಿಲು-ಯಡಕುಮೇರಿ, ಕಡಗರವಳ್ಳಿ, ದೋಣಿಗಲ್ ವಿಭಾಗಗಳ ನಡುವೆ ಭೂ ಕುಸಿತಗೊಂಡಿದೆ. ಮಂಗಳೂರು-ವಿಜಯಪುರ (07378) ವಿಶೇಷ ಎಕ್ಸ್‌ಪ್ರೆಸ್, ಮುರ್ಡೇಶ್ವರ-ಎಸ್‌ಎಂವಿಟಿ ಬೆಂಗಳೂರು ರೈಲು, ಕಣ್ಣೂರು-ಕೆಎಸ್‌ಆರ್ ಬೆಂಗಳೂರು (16512) ರೈಲು ಹಾಗೂ ಕಾರವಾರ-ಕೆಎಸ್‌ಆರ್ ಬೆಂಗಳೂರು (16596) ರೈಲುಗಳ ಮಾರ್ಗ ಬದಲಾಗಿದೆ.

{ ತೇಜಸ್ವಿ ಯಾದವ್ } ಆರ್‌ಜೆಡಿ ನಾಯಕ

ಅಂಬೇಡ್ಕರ್ ನಮಗೆ ಮತದಾನದ ಹಕ್ಕನ್ನು ನೀಡಿದ್ದಾರೆ, ಆದರೆ ಬಿಜೆಪಿಯವರು ಆ ಹಕ್ಕನ್ನು ಚುನಾವಣಾ ಆಯೋಗದ ಮೂಲಕ ಕಸಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆಯೋಗವು ಬಿಜೆಪಿಯ ನಿರ್ದೇಶನಗಳಿಗೆ ಅನುಗುಣವಾಗಿ ಕೆಲಸ ಮಾಡುತ್ತಿದೆ. ಪ್ರಧಾನಿ ಮೋದಿ ಅವರು ಬಿಹಾರದ ಜನರಿಗೆ ಮೋಸ ಮಾಡಲು ಬಿಡುವುದಿಲ್ಲ.

ದ್ರಾವಿಡ ನಾಡಲ್ಲಿ ಕಮಲ ಅರಳಿಸಿದ ಸಂಘಜೀವಿ

ಎನ್‌ಡಿಎ ಮೈತ್ರಿಕೂಟವು ಮುಂಬರುವ ಉಪರಾಷ್ಟ್ರಪತಿ ಚುನಾವಣೆಗೆ ಮಹಾರಾಷ್ಟ್ರ ರಾಜ್ಯಪಾಲರಾದ ಸಿ.ಪಿ.ರಾಧಾಕೃಷ್ಣನ್ ಅವರನ್ನು ತನ್ನ ಅಭ್ಯರ್ಥಿಯನ್ನಾಗಿ ಹೆಸರಿಸಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಹಿರಿಯ ನಾಯಕರು ಭಾಗವಹಿಸಿದ್ದ ಭಾರತೀಯ ಜನತಾ ಪಕ್ಷದ ಸಂಸದೀಯ ಮಂಡಳಿಯ ಸಭೆಯ ನಂತರ ಈ ಘೋಷಣೆ ಮಾಡಲಾಗಿದ್ದು, ಸೆ.9ರಂದು ನಡೆಯುವ ಉಪರಾಷ್ಟ್ರಪತಿ ಚುನಾವಣೆಯಲ್ಲಿ ರಾಧಾಕೃಷ್ಣನ್ ಅವರು ಆಯ್ಕೆಯಾಗುವ ಸಾಧ್ಯತೆ ಬಹುತೇಕ ಖಚಿತ ಎನ್ನಲಾಗುತ್ತದೆ. ಹಾಗಾದರೆ ಯಾರು ಈ ರಾಧಾಕೃಷ್ಣನ್, ಅವರ ಹಿನ್ನೆಲೆ ಏನು? ಅವರನ್ನೇ ಏಕೆ ಆಯ್ಕೆ ಮಾಡಲಾಯಿತು? ಎಂಬ ಕುರಿತು ಸಮಗ್ರ ಮಾಹಿತಿ ಇಲ್ಲಿದೆ.

ಸಿ.ಪಿ.ರಾಧಾಕೃಷ್ಣನ್ ಯಾರು?

ದ್ರಾವಿಡವಾದದ ನಡುವೆ ತಮಿಳುನಾಡಿನಲ್ಲಿ ಹಿಂದುತ್ವದ ಬಿಜ ಬಿತ್ತಿದ್ದ ಆರ್‌ಎಸ್‌ಎಸ್ ಕಟ್ಟಾಳು, ಮಾಜಿ ಸಂಸದ ಹಾಗೂ ಹಾಲಿ ರಾಜ್ಯಪಾಲರಾದ ಚಂದ್ರಾಪುರಂ ಪೊನ್ನುಸ್ವಾಮಿ ರಾಧಾಕೃಷ್ಣನ್ ಅವರು ತಂದೆ ಸಿ.ಕೆ.ಪೊನ್ನುಸ್ವಾಮಿ ಮತ್ತು ತಾಯಿ ಕೆ.ಜಾನಕಿ ಸುಪುತ್ರನಾಗಿ ಅಕ್ಟೋಬರ್ 20, 1957ರಂದು ತಮಿಳುನಾಡಿನ ತಿರುಪ್ಪೂರಿನಲ್ಲಿ ಜನಿಸಿದರು. ಟುಟಿಕೋರಿನ್‌ನ ವಿ.ಒ.ಚಿದಂಬರಂ ಕಾಲೇಜಿನಿಂದ ಬ್ಯಾಚುಲರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ (ಬಿಬಿಎ) ಪದವಿ ಪಡೆದ ಅವರು, ವಿದ್ಯಾರ್ಥಿ ಜೀವನದಲ್ಲಿಯೇ ಅಂದ್ರೆ, 16ನೇ ವಯಸ್ಸಿನಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಜನಸಂಘವನ್ನು ಸೇರಿ 1974ರಲ್ಲಿ ತಮಿಳುನಾಡಿನಲ್ಲಿ ಭಾರತೀಯ ಜನಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾದರು. ಮುಂದೆ ಜನಸಂಘ ಒಡೆದು ಭಾರತೀಯ ಜನತಾ ಪಕ್ಷ ರಚನೆಯಾದಾಗ ತಮಿಳುನಾಡಿನಲ್ಲಿ ಬಿಜೆಪಿ ಕಾರ್ಯದರ್ಶಿಯಾಗಿ ನೇಮಿಸಲಾಯಿತು.

ತ.ನಾಡಿನ ಮೊದಲ ಬಿಜೆಪಿ ಸಂಸದ

ರಾಧಾಕೃಷ್ಣನ್ ಅವರು 1998ರಲ್ಲಿ ಬಿಜೆಪಿ ಕಟ್ಟಾಳುವಾಗಿ ತಮಿಳುನಾಡಿನ ಕೊಯಮತ್ತೂರು ಸ್ಥಾನದಿಂದ ಲೋಕಸಭೆಗೆ ಆಯ್ಕೆಯಾದರು. ಆ ಸಮಯದಲ್ಲಿ, ಕೊಯಮತ್ತೂರಿನಲ್ಲಿ ನಡೆದ ಪ್ರಮುಖ ಭಯೋತ್ಪಾದಕ ದಾಳಿಯ ನಂತರ, ಅಭಿವೃದ್ಧಿ ಮತ್ತು ಭದ್ರತೆಯನ್ನು ಚುನಾವಣಾ ವಿಷಯವನ್ನಾಗಿ ಮಾಡುವ ಮೂಲಕ ಅವರು ದೊಡ್ಡ ಗೆಲುವು ಸಾಧಿಸಿದರು. ಅದರಂತೆ ಅವರು 1998 ಮತ್ತು 1999ರಲ್ಲಿ ಸತತವಾಗಿ ಎರಡು ಬಾರಿ ಸಂಸದರಾಗಿ ಆಯ್ಕೆಯಾದರು. ಇನ್ನು ಸಂಸದರಾಗಿದ್ದ ವೇಳೆ ಅವರು ತಮ್ಮ ಅಧಿಕಾರಾವಧಿಯಲ್ಲಿ ಜವಳಿ ಕುರಿತ ಸಂಸದೀಯ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿದ್ದರು. ಜತೆಗೆ ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಹಣಕಾಸು ಕುರಿತ ಸಮಿತಿಗಳ ಸದಸ್ಯರಾಗಿದ್ದ ಅವರು, ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ (2004) ಸಂಸದೀಯ ನಿಯೋಗದ ಭಾಗವಾಗಿದ್ದರು. ಜತೆಗೆ ತೈವಾನ್‌ಗೆ ಮೊದಲ ಭಾರತೀಯ ನಿಯೋಗದ ಭಾಗವಾಗಿದ್ದರು.

93 ದಿನಗಳ ಸುದೀರ್ಘ ರಥಯಾತ್ರೆ ನಡೆಸಿದ ರಾಜ್ಯಪಾಲ

2004 ರಿಂದ 2007 ರವರೆಗೆ ಬಿಜೆಪಿಯ ತಮಿಳುನಾಡು ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದ ರಾಧಾಕೃಷ್ಣನ್ ಅವರು ದಕ್ಷಿಣ ಭಾರತದಲ್ಲಿ ಅದರಲ್ಲೂ ಪ್ರಮುಖವಾಗಿ ತಮಿಳುನಾಡು, ಕೇರಳ ಮತ್ತು ಪುದುಚೇರಿಯಲ್ಲಿ ಪಕ್ಷದ ವಿಸ್ತರಣೆಗೆ ಬಲವಾದ ಅಡಿಪಾಯ ಹಾಕಿದರು. ಈ ವೇಳೆ, ಅವರು 93 ದಿನಗಳ, 19,000 ಕಿಮೀ ರಥಯಾತ್ರೆಯನ್ನು ಮುನ್ನಡೆಸಿದರು. ನದಿಗಳ ಜೋಡಣೆ, ಅಸ್ಪೃಶ್ಯತೆಯನ್ನು ತೊಡೆದುಹಾಕುವುದು, ಏಕರೂಪದ ನಾಗರಿಕ ಸಂಹಿತೆಯನ್ನು ಜಾರಿಗೆ ತರುವುದು, ಭಯೋತ್ಪಾದನೆಯ ವಿರುದ್ಧ ಹೋರಾಡುವುದು ಮತ್ತು ಮಾದಕ ದ್ರವ್ಯ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನಹರಿಸಿದರು.

ಜಾರ್ಖಂಡ್, ತೆಲಂಗಾಣ ರಾಜ್ಯಪಾಲರಾಗಿಯೂ ಸೇವೆ

ವೃತ್ತಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಸಿ.ಪಿ.ರಾಧಾಕೃಷ್ಣನ್ ಅವರು ಜುಲೈ 31, 2024ರಿಂದ ಮಹಾರಾಷ್ಟ್ರದ 24ನೇ ರಾಜ್ಯಪಾಲರಾಗಿದ್ದಾರೆ. ಇದಕ್ಕೂ ಮುನ್ನ, ಫೆಬ್ರವರಿ 18, 2023 ರಿಂದ ಜುಲೈ 30, 2024 ರವರೆಗೆ ಸುಮಾರು ಒಂದೂವರೆ ವರ್ಷಗಳ ಕಾಲ ಜಾರ್ಖಂಡ್ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು. ಮಾರ್ಚ್‌ನಿಂದ ಜುಲೈ 2024 ರವರೆಗೆ ತೆಲಂಗಾಣದ ರಾಜ್ಯಪಾಲರಾಗಿ ಮತ್ತು 2024ರ ಮಾರ್ಚ್‌ನಿಂದ ಆಗಸ್ಟ್‌ರವರೆಗೆ ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ಆಗಿ ಹೆಚ್ಚುವರಿ ಜವಾಬ್ದಾರಿಗಳನ್ನು ಹೊಂದಿದ್ದರು.

ತಮಿಳುನಾಡು ಮೂಲದ ವ್ಯಕ್ತಿಯೇ ಯಾಕೆ?

ದಕ್ಷಿಣ ಭಾರತದಲ್ಲಿ ತಮಿಳುನಾಡು ಅತ್ಯಂತ ಸಂಕೀರ್ಣ ರಾಜಕೀಯ ನೆಲೆಯಾಗಿದೆ. ದ್ರಾವಿಡ ಪಕ್ಷಗಳಾದ ಡಿಎಂಕೆ ಮತ್ತು ಎಐಎಡಿಎಂಕೆ ದಶಕಗಳಿಂದ ಇಲ್ಲಿ ಪ್ರಾಬಲ್ಯ ಹೊಂದಿವೆ. ಕರ್ನಾಟಕ, ಕೇರಳ, ಆಂಧ್ರಪ್ರದೇಶ ಮತ್ತು ತೆಲಂಗಾಣಕ್ಕೆ ಹೋಲಿಸಿದರೆ ಇಲ್ಲಿನ ಸಾಂಸ್ಕೃತಿಕ-ರಾಜಕೀಯ ಸಮೀಕರಣವು ಬಿಜೆಪಿಗೆ ಹೆಚ್ಚು ಸವಾಲಿನದ್ದಾಗಿದ್ದರೂ ಕೂಡ ಇದುವರೆಗೂ ಯಾವುದೇ ನಿರ್ಣಾಯಕ ಯಶಸ್ಸನ್ನು ಸಾಧಿಸಿಲ್ಲ. ಹಾಗಾಗಿ, ತಮಿಳುನಾಡಿನಲ್ಲಿ ಯಾವುದೇ ಆಕ್ರಮಣ ಮಾಡಬೇಕಾದರೆ, ಸ್ಥಳೀಯ ಮುಖ ಮತ್ತು ಜನಾಂಗೀಯ-ಸಾಮಾಜಿಕ ಸಮತೋಲನವು ಅತ್ಯಂತ ಮುಖ್ಯ ಎಂದು ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಅವರಿಗೆ ತಿಳಿದಿದೆ.

ಇಂಡಿಯಾ ಮೈತ್ರಿಕೂಟದ ಸ್ಥಿತಿ

ಸೆಪ್ಟೆಂಬರ್ 9ರಂದು ಚುನಾವಣೆ ಇದ್ದರೂ ಈವರೆಗೂ ಉಪರಾಷ್ಟ್ರಪತಿ ಅಭ್ಯರ್ಥಿಯನ್ನು ಘೋಷಿಸಿದ ಇಂಡಿಯಾ ಮೈತ್ರಿಕೂಟದ ಸ್ಥಿತಿ ಎನ್‌ಡಿಎಗಿಂತ ಹಿಂದೆ ಇದೆ. ಹೌದು, ಲೋಕಸಭೆಯಲ್ಲಿ ಅವರಿಗೆ 234 ಮತಗಳ ಶಕ್ತಿ ಇದೆ ಮತ್ತು ರಾಜ್ಯಸಭೆಯಲ್ಲಿ ಕೇವಲ 78 ಮತಗಳು ಮಾತ್ರ. ಅದರಂತೆ, ಒಟ್ಟು 312 ಮತಗಳ ಬಲದೊಂದಿಗೆ ಇಂಡಿಯಾ ಮೈತ್ರಿಕೂಟ ಈ ಚುನಾವಣೆಯಲ್ಲಿ ಹಿಂದಿರುವುದು ಸ್ಪಷ್ಟವಾಗಿದೆ. ಅಂದರೆ, ಅವರು ಬಹುಮತದ ಗುರಿಯಿಂದ 80ಕ್ಕೂ ಹೆಚ್ಚು ಮತಗಳಿಂದ ದೂರದಲ್ಲಿದ್ದಾರೆ.

ಎನ್‌ಡಿಎಗೆ ಸ್ಪಷ್ಟ ಬಹುಮತ

ಭಾರತದ ಉಪರಾಷ್ಟ್ರಪತಿ ಸ್ಥಾನಕ್ಕಾಗಿ ನಡೆಯುವ ಚುನಾವಣೆಯಲ್ಲಿ ಒಟ್ಟು 782 ಮತಗಳಿವೆ. ಇವರಲ್ಲಿ ಗೆಲುವು ಸಾಧಿಸಲು ಕನಿಷ್ಠ 392 ಮತಗಳು ಅಗತ್ಯ. ಈ ಅಂಕಿ ಅಂಶಗಳನ್ನು ನೋಡಿದಾಗ, ಎನ್‌ಡಿಎಗೆ ಸುಲಭವಾಗಿ ಬಹುಮತ ಪಡೆಯುವ ಅವಕಾಶವಿದೆ. ಲೋಕಸಭೆಯಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ 293 ಸದಸ್ಯರ ಬೆಂಬಲವಿದೆ. ಜತೆಗೆ ರಾಜ್ಯಸಭೆಯಲ್ಲಿ 133 ಸದಸ್ಯರ ಬೆಂಬಲ ಕೂಡ ದೊರೆಯುತ್ತಿದೆ. ಅದರಂತೆ, ಒಟ್ಟು ಎನ್‌ಡಿಎ ಬಳಿ 426 ಮತಗಳ ಶಕ್ತಿ ಇರುವುದರಿಂದ ಉಪರಾಷ್ಟ್ರಪತಿ ಸ್ಥಾನ ಗೆಲ್ಲಲು ಅವರಿಗೆ ಯಾವುದೇ ತೊಂದರೆ ಆಗಲ್ಲ. ಹಾಗಾಗಿ, ಬಿಜು ಜನತಾದಳ (ಬಿಜೆಡಿ) ಅಥವಾ ಇತರ ಮಧ್ಯಮ ಪಕ್ಷಗಳ ಬೆಂಬಲವಿಲ್ಲದಿದ್ದರೂ ಎನ್‌ಡಿಎ ಜಯಶಾಲಿಯಾಗಲಿದೆ.



ರಾಧಾಕೃಷ್ಣನ್ ಅವರೇ ಆಯ್ಕೆಯಾಗಿದ್ದು ಯಾಕೆ?

ಸಿ.ಪಿ.ರಾಧಾಕೃಷ್ಣನ್ ಅವರು ಪ್ರತಿಯೊಂದು ವಿಷಯದಲ್ಲೂ ಸೂಕ್ತರು. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಸಿದ್ಧಾಂತಕ್ಕೆ ನಿಷ್ಠರಾಗಿರುವ ತಮಿಳುನಾಡಿನ ನಾಯಕ. ಜತೆಗೆ ತಮಿಳು ರಾಜ್ಯದವರನ್ನು ಉಪಾಧ್ಯಕ್ಷರಂತಹ ದೊಡ್ಡ ಹುದ್ದೆಯಲ್ಲಿ ನೇಮಿಸುವ ಮೂಲಕ, ಬಿಜೆಪಿಯು ದೆಹಲಿಯ ಅಧಿಕಾರದಲ್ಲಿ ತಮಿಳು ಸಮುದಾಯಕ್ಕೂ ಪಾಲು ಇದೆ ಎಂಬ ಸಂದೇಶವನ್ನು ನೀಡಲು ಬಯಸುತ್ತದೆ.

ರನ್ ಫಾರ್ ರಾಜೀವ್ ಮ್ಯಾರಥಾನ್‌ಗೆ ಡಿಕೆಶಿ ಚಾಲನೆ | ಮಾಜಿ ಪ್ರಧಾನಿಯ ಗುಣಗಾನ

ರಾಜೀವ್ ಭಾರತದ ತಂತ್ರಜ್ಞಾನದ ಹರಿಕಾರ

ಬೆಂಗಳೂರು: ದೇಶದ ಯುವಕರಿಗೆ 18ನೇ ವರ್ಷಕ್ಕೆ ಮತದಾನದ ಹಕ್ಕು ನೀಡಿದ್ದು, ತಂತ್ರಜ್ಞಾನ ಕ್ರಾಂತಿ ಮಾಡಿದ್ದು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬೆಂಗಳೂರಿನ ಕಂಠೀರವ ಸ್ಟೇಡಿಯಂ ಬಳಿ ಭಾನುವಾರ ಏರ್ಪಡಿಸಿದ್ದ 'ರನ್ ಫಾರ್ ರಾಜೀವ್' ಮ್ಯಾರಥಾನ್‌ಗೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ನಾನು ಕೂಡ ಚಿಕ್ಕ ವಯಸ್ಸಿನಲ್ಲಿ 10-15 ಕಿ. ಮೀ. ಓಡುತ್ತಿದ್ದೆ. ಇದೇ ಕ್ರೀಡಾಂಗಣದಲ್ಲಿ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿದ್ದೆ. ರಾಜೀವ್ ಗಾಂಧಿ ಅವರ ನೆನಪಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು, ನಮ್ಮ ದೇಶದ ಯುವಕರಿಗೆ 21 ವರ್ಷಕ್ಕೆ ಮತದಾನದ ಹಕ್ಕು ನೀಡಲಾಗಿತ್ತು. ಅದನ್ನು 18 ವರ್ಷಕ್ಕೆ ಇಳಿಸಿದ್ದು ರಾಜೀವ್ ಗಾಂಧಿ ಅವರು. ಈ ನಿರ್ಧಾರವನ್ನು ವಿರೋಧ ಪಕ್ಷಗಳು ಟೀಕೆ ಮಾಡಿದವು. ಅದಕ್ಕೆ ರಾಜೀವ್ ಗಾಂಧಿ ಅವರು ನಾವು 16ನೇ ವಯಸ್ಸಿಗೆ ಎಸ್‌ಎಸ್‌ಎಲ್‌ಸಿ ಪಾಸಾದ ಯುವಕರನ್ನು ದೇಶದ ಗಡಿ ಕಾಯಲು ಸೇನೆಗೆ ನೇಮಿಸುತ್ತೇವೆ. ಅದೇ ರೀತಿ ಪ್ರಜಾಪ್ರಭುತ್ವ ಕಾಯಲು ಅವರಿಗೆ ಮತದಾನದ ಹಕ್ಕು ನೀಡಲಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಂಚಾಯ್ತಿಯಿಂದ ಪಾರ್ಲಿಮೆಂಟ್ ವರೆಗೂ ಜನಪ್ರತಿನಿಧಿಗಳು ಆಯ್ಕೆ ಆಗಬೇಕು ಎಂದು ಹೇಳಿದರು ಎಂದರು.

ನಾನು ವಿದ್ಯಾರ್ಥಿಯಾಗಿದ್ದಾಗ ಎನ್‌ಎಸ್‌ಯುಐ ನಾಯಕನಾಗಿದ್ದೆ, ಆಗ ನಮ್ಮ ಬಳಿ ಫೋನ್ ಇರಲಿಲ್ಲ. ಲ್ಯಾಂಡ್‌ಲೈನ್ ಸಂಪರ್ಕ ಪಡೆಯಲು 3-4 ವರ್ಷ ಕಾಯಬೇಕಿತ್ತು. ತಂತ್ರಜ್ಞಾನ ಕ್ರಾಂತಿ ಮೂಲಕ ಇಂದು ನಿಮ್ಮೆಲ್ಲರ ಕೈಗೆ ಮೊಬೈಲ್ ಬರುವಂತೆ ಮಾಡಿರುವುದೇ ರಾಜೀವ್ ಗಾಂಧಿ. ದೇಶದ ಐಕ್ಯತೆ, ಸಮಗ್ರತೆ, ಶಾಂತಿಗಾಗಿ ಪ್ರಾಣವನ್ನೇ ತ್ಯಾಗ ಮಾಡಿದ ಧೀಮಂತ ನಾಯಕರ ನೆನಪಲ್ಲಿ ನೀವು ಹೆಜ್ಜೆ ಹಾಕಲು ಬಂದಿದ್ದೀರಿ. ನಿಮಗೆ ಅಭಿನಂದನೆಗಳು ಎಂದು ಹೇಳಿದರು.

ಬೆಂಗಳೂರು ಈಗ ಗ್ರೇಟರ್ ಬೆಂಗಳೂರು ಆಗಿದೆ. ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಭಾರತವನ್ನು ಬೆಂಗಳೂರಿನ ಮೂಲಕ ನೋಡಲಾಗುತ್ತಿದೆ ಎಂದರು, ಅದು ಸಾಧ್ಯವಾಗಿದ್ದು ನಿಮ್ಮೆಲ್ಲರಿಂದ ಎಂದು ಡಿ.ಕೆ.ಶಿ. ತಿಳಿಸಿದರು.

ರನ್ ಫಾರ್ ರಾಜೀವ್ ಮ್ಯಾರಥಾನ್‌ಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು.

ಮುಂದಿನ ದಿನಗಳಲ್ಲಿ ವ್ಯಾಪಾರಸ್ಥರಿಗೆ ಮತ್ತು ಗ್ರಾಹಕರಿಗೆ ಅನುಕೂಲ: ಬೊಮ್ಮಾಯಿ

ಜಿಎಸ್‌ಟಿ ಸರಳೀಕರಣ ಸ್ವಾಗತಾರ್ಹ

ಬೆಂಗಳೂರು: ಕೆಂಪು ಕೋಟೆಯ ಮೇಲೆ ಪ್ರಧಾನಿ ನರೇಂದ್ರ ಮೋದಿಯವರು ಜಿಎಸ್‌ಟಿ ಕಡಿತ ಮಾಡುವ ಘೋಷಣೆ ಮಾಡಿರುವುದು ಸ್ವಾಗತಾರ್ಹ. ತೆರಿಗೆಯ ಸರಳೀಕರಣ ಮಹತ್ವದ ಹೆಜ್ಜೆ ಘೋಷಣೆ ಮಾಡಿದ್ದಾರೆ. ಇದರಿಂದ ಮುಂದಿನ ದಿನದಲ್ಲಿ ವ್ಯಾಪಾರಸ್ಥರಿಗೆ ಮತ್ತು ಗ್ರಾಹಕರಿಗೆ ಅನುಕೂಲಕವಾಗಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಒಂದು ರಾಷ್ಟ್ರ-ಒಂದು ತೆರಿಗೆ ಮತ್ತು ತೆರಿಗೆ ಸರಳೀಕರಣ ಮತ್ತು ಅತ್ಯಂತ ಸರಳವಾಗಿರುವ ತೆರಿಗೆ ಪದ್ಧತಿ ಇರಬೇಕು. ವಿಶೇಷವಾಗಿ ಸಣ್ಣ ವ್ಯಾಪರಸ್ಥರಿಗೆ ರೈತರಿಗೆ ಅನುಕೂಲವಾಗಲಿ ಎಂದು ಐದು ವರ್ಷದ ಹಿಂದೆ ಜಿಎಸ್‌ಟಿ ಜಾರಿಗೊಳಿಸಲಾಗಿತ್ತು. ಆದರೀಗ ಕೆಲ ಬದಲಾವಣೆಯೊಂದಿಗೆ, ರೈತರು, ಸಣ್ಣ ವ್ಯಾಪಾರಸ್ಥರು, ದೊಡ್ಡ ವ್ಯಾಪಾರಸ್ಥರು ಎಲ್ಲರೂ ಕೂಡ ಅಭಿಪ್ರಾಯಪಟ್ಟ ಹಿನ್ನೆಲೆಯಲ್ಲಿ ತೆರಿಗೆಯ ಸ್ಲ್ಯಾಬ್ ಕಡಿಮೆ ಮಾಡಬೇಕು ಮತ್ತು ಕೆಲವು ವಸ್ತುಗಳ ತೆರಿಗೆ ಕಡಿಮೆ ಮಾಡಬೇಕು ಎಂದು ತೀರ್ಮಾನಿಸಿ, ವರದಿ ಕೊಟ್ಟಿದ್ದೇವೆ. ಇದರಲ್ಲಿ ಬಹಳಷ್ಟು ದಿನಬಳಕೆಯಾಗುವ ವಸ್ತುಗಳು ಅವುಗಳನ್ನು ಕಡಿಮೆ ಸ್ಲ್ಯಾಬ್‌ನಲ್ಲಿ ಹಾಕುವಂಥದ್ದು ಸ್ಲ್ಯಾಬ್ ಸಂಖ್ಯೆ ಕಡಿಮೆ ಮಾಡುವುದು. ಇದರಿಂದ ವ್ಯಾಪಾರಸ್ಥರಿಗೆ ಮತ್ತು ಖರೀದಿದಾರರಿಗೆ ಇಬ್ಬರಿಗೂ ಅನುಕೂಲವಾಗುವ ರೀತಿಯಲ್ಲಿ ನಾವು ಕೆಲವು ಸಲಹೆ ಸೂಚನೆಗಳನ್ನು ಅಂದು ಜಿಎಸ್‌ಟಿ ಕೌನ್ಸಿಲ್‌ನಲ್ಲಿ ಮಂಡನೆ ಮಾಡಿದ್ದೆವು ಎಂದು ತಿಳಿಸಿದ್ದಾರೆ.

ಈಗ ಕೌನ್ಸಿಲ್‌ನಲ್ಲಿ ಒಪ್ಪಿರುವ ಕೆಲವು ತಿದ್ದುಪಡಿಗಳನ್ನು ತರಬೇಕೆಂದು ಕೇಂದ್ರ ಸರಕಾರದ ತೀರ್ಮಾನವನ್ನು ಕೆಂಪು ಕೋಟೆಯ ಮೇಲೆ ಪ್ರಧಾನಿ ನರೇಂದ್ರ ಮೋದಿ ಘೋಷಣೆ ಮಾಡಿರುವುದು ಅತ್ಯಂತ ಸ್ವಾಗತಾರ್ಹ. ತೆರಿಗೆಯ ಸರಳೀಕರಣ ಮಹತ್ವದ ಹೆಜ್ಜೆ ಘೋಷಣೆ ಮಾಡಿದ್ದಾರೆ. ಬರುವಂತಹ ದಿನಗಳಲ್ಲಿ ವ್ಯಾಪಾರಸ್ಥರಿಗೆ ಮತ್ತು ಗ್ರಾಹಕರಿಗೆ ಬಹಳ ಅನುಕೂಲಕವಾಗಲಿದೆ. ಇದೊಂದು ನರೇಂದ್ರ ಮೋದಿಯವರ ವಿಶೇಷವಾಗಿರುವ ಕೊಡುಗೆ ಬರುವ ದೀಪಾವಳಿಗೆ ಅವರು ಮಾಡುತ್ತಿರುವುದು ಇಡೀ ರಾಷ್ಟ್ರವೇ ಸ್ವಾಗತ ಮಾಡುತ್ತದೆ ಎನ್ನುವ ವಿಶ್ವಾಸ ಇದ್ದು, ನರೇಂದ್ರ ಮೋದಿಯವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

ಮಂತ್ರಾಲಯಕ್ಕೆ ನವರತ್ನ ಹಾರ ಸಮರ್ಪಣೆ

ಮಂತ್ರಾಲಯ: ಮಂತ್ರಾಲಯದಲ್ಲಿ ರಾಘವೇಂದ್ರ ಸ್ವಾಮಿಗಳ ಆರಾಧನೆ ಮಹೋತ್ಸವ ಅದ್ದೂರಿಯಾಗಿ ನಡೆದಿದ್ದು, ಗುರು ರಾಯರ ಪೂರ್ವಾರಾಧನೆ ಸಂದರ್ಭದಲ್ಲಿ, ಜಿ.ವಿ.ರಾಮಕೃಷ್ಣ ಮತ್ತು ಪತ್ನಿ ಕವಿತಾ ರಾಮಕೃಷ್ಣ ಅವರು ಮಂತ್ರಾಲಯದ ಮೂಲ ರಾಮ ದೇವರಿಗೆ ಅಪರೂಪದ ನವರತ್ನ ಹಾರವನ್ನು ಸಮರ್ಪಿಸಿ ದ್ದಾರೆ. ಜಿ.ವಿ. ರಾಮಕೃಷ್ಣ ಪೂರ್ಣ ಅವರು ಬೆಂಗಳೂರಿನ ಚಾಮ ರಾಜಪೇಟೆಯ ನಿವಾಸಿಯಾಗಿದ್ದು, 2007ರಿಂದ ಒಮಾನ್ ಪ್ರಮುಖ ಬ್ಯಾಂಕ್‌ವೊಂದರ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿ ದ್ದಾರೆ. ಅವರ ಪತ್ನಿ ಕವಿತಾ ಅವರು ಯೋಗ ಗುರುಗಳಾಗಿದ್ದಾರೆ. ಒಮಾನ್‌ನ ಪಾರಂಪರಿಕ ಜ್ಯುವೆಲ್ಲರಿಗಳಿಗೆ ಕಲೆಯ ಸ್ಪರ್ಶ ನೀಡುತ್ತಿದ್ದಾರೆ. 'ರಾಯರ ವರ್ಧಂತಿ ಉತ್ಸವದ ವೇಳೆ ನಾವು ನಕ್ಷತ್ರ ಮಾಲೆಯನ್ನು ಸಮರ್ಪಿಸಿದ್ದೆವು. ಮಧ್ಯಾರಾಧನೆ ಸಂದರ್ಭದಲ್ಲಿ ರಾಯರ ಅನುಗ್ರಹಕ್ಕಾಗಿ ನವರತ್ನಮಾಲೆ ಸಮರ್ಪಿಸಿದ್ದೇವೆ' ಎಂದು ರಾಮಕೃಷ್ಣ ಅವರು ಭಕ್ತಿ ಮತ್ತು ವಿನಮ್ರತೆಯಿಂದ ಹೇಳಿದ್ದಾರೆ.

ಬೆಂಗಳೂರು ಎಪಿಎಂಸಿ ಮಾರುಕಟ್ಟೆಗೆ ಅಂದಾಜು 70-80 ಟನ್ ತೆಂಗಿನಕಾಯಿ ಸರಬರಾಜು | ತಮಿಳುನಾಡಿನಲ್ಲಿ ಹೊಸ ತೆಂಗಿನಕಾಯಿ ಬೆಳೆ

ತೆಂಗಿನಕಾಯಿ ಬೆಲೆ ಇಳಿಕೆ: ಗ್ರಾಹಕರಿಗೆ ಸಿಹಿ ಸುದ್ದಿ

ಹೂವಪ್ಪ. ಐ. ಹೆಚ್ ಬೆಂಗಳೂರು

ಕಳೆದ ಒಂದು ವಾರದಿಂದ ನಿಧಾನವಾಗಿ ತೆಂಗಿನಕಾಯಿ ಬೆಲೆ ರಾಜ್ಯಾದ್ಯಂತ ಕುಸಿಯುತ್ತಿದೆ. ತೆಂಗು ಬೆಳೆಯುವ ಜಿಲ್ಲೆಗಳಾದ ಹಾಸನ, ತುಮಕೂರು ಮಂಡ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಮಾರುಕಟ್ಟೆಗಳಲ್ಲಿ ತೆಂಗಿನಕಾಯಿಯ ಚಿಲ್ಲರೆ ಬೆಲೆ ಕೆ.ಜಿ.ಗೆ 67 ರು. ಇದ್ದದ್ದು, ಇದೀಗ 57 ರು.ಗೆ ಇಳಿಕೆಯಾಗಿದೆ. ಬೆಂಗಳೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಉತ್ತಮ ದಪ್ಪ ಗಾತ್ರದ ತೆಂಗಿನಕಾಯಿ 73 ರು.ಇದ್ದದ್ದು, ಈಗ 63 ರು.ಗೆ ಇಳಿದಿದೆ, ಮಧ್ಯ ಗಾತ್ರದ್ದು 65 ಇದ್ದದ್ದು, 55 ರು. ಇಳಿಕೆಯಾಗಿದೆ.

ಮದುವೆಗೆ ಉಪಯೋಗಿಸುವ ಸಣ್ಣ ಕಾಯಿಯ ಬೆಲೆ 35ರಿಂದ 25 ರು.ಗೆ ಇಳಿದಿದೆ. ಸಗಟು ದರ ಕೆ.ಜಿ.ಗೆ 10 ರು.ಇಳಿಕೆಯಾಗಿದ್ದು, ಚಿಲ್ಲರೆ ದರದಲ್ಲೂ 5-10 ರು.ಇಳಿಕೆಯಾಗಿದೆ. ಈ ಹಿಂದೆ ದಪ್ಪ ಕಾಯಿ ಕೆ.ಜಿ.ಗೆ 75 ಇದ್ದದ್ದು, ಈಗ 65 ರು., ಮಧ್ಯಮ ಗಾತ್ರ 70 ಇದ್ದದ್ದು 55 ರು. ಗೆ ಇಳಿಕೆಯಾಗಿದೆ. ಸಾಧಾರಣ ಕಾಯಿ 40 ರು.ಗೆ ಮಾರಾಟವಾಗುತ್ತಿದೆ.

ಜನರು ಖಾದ್ಯಕ್ಕಾಗಿ ತಾಳೆ ಎಣ್ಣೆಯನ್ನು ಬಳಸಲು ಪ್ರಾರಂಭಿಸಿರುವುದು ತೆಂಗಿನಕಾಯಿ ಬೆಲೆ ಇಳಿಕೆಗೆ

ಪ್ರಮುಖ ಕಾರಣವಾಗಿದೆ. ಸದ್ಯದಲ್ಲೇ ಸಾಲು ಸಾಲು ಹಬ್ಬಗಳು ಬರುತ್ತಿದ್ದು, ಈ ಹೊತ್ತಿಗೆ ತೆಂಗಿನಕಾಯಿ ಬೆಲೆ ಇಳಿಕೆಯಾಗುತ್ತಿರುವುದು ಗ್ರಾಹಕರಿಗೆ ಖುಷಿ ಕೊಟ್ಟಿದೆ. ಕೊಬ್ಬರಿ ದರವೂ ಇಳಿಮುಖವಾಗಿದ್ದು, ಒಂದೇ ದಿನದಲ್ಲಿ ಕೆ.ಜಿ.ಗೆ 5ರಿಂದ 6 ರು.ವರೆಗೆ ಕಡಿಮೆಯಾಗಿದೆ.

ಕೇರಳದಲ್ಲೂ ಬೆಲೆ ಕುಸಿತ: ವರ್ಷಗಳಿಂದ ಬೆಲೆ ಕುಸಿತ, ರೋಗಬಾಧೆ, ಉತ್ಪಾದನೆ ಕುಸಿತ ಮೊದಲಾದ ಕಾರಣಗಳಿಂದ ನಷ್ಟ ಅನುಭವಿಸುತ್ತಿದ್ದ ತೆಂಗು ಕೃಷಿಕರಿಗೆ ಕಳೆದ ಸೆಪ್ಟೆಂಬರ್‌ನಲ್ಲಿ ಕೇರಳ ಸರಕಾರ ತೆಂಗಿನಕಾಯಿ ಕೆ.ಜಿ.ಗೆ 34 ರು. ನಿಗದಿಪಡಿಸಿತ್ತು. ಆದರೆ ಈ ದರ ದಾಟಿ ಸಾರ್ವಜನಿಕ ಮಾರುಕಟ್ಟೆಯಲ್ಲಿ ತೆಂಗಿನಕಾಯಿ ಬೆಲೆಯಲ್ಲಿ ಭಾರೀ ಹೆಚ್ಚಳವಾಗಿತ್ತು. 2024ರ ಅ.15ರ ಬಳಿಕ ತೆಂಗಿನಕಾಯಿ ಕೆ.ಜಿ.ಗೆ 50 ರು.ಗೆ ತಲುಪಿತ್ತು. ತೆಂಗಿನಕಾಯಿ ದರದಲ್ಲಿ ಮತ್ತೆ ಹೆಚ್ಚಳವಾಗಿದ್ದು, ಕೆ.ಜಿ.ಗೆ 100 ರು. ದಾಟಲಿದೆ ಎಂಬ ಸ್ಥಿತಿಗೆ ತಲುಪಿದಾಗ ತೆಂಗಿನಕಾಯಿ ದರದಲ್ಲಿ ಹಠಾತ್ ಇಳಿಕೆಯುಂಟಾಗಿದೆ.

ತೆಂಗಿನೆಣ್ಣೆ ದರ ಹೆಚ್ಚಳದಿಂದಾಗಿ ಕೇರಳ ಮತ್ತು ಕರಾವಳಿ ಪ್ರದೇಶದಲ್ಲಿ ಜನರು ಪಾಮ್ ಆಯಿಲ್ ಉಪಯೋಗಿಸಲು ಆರಂಭಿಸಿರುವುದು ಮತ್ತು ತಮಿಳುನಾಡಿನ ಹೊಸ ತೆಂಗು ಬೆಳೆ ಆರಂಭ ಬೆಲೆ ಕುಸಿತಕ್ಕೆ ಕಾರಣ ಎನ್ನಲಾಗುತ್ತಿದೆ. ಮುಂದಿನ ದಿನಗಳಲ್ಲಿ

ತಮಿಳುನಾಡಿನಲ್ಲಿ ಹೊಸ ತೆಂಗು ಬೆಳೆ ಈಗಾಗಲೇ ಆರಂಭವಾಗಿದೆ. ಕರ್ನಾಟಕದಲ್ಲಿ ಉತ್ತಮ ಮಳೆಯಾಗಿದ್ದರಿಂದ ಸ್ವಲ್ಪ ಬೆಳೆ ಸುಧಾರಿಸಲಿದೆ. ಉತ್ತರ ಭಾರತಕ್ಕೆ ಹೋಗುತ್ತಿರುವ ಎಳನೀರು ನಿಂತಿದೆ. ಕೇರಳ ತಮಿಳುನಾಡಿನಲ್ಲಿ ಕೊಬ್ಬರಿ ಬೇಡಿಕೆ ಕುಸಿದಿದೆ, ಹೀಗಾಗಿ ತೆಂಗಿನಕಾಯಿ ಬೆಲೆ ಇಳಿಕೆಯಾಗಿದೆ.

- ಬಿ. ಶ್ರೀಧರ್
ಎಪಿಎಂಸಿ ತೆಂಗಿನಕಾಯಿ ವರ್ತಕರು, ಬೆಂಗಳೂರು

ತೆಂಗು ಉತ್ಪಾದನೆ ಕುಸಿತ ಹಾಗೂ ದರ ಏರಿಕೆ ಕೃಷಿಕರಲ್ಲಿ ಭಾರೀ ನಿರೀಕ್ಷೆ ಮೂಡಿಸಿತ್ತು. ಆದರೆ ಹೆಚ್ಚಳಗೊಂಡ ದರ ಕುಸಿಯಲು ಆರಂಭಿಸಿದ್ದರಿಂದ ನಷ್ಟಕ್ಕೊಳಗಾಗುವ ಕೃಷಿಕರು ಮತ್ತೆ ತೆಂಗು ಕೃಷಿಯನ್ನು ಕೈಬಿಡಬೇಕಾದ ಸ್ಥಿತಿಗೆ ತಲುಪಿದೆ. ಕೊಳೆರೋಗ, ಎಳೆಯ ಕಾಯಿಗಳು ಉದುರುವುದು ವ್ಯಾಪಕಗೊಂಡಿರುವುದರಿಂದ ಉತ್ಪಾದನೆಯಲ್ಲಿ ಗಣನೀಯ ಕುಸಿತ ಉಂಟಾಗಲಿದೆ. ಮುಂಬರುವ ದಿನಗಳಲ್ಲಿ ತೆಂಗಿನಕಾಯಿ ದರ ಮತ್ತೆ ಏರಿಕೆಯಾಗುವ ನಿರೀಕ್ಷೆಯಲ್ಲಿದ್ದೇವೆ.

- ಗೋಪಿ ತೆಂಗಿನಕಾಯಿ ಬೆಳೆಗಾರ

ತೆಂಗಿನಕಾಯಿ ಬೆಲೆ ಇನ್ನೂ ಇಳಿಕೆಯಾಗುತ್ತದೆ ಎಂದು ವ್ಯಾಪಾರಿಗಳು ಸೂಚಿಸುತ್ತಿದ್ದಾರೆ.

ಕೇರಳದಲ್ಲಿ ಸಬ್ಸಿಡಿ ದರದಲ್ಲಿ ತೆಂಗಿನೆಣ್ಣೆ

ಕೇರಳದಲ್ಲಿ ಒಂದು ಲೀಟರ್ ತೆಂಗಿನ ಎಣ್ಣೆಯ ಬೆಲೆ 440 ರು.ಗೆ ತಲುಪಿದೆ. ಹೀಗಾಗಿ ಗ್ರಾಹಕರ ಅನುಕೂಲಕ್ಕಾಗಿ ಕೇರಳ ಸರಕಾರ ಮುಂದಿನ ತಿಂಗಳ ಮೊದಲ ವಾರದಲ್ಲಿ ಆಚರಿಸುವ ಓಣಂ ಹಬ್ಬದ ಸಮಯದಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಸಬ್ಸಿಡಿ ದರದಲ್ಲಿ ತೆಂಗಿನ ಎಣ್ಣೆ ವಿತರಿಸುವ ನಿರ್ಧಾರ ಕೈಗೊಂಡಿದೆ. ಇದಕ್ಕಾಗಿ ಈಗಾಗಲೇ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಶೀಘ್ರದಲ್ಲೆ ಅನುಮೋದನೆ ಲಭಿಸುವ ಸಾಧ್ಯತೆ ಇದೆ. ಶೀಘ್ರದಲ್ಲೆ ತೆಂಗು ಕೃಷಿಕರಿಂದ ತೆಂಗಿನಕಾಯಿಯ ನೇರ ಖರೀದಿಯು ಕೇರಳದ ಕೋಝಿಕ್ಕೋಡ್, ಮಲಪ್ಪುರ, ಪಾಲಕ್ಕಾಡ್ ಮತ್ತು ತ್ರಿಶೂರ್ ಜಿಲ್ಲೆಗಳಲ್ಲಿ ಆರಂಭವಾಗಲಿದೆ. ತ್ರಿಶೂರ್‌ನಲ್ಲಿ ಸಹಕಾರಿ ಸಂಸ್ಥೆಗಳ ಸಹಯೋಗದಲ್ಲಿ ಮತ್ತು ಇತರ ಸ್ಥಳಗಳಲ್ಲಿ ಐಎಸ್ಎಎಫ್ ಸಹಯೋಗದಲ್ಲಿ ಖರೀದಿ ಕೇಂದ್ರವನ್ನು ಆರಂಭಿಸಲಿದೆ.

ಇರುಳ ವಿರುದ್ಧ ಬೆಳಕಿನ ಯುದ್ಧ, ಕೊನೆಯಿಲ್ಲದ ಕಾದಾಟ...

ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವಿನ ಸಂಘರ್ಷದ ತೀವ್ರತೆ ತಗ್ಗಿದ್ದರೂ, ಬೂದಿ ಮುಚ್ಚಿದ ಕೆಂಡದಂತೆ ಒಳಗೊಳಗೇ ತಿಕ್ಕಾಟ ಮುಂದುವರಿದೇ ಇದೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಹಣಾಹಣಿಯಿನ್ನೂ ಅಧಿಕೃತವಾಗಿ ಕೊನೆಯಾಗಿಲ್ಲ. ಮಗ್ಗುಲುಮುಳ್ಳು ಪಾಕಿಸ್ತಾನದಲ್ಲಿ 'ಬಲೂಚಿಸ್ತಾನ್ ಲಿಬರೇಷನ್ ಆರ್ಮಿ'ಯ ಬಂಡುಕೋರರು ಹಾಗೂ ಅಲ್ಲಿನ ಆಡಳಿತಾರೂಢ ವ್ಯವಸ್ಥೆ/ಸೇನೆಯ ನಡುವಿನ ತಿಕ್ಕಾಟ ತಾರಕಕ್ಕೇರಿದೆ. ಒಟ್ಟಿನಲ್ಲಿ, ವಿಶ್ವದ ಬಹುತೇಕ ಕಡೆ ರಕ್ತಸಿಕ್ತ ಅಧ್ಯಾಯಗಳದ್ದೇ ಕಾರುಬಾರು. ಈ ಹಿನ್ನೆಲೆಯಲ್ಲಿ ಭೂರಾಜಕೀಯದ ಒಂದಿಷ್ಟು ಆಯಾಮಗಳನ್ನು ಹಣಕಿ ನೋಡುವ ಪುಟ್ಟ ಪ್ರಯತ್ನ ಇಲ್ಲಿದೆ.

ಯಗಟಿ ರಘು ನಾಡಿಗ್

ನಿಲ್ಲಲಿಲ್ಲ ನೀರ ಹನಿ

'ಮಳೆಯ ಸುರಿತ ನಿಂತರೂ ಮರದಿಂದ ನೀರು ಹನಿಯುವುದು ನಿಲ್ಲಲಿಲ್ಲ' ಎಂಬ ಮಾತಿನಂತೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಗೊಣಗಾಟವಿನ್ನೂ ನಿಂತಿಲ್ಲ. ಉಗ್ರರಿಗೆ ಚಿತಾವಣೆ ನೀಡಿ ಪಹಲ್ಗಾಮ್‌ನಲ್ಲಿ ಮಾರಣಹೋಮ ನಡೆಸಿದ ಪಾಕಿಸ್ತಾನಕ್ಕೆ ಪಾಠ ಕಲಿಸಲೆಂದು ಭಾರತ ಶುರುವಿಟ್ಟುಕೊಂಡ 'ಆಪರೇಷನ್ ಸಿಂದೂರ' ಕಾರ್ಯಾಚರಣೆಗೆ ಪಾಕ್ ಮಿಲಿಟರಿಯು ಪತರಗುಟ್ಟಿದ್ದು ಸುಳ್ಳಲ್ಲ. ಹೀಗಾಗಿ ದಮ್ಮಯ್ಯ ಗುಡ್ಡೆಹಾಕಿ ಕದನ ವಿರಾಮ ಜಾರಿಯಾಗುವಂತೆ ನೋಡಿಕೊಂಡರು ಪಾಕಿ ಸೇನಾಶೂರರು. ಆದರೆ, ಭಾರತ-ಪಾಕ್ ನಡುವಿನ ಸಂಘರ್ಷವನ್ನು ನಿಲ್ಲಿಸಿದ್ದು ತಾವೇ ಎಂದು ಡಂಗುರ ಸಾರಲು ಶುರುವಿಟ್ಟುಕೊಂಡರು ಟ್ರಂಪ್. ಕದನವಿರಾಮಕ್ಕೆ ಇಂಥ ಯಾವ ಅನ್ಯದೇಶಗಳೂ ಕಾರಣವಲ್ಲ ಎಂಬ ಭಾರತದ ಸ್ಪಷ್ಟೀಕರಣದ ನಂತರವೂ ಟ್ರಂಪ್ ತುತ್ತೂರಿ ಮುಂದುವರಿದಿದೆ... ಮರದಿಂದ ಹನಿ ಉದುರುತ್ತಲೇ ಇದೆ!

ಸಭೆಯಲ್ಲೂ ಅದೇ ಮಾತು

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಜತೆಗಿನ ಇತ್ತೀಚಿನ ಅಲಾಸ್ಕಾ ಸಭೆಯಲ್ಲಿ ಪಾಲ್ಗೊಂಡಿದ್ದ ಟ್ರಂಪ್, ತರುವಾಯ ಅಮೆರಿಕದ ಸುದ್ದಿಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ, ''ಭಾರತ ಮತ್ತು ಪಾಕಿಸ್ತಾನದ ನಡುವಿನ ಹಣಾಹಣಿ ಸೇರಿದಂತೆ ಮತ್ತಷ್ಟು ಯುದ್ಧಗಳಿಗೆ ಸಂಬಂಧಿಸಿ (ಕಾಂಗೋ ಮತ್ತು ರುವಾಂಡಾ, ಥಾಯ್ಲೆಂಡ್ ಮತ್ತು ಕಾಂಬೋಡಿಯಾ, ಅರ್ಮೇನಿಯಾ ಮತ್ತು ಅಜರ್‌ಬೈಜಾನ್ ನಡುವಿನ ಯುದ್ಧಗಳು ಇತ್ಯಾದಿ) ನಾನು ಅವುಗಳ ಅಂತ್ಯದವರೆಗೆ ಮಾತುಕತೆ ನಡೆಸಿರುವೆ. ಆ ಕಸರತ್ತುಗಳು ನಿಜಕ್ಕೂ ಕಷ್ಟಕರವಾಗಿದ್ದವು'' ಎಂದು ಹೇಳಿಕೊಂಡಿದ್ದಾರೆ. ನಿಜಕ್ಕೂ ಹೀಗಾಗಿರುವುದು ಹೌದೇ? ಈ ನಿದರ್ಶನಗಳಲ್ಲಿ 'ಟ್ರಂಪ್ ಮಧ್ಯಸ್ಥಿಕೆ' ಕೆಲಸ ಮಾಡಿದೆಯೇ ಎಂಬುದನ್ನು ಸಂಬಂಧಪಟ್ಟವರೇ ಹೇಳಬೇಕು!

ಗಿಟ್ಟಲಿಲ್ಲ ಮಾತುಕತೆ

1945ರ ನಂತರದಲ್ಲಿ ನಡೆಯುತ್ತಿರುವ ಭರ್ಜರಿ ಭೂಯುದ್ಧ ಎನಿಸಿಕೊಂಡಿರುವಂಥದ್ದು ರಷ್ಯಾ ಮತ್ತು ಉಕ್ರೇನ್ ನಡುವಿನ ಭೀಕರ ಸಂಘರ್ಷ. ಇದಕ್ಕೆ ಅಂತ್ಯ ಹಾಡಲು ಅಥವಾ ಕದನವಿರಾಮ ಘೋಷಿಸಲು ಅಮೆರಿಕದ ಅಲಾಸ್ಕದಲ್ಲಿ ಸಭೆಯೊಂದನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಸಂಘರ್ಷಕ್ಕೆ ಒಂದು ತಾರ್ಕಿಕ ಅಂತ್ಯ ನೀಡಿ, ಶಾಂತಿಯನ್ನು ನೆಲೆಗೊಳಿಸುವ ಸಂಬಂಧ ಚರ್ಚಿಸಲು ಅಮೆರಿಕ ಅಧ್ಯಕ್ಷ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ಪುಟಿನ್ ನಡುವೆ ನಡೆದ ದ್ವಿಪಕ್ಷೀಯ ಮಾತುಕತೆಯ ಸಭೆಯಿದು. ಆದರೆ ಇಲ್ಲಿ ಹೇಳಿಕೊಳ್ಳುವಂಥ ಫಲಪ್ರದ ನಿರ್ಣಯಗಳು ಹೊಮ್ಮದೆ ಸಭೆ ಅಂತ್ಯವಾಗಿದೆ. ಅಲ್ಲಿಗೆ, ರಷ್ಯಾ-ಉಕ್ರೇನ್ ನಡುವೆ ಕದನವಿರಾಮವು ಸದ್ಯಕ್ಕೆ ಸಾಕಾರಗೊಳ್ಳುವುದು ದುಸ್ತರವೇ.

ಭರವಸೆಯಿನ್ನೂ ಇದೆ

ಕದನವಿರಾಮ ಅಥವಾ ಯುದ್ಧದ ಅಂತ್ಯದ ಕುರಿತಾದ ಚರ್ಚೆಗಳಿನ್ನೂ ಫಲಪ್ರದವಾಗಿಲ್ಲವಾದರೂ, ಆ ನಿಟ್ಟಿನಲ್ಲಿ ಮತ್ತೊಂದು ಬಾಗಿಲು ತೆರೆಯಲು ಸಭೆ ನಿರ್ಧರಿಸಿದೆ ಎನ್ನಲಾಗಿದೆ. ಇದರನ್ವಯ 'ನ್ಯಾಟೋ' ದೇಶಗಳ ನಾಯಕರು ಹಾಗೂ ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿ ನಡುವಣ ಮಾತುಕತೆ ಗೆಂದು ಮತ್ತೊಂದು ಸಭೆ ಆಯೋಜಿಸಲಾಗುವುದು ಎಂದು ತಿಳಿದುಬಂದಿದೆ. ಇದಕ್ಕೂ ಮುಂಚೆ, ''ರಷ್ಯಾ ಅಧ್ಯಕ್ಷ ಪುಟಿನ್ ಅವರು ಅಮೆರಿಕದ ಆರ್ಥಿಕ ನೀತಿ ಬಗ್ಗೆ ಆಸಕ್ತಿ ತೋರಿದ್ದು, ಇದು ಮುಂದುವರಿದರೆ ರಷ್ಯಾದ ಜತೆಗಿನ ವ್ಯಾಪಾರ - ವ್ಯವಹಾರದ ಸಂಬಂಧದ ಮಾತುಕತೆಯನ್ನು ಅಮೆರಿಕ ನಡೆಸಲಿದೆ'' ಎಂದು ಟ್ರಂಪ್ ಹೇಳಿದ್ದರು.

ಭಾರತ ಪ್ರೇಮಿ ಪುಟಿನ್

ಟ್ರಂಪ್ ಜತೆಗಿನ ಪುಟಿನ್‌ರ ಚರ್ಚೆಗಳು ಏನೇ ಇರಲಿ, ಭಾರತದ ವಿಷಯ ಬಂದಾಗ ಪುಟಿನ್‌ರ ಒಲವು ನಮ್ಮತ್ತಲೇ ಇದೆ ಎಂಬುದು ಗಮನಾರ್ಹ. ಒಂದೆಡೆ ಡೊನಾಲ್ಡ್ ಟ್ರಂಪ್ ಅವರು, ಭಾರತದಿಂದ ಅಮೆರಿಕಕ್ಕೆ ಬಂದು ಬೀಳುವ ಸರಕು-ಸಾಮಗ್ರಿಗಳ ಮೇಲಿನ ಸುಂಕವನ್ನು ಮಿತಿಮೀರಿ

ಹೆಚ್ಚಿಸಿ ನಮ್ಮ ವಿರುದ್ಧ ತೊಡೆ ತಟ್ಟಿದ್ದರೆ, ಮತ್ತೊಂದೆಡೆ ಪುಟಿನ್ ಅವರು, ''ಜಾಗತಿಕ ವ್ಯವಹಾರಗಳಲ್ಲಿ ಭಾರತಕ್ಕೆ ಅರ್ಹ ಅಧಿಕಾರವಿದೆ. ಪ್ರಮುಖ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಭಾರತ ಸಕ್ರಿಯ ಪಾತ್ರವನ್ನು ವಹಿಸುತ್ತದೆ'' ಎಂಬ ಹೇಳಿಕೆ ನೀಡುವ ಮೂಲಕ ಭಾರತಕ್ಕೆ ಒತ್ತಾಸೆಯಾಗಿ ನಿಂತಿದ್ದಾರೆ. ಜತೆಗೆ, ಭಾರತ ಮತ್ತು ರಷ್ಯಾ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಪಡಿಸುವ ನಿಟ್ಟಿನಲ್ಲಿ ರಷ್ಯಾಕ್ಕಿರುವ ಬದ್ಧತೆಯನ್ನೂ ಅವರು ಒತ್ತಿ ಹೇಳಿದ್ದಾರೆ.

ಟ್ರಂಪ್ ಗುಮ್ಮ ಕಾಡದು

'ಭೂ-ರಾಜಕೀಯ'ದ ಅಮಲಿನಲ್ಲಿ ತೇಲುತ್ತಿರುವ ಅಮೆರಿಕದ ಅಧ್ಯಕ್ಷ ಟ್ರಂಪ್ ಒಂದೊಮ್ಮೆ ಭಾರತಕ್ಕೆ ದುಃಸ್ವಪ್ನದಂತೆ ಕಾಡಿದರೂ, ರಷ್ಯಾದ ಅಧ್ಯಕ್ಷ ಪುಟಿನ್‌ರಿಂದ ಭಾರತಕ್ಕೆ ನಿರಂತರ ಒತ್ತಾಸೆ ಸಿಗಲಿದೆ ಎಂಬುದು ನಿರ್ವಿವಾದದ ಸಂಗತಿ. ''ರಷ್ಯಾ ಮತ್ತು ಭಾರತದ ನಡುವಿನ ರಚನಾತ್ಮಕ ದ್ವಿಪಕ್ಷೀಯ ಬಾಂಧವ್ಯವು ಜಂಟಿ ಪ್ರಯತ್ನಗಳ ಮೂಲಕ ಮುಂದುವರಿಯಲಿದೆ. ಇದು ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ಭದ್ರತೆ ಹಾಗೂ ಸ್ಥಿರತೆಯ ವರ್ಧನೆಗೆ ಪೂರಕವಾಗಿದೆ'' ಎಂಬ ಪುಟಿನ್‌ರ ಇತ್ತೀಚಿನ ಹೇಳಿಕೆಯೇ ಇದಕ್ಕೆ ಸಾಕ್ಷಿ.

ಪಾಕ್ ಕಿತಾಪತಿ ಅಬಾಧಿತ

'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ವೇಳೆ ಭಾರತದಿಂದ ಬರೆ ಹಾಕಿಸಿಕೊಂಡಿದ್ದರೂ ಬುದ್ಧಿ ಕಲಿತಿಲ್ಲದ ಪಾಕಿಸ್ತಾನ, ತನಗೆ ಅಮೆರಿಕದ ಒತ್ತಾಸೆಯಿದೆ ಎಂಬ ಕಾರಣಕ್ಕೆ ಮತ್ತೊಮ್ಮೆ ಬಾಲ ಬಿಚ್ಚಿದೆ. ಸಿಂಧೂ ನದಿನೀರಿನ ಹರಿವಿಗೆ ಅಡ್ಡಗಾಲು ಹಾಕಿರುವ ಭಾರತವು ಒಂದೊಮ್ಮೆ ಅದಕ್ಕೆ ಆಣೆಕಟ್ಟು ಕಟ್ಟುವ ಕಸರತ್ತಿಗೆ ಮುಂದಾದರೆ, ಅದನ್ನು ಬಾಂಬ್ ದಾಳಿಯ ಮೂಲಕ ಚಿಂದಿ ಉಡಾಯಿಸುವ ಸಾಮರ್ಥ್ಯ ತನಗಿದೆ ಎಂದು ಪಾಕಿಸ್ತಾನವು ಇತ್ತೀಚೆಗೆ ಧಾರ್ಷ್ಟ್ಯದ ಹೇಳಿಕೆ ನೀಡಿರುವುದೇ ಇದಕ್ಕೆ ಸಾಕ್ಷಿ. ತನ್ನೊಂದಿಗಿನ ಪಾಲುದಾರಿಕೆಯಲ್ಲಿ ಪಾಕ್ ನೆಲದಲ್ಲಿ ತೈಲ ನಿಕ್ಷೇಪಗಳನ್ನು ಅಭಿವೃದ್ಧಿಪಡಿಸಲು ಅಮೆರಿಕ ಸಜ್ಜಾಗಿದೆ ಎಂಬ ಗ್ರಹಿಕೆಯಲ್ಲಿರುವ ಪಾಕಿಸ್ತಾನದ ಆಳುಗರು, ಟ್ರಂಪ್ ಅವರು ಭಾರತದ ಸರಕುಗಳ ಮೇಲಿನ ಸುಂಕವನ್ನು ಹೆಚ್ಚಿಸಿರುವುದಕ್ಕೆ ಒಳಗೊಳಗೇ ಖುಷಿಯಾದಂತಿದೆ. ತುಘಲಕ್ ದರ್ಬಾರಿನ ಟ್ರಂಪ್ ನೆರವಿನಿಂದ ಪಾಕಿಸ್ತಾನವು ಭಾರತದ ಮೇಲೆ ಏನು ಕಿತಾಪತಿ ಮಾಡುವುದಕ್ಕೂ ಹೇಸದಿರಬಹುದು. ಇಂಥ ಸಂದರ್ಭದಲ್ಲಿ ರಷ್ಯಾ ಸೇರಿದಂತೆ ಜಗತ್ತಿನ ಮಿಕ್ಕ ಸಮಾನಮನಸ್ಕರ ಹಾಗೂ ಅಮೆರಿಕದ ವಿರೋಧಿಗಳ ಜತೆ ಕೈಜೋಡಿಸಿ ಬಲವನ್ನು ಕ್ರೋಡೀಕರಿಸಿಕೊಳ್ಳುವುದು ಭಾರತಕ್ಕೀಗ ಅನಿವಾರ್ಯವಾಗಿದೆ. ಆಗಸ್ಟ್ ಅಂತ್ಯದ ವೇಳೆಗೆ ಪ್ರಧಾನಿ ಮೋದಿಯವರು ಚೀನಾ ಪ್ರವಾಸವನ್ನು ಹಮ್ಮಿಕೊಂಡಿರುವುದು ಈ ಕಾರಣಕ್ಕೇ ಎನ್ನುತ್ತಾರೆ ರಾಜಕೀಯ ಪಂಡಿತರು.

ಬೆನ್ನಿಗಿರಿಯುವ ಬಾಂಗ್ಲಾ

ಒಂದು ಕಾಲಕ್ಕೆ ಪಾಕಿಸ್ತಾನದೊಂದಿಗೆ ಸೆಣಸಿ ತನಗೆ ಒಂದು ಅಸ್ತಿತ್ವವನ್ನು ತಂದುಕೊಟ್ಟಿದ್ದೇ ಭಾರತ ಎಂಬ ಸಾರ್ವಕಾಲಿಕ ಸತ್ಯವನ್ನು ಮರೆತಂತಿರುವ ನೆರೆಯ ಬಾಂಗ್ಲಾದೇಶವೀಗ ಮತ್ತದೇ ಪಾಕಿಸ್ತಾನದ ಜತೆಗೆ 'ಹನಿಮೂನ್' ನಡೆಸಲು ಹವಣಿಸುತ್ತಿರುವಂತಿದೆ. ಬಹುತೇಕರಿಗೆ ಗೊತ್ತಿರುವಂತೆ, ಶೇಖ್ ಹಸೀನಾ ಅವರು ಬಾಂಗ್ಲಾದೇಶದ ಪ್ರಧಾನಿಯಾಗಿದ್ದಾಗ, ಭಾರತ-ಬಾಂಗ್ಲಾ ನಡುವಿನ ಬಾಂಧವ್ಯ ಚೆನ್ನಾಗೇ ಇತ್ತು. ಆದರೆ ಅವರ ಪದಚ್ಯುತಿ ಆಗಿದ್ದೇ ಆಗಿದ್ದು, ಈ ದ್ವಿಪಕ್ಷೀಯ ಸಂಬಂಧ ಹಳಸಿಕೊಂಡಿದೆ. ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ಬಾಂಗ್ಲಾದೇಶೀಯರು ಹಲ್ಲೆ-ಹಿಂಸಾಚಾರಕ್ಕೆ ಇಳಿದ ನಂತರ, ಉಭಯ ದೇಶಗಳ ನಡುವೆ ದ್ವೇಷದ ವಾತಾವರಣ ಮೂಡಿದೆ. ಈ ಪರಿಸ್ಥಿತಿಯ ದುರ್ಲಾಭ ಪಡೆಯಲು ಪಾಕಿಸ್ತಾನ ಹವಣಿಸುತ್ತಿರುವಂತಿದೆ.



ಕಾರಣ, 1971ರ ನಂತರ ಉಂಟಾಗಿದ್ದ ಉದ್ವಿಗ್ನತೆಯ ಕಾರಣದಿಂದಾಗಿ ಬಾಂಗ್ಲಾದೇಶದ ಕಡೆಗೆ ತಿರುಗಿಯೂ ನೋಡದಿದ್ದ ಪಾಕಿಸ್ತಾನ, ಈಗ ಇದ್ದಕ್ಕಿದ್ದಂತೆ ಆ ದೇಶದ ಕಡೆಗೆ ಒಲವು ತೋರಲಾರಂಭಿಸಿದೆ. ಪಾಕಿಸ್ತಾನದ ವಿದೇಶಾಂಗ ಸಚಿವರು ಮುಂದಿನ ವಾರದಲ್ಲಿ ಬಾಂಗ್ಲಾಕ್ಕೆ ಭೇಟಿನೀಡಿ, ಉದ್ವಿಗ್ನ ಪರಿಸ್ಥಿತಿಯನ್ನು ಶಮನಗೊಳಿಸಲಿದ್ದಾರೆ ಎನ್ನಲಾಗಿದೆ. ಇದು ಬಾಂಧವ್ಯವನ್ನು ಬೆಸೆಯುವ ಹೆಸರಿನಲ್ಲಿ ಭಾರತದ ವಿರುದ್ಧದ ತನ್ನ ಸಂಘರ್ಷಕ್ಕೆ ಮತ್ತೊಬ್ಬ ಸಾಥಿಯನ್ನೂ ಸೇರಿಸಿಕೊಳ್ಳುವ ಪಾಕಿಸ್ತಾನದ ಮಸಲತ್ತು ಎಂಬುದು ಬಲ್ಲವರ ಮಾತು.

ಬೇಕಿದೆ ಸರ್ವಸನ್ನದ್ಧತೆ

ಒಟ್ಟಿನಲ್ಲಿ, ವಿಶ್ವದ ವಿವಿಧೆಡೆ ತಾಂಡವವಾಡುತ್ತಿರುವ ಅಸ್ಥಿರತೆ ಮತ್ತು ಅರಾಜಕತೆ ಸಾಲದೆಂಬಂತೆ ಇಂಥ ರಾಜತಾಂತ್ರಿಕ ಕಿತಾಪತಿಗಳೂ ನಡೆಯುತ್ತಿವೆ. ಈ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಅದರಲ್ಲಿ ತಮ್ಮ ಹಿತಾಸಕ್ತಿಯ ಬೇಳೆ ಬೇಯಿಸಿಕೊಳ್ಳುವವರೂ ಅಲ್ಲಲ್ಲಿ ಕಂಡುಬರುತ್ತಿದ್ದಾರೆ ಎಂಬುದಕ್ಕೆ ಮೇಲೆ ಉಲ್ಲೇಖಿಸಿರುವ ಒಂದೆರಡು ಬೆಳವಣಿಗೆಗಳೇ ಸಾಕ್ಷಿ. ಹೀಗಾಗಿ 'ಸರ್ವತಂತ್ರ-ಸ್ವತಂತ್ರ' ಭಾರತವು ಎಂಥದೇ ಪರಿಸ್ಥಿತಿಯನ್ನು ಎದುರಿಸುವುದಕ್ಕೂ 'ಸರ್ವಸನ್ನದ್ಧ'ವಾಗಿ ಇರಬೇಕಾದ ಕ್ಷಣವೀಗ ಎದುರಾಗಿದೆ.

ಹೀಗಿದೆ ಶಸ್ತ್ರಭಂಡಾರ

ಯುದ್ಧವೆಂಬುದು ಯಾವುದೇ ಸಮಸ್ಯೆಗೆ ಅಂತಿಮ ಉತ್ತರವಲ್ಲ. ಆದರೂ ದೇಶವೊಂದಕ್ಕೆ ಯುದ್ಧಸನ್ನದ್ಧತೆ ಅತ್ಯಗತ್ಯ. ಭಾರತೀಯ ಸೇನೆಯು ವೈವಿಧ್ಯಮಯ ಯುದ್ಧೋಪಕರಣಗಳನ್ನು ಹೊಂದಿದ್ದು ಅವುಗಳಲ್ಲಿ ವಿಶಿಷ್ಟ ಟ್ಯಾಂಕುಗಳು, ಫಿರಂಗಿಗಳು, ವಿಮಾನಗಳು, ಹೆಲಿಕಾಪ್ಟರ್‌ಗಳು, ನೌಕೆಗಳು, ಕ್ಷಿಪಣಿಗಳು ಮತ್ತು ಡ್ರೋನ್ ಸಜ್ಜಿಕೆಗಳು ಸೇರಿವೆ. ಭಾರತೀಯ ಸೇನೆಯ ಪ್ರಮುಖ ಯುದ್ಧ ಟ್ಯಾಂಕ್ ಎನಿಸಿಕೊಂಡಿರುವ 'ಅರ್ಜುನ್ ಟ್ಯಾಂಕ್' ಅನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಭಿವೃದ್ಧಿಪಡಿಸಿದೆ. ಮಿಕ್ಕಂತೆ ನಮ್ಮ ಸೇನೆಯ ಸ್ಥೂಲ ಬಲಾಬಲ ಹೀಗಿದೆ:

ಟ್ಯಾಂಕ್‌ಗಳು	4,201
ಶಸ್ತ್ರಸಜ್ಜಿತ ವಾಹನಗಳು	1,48,594
ಸ್ವಯಂಚಾಲಿತ ಫಿರಂಗಿಗಳು	100
ಟೋವ್ಡ್ ಫಿರಂಗಿಗಳು	3,975
ಮೊಬೈಲ್ ರಾಕೆಟ್ ಪ್ರಾಜೆಕ್ಟರ್‌ಗಳು	264
ಯುದ್ಧ ವಿಮಾನಗಳು	513
ಹೆಲಿಕಾಪ್ಟರ್‌ಗಳು	899
ದಾಳಿ ಹೆಲಿಕಾಪ್ಟರ್‌ಗಳು	80
ವೈಮಾನಿಕ ಟ್ಯಾಂಕರ್‌ಗಳು	6
ನೌಕೆಗಳು	293
ವಿಮಾನವಾಹಕ ನೌಕೆಗಳು	2
ಜಲಾಂತರ್ಗಾಮಿಗಳು	18
ವಿಧ್ವಂಸಕ ನೌಕೆಗಳು	13
ಯುದ್ಧ ನಾವೆಗಳು	14
ಸಣ್ಣ ಯುದ್ಧ ನೌಕೆಗಳು	18
ಗಸ್ತು ನೌಕೆಗಳು	135

ಅವಳಿ ನಗರ ರಕ್ಷಣೆಗೆ ಟೊಂಕ ಕಟ್ಟಿದ ಆಯುಕ್ತ

ಜಿಲ್ಲಾ ನೋಟ

ವಸೀಮ ಭಾವಿಮನಿ

ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿ ಅತ್ಯಂತ ಕಟ್ಟುನಿಟ್ಟಾಗಿ ಕಾನೂನು ಪಾಲನೆ ಆಗುತ್ತಿದೆ. ನಮ್ಮ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಒಳಗೊಂಡ ತಂಡ ಸಮರ್ಥವಾಗಿ ಕೆಲಸ ಮಾಡುತ್ತಿದೆ. ನೊಂದ ವ್ಯಕ್ತಿಗಳಿಗೆ, ಅನ್ಯಾಯಕ್ಕೊಳಗಾಗಿ ನ್ಯಾಯ ಕೇಳಿ ಬಂದವರಿಗೆ ಕಾನೂನು ರಕ್ಷಣೆ ದೊರಕಿಸಿಕೊಡುವ ಕೆಲಸ ನಮ್ಮ ಇಲಾಖೆ ಮಾಡುತ್ತಿದೆ. ಸಮಾಜಘಾತುಕ ಶಕ್ತಿಗಳು ತಲೆ ಎತ್ತದಂತೆ ಅವಳಿ ನಗರಗಳ ಜನತೆ ನೆಮ್ಮದಿಯಿಂದ ಇರಲು ಎಲ್ಲ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

-ಎನ್.ಶಶಿಕುಮಾರ್, ಪೊಲೀಸ್ ಕಮೀಶನರ್, ಹುಬ್ಬಳ್ಳಿ- ಧಾರವಾಡ

ಧಾರವಾಡ: ಸರಿ ಸುಮಾರು 35 ವರ್ಷದ ಇತಿಹಾಸವಿರುವ ಅವಳಿ ನಗರದ ಪೊಲೀಸ್ ಕಮೀಶನರೇಟ್ ವಿಭಾಗದಲ್ಲಿ ಸದ್ಯ 24ನೇ ಪೊಲೀಸ್ ಕಮಿಷನರ್ ಆಗಿರುವ ಖಡಕ್ ಆಫೀಸರ್ ಎಂದೇ ಹೆಸರು ಗಳಿಸಿರುವ ಎನ್.ಶಶಿಕುಮಾರ್ ಸಖತ್ ಆ್ಯಕ್ಟೀವ್ ಆಗಿದ್ದಾರೆ. ಅವರ ಟೀಂ ಕೂಡ ಹುಬ್ಬಳ್ಳಿ ಧಾರವಾಡ ಷಹರಗಳ ಮೇಲೆ ಬೆಂಗಾವಲ ಪಡೆಯಂತೆ ವರ್ಕ್ ಮಾಡುತ್ತಿದೆ..!

ಅವಳಿ ನಗರಗಳು ನಿರಾಳ

ಅವಳಿ ನಗರದಲ್ಲಿ ಗೂಂಡಾ ಕೇಸುಗಳಡಿ ಗಡಿಪಾರು, ಮೀಟರ್ ಬಡ್ಡಿ, ರೌಡಿಗಳಿಗೆ ಎಚ್ಚರಿಕೆ, ಏರಿಯಾ ಡಾಮಿನೇಶನ್ ಹಾಗೂ ಏರಿಯಾ ಫ್ಯಾಮಲೈಜರೇಶನ್, ಡ್ರಗ್ಸ್ ಹಾವಳಿ, ಟ್ರಾಫಿಕ್ ಸಮಸ್ಯೆ, ಪಿಆರ್ ಆ್ಯಕ್ಟ್ ಸೇರಿದಂತೆ ಹಲವು ಕಠಿಣ ಕ್ರಮಗಳ ಮೂಲಕ ಬಿಸಿ ಮುಟ್ಟಿಸಿದ್ದಾರೆ. ಅಷ್ಟರಮಟ್ಟಿಗೆ ಎರಡೂ ನಗರದ ನಾಗರಿಕರನ್ನು ನೆಮ್ಮದಿಯಾಗಿಟ್ಟಿದ್ದಾರೆ. ಉಪರಾಷ್ಟ್ರಪತಿ, ಕೇಂದ್ರ ಸಚಿವರು ಹಾಗೂ ಹೊರ ರಾಜ್ಯದ ರಾಜ್ಯಪಾಲರ ಸಮಾರಂಭಗಳಲ್ಲಿ ಕಾನೂನು ಸುವ್ಯವಸ್ಥೆ ಬಂದೋಬಸ್ತ್ ಮಾಡಿದ್ದು, ಅವಳಿನಗರಗಳು ಶಾಂತಿಪ್ರಿಯರ ನಾಡು ಎನ್ನುವುದನ್ನು ತೋರಿಸಿದ್ದಾರೆ.

ಗನ್‌ಗಳಲ್ಲಿ ಉತ್ತರ

ಆಯುಧ ಪೂಜೆಗೆ ಮೀಸಲಿರುವ ಗನ್‌ಗಳು ಮಾತಾಡುತ್ತಿವೆ.ಸಾರ್ವಜನಿಕರ ಶಾಂತಿಗೆ ಭಂಗ ತರುವ ಹಾಗೂ ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿಯಾಗುತ್ತಿರುವವರ ಮೇಲೆ ಪೊಲೀಸರ ಗನ್‌ಗಳು ಸದ್ದು ಮಾಡಿ, ಮಾತನಾಡುತ್ತಿವೆ. ಹೊರ ರಾಜ್ಯದ ಡಕಾಯತಿ ಗ್ಯಾಂಗ್‌ಗಳ ಹೆಡೆಮುರಿ ಕಟ್ಟಿದ ಹೆಗ್ಗಳಿಕೆ ಈ ಪೊಲೀಸ್ ಕಮಿಷನರ್ ಟೀಮ್‌ಗೆ ಸಲ್ಲಬೇಕು. ಪಶ್ಚಿಮ ಬಂಗಾಳ್, ಆಂಧ್ರಪ್ರದೇಶ, ತೆಲಗಾಂಣ, ದೆಹಲಿ, ಬಿಹಾರ, ಗುಜರಾತ್ ಹಾಗೂ ಮಹಾರಾಷ್ಟ್ರದ ಡಕಾಯಿತರನ್ನ ಮನೆ ದರೋಡೆ ಪ್ರಕರಣದಲ್ಲಿ ಸೆದೆ ಬಡಿದು ಬಂಧಿಸಿದ್ದಾರೆ.

ಗಾಂಜಾ ದಂಧೆಗೆ ಬ್ರೇಕ್

ಹುಬ್ಬಳ್ಳಿ-ಧಾರವಾಡದಲ್ಲಿ ನಡೆಯುತ್ತಿದ್ದ ಗಾಂಜಾ ದಂಧೆಗೆ ಬ್ರೇಕ್ ಹಾಕಿದ್ದಾರೆ. 2024 ರಲ್ಲಿ 245 ಗಾಂಜಾ ಕೇಸ್ ಮಾಡಲಾಗಿದ್ದು, 55 ಕೆ.ಜಿ. 240 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದು, 39 ಲಕ್ಷ 590 ರು.ಮೌಲ್ಯದಾಗಿದ್ದೆ. ಒಟ್ಟು 1011 ಆರೋಪಿಗಳನ್ನು ಬಂಧಿಸಿದ್ದಾರೆ. 2025ರಲ್ಲಿ 168 ಕೇಸ್ ಮಾಡಲಾಗಿದ್ದು, 27,32,150 ರು.ಗಳ ಮೌಲ್ಯದಾಗಿದ್ದೆ. ಇದರಲ್ಲಿ ಕೂಡ 365 ಆರೋಪಿಗಳನ್ನು ಬಂಧಿಸಲಾಗಿದೆ.

ಅಪರಾಧ ಇಳಿಮುಖ

ಕಳೆದ ಎರಡ್ಮೂರು ವರ್ಷಗಳಲ್ಲಿ ಅಪರಾಧ ಪ್ರಮಾಣ ಇಳಿಮುಖವಾಗಿದೆ. ಅದರಲ್ಲೂ ಕೊಲೆಗಳ ಸಂಖ್ಯೆ ಇಳಿದಿದೆ. ಅವಳಿನಗರದಲ್ಲಿ 2023ರಲ್ಲಿ 24 ಕೊಲೆಗಳು ನಡೆದಿದ್ದು, ಕಳೆದ 2024 ರಲ್ಲಿ 23 ಕೊಲೆಗಳಾಗಿವೆ. ಆದರೆ 2025ರ ಜನವರಿಯಿಂದ ಈ ಆಗಸ್ಟ್ ವರೆಗೆ 7 ಹತ್ಯೆ ಪ್ರಕರಣ ದಾಖಲಾಗಿವೆ. ಈ ಅಂಕಿಂಶ ನೋಡಿದರೆ ಅಪರಾಧ ಲೋಕದ ಪಾತಕಿಗಳಿಗೆ ಒಂದಷ್ಟು ನಡುಕ ಹುಟ್ಟಿರುವುದಂತೂ ಖರೆ.

2007ರ ಐಪಿಎಸ್ ಬ್ಯಾಚ್ ಅಧಿಕಾರಿ

2007 ರ ಐಪಿಎಸ್ ಬ್ಯಾಚ್ ಅಧಿಕಾರಿಯಾಗಿರುವ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ಮೂಲತಃ ಚಿತ್ರದುರ್ಗ ಜಿಲ್ಲೆಯವರು. ಚಿತ್ರದುರ್ಗ ಜಿಲ್ಲೆಯ ಪಿಟ್ಲಾಲಿ ಗ್ರಾಮದ ನರಸಿಂಹ ಮೂರ್ತಿ ಹಾಗೂ ಲೋಕಮಾತ ದಂಪತಿಯ ಕಿರಿಯ ಪುತ್ರರು. ಶಿವಮೊಗ್ಗ ಕೃಷಿ ಮಹಾವಿದ್ಯಾಲಯದಲ್ಲಿ ಬಿಎಸ್ಸಿ ಅಗ್ರಿ ಪದವೀಧರರು. ಈ ಹಿಂದೆ ರಾಯಚೂರು ಹಾವೇರಿ ಚಿಕ್ಕಮಗಳೂರು ಕಲಬುರಗಿ ಪೊಲೀಸ್ ವರಿಷ್ಠಾಧಿಕಾರಿಯಾಗಿ ಹಾಗೂ ಬೆಂಗಳೂರಿನಲ್ಲಿ ಡಿಸಿಪಿಯಾಗಿ ಹಾಗೂ ಮಂಗಳೂರಿನಲ್ಲಿ ಪೊಲೀಸ್ ಕಮೀಶನರ್ ಆಗಿ ಕರ್ತವ್ಯ ನಿರ್ವಹಿಸಿದ್ದಾರೆ. ಇದೀಗ ಹುಬ್ಬಳ್ಳಿ ಧಾರವಾಡದಲ್ಲಿ 2024 ರಿಂದ ಕಮೀಶನರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಮೀಟರ್ ಬಡ್ಡಿ ದಂಧೆ

ಅವಳಿ ನಗರದ ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಸಾಲ ಕೊಟ್ಟು ವಸೂಲಿಗೆ ಕಿರುಕುಳ ಕೊಡುತ್ತಿದ್ದ ಮೀಟರ್ ಬಡ್ಡಿ ದಂಧೆಕೋರರ ವಿರುದ್ಧ 30 ಕೇಸ್ ಜಡಿದು 60 ಮಂದಿ ಬಂಧಿಸಿ ಒಳಗೆ ತಳ್ಳುವ ಮೂಲಕ ಕರ್ತವ್ಯ ಬದ್ಧತೆ ಮೆರೆದಿದ್ದಾರೆ. ಮೀಟರ್ ಬಡ್ಡಿಕೋರರ ಹಿಂಸೆಗೆ ಸಿಲುಕಿದವರು ಅಷ್ಟರಮಟ್ಟಿಗೆ ನಿಟ್ಟುಸಿರು ಬಿಟ್ಟಿದ್ದಾರೆ. ಹಾಗೇ ಟ್ರಾಫಿಕ್ ರೂಲ್ ಉಲ್ಲಂಘಿಸಿದ ಪ್ರಕರಣಗಳಿಗೆ ಮುಲಾಜಿಲ್ಲದೇ ದಂಡ ಹಾಕಿ 6 ಕೋಟಿ 35 ಲಕ್ಷ ರು.ಸಂಗ್ರಹಿಸಿ ದಾಖಲೆ ಮೆರೆದಿದ್ದಾರೆ. ಈ ವರ್ಷದ 2025ರ ಜುಲೈವರೆಗೂ 98,322 ಈ ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ 6, 35,82,050 ರು. ಸಂಗ್ರಹವಾಗಿದೆ.

ಪ್ರದೇಶ ಪರಿಚಯ

ಪ್ರತಿ ಸೋಮವಾರ, ಮಂಗಳವಾರ ಬುಧವಾರ ಹಾಗೂ ಗುರುವಾರ, ಪೊಲೀಸ ಅಧಿಕಾರಿಗಳು ಹಾಗೂ ಸಿಬ್ಬಂದಿ ನಡಿಗೆ ಮಾಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ , ಸ್ಥಳೀಯ ಮುಖಂಡರೊಂದಿಗೆ ಚರ್ಚೆ ನಡೆಸುವುದು. 2024 ರಲ್ಲಿ - 360, 2025 ರಲ್ಲಿ 240 ಏರಿಯಾ ಫ್ಯಾಮಿಲರೈಸೇಷನ್ ಮಾಡಲಾಗಿದೆ. ಪ್ರತಿ ಶುಕ್ರವಾರ, ಶನಿವಾರ , ರವಿವಾರ ಸಮಾಜದ ಸ್ವಾಸ್ತ ಕದಡುವ ಜನರಿಗೆ ಒಂದು ಕಡೆ ಸೇರಿಸಿ ಜಾಗೃತಿ ಮೂಡಿಸಿ ಎಚ್ಚರಿಕೆ ಕೊಡುವ ಪ್ರಕ್ರಿಯೆ ಚಾಲ್ತಿಯಲ್ಲಿಟ್ಟಿದ್ದರೆ. 2024 ರಲ್ಲಿ- 540 2025 ರಲ್ಲಿ- ಜುಲೈ 31 ರವರೆಗೆ 255 ಏರಿಯಾ ಡಾಮಿನೇಶನ್ ಮಾಡಲಾಗಿದೆ.

ಗೂಂಡಾಗಳ ಗಡಿಪಾರು

ಅವಳಿ ನಗರಗಳಲ್ಲಿ 2024ರ ಒಂದೇ ವರ್ಷ 14 ಮಂದಿಯನ್ನು ಗೂಂಡಾ ಕಾಯಿದೆಯಡಿ ಕೇಸ್ ಹಾಕಿ ಗಡಿ ಪಾರು ಮಾಡಲಾಗಿದೆ. ಪ್ರಸ್ತುತ 2025ರ ಈ ಏಳೂವರೆ ತಿಂಗಳಲ್ಲಿ 58 ಮಂದಿ ಗಡಿಪಾರು ಕಂಡಿದ್ದಾರೆ. ಅವಳಿ ನಗರದಲ್ಲಿ 1488 ಮಂದಿ ರೌಡಿಶೀಟರ್‌ಗಳಿದ್ದು, 2025ರಲ್ಲಿ ಹೊಸದಾಗಿ 100 ಮಂದಿ ಓಪನ್ ಮಾಡಲಾಗಿದೆ. ಉಳಿದಂತೆ 370 ಮಂದಿಗೆ ರೌಡಿ ಪಟ್ಟಿಯಿಂದ ಮುಕ್ತಿ ಮಾಡಲಾಗಿದೆ.

ಪೊಲೀಸ್ ಸಿಬ್ಬಂದಿ ಶ್ರಮ

ಕಮೀಶನರೇಟ್ ವಿಭಾಗದಲ್ಲಿ ಸಿಆರ್ ಸಿಬ್ಬಂದಿ 538 ಇದ್ದು, ಒಟ್ಟು 2075 ಮಂದಿ ನಿರಂತರ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರಿಗೂ ಆರೋಗ್ಯದ ಬಗ್ಗೆ ಶಿಬಿರ, ಯೋಗ ತರಬೇತಿ ವಾರದ ರಜೆಗಳನ್ನು ಕೊಡಲಾಗುತ್ತಿದೆ. ಇದುವರೆಗೂ ಕಮೀಶನರೇಟ್ ವ್ಯಾಪ್ತಿಯಲ್ಲೇ 19 ಜನ ಪೊಲೀಸ್ ಸಿಬ್ಬಂದಿ ಹಾಗೂ ಅಧಿಕಾರಿಗಳು ರಾಷ್ಟ್ರಪತಿ ಪದಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

▶▶ ಬಾಲ್ಯ ವಿವಾಹ ಹೆಚ್ಚಳದ ಸಾಮಾಜಿಕ ಸಮಸ್ಯೆ ▶▶ ದುಬಾರಿ ಶಿಕ್ಷಣ, ಮಕ್ಕಳ ಓದಿಗೆ ಕುತ್ತು

ಸಮಾಜವಾದಿಗಳ ನಾಡಿನಲ್ಲಿ ಅಪ್ರಾಪ್ತರ ಮದುವೆ!

ಜಿಲ್ಲಾ ನೋಟ

ರೇಣುಕಾರಾಧ್ಯ ಹೆಗ್ಗೇರಿ

ಶಿವಮೊಗ್ಗ: ಮಲೆನಾಡು ಸಮಾಜವಾದಿಗಳ ಬೀಡು, ಬುದ್ಧಿವಂತರ ನಾಡು ಎಂಬ ಹೆಗ್ಗಳಿಕೆಯ ನಡುವೆಯೇ ಬಾಲ್ಯವಿವಾಹದಂತಹ ಪ್ರಕರಣಗಳು ವರದಿಯಾಗುತ್ತಿರುವುದರು ಅಧಿಕಾರಿಗಳನ್ನು ನಿದ್ದೆಗೆಡಿಸಿದೆ. ಕಳೆದ ಒಂದು ವರುಷದಲ್ಲಿ 280 ಮಕ್ಕಳು ಶಾಲೆ ಬಿಟ್ಟ ಪ್ರಕರಣಗಳಲ್ಲಿ ಅತಿ ಹೆಚ್ಚು ಬಾಲ್ಯ ವಿವಾಹಗಳು ಸದ್ದಿಲ್ಲದೆ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿದೆ ಎಂಬ ವರದಿಯೇ ಗಾಭರಿ ಹುಟ್ಟಿಸುತ್ತಿದೆ.

ಹೌದು. ಜಿಲ್ಲೆಯಲ್ಲಿ ಬಾಲ್ಯ ವಿವಾಹದ ಸದ್ದು ಜೋರಾಗಿ ಕೇಳಿ ಬರುತ್ತಿದೆ. ಕಳೆದ ವಾರವಷ್ಟೆ 2 ಬಾಲ್ಯ ವಿವಾಹವನ್ನು ಶಿವಮೊಗ್ಗ ತಹಸೀಲ್ದಾರ್ ನಿಲ್ಲಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಇದು ಹೆಚ್ಚಾಗಿರುವ ಬಗ್ಗೆ ರಾಜ್ಯ ಮಟ್ಟದಲ್ಲಿ ಸದ್ದು ಮಾಡಿದ್ದರಿಂದಲೇ ಈಗ ಜಿಲ್ಲೆಯಲ್ಲಿ ಬಾಲ್ಯ ವಿವಾಹ ಹಾಗೂ ಮಕ್ಕಳು ಶಾಲೆ ಬಿಟ್ಟ ಪ್ರಕರಣ ಗಳನ್ನು ಗಂಭೀರವಾಗಿ ತೆಗೆದುಕೊಳ್ಳಲಾಗಿದೆ.

ಈಗಾಗಲೇ ನಮ್ಮ ಅಧಿಕಾರಿಗಳ ಸಮಿತಿ ಹಾಗೂ ಕಾವಲು ಸಮಿತಿಗಳು ಶಾಲೆ ಬಿಟ್ಟ ಪ್ರತಿ ಹೆಣ್ಣುಮಗುವಿನ ಮನೆಗೆ ಭೇಟಿ ಕೊಟ್ಟು ಅವರ ಪೋಷಕರ ಮನವೊಲಿಸುವ ಕೆಲಸ ಮಾಡುತ್ತಿದ್ದೇವೆ. ಇದರಿಂದ ಅನೇಕ ಮಕ್ಕಳು ಮತ್ತೆ ಶಾಲೆಗೆ ಬಂದಿದ್ದಾರೆ. ಅದರಲ್ಲೂ ಹೆಣ್ಣುಯ ಮಕ್ಕಳನ್ನು ಶಾಲೆಗೆ ಕರೆತರುವ ಮೂಲಕ ಬಾಲ್ಯ ವಿವಾಹದಂತಹ ಅನೇಕ ಸಂಗತಿಗಳನ್ನು ತಪ್ಪಿಸಿದ್ದೇವೆ.

-ರಮೇಶ, ಕ್ಷೇತ್ರ ಶಿಕ್ಷಣಾಧಿಕಾರಿ , ಶಿವಮೊಗ್ಗ

ಯಾಕೆ ಬಾಲ್ಯ ವಿವಾಹ

ಶಿವಮೊಗ್ಗ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಸಾಮಾಜಿಕ ಸಮಸ್ಯೆಗಳ ಕಾರಣದಿಂದಲೇ ಬಾಲ್ಯ ವಿವಾಹಗಳು ನಡೆಯುತ್ತಿವೆ. ಇಂದಿಗೂ ಪೋಷಕರಿಗೆ ಮಕ್ಕಳನ್ನು ಮದುವೆ ಮಾಡುವುದೇ ದೊಡ್ಡ ಸವಾಲು ಹಾಗೂ ಸಾಮಾಜಿಕ ಹಾಗೂ ಹಣಕಾಸಿನ ಹೊರೆಯಾಗಿ ಇರುವುದರಿಂದ ಹೆಣ್ಣು ಮಕ್ಕಳನ್ನು ತಮ್ಮ ಸಂಬಂಧಿಕರ ನಡುವೆಯೇ ಮದುವೆ ಮಾಡಿಕೊಳ್ಳುವ ಪರಿಪಾಠ ಹೊಂದಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳುತ್ತಾರೆ.

ದುಬಾರಿ ಶಿಕ್ಷಣ, ಓದಿಸಲಾಗದ ಸ್ಥಿತಿ

ಬಹುತೇಕ ಪೋಷಕರಿಗೆ ತಮ್ಮ ಹೆಣ್ಣು ಮಕ್ಕಳನ್ನು ಇಂದಿನ ದುಬಾರಿ ಶಿಕ್ಷಣ ವ್ಯವಸ್ಥೆಯಿಂದಾಗಿ ಮುಂದೆ ಕಾಲೇಜು ಓದಿಸಲಾಗದ ಸ್ಥಿತಿಯಲ್ಲಿ ಇರುವ ಪೋಷಕರಿಗೆ ಮದುವೆ ಮಾಡುವುದೇ ಮುಂದಿನ ದಾರಿ ಎಂಬಂತಹ ಪರಿಸ್ಥಿತಿ ಇದೆ ಅವರಿಗೆ ಸುಲಭವಾಗಿ ಮದುವೆ ಮಾಡುವ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಶಾಲೆ ಬಿಟ್ಟ ಮಕ್ಕಳ ದಾಖಲೆಯಲ್ಲಿ ಶಿವಮೊಗ್ಗ ಜಿಲ್ಲೆಯೂ ಸೇರಿರುವುದಿರಿಂದ ಜಿಲ್ಲ ಪಂಚಾಯಿತಿ ಮುಖ್ಯ ಕಾರ್ಯಅಧಿಕಾರಿ ಹೇಮಂತ ಅವರು, ಇದರ ಬಗ್ಗೆ ಗಂಭೀರವಾಗಿ ಕ್ರಮ ತೆಗೆದುಕೊಂಡಿದ್ದಾರೆ.

ಅಧಿಕಾರಿಗಳ ಸಮಿತಿ

ಜಿಲ್ಲೆಯಲ್ಲಿ ಬಾಲ್ಯ ವಿವಾಹ ಹಾಗೂ ಶಾಲೆ ಬಿಟ್ಟ ಮಕ್ಕಳು ಅತಿ ಹೆಚ್ಚು ಲೈಂಗಿಕ ದೌಜನ್ಯಕ್ಕೆ ತುತ್ತಾಗುವುದನ್ನುತಡೆಗಟ್ಟಲು ಪ್ರತಿ ಗ್ರಾಮಪಂಚಾಯಿ ಮಟ್ಟದಲ್ಲಿ ಕಾವಲು ಸಮಿತಿ ಹಾಗೂ ಅಧಿಕಾರಿಗಳ ಮಟ್ಟದ ಸಮಿತಿ ರಚನೆ ಮಾಡಲಾಗಿದೆ. ಮೊದಲಿಗೆ ಎಲ್ಲ ಶಾಲಾ ಕಾಲೇಜುಗಳಿಂದ ಶಾಲೆ ಬಿಟ್ಟ ಮಕ್ಕಳ ಹಾಗೂ ಎಸ್‌ಎಸ್‌ಎಲ್‌ಸಿ ನಂತರ ಕಾಲೇಜು ಸೇರದ ಮಕ್ಕಳ ಮಾಹಿತಿ ತರಿಸಿಕೊಳ್ಳಾಗಿದೆ. ಆ ಮಾಹಿತಿಯನು ಹಿಡಿದುಕೊಂಡು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಹಾಗೂ ನಗರ ಪ್ರದೇಶದ ಮನೆಗಳಿಗೆ ಕಾವಲು ಸಮಿತಿಗಳು ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಒಂದು ವೇಳೆ ಹೆಣ್ಣು ಮಕ್ಕಳು ಓದಿಸಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಇದ್ದರೆ, ಅದಕ್ಕೆ ಸರಕಾರದಿಂದಲೇ ಸೂಕ್ತ ವ್ಯವಸ್ಥೆಯನ್ನು ಮಾಡಲು ಎಲ್ಲ ಕ್ರಮ ಕೈಗೊಳ್ಳಲಾಗುತ್ತಿದೆ.

ಕಾವಲು ಸಮಿತಿ

ಕಾವಲು ಸಮಿತಿ ಸದಸ್ಯರು ಮಕ್ಕಳು ಶಾಲೆ ಬಿಟ್ಟು ಹೋಗದಂತೆ ತಡೆಯುವುದು ಅಲ್ಲದೆ, ತಮ್ಮ ವ್ಯಾಪ್ತಿಯಲ್ಲಿ ಬಾಲ್ಯ ವಿವಾಹ ಹಾಗೂ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌಜನ್ಯದಂತಹ ಪ್ರಕರಣ ನಡೆಯದಂತೆ ನೋಡಿಕೊಳ್ಳಬೇಕಾಗಿದೆ. ಕಳೆದ ಮೂರು ತಿಂಗಳಲ್ಲಿ ರಚನೆಯಾದ ಕಾವಲು ಸಮಿತಿ ಹಾಗೂ ಅಧಿಕಾರಿಗಳ ಸಮಿತಿ ಸುಮಾರು 300 ಕ್ಕೂ ಹೆಚ್ಚು ಮಕ್ಕಳನ್ನು ಮತ್ತೆ ಶಾಲೆಗೆ ಕರೆತರುವಲ್ಲಿ ಯಶಸ್ವಿಯಾಗಿದೆ.

ಅದರಲ್ಲೂ ಹೆಣ್ಣು ಮಕ್ಕಳನ್ನು ಮತ್ತೆ ಶಾಲೆಗೆ ಕರೆದುಕೊಂಡು ಬಂದು ಬಾಲ್ಯ ವಿವಾಹವನ್ನು ತಡೆಗಟ್ಟಿದೆ ಎಂಬುದು ಹೆಮ್ಮೆಯ ಸಂಗತಿಯಾಗಿದೆ ಎಂದು ಅಧಕಾರಿಗಳು ಹೇಳುತ್ತಾರೆ.

ಮಲೆನಾಡಿನಲ್ಲಿ ಯಾಕೆ?

ಬಹುತೇಕ ಶಾಲೆ ಬಿಟ್ಟ ಮಕ್ಕಳ ಪ್ರಕರಣಗಳು ಬಾಲ್ಯ ವಿವಾಹದಲ್ಲಿ ಕೊನೆಯಾಗುತ್ತಿದೆ ಎಂಬ ಸಂಗತಿಯೇ ಆತಂಕಕಾರಿಯಾಗಿದೆ. ಮಲೆನಾಡಿನಲ್ಲಿ ಅಥವಾ ಇತರ ಭಾಗದಲ್ಲಿ ಬಾಲ್ಯ ವಿವಾಹದ ವಿಚಾರವೇ ಗೊತ್ತಾಗುತ್ತಿರಲಿಲ್ಲ. ಆದರೆ, ಸದ್ದಿಲ್ಲದೆ ಅಂತಹ ಪ್ರಕರಣಗಳೂ ನಡೆಯುತ್ತಿದವು. ಈಗ ಅಧಿಕಾರಿಗಳ ಹಾಗೂ ವಿವಿಧ ವಿಚಾರಗಳ ಜಾಗೃತಿಯ ನಂತರ ಈ ಪ್ರಕರಣ ಬೆಳಕಿಗೆ ಬರುತ್ತಿವೆ. ಹೆಣ್ಣು ಮಕ್ಕಳು ಶಾಲೆ ಬಿಟ್ಟ ಪ್ರಕರಣಗಳನ್ನು ಬೆನ್ನತ್ತಿಕೊಂಡು ಹೋದಾಗ ಅನೇಕ ಕಾರಣಗಳಿಂದ ಹೆಣ್ಣು ಮಕ್ಕಳನ್ನು ಮದುವೆ ಮಾಡಿರುವ ಸಂಗತಿಗಳು ಬೆಳಕಿಗೆ ಬಂತು.

ಶುಭ ಮಂಗಳದಲ್ಲಿ 2 ಜೋಡಿ ಅಪ್ರಾಪ್ತರು!

ಶಿವಮೊಗ್ಗ ನಗರದ ಶುಭ ಮಂಗಳ ಕಲ್ಯಾಣ ಮಂಟಪದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ರಾಜೀವ್ ತಹಶಿಲ್ದಾರ ರವರು ಮತ್ತ ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಗಂಗಾಬಾಯಿ ಮತ್ತು ವಲಯ ಮೇಲ್ವಿಚಾರಕರಾದ ರೇಖಾ ಅವರು ಮಕ್ಕಳ ಸಹಾಯವಾಣಿ ಸಿಬ್ಬಂದಿ ಹಾಗೂ ವಿನೋಬನಗರ ಪೊಲೀಸ್ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿದರು. ವಿವಾಹದ ವಧುವರರ ಜನ್ಮದಿನಾಂಕಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿದರು. ಈ ವೇಳೆ ಎರಡು ಜೋಡಿಗಳು ಅಪ್ರಾಪ್ತರಾಗಿರುವ ಕಾರಣ ಆರು ಜೋಡಿಗಳ ವಿವಾಹವನ್ನು ಮಾತ್ರ ನಡೆಸಲು ಸಾಮೂಹಿಕ ವಿವಾಹದ ಆಯೋಜಕರಿಗೆ ತಿಳಿಸಲಾಯಿತು.

ಕರೋನಾ ನಂತರದ ಹೊಡೆತ

ಕರೋನಾ ನಂತರದಲ್ಲಿ ಆರ್ಥಿಕ ಹೊಡೆತಕ್ಕೆ ಬಳಲಿರುವ ಕುಟುಂಬಗಳು ಮಕ್ಕಳನ್ನು ಮುಂದೆ ಓದಿಸಲಾಗದೇ ಕೈ ಚೆಲ್ಲುತ್ತಿರುವುದು ಹಾಗೂ ಪರ ಊರಿಗೆ ಕಳುಹಿಸಿ ಮಕ್ಕಳನ್ನು ಓದಿಸಲು ಹೆದರುತ್ತಿರುವ ಕಾರಣದಿಂದ ಹೆಣ್ಣು ಮಕ್ಕಳನ್ನು ಶಾಲೆ ಬಿಡಿಸಿ ಮದುವೆ ಮಾಡುವ ವಿಚಾರಕ್ಕೆ ಮುಂದಾಗುತ್ತಿದ್ದಾರೆ ಎಂಬ ಸಂಗತಿ ಗೊತ್ತಾಗಿದೆ.

ಈಗ ಗ್ರಾಮ ಮಟ್ಟದಲ್ಲಿ ಬಾಲ್ಯ ವಿವಾಹ ಹಾಗೂ ಸರಕಾರಿ ನಿಯಮಗಳನ್ನು ಪೋಷಕರಿಗೆ ಮನವರಿಕೆ ಮಾಡುವ ಕೆಲಸ ಮಾಡುತ್ತಿರುವುದರಿಂದ ಹೆಚ್ಚು ಪರಿಣಾಮಕಾರಿಯಾಗಿ ಶಾಲೆ ಬಿಟ್ಟ ಹೆಣ್ಣು ಮಕ್ಕಳನ್ನು ಮತ್ತೆ ಶಾಲೆಗೆ ಕರೆದುಕೊಂಡು ಬರುವ ಮೂಲಕ ಇಂತಹ ಸಂಗತಿಗಳನ್ನು ತಪ್ಪಿಸಲಾಗಿದೆ.

ಆರಾಮ

ವಿಶ್ವವಾಣಿ
@vishwavaninews
ಬೆಂಗಳೂರು
18-08-2025
ಸೋಮವಾರ

ಚಿತ್ರವಿಹಾರ

ಮಾತಿನ ಮೇಲೆ ಲಗಾಮು ಇರಲಿ

• ವಿದ್ಯಾಶಂಕರ ಶರ್ಮ

ಆನೆ ನಡೆದಿದ್ದೇ ದಾರಿ ಎಂಬಂತೆ ನಮ್ಮ ಮಾತಿನ ದಾರಿಯೂ ಒಮ್ಮೊಮ್ಮೆ ಲಂಗು ಲಗಾಮಿಲ್ಲದೆ ಸಾಗಿಬಿಡುತ್ತದೆ. ಪ್ರತಿಕ್ರಿಯೆಗಳು, ಅಭಿಪ್ರಾಯಗಳು ವಿವೇಕದ ಎಲ್ಲೆಯನ್ನು ದಾಟಿಬಿಡುತ್ತವೆ. ಎದುರಿಗಿರುವ ವ್ಯಕ್ತಿಯು ಹೇಳುವ ವಿಷಯದ ಮೇಲೆ ನಮ್ಮದೇ ಆದ ವ್ಯಾಖ್ಯಾನವನ್ನು ಕೊಡುವ ಚಪಲ ಕೆಲವರಿಗಿರುತ್ತದೆ. ಅವರ ಯಾವುದೋ ನಿರ್ಧಾರ, ನಡೆ, ಆಯ್ಕೆಗಳ ಕುರಿತು ಸಿದ್ಧಾಂತಗಳನ್ನು ಹೇಳುತ್ತಾ, ಹೆಚ್ಚುಗಾರಿಕೆಯನ್ನು ತೋರಿಸಿ ನಮ್ಮ ಅಹಂನ ಹಸಿವನ್ನು ತಣಿಸಿಕೊಳ್ಳುತ್ತೇವೆ. ಎದುರಿಗೆ ಇರುವವರ ಜೀವನದ ಬಗ್ಗೆ ಒಂದು ನಿಶ್ಚಿತ ಅಭಿಪ್ರಾಯವನ್ನು ಚಿತ್ರಿಸಿಕೊಳ್ಳುತ್ತೇವೆ, ನಂತರ ಅದನ್ನೇ ಎಲ್ಲೆಡೆಗೂ ಪ್ರಚಾರ ಮಾಡುವ ಹುಚ್ಚುತನವನ್ನೂ ಮಾಡುತ್ತೇವೆ. ಸರಿ ಮತ್ತು ತಪ್ಪುಗಳ ವಿವೇಚನೆಯನ್ನು ಗಾಳಿಗೆ ತೂರಿಬಿಡುವ ಇಂತಹ ಗೀಳು ನಿಜಕ್ಕೂ ಅಪಾಯಕಾರಿ ಕೂಡ.

ಆಂಗ್ಲಭಾಷೆಯಲ್ಲಿ ಒಂದು ಗಾದೆ ಇದೆ- 'ಪುಸ್ತಕದ ರಕ್ಷಾಪುಟವನ್ನು ನೋಡಿ, ಪುಸ್ತಕವನ್ನು ಅಳೆಯಬೇಡ', ಅಂದರೆ ಒಬ್ಬರ ಮುಖಚರ್ಯೆಯನ್ನು ನೋಡಿ ಅವರ ಸ್ವಭಾವಗಳನ್ನು ಅಳೆಯುವುದು ತಪ್ಪು. ಅನ್ಯರ ಹೃದಯದ ಹುಲ್ಲುಗಾವಲಿನಲ್ಲಿ ಹೆಜ್ಜೆ ಇಡುವ ಮುನ್ನ ಸ್ವಲ್ಪ ಸಾವಧಾನವಿರಲಿ, ಏಕೆಂದರೆ ಅಲ್ಲಿ ಯಾವ ಮುಳ್ಳಿನ ಇರುವು ತೊನೆಯುತ್ತಿರುವುದೋ, ಮಾಗದ ಗಾಯದ ನೋವಿರುವುದೋ, ಕರುಳು ಬಗೆವ ಸಂಕಟದ ಮೊನಚಿರಬಹುದೋ,

ಯಾರು ಬಲ್ಲರು? ಹಾಗೆ ಸುಮ್ಮನೆ ದಾಪುಗಾಲು ಹಾಕುತ್ತ ನಡೆದು ಬಿಡುತ್ತೇವಲ್ಲ! ಬರಿ ನಡಿಗೆಯೊಂದೇ ಆಗಿದ್ದರೆ ಹೆಚ್ಚು ಹಾನಿಯಾಗಲಾರದು, ಆದರೆ ನಾವು ಜಿಗಿಯುತ್ತ, ಕುಣಿಯುತ್ತ, ಓಲಾಡುತ್ತ ಮುಂದಕ್ಕೋಗುತ್ತೇವೆ. ಅಲ್ಲಿರುವ ಸೂಕ್ಷ್ಮ ತುಡಿತಗಳ ಹದವರವನ್ನು ಅಲ್ಲಾಡಿಸಿಬಿಡುತ್ತೇವೆ. ನಮ್ಮ ಮನದ ಮೃತ್ತಿಕೆಯನ್ನು ಅಲ್ಲೇ ಚೆಲ್ಲಾಡಿ ಶಾಂತವಾಗಿದ್ದ ಹೃದಯದ ಆವರಣದಲ್ಲಿ ಗಲಿಬಿಲಿಯನ್ನು ಉಂಟುಮಾಡುತ್ತೇವೆ.

ಯಾರು ಕೊಟ್ಟರು ನಮಗೆ ಈ ಸ್ವಾತಂತ್ರ್ಯವನ್ನು? ಅಥವಾ ನಮಗೆ ನಾವೇ ಇದನ್ನು ಕೊಟ್ಟುಕೊಂಡೆವೆ? ಈ ಪ್ರಶ್ನೆ ಏಕೆ ಮುಖ್ಯವಾಗುತ್ತದೆಯೆಂದರೆ, ಕಡಿವಾಣವಿಲ್ಲದ ನಮ್ಮ ನಾಲಿಗೆಯ ಆಕ್ರಮಣದಿಂದ ಇನ್ನೊಬ್ಬರಿಗೆ ನೋವು ಕೊಡುತ್ತೇವೆ. ಪ್ರತಿಯೊಬ್ಬರ ಬದುಕಿನ ವ್ಯವಸಾಯದ ಮಣ್ಣಿನ ಹದ, ಬೇರೆ ಬೇರೆ, ಹಾಗಾಗಿ ನಾವು ಅಲ್ಲಿ ನಮಗನಿಸಿದಂತೆ ಆಟ ಆಡುವುದು ಸಮಂಜಸವಾಗಲಾರದು. ಅಲ್ಲಿನ ವಾತಾವರಣವನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಮಾತ್ರ, ನಮ್ಮ ವರ್ತನೆಗಳು ಕೂಡಾ ತೂಕವನ್ನು ಪಡೆಯಲು ಸಾಧ್ಯ. ನಮ್ಮ ಮನೆಯ ಅಂಗಳದಲ್ಲಿ ಇರುವಂತೆ ಪರರ ಅಂಗಳದಲ್ಲಿ ನಾವು ಇರಲಾಗದು. ನಮ್ಮ ಭಾವನೆಗಳು, ಪ್ರತಿಸ್ಪಂದನೆಗಳು ಇತಿ-ಮಿತಿಯಲ್ಲಿದ್ದರೆ ನಮ್ಮಿಂದ ಪರರು ಬೇಸರಗೊಳ್ಳುವುದನ್ನು ತಡೆಯಬಹುದು. ಅಂತಹ ಸಂಯಮದ ಹೆಜ್ಜೆಗಳು ನಮ್ಮದಾಗಿರಲಿ. ನಮಗೆ ಸಹಾಯ ಹಸ್ತ ಚಾಚಲು ಸಾಧ್ಯವಾಗದಿದ್ದರೂ ಚಿಂತೆಯಿಲ್ಲ, ನಾವೇ ನೋವಿನ ಮೂಲವಾಗಬಾರದಲ್ಲವೇ?

ಮನೆಯಂಗಳದ ಹೂದೋಟದ ಕಲಾ ಪ್ರಪಂಚ

• ಮೋಹನ ಭಟ್ಟ, ಅಗಸೂರು.

ಹೂದೋಟಗಳಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವ ಮುಖಗಳನ್ನು ಇಡುವುದರಿಂದ ಅದರ ಅಂದ, ಅರ್ಥ ಇನ್ನೂ ಹೆಚ್ಚಾಗಬಹುದು. ಮೂರ್ತಿಗಳನ್ನು ಇಟ್ಟು ಕೈಯಲ್ಲಿ ಹೂ ಹಿಡಿಸಿ, ಮಹಿಳೆಯ ಮೂರ್ತಿಯ ಮುಡಿಗೆ ಹೂ ಮುಡಿಸಿ ಅಂದ ನೋಡಿ ಖುಷಿಪಡುವವರೂ ಇದ್ದಾರೆ.

ಹೂದೋಟಕ್ಕೆ ಹೊಸ ಭಾಷ್ಯ ಎಂಬಂತೆ ಅದೂ ಬದಲಾವಣೆಯತ್ತ ಸಾಗಿದೆ. ಒಂದು ಕಾಲದಲ್ಲಿ ಹೂದೋಟವೆಂದರೆ ತುಳಸಿ ಗಿಡ, ಎರಡು ಹೂವಿನ ಗಿಡ ಸಾಕು ಎಂಬಂತೆ ಇತ್ತು. ವಿಶಾಲವಾದ ಮನೆಯಂಗಳ ಇದ್ದರೂ, ಹೂದೋಟ ಮಾಡುವ ಮನಸ್ಥಿತಿಯಿಲ್ಲ, ಆದರೀಗ ಕಾಲ ಬದಲಾದಂತೆ ಯಾಗುತ್ತ ಹೋದಂತೆ, ಹೂದೋಟ ಕಲ್ಪನಾಲೋಕ ಅನಾವರಣಗೊಂಡಿದೆ. ಎರಡಡಿ ಜಾಗವಿದ್ದರೂ ಭಾವನೆಯ ಮೇಲೆ ತುಸು ಜಾಗವಿದ್ದರೂ ಸಾಕು, ಆಸಕ್ತಿಯೊಂದಿದ್ದರೆ ಹೊಸಲೋಕವನ್ನೇ ಸೃಷ್ಟಿಸಲು ಸಾಧ್ಯ.

ನಗರ ಪ್ರದೇಶದಿಂದ ಗ್ರಾಮಾಂತರ ಪ್ರದೇಶಗಳಿಗೂ ಹಬ್ಬುತ್ತಿರುವ ಹೂದೋಟದ ವ್ಯಾಮೋಹ ನಿಜಕ್ಕೂ ಉತ್ತಮ ಬೆಳವಣಿಗೆ. ದಿನದ ಒಂದೆರಡು ಗಂಟೆ ಸಾಕು, ಉತ್ತಮ ಹೂದೋಟ ಸಂರಕ್ಷಿಸಲು ಸಾಧ್ಯ. ಖಾಲಿಯಿರುವ ಜಾಗವನ್ನು ಬಳಸಿಕೊಂಡು ಇರಿಸಲು ವಿವಿಧ ಆಕಾರದ, ವಿನ್ಯಾಸದ, ಆಕಾರಗಳ ಕುಂಡಗಳು ಈಗ ಎಲ್ಲೆಡೆ ಲಭ್ಯ. ಜಾಗದ ಅಭಾವವಿದ್ದರೆ, ಮಹಡಿ ಮೆಟ್ಟಿಲುಗಳಲ್ಲಿ, ಭಾವನೆಯ ಮೇಲಿಟ್ಟರೂ, ಇಳಿದು ಬಿಡುವ ಬಳ್ಳಿಗಳ ತುಂಬಿರುವ ಹೂವುಗಳು ಮನಸ್ಸಿಗೆ ಮುದವನ್ನು ನೀಡುತ್ತವೆ. ಸಸ್ಯಗಳು ಎಲ್ಲವೂ ಒಂದೇ ರೀತಿ ಇರದು. ವರ್ಷವಿಡೀ ಹೂ ಬಿಡುವ, ಕೆಲ ತಿಂಗಳುಗಳಿಗಷ್ಟೇ ಸೀಮಿತವಾಗಿರುವ ಸಸ್ಯಗಳು, ಇನ್ನು ವರ್ಷವಿಡೀ ಪೋಷಣೆ ಮಾಡಿ, ಮಳೆಯನ್ನೇ ಕಾದು ಕುಳಿತು, ಪಿಟಿ ಪಿಟಿ ಮಳೆಯಲ್ಲಿ ಅಂದದ ಹೂ ಬಿಡುವ ಸಸ್ಯಗಳೂ ಇವೆ. ಹೂದೋಟ ಮಾಡುವ ಮುನ್ನ ಸಸ್ಯಗಳ ಆಯ್ಕೆ ಬಹುಮುಖ್ಯವಾದುದ್ದಾಗಿದೆ. ಎಲ್ಲವನ್ನೂ ನೆಡುತ್ತಾ ಹೋದರೆ, ಪೋಷಣೆ ಕಷ್ಟ. ಎಲ್ಲಿಯೂ ಜಾಗ ಇಲ್ಲದವರು, ಮನೆಯ ಕಿಟಕಿಗಳ ಕೆಳಗೆ, ಮೇಲೆ ಐದಾರು ಇಂಚಷ್ಟೇ ದೊಡ್ಡದಾಗಿ ಇರಿಸಬಹುದು. ವರ್ಷಾವಧಿಯ ಹಾಳಾಗದ ಹೈಬ್ರಿಡ್ ತಳಿಗಳೂ ಬಂದಿವೆ. ಕಪ್‌ಗಳಲ್ಲಿ ಹೂದೋಟವನ್ನು ಮನೆಯ ಬಿಸಿಲು ಬರುವ ಜಾಗದಲ್ಲಿ ಮಾಡುವವರೂ ಇದ್ದಾರೆ.

ಹೂದೋಟದಲ್ಲಿ ಕಲೆ: ಸಾರ್ವಜನಿಕ ಪಾರ್ಕ್‌ಗಳಲ್ಲಿ, ರಸ್ತೆಗಳ ವೃತ್ತಗಳಲ್ಲಿ ಆಕೃತಿಯ ಪ್ರತಿಮೆಗಳನ್ನು ಕಾಣುತ್ತೇವೆ. ಆದರೆ ಹೂದೋಟಗಳಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವ ಮುಖಗಳನ್ನು ಇಡುವುದರಿಂದ ಅದರ ಅಂದ, ಅರ್ಥ ಇನ್ನೂ ಹೆಚ್ಚಾಗುಬಹುದು. ಮೂರ್ತಿಗಳನ್ನು ಇಟ್ಟು ಕೈಯಲ್ಲಿ ಹೂ ಹಿಡಿಸಿ, ಮಹಿಳೆಯ ಮೂರ್ತಿಯ ಮುಡಿಗೆ ಹೂ ಮುಡಿಸಿ ಅಂದ ನೋಡುವವರೂ ಇದ್ದಾರೆ. ಸಾಮಾನ್ಯವಾಗಿ ಬುದ್ಧ ಸೇರಿದಂತೆ ಶಾಂತ, ಮೌನ ಭಾವಗಳನ್ನು ವ್ಯಕ್ತಪಡಿಸುವ ಶಿಲ್ಪ, ಕಾಷ್ಟ, ಬೇರು ಇತ್ಯಾದಿಗಳ ಮುಖಾಂತರ ಕಲಾ ಪ್ರದರ್ಶನ ಮಾಡಿ ಹೂದೋಟಗಳಲ್ಲಿ ಇಡುವುದು ಕೂಡ ಬೆಳೆದು ಬಂದಿದೆ. ಕಲಾ ಪ್ರತಿಭೆಯಿದ್ದವರು ಇಂತಹ ಪ್ರಯೋಗಗಳನ್ನು ಮಾಡುತ್ತಲೇ ಇರು ತ್ತಾರೆ. ಇಂತಹದಕ್ಕೆ ಪ್ರೋತ್ಸಾಹವಿದೆ. ಏನಿದ್ದರೂ ಮಾನಸಿಕ ಉಲ್ಲಾಸಕ್ಕೆ ಇದರಿಂದ ಪ್ರಯೋಜನ ಅಪರಿಮಿತ.

ಹರಿವ ನೀರು: ಗಮ್ಯದ ಹುಡುಕಾಟ

ನೀರು ಸಕಲ ಜೀವರಾಶಿಗಳಿಗೆ ಆಸರೆ, ಕೋಟ್ಯಂತರ ಜೀವಿಗಳ ಉಗಮಕ್ಕೆ ಜಲವೇ ಆಧಾರ. ನೀರಿಲ್ಲದಿದ್ದರೆ ಏನೂ ಇಲ್ಲ. ನೀರೆಂದರೆ ನದಿ, ಹೊಳೆ, ಬಾವಿ, ಕೆರೆ. ನೀರೆಂದರೆ ಗಂಗೆ, ನೀರೆಂದರೆ ತಾಯಿ. ಒರತೆಯಾಗಿ ಚಿಮ್ಮಿ ತೊರೆಯಾಗಿ ಹೊಳೆಯಾಗಿ ನದಿಯಾಗಿ ಹರಿವ ರೀತಿಯೇ ಅದ್ಭುತ. ಜೀವಿಗಳ ದಾಹ ತೀರಿಸೋ ಭೂಲೋಕದ ಅಮೃತ. ಬೆಟ್ಟದಿಂದ ಹರಿದು ಬರುವಾಗ ಮಣ್ಣನ್ನೆಲ್ಲ ತೋಯಿಸುತ್ತದೆ, ಗಿಡಮರಗಳನ್ನು ಬೆಳೆಸುತ್ತದೆ. ಕಲ್ಲುಬಂಡೆಗಳನ್ನೆಲ್ಲ ಲೆಕ್ಕಿಸದೆ ಮುಂದೆ ಸಾಗಿ ಮೀನು, ಮೊಸಳೆಗಳನ್ನೆಲ್ಲ ಸಾಕುತ್ತದೆ. ಪ್ರಪಾತಕ್ಕೂ ಹೆದರದೆ ಧುಮ್ಮಿಕ್ಕಿತು, ಭೋರ್ಗರೆಯುವ ಜಲಪಾತವಾಗುತ್ತದೆ. ಕೋಪ ಬಂದರೆ ಪ್ರವಾಹವಾಗಿ ಎಲ್ಲವನ್ನೂ ನುಂಗಿ ಹಾಕುತ್ತದೆ. ಅಡೆತಡೆಗಳನ್ನು, ತ್ಯಾಜ್ಯಗಳನ್ನು ತನ್ನೊಳಗೆ ಹುದುಗಿಸಿಕೊಂಡು ದೂರ ತೀರಕೆ ಪಯಣ ಮುಂದುವರೆಸುತ್ತದೆ. ಹರಿಯುವುದ ನಿಲ್ಲಿಸದೆ ಮುಂದೆ ಸಾಗುವ ಧಾವಂತ. ಅದು ಅರ್ಥವಿಲ್ಲದ ಅಲೆದಾಟವಲ್ಲ, ಹುಡುಗಾಟವಂತೂ ಅಲ್ಲವೇ ಅಲ್ಲ. ಎಲ್ಲೂ ಸಾವರಿಸದೆ ಗಮ್ಯ ಮುಟ್ಟುವ ಹುಡುಕಾಟ. ತನ್ನೊಳಗೆ ಯಾವ ಕೊಳಕನ್ನು ಇಟ್ಟುಕೊಳ್ಳದೆ ಎಲ್ಲವನ್ನು ತೆಗೆದುಕೊಳ್ಳಿರೆಂದು ತಂದು ದಡಕ್ಕೆ ಹಾಕುತ್ತದೆ. ಬೆಟ್ಟವನ್ನು, ಕಾಡನ್ನು, ತೀರವನ್ನು ಬೆಸೆಯುವ ಕೊಂಡಿಯಾಗುತ್ತದೆ.

-ವಾಣಿ ಹುಗ್ಗಿ, ಹುಬ್ಬಳ್ಳಿ

ಸೂರ್ಯನನ್ನು ಅತಿಯಾಗಿ ಪ್ರೀತಿಸುವ ಸೂರ್ಯಕಾಂತಿ

• ವೀಣಾ ಭಟ್

ಸೂರ್ಯಕಾಂತಿ ಹೂವಿನ ಬಗ್ಗೆ ಯಾರಿಗೆ ತಾನೇ ಗೊತ್ತಿಲ್ಲ, ಹೇಳಿ? ಮಕ್ಕಳಿಗೂ ಅದು ಅಚ್ಚುಮೆಚ್ಚು. ಸೂರ್ಯಕಾಂತಿ ಸಾಮಾನ್ಯ ಹೂವಲ್ಲ, ಇದರೊಂದಿಗೆ ಬೆಸೆದಿರುವ ಹಲವಾರು ಆಸಕ್ತಿದಾಯಕ ವಿಷಯಗಳಿವೆ. ಆಹಾರದಲ್ಲಿ ಬಳಸುವುದಲ್ಲದೆ ಅನೇಕ ವೈಶಿಷ್ಟ್ಯಗಳೂ ಬೇರೆ ಇವೆ. ಅವು ತಮ್ಮ ಎತ್ತರದ ಕಾಂಡಗಳು ಮತ್ತು ಪ್ರಕಾಶಮಾನ ಹೂವುಗಳಿಗೆ ಹೆಸರುವಾಸಿ. ಸೂರ್ಯಕಾಂತಿಯ ವೈಜ್ಞಾನಿಕ ಹೆಸರು ಹೆಲಿಯೊಸ್ ಅಂಥಸ್. ಸೂರ್ಯ (ಹೆಲಿಯೊಸ್) ಮತ್ತು ಹೂವು (ಆಂಥಸ್) ಎಂಬ ಪ್ರಾಚೀನ ಗ್ರೀಕ್ ಪದಗಳನ್ನು ಅದು ಸಂಯೋಜಿಸುತ್ತದೆ. ಸೂರ್ಯಕಾಂತಿಯು ಸೂರ್ಯನನ್ನು ಪ್ರೀತಿಸಿದಷ್ಟು ಯಾರೂ ಯಾರನ್ನೂ ಪ್ರೀತಿಸಲು ಸಾಧ್ಯವಿಲ್ಲವೇನೋ? ಅವು ಭೌತಿಕವಾಗಿ ಸೂರ್ಯನ ಬೆಳಕಿನ ಕಡೆಗೇ ಸದಾ ಚಲಿಸುತ್ತವೆ ಎಂದು ನಿಮಗೆ ತಿಳಿದಿದೆಯೇ? ನಿಜ, ಸೂರ್ಯನು ಆಕಾಶದಾದ್ಯಂತ ಚಲಿಸುತ್ತಿದ್ದಂತೆ, ಸೂರ್ಯಕಾಂತಿಗಳು ಸಾಧ್ಯವಾದಷ್ಟು ಸೂರ್ಯನ ಬೆಳಕನ್ನು ಪಡೆಯಲು ದಿನಾಲೂ ಸ್ಥಾನವನ್ನು ಬದಲಾಯಿಸುತ್ತವೆ. ಅದನ್ನು ಹೆಲಿಯೋಟ್ರೋಪಿಸಮ್ ಎಂದು ಕರೆಯಲಾಗುತ್ತದೆ .

ಸೂರ್ಯಕಾಂತಿಯ ವೈಶಿಷ್ಟ್ಯ: ಬೀಜವು ಗಿಡವಾಗಿ ಎರಡರಿಂದ ಮೂರು ತಿಂಗಳ ನಂತರ, ಸೂರ್ಯಕಾಂತಿ ಹೂ ಬಿಡಲು ಪ್ರಾರಂಭಿಸುತ್ತವೆ. ಸಾಮಾನ್ಯವಾಗಿ ಸೂರ್ಯಕಾಂತಿಗಳು ಮೂರು ವಾರಗಳವರೆಗೆ ಅರಳುತ್ತವೆ, ಈ ಹಂತದಲ್ಲಿ, ಸೂರ್ಯಕಾಂತಿಗಳು ಜೇನುನೊಣಗಳು, ಚಿಟ್ಟೆಗಳು, ಜೀರುಂಡೆಗಳು ಮತ್ತು ಇತರ ಕೀಟಗಳನ್ನು ಆಕರ್ಷಿಸುತ್ತವೆ. ರೋಮಾಂಚಕ ದಳಗಳಿಂದ ಆಕರ್ಷಿತರಾದ ಈ ಕೀಟಗಳು ಸೂರ್ಯಕಾಂತಿ ಮಧ್ಯದಿಂದ ಮಕರಂದವನ್ನು ಕುಡಿಯಲು ಬರುತ್ತವೆ. ಈ ಪ್ರಕ್ರಿಯೆಯಲ್ಲಿ, ಅವುಗಳ ರೋಮದಿಂದ ಕೂಡಿದ ದೇಹಗಳು ಸಸ್ಯದ ಪುರುಷ ಭಾಗದಿಂದ ಪರಾಗವನ್ನು ಎತ್ತಿಕೊಂಡು ಅದನ್ನು ಮುಂದಿನ ಸಸ್ಯಕ್ಕೆ ಒಯ್ಯುತ್ತವೆ. ಈ ರೀತಿಯಾಗಿ ಪರಾಗಸ್ಪರ್ಶವಾಗಿ ಹೂವನ್ನು ಫಲವತ್ತಾಗಿಸುತ್ತವೆ.

ವಿಭಿನ್ನ ಸೂರ್ಯಕಾಂತಿಗಳು: ಮೆಕ್ಸಿಕೋ ಮತ್ತು ದಕ್ಷಿಣ ಅಮೆರಿಕದಲ್ಲಿ ಬೆಳೆಯುವ ಸೂರ್ಯಕಾಂತಿಗಳು ದೊಡ್ಡ ಸುತ್ತಿನ ಮುಖಗಳು ಮತ್ತು ಅಗಲ ದಳಗಳನ್ನು ಹೊಂದಿರುತ್ತವೆ. ಸೂರ್ಯಕಾಂತಿಗಳನ್ನು ಹಳದಿ ಬಣ್ಣದೊಂದಿಗೆ ಸಂಯೋಜಿಸಲು ನಾವು ಒಲವು ತೋರಿದರೂ, ಅವು ಕಿತ್ತಳೆ, ಪೀಚ್, ಕೆಂಪು, ಗುಲಾಬಿ ಮತ್ತು ನೇರಳೆ ಸೇರಿದಂತೆ ಹಲವು ಬಣ್ಣಗಳಲ್ಲಿ ಬರುತ್ತವೆ. ಸೂರ್ಯ ಕಾಂತಿಗಳು ಅನೇಕ ಸಂಸ್ಕೃತಿಗಳಲ್ಲಿ ನಿಷ್ಠೆಯ ಸಂಕೇತವಾಗಿದೆ. ಅಮೆರಿಕನ್ನರು ಸೂರ್ಯಕಾಂತಿಗಳನ್ನು ಹೊಸ ಜೀವನ, ಪೋಷಣೆ ಮತ್ತು ಕೊಯ್ಲುಗಳೊಂದಿಗೆ ಸಂಯೋಜಿಸುತ್ತಾರೆ. ಸೂರ್ಯಕಾಂತಿ ಬೀಜಗಳಿಂದ ತಯಾರಿಸಿದ ಎಣ್ಣೆಯನ್ನು ತಿನ್ನಬಹುದು ಮತ್ತು ತಯಾರಿಸಬಹುದು ಎಂದು ಅವರು ಮೊದಲು ಅರಿತುಕೊಂಡರು. ಸೂರ್ಯಕಾಂತಿ ಸತ್ತಾಗ, ಅವು ಕೀಟಗಳು, ಪಕ್ಷಿಗಳು ಮತ್ತು ಸಸ್ತನಿಗಳಿಗೆ ಪ್ರಮುಖ ಆಹಾರವನ್ನು ಒದಗಿಸುತ್ತವೆ. ಆದ್ದರಿಂದ ಅವು ಪ್ರಕೃತಿಯ ಆಹಾರ ಕೂಡ ಹೌದು. ಚೀನಾದಲ್ಲಿ ಸೂರ್ಯಕಾಂತಿಗಳು ದೀರ್ಘಾಯುಷ್ಯ, ಅದೃಷ್ಟ ಮತ್ತು ಆತ್ಮ ವನ್ನು ಪ್ರತಿನಿಧಿಸುತ್ತವೆ ಎಂದು ಹೇಳಲಾಗುತ್ತದೆ. ಪ್ರಪಂಚದಾದ್ಯಂತ ಸೂರ್ಯಕಾಂತಿಗಳು ಸಂತೋಷ, ಸ್ನೇಹ, ಆಶಾವಾದ ಮತ್ತು ಸಕಾರಾತ್ಮಕತೆಯೊಂದಿಗೆ ನಿಕಟ ಸಂಬಂಧ ಹೊಂದಿವೆ. ಹಾಗಾಗಿ ಮದುವೆಯ ಹೂಗುಚ್ಛಗಳು, ಉಡುಗೊರೆಗಳು ಮತ್ತು ಅಲಂಕಾರಗಳಿಗೆ ಉತ್ತಮ ಆಯ್ಕೆಯಾಗಿದೆ. ಆದರೆ ಸೂರ್ಯಕಾಂತಿಯ ಪ್ರತಿಯೊಂದು ಭಾಗವು ಖಾದ್ಯವಾಗಿದೆ, ಕಾಂಡದಿಂದ ಪ್ರಕಾಶಮಾನವಾದ ಹಳದಿ ದಳಗಳವರೆಗೂ ಉಪಯುಕ್ತ. ಅದರ ಎಲೆ, ಕಾಂಡ ಮತ್ತು ದಳಗಳನ್ನು ಗ್ರೀನ್ ಟೀಯಲ್ಲಿ ಬಳಸುತ್ತಾರೆ. ಸೂರ್ಯಕಾಂತಿ 1903ರಿಂದ ಕಾನ್ಸಾಸ್‌ನ ರಾಜ್ಯ ಪುಷ್ಪವಾಗಿದೆ.

ಸೂರ್ಯಕಾಂತಿ ಎಣ್ಣೆಯ ಪ್ರಯೋಜನಗಳು: ಸೂರ್ಯಕಾಂತಿ ಎಣ್ಣೆ ಜೀವಕೋಶಕ್ಕೆ ಹಾನಿಯಾಗದಂತೆ ತಡೆಯುತ್ತದೆ. ಅದು ನಮ್ಮ ಸ್ವಾಸ್ಥ್ಯವನ್ನು ಹೆಚ್ಚಿಸುತ್ತದೆ. ಸೂರ್ಯಕಾಂತಿಯಲ್ಲಿ ನಾರಿನಂಶ ಅಧಿಕವಿದ್ದು ಜೀರ್ಣಕ್ರಿಯೆಗೆ ಸಹಾಯಮಾಡುತ್ತದೆ. ಅಧಿಕ ಪ್ರೊಟೀನ್ ಮತ್ತು ಕಾರ್ಬೋಹೈಡ್ರೇಟ್ ಇದ್ದು ದೇಹದಲ್ಲಿ ಗ್ಲೈಕೋಜಿನ್ ಉತ್ಪತ್ತಿ ಮಾಡುವುದರಿಂದ ದೇಹದಲ್ಲಿ ಶಕ್ತಿ ಹೆಚ್ಚುತ್ತದೆ. ಕಬ್ಬಿಣದಂಶ ಆಮ್ಲಜನಕವನ್ನು ಹೆಚ್ಚಾಗಿ ಹೀರಿಕೊಂಡು ಸ್ನಾಯುಗಳಿಗೆ ಪೂರೈಸುತ್ತದೆ, ಆಗ ಸ್ನಾಯುಗಳು ಬಲವಾಗುತ್ತವೆ. ಅದರಲ್ಲಿರುವ ಕೋಲೀನ್ ಅಂಶ ಜ್ಞಾಪಕ ಶಕ್ತಿಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ ಮಾತ್ರವಲ್ಲದೆ, ದೇಹದ ತೂಕವನ್ನು ನಿಯಂತ್ರಣದಲ್ಲಿಡುತ್ತದೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

■	1	■	2			3	■	4
5				■	■	6		
■		■	7		8		■	
9			■	■		■	10	
■	■	■	11			■	■	■
12		■		■	■	13	14	
	■	15			16	■		■
17			■	■	18			
	■	19				■		■

ಎಡದಿಂದ ಬಲಕ್ಕೆ

2. ಬಳಕೆ, ಪ್ರಯೋಜನ (4)
5. ಗದರಿಸು ಎನ್ನುವುದು ತಿರುಗಿ ಬಂದಿದೆ (4)
6. ಮರ್ಯಾದೆ ಅಥವಾ ಗೌರವ (3)
7. ನಮ್ಮ ಹೆಮ್ಮೆಯ ರಾಜ್ಯ (4)
9. ಕಳಂಕ ಅಥವಾ ದೋಷ (3)
10. ಎರಡಕ್ಷರದ ಬಾಗಿಲು (2)
11. ಸುಗಂಧ ದ್ರವ್ಯ (3)
12. ಹಿರಿಯ ಸಹೋದರಿ (2)
13. ಆನೆಯನ್ನು ಹದ್ದುಬಸ್ತಿನಲ್ಲಿಡಲು ಬಳಸುವ ಸಾಧನ (3)
15. ಕಳೆದುಹೋದ ಸಮಯ (4)
17. ಅಡೆತಡೆಯಿಲ್ಲದೆ ಎಂದರ್ಥ (3)
18. ಸಮುದ್ರ ತೀರ (4)
19. ಘೋರವಾದ ಅರಣ್ಯ (4)

ಮೇಲಿಂದ ಕೆಳಕ್ಕೆ

1. ಹೀನವಾದ ಬದುಕನ್ನು ಹೀಗೆಯೂ ಹೇಳಬಹುದು (4)
2. ಉದ್ದಕ್ಕೆ ಹರಿದ ನೀರು (3)
3. ಕಾವುದ ರಾಗಬದ್ಧವಾಗಿ ಹಾಡುವುದು (3)
4. ಇನಿಯ ಅಥವಾ ಗೆಳೆಯ (4)
8. ಗಂಡುಕುರಿ (3)
11. ಕೊನೆಯಿಲ್ಲದ್ದು ಎಂದರ್ಥ (3)
12. ಗಡಿಬಿಡಿಯಲ್ಲಿ ಮತ್ತೊಂದು ಮಳೆಯೂ ಇದೆ (4)
14. ಪತಿವ್ರತೆಯನ್ನು ಹೀಗೆನ್ನಬಹುದು (4)
15. ಮನಸ್ಸಿಟ್ಟು ನೋಡಿ, ಆಕಾಶ ಕಂಡಿತು (3)
16. ನ್ಯೂನತೆ ಇಲ್ಲಿ ತಿರುಗಿ ಬಂದಿದೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
2. ಉಪಯೋಗ 5. ಸುಯಿಬಾದ 6. ಮನ್ನಣೆ 7. ಕರ್ನಾಟಕ 9. ಹುಳುಕು 10. ದ್ವಾರ 11. ಅತ್ತರು 12. ಅಕ್ಕ 13. ಅಂಕುಶ 15. ಗತಕಾಲ 17. ಸರಾಗ 18. ಕರಾವಳಿ 19. ನಟ್ಟಡವಿ

ಮೇಲಿಂದ ಕೆಳಕ್ಕೆ
1. ನಾಯಿಬಾಳು 2. ಉದಕ 3. ಗಮಕ 4. ಗೆಣೆಕಾರ 8. ಟಗರು 11. ಅನಂತ 12. ಅವಸರ 14. ಕುಲವಧು 15. ಗಗನ 16. ಲಕವಿ

ಭೀಮನ ಅಹಂಕಾರ ಅಡಗಿಸಿದ ಆಂಜನೇಯ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಪಾಂಡವರು ನಾರಾಯಣಾಶ್ರಮದಲ್ಲಿ ಇರುವ ಸಂದರ್ಭದಲ್ಲಿ, ಒಮ್ಮೆ ಎತ್ತಲಿಂದಲೋ ಸೌಗಂಧಿಕ ಪುಷ್ಪದ ಘಮಘಮಿಸುವ ಪರಿಮಳ ತೇಲಿ ಬರತೊಡಗಿತು. ದ್ರೌಪದಿಗೆ ಆ ಪರಿಮಳವೇ ಅಷ್ಟೊಂದು ಅಹ್ಲಾದಕರವಾಗಿರುವಾಗ ಆ ಪುಷ್ಪಗಳು ಎಷ್ಟೊಂದು ಸುಗಂಧ ಭರಿತವಾಗಿರಬಹುದು ಎಂದು ಊಹಿಸತೊಡಗಿದಳು.

ಪತಿ ಭೀಮಸೇನನನ್ನು ಕರೆದು, 'ಈ ಪರಿಮಳಯುಕ್ತ ಪುಷ್ಪಗಳನ್ನು ನನಗಾಗಿ ಮತ್ತಷ್ಟು ತಂದುಕೊಡು' ಎಂದು ಕೇಳಿದಳು. ಭೀಮಸೇನನು 'ಇಲ್ಲ' ಎನ್ನುವನೇ?

ಗದೆಯುನ್ನೆತ್ತಿಕೊಂಡು ಗರ್ಜಿಸುತ್ತ ಹೊರಟನು. ಅವನು ಗರ್ಜಿಸುವ ಹೊಡೆತಕ್ಕೆ ಭೂಮಿ ಗಡಗಡ ನಡುಗಿತು. ಕಾನನದ ಪ್ರಾಣಿ-ಪಕ್ಷಿಗಳೆಲ್ಲಾ ದಿಕ್ಕಾಪಾಲಾಗಿ ಓಡುತ್ತಿದ್ದವು, ಮರಗಳೆಲ್ಲಾ ಮುರಿದು ಬೀಳುತ್ತಿದ್ದವು. ಆ ದಟ್ಟಕಾಡಿನ ತಪ್ಪಲಲ್ಲಿ ರಾಮನ ಭಂಟನಾದ ಹನುಮಂತನು ರಾಮನಾಮ ಜಪಿಸುತ್ತಾ ಮಲಗಿದ್ದನು, ಭೀಮನ ಗರ್ಜನೆ ಕೇಳಿ ಎಚ್ಚರಗೊಂಡ.

ಆಂಜನೇಯನು ಆಕಳಿಸುತ್ತ ತನ್ನ ಬಾಲವನ್ನು ನೆಲಕ್ಕೆ ಬಡಿದನು. ಆ ಶಬ್ದಕ್ಕೆ ಇಡೀ ಕಾಡೇ ನಡುಗಿತು. ಭೀಮಸೇನನು ಆಶ್ಚರ್ಯದಿಂದ ಆ ಶಬ್ದವನ್ನು ಅರಸುತ್ತ ಬಂದಾಗ ಬಂಡೆಯ ಮೇಲೆ ಮಲಗಿದ್ದ ವಾನರನನ್ನು ನೋಡಿದನು. ಆಲಸ್ಯದಿಂದ ಮಲಗಿದ್ದ ವಾನರನು ನಿರ್ಲಕ್ಷ್ಯದಿಂದ 'ನೀನು ಯಾರು? ಎಲ್ಲಿಂದ ಬಂದೆ? ಎಲ್ಲಿಗೆ ಪ್ರಯಾಣ ಮಾಡುತ್ತಿದ್ದೀಯ? ಶಾಂತವಾಗಿರುವ ಈ ಕಾಡಿಗೆ ಬಂದು ಸುಮ್ಮನೆ ಏಕೆ ದೊಂಬಿ, ಗಲಾಟೆ ಮಾಡುತ್ತಿದ್ದೀಯಾ? ಇಲ್ಲಿರುವ ಪ್ರಾಣಿ-ಪಕ್ಷಿಗಳಿಗೆ ಅನವಶ್ಯಕವಾಗಿ ತೊಂದರೆ ಕೊಡಬೇಡ, ಬೇಕಾದರೆ ಹಣ್ಣು ಹಂಪಲುಗಳನ್ನು ತಿಂದು ಹಿಂದಿರುಗಿ ಹೋಗು' ಎಂದನು.

ಅದಕ್ಕೆ ಭೀಮಸೇನನು ಗರ್ವದಿಂದ, 'ನಾನು ಚಂದ್ರವಂಶದಲ್ಲಿ ಹುಟ್ಟಿದ ಕ್ಷತ್ರಿಯ' ಎಂದು ತನ್ನ ಪರಿಚಯ ಹೇಳುತ್ತಾ, 'ನೀನು ದಾರಿ ಮಧ್ಯ ಏಕೆ ಮಲಗಿದ್ದೀಯ? ಎದ್ದೇಳು, ದಾರಿ ಬಿಡು' ಎಂದು ಗದರಿಸಿದನು.

'ಅಯ್ಯಾ, ನಾನು ಮುದುಕ. ನನಗೆ ಏಳಲು ಶಕ್ತಿಯಿಲ್ಲ, ತುಂಬ ಆಯಾಸವಾಗಿದೆ. ಹೋಗಲೇ ಬೇಕಾದರೆ ನನ್ನನ್ನು ದಾಟಿಕೊಂಡು ಹೋಗು' ಎಂದು ಆ ಕಪೀಶ್ವರ ಹೇಳಿದಾಗ,

'ನಿನ್ನನ್ನು ದಾಟಿ, ನಿನ್ನಲ್ಲಿರುವ ಆ ಪರಮಾತ್ಮನನ್ನು ತಿರಸ್ಕಾರ ಮಾಡಲು ಇಷ್ಟವಿಲ್ಲ, ಇಲ್ಲದಿದ್ದರೆ ಆ ಹನುಮಂತನು ಸಾಗರವನ್ನು ದಾಟಿದಂತೆ ನಿನ್ನನ್ನು ದಾಟಿಕೊಂಡು ಹೋಗುತ್ತಿದ್ದೆ' ಎಂದ.

'ಯಾರಪ್ಪ ಆ ಹನುಮಂತ? ಯಾವ ಸಾಗರವನ್ನು ದಾಟಿದ? ನನಗೂ ಸ್ವಲ್ಪ ಅವನ ವಿಷಯ ತಿಳಿಸುವಿಯಾ?'ಎಂದು ಆ ವಾನರ ನಗುತ್ತ ಕೇಳಿದ.

'ಹನುಮಂತ ನನ್ನ ಅಣ್ಣ, ಮಹಾ ಗುಣವಂತ, ಬುದ್ಧಿವಂತ ಹಾಗೂ ಶಕ್ತಿವಂತ' ಎನ್ನುತ್ತಾ ಹನುಮಂತನ ವೃತ್ತಾಂತವನ್ನೆಲ್ಲ ಭೀಮ ಹೆಮ್ಮೆಯಿಂದ ಹೇಳಿದ.

ಭೀಮನ ಬಲೋನ್ನತ್ತತೆಯನ್ನು, ಬಾಹುಗರ್ವವನ್ನೂ ನೋಡಿ ಮನಸ್ಸಿನಲ್ಲಿಯೇ ಆನಂದಪಟ್ಟ ಹನುಮಂತನು, 'ಅಯ್ಯಾ, ನಾನು ಮುದುಕ, ಏಳಲಾರೆ ನನ್ನ ಮೇಲೆ ಕನಿಕರ ತೋರಿ ಸ್ವಲ್ಪ ಬಾಲವನ್ನು ಅತ್ತ ಸರಿಸಿಕೊಂಡು ಹೋಗು' ಎಂದು ಬೇಡಿಕೊಳ್ಳುವವನಂತೆ ನಟಿಸಿದನು.

'ಅಯ್ಯೋ, ಅಷ್ಟೇ ತಾನೇ?' ಎನ್ನುತ್ತ ಭೀಮಸೇನನು ಬಾಲವನ್ನು ತನ್ನ ಗದೆಯಿಂದ ಸರಿಸಲು ಹೋದ. ಆದರ ಅದು ಸ್ವಲ್ಪವೂ ಅಲುಗಾಡಲಿಲ್ಲ. ಎರಡು ಕೈಗಳಿಂದಲೂ ಎತ್ತಿದ, ಆಗಲಿಲ್ಲ. ಹಲ್ಲುಮುಡಿ ಕಚ್ಚಿ, ಕಣ್ಣರಳಿಸಿ, ಹುಬ್ಬೆತ್ತಿ ಅಲ್ಲಾಡಿಸಿದ. ಉಹೂಂ, ಕಿಂಚಿತ್ತೂ ಅಲುಗಲಿಲ್ಲ. ಮೈಯೆಲ್ಲಾ ಬೆವರಿ ಹೋಯಿತು, ಆದರೆ ಬಾಲ ಮಾತ್ರ ಸಾಸಿವೆ ಕಾಳಿನಷ್ಟೂ ಸರಿಯಲಿಲ್ಲ.

ಈಗ ಮಾತ್ರ ಭೀಮನ ದರ್ಪ ತಣ್ಣಗಾಯಿತು 'ಅಯ್ಯಾ, ಕಪಿಶ್ರೇಷ್ಠ.. ನೀನು ಯಾರು? ದಯವಿಟ್ಟು ಪ್ರಸನ್ನನಾಗು. ನಾನು ಆಡಿದ ದುರ್ಭಾಷೆಯನ್ನು ಕ್ಷಮಿಸು. ನೀನು ಸಿದ್ಧನೋ, ಯಕ್ಷನೋ, ಗಂಧರ್ವನೋ ಆಗಿರಬೇಕು. ದಯಮಾಡಿ ತಪ್ಪನ್ನು ಮನ್ನಿಸಿ ಆಶೀರ್ವದಿಸಬೇಕು' ಎಂದು ಬೇಡಿಕೊಂಡನು. ಅವನ ವಿಧೇಯತೆಯನ್ನು ನೋಡಿ ಸಂತೃಪ್ತನಾದ ಹನುಮಂತನು, 'ನೀನು ಇದುವರೆಗೆ ಹೇಳುತ್ತಿದ್ದ ಆ ವಾಯುಪುತ್ರ ಹನುಮಂತ ನಾನೇ, ನಾವಿಬ್ಬರೂ ವಾಯುಪುತ್ರರಾದುದರಿಂದ ಸೋದರರಲ್ಲವೇ? ನೀನು ಹೊರಟ ಕಾರ್ಯ ನೆರವೇರುತ್ತದೆ, ಯೋಚಿಸಬೇಡ' ಎಂದು ಆಶೀರ್ವದಿಸಿದ. ಆ ಮಾತುಗಳನ್ನು ಕೇಳಿ ಸಂತೋಷಗೊಂಡ ಭೀಮಸೇನನು ಅಣ್ಣನ ಪಾದಗಳಿಗೆರಗಿದನು.

ಬದುಕಿನಲ್ಲಿ ನಾವು ಯಾರನ್ನೇ ಎದುರುಗೊಂಡರೂ ಅವರನ್ನು ಅತ್ಯಂತ ಗೌರವದಿಂದ ಕಾಣಬೇಕು. ನಮಗಿಂತ ನೂರು ಪಟ್ಟು ದೊಡ್ಡ ಸಾಧಕರು ನಮ್ಮ ಸುತ್ತಲೂ ಇರುತ್ತಾರೆ. ಅದರ ಅರಿವಿದ್ದಾಗ ಸದಾ ವಿನಯದಿಂದ ಇರುವ ಸಂಸ್ಕಾರ ನಮ್ಮದಾಗುತ್ತದೆ.

ನಿಸ್ವಾರ್ಥದ ಯೋಚನೆ ಬಹುಮುಖ್ಯ

ಪುಣ್ಯಪಾಪದ ಮಿಶ್ರ ನರಜಂತುವವನ ನೆಲೆ ।
ಮಣ್ಣು ಕರುಳುಗಳೆಸಕವವನ ಮೈದೊಡವು ।
ಬಣ್ಣ ಬಣ್ಣದ ವಸ್ತ್ರ; ಬಿಳುಪಿನೊಡನೆ ಕಪ್ಪಿಹುದು ।
ಕಣ್ಣ ದುರುಗುಟಿಸದಿರು-ಮಂಕುತಿಮ್ಮ

ಮಾನವನ ಜೀವನವು ಸಾಮಾನ್ಯವೇ? ಅದು ಪುಣ-ಪಾಪಗಳ ಸಮ್ಮಿಶ್ರಣ, ಎಲ್ಲವೂ ಸಹ ಮಣ್ಣು ಹಾಗೂ ಕರುಳ ಸಂಬಂಧಗಳು ಎಲ್ಲರನ್ನೂ ಬಂಧಿಯಾಗಿಸಿವೆ. ಇಂತಹ ಬಂಧನಗಳಲ್ಲೇ ಸಂತೋಷಪಡುವಂತಾಗಿದೆ. ಮನುಷ್ಯನು ಬಣ್ಣ ಬಣ್ಣದ ಬಟ್ಟೆಗಳನ್ನು ತೊಡುವಂತಿದ್ದರೂ, ಬಿಳಿಯ ಬಣ್ಣದೊಡನೆ ಕಪ್ಪು ಬಣ್ಣ ಸೇರಿಕೊಂಡಂತೆ, ನಡವಳಿಕೆಯು ಇದ್ದು, ಅದನ್ನು ದ್ವೇಷಿಸದೆ, ದುರುಗಟ್ಟಿ ನೋಡದೆ ಶಾಂತಿಯಿಂದ, ಸಹನೆಯಿಂದ, ಸಹಿಷ್ಣುತೆಯಿಂದ ನೋಡುವ ಗುಣಗಳನ್ನು ಬೆಳೆಸಿಕೋ ಎಂಬುವುದೇ ಸಂದೇಶವಾಗಿದೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಈ ಜಗತ್ತಿನ ಜೀವ ಸಂಕುಲಗಳಲ್ಲಿ ಎಲ್ಲಾ ಜೀವಿಗಳ ಬದುಕು, ನಡೆ ಒಂದಾದರೆ, ಮಾನವನ ಬದುಕು ಹಾಗೂ ನಡೆಯೇ ಬೇರೆ. ಎಲ್ಲಾ ಜೀವಿಗಳು ಹಸಿವಿಗಾಗಿ, ಬೆದರಿಗಾಗಿ, ಕಾಮತೃಷೆಯೆಂಬ ಮೂಲಭೂತ ಗುಣಗಳನ್ನು ಹೊಂದಿದ್ದರೆ, ಹೆಚ್ಚಿನವರು ಆ ಮೂರನ್ನೂ ಮೀರಿದ ಸ್ವಾರ್ಥಗಳನ್ನು ಮೈಗೂಡಿಸಿಕೊಂಡು ಆಸೆಗಳ ದಾಸನಾಗಿ ಬದುಕನ್ನು ನಡೆಸುತ್ತಾರೆ. ಅದರಲ್ಲಿ ಬಂಧಿತನಾದ ಮಾನವನು ತನ್ನ ಆಸೆಗಳು ಪೂರೈಸಿಕೊಳ್ಳುವ ಭರದಲ್ಲಿ ಹಲವಾರು ಪಾಪ ಕರ್ಮಗಳನ್ನು ಮಾಡುತ್ತಾನೆ, ಅದು ಹೆಚ್ಚಾದಂತೆ ಅದನ್ನು ಕಡಿಮೆ ಮಾಡಿಕೊಳ್ಳಲು ಮತ್ತೆ ಪುಣ್ಯಗಳಿಸಲು ಯತ್ನಿಸುತ್ತಾನೆ. ಹೀಗಾಗಿ ಮಾನವನ ಜೀವನ ಕಡಿಮೆಯಂತೂ ಅಲ್ಲವೇ ಅಲ್ಲ, ಅದೊಂದು ಪಾಪ ಪುಣ್ಯಗಳ ಮಿಶ್ರಣವಾಗಿದೆ. ಅವು ಬರುವುದು ಸ್ವಾರ್ಥತೆಯಿಂದಲೇ ಎಂಬುದು ಸತ್ಯವೇ ಆದರೂ, ಈ ಸ್ವಾರ್ಥವು ಬರುವುದು ಈ ಮಣ್ಣಿನ ಮೇಲಿನ, ಕರುಳ ಸಂಬಂಧದಿಂದಲೇ ಆಗಿದೆ. ಈ ಜಗತ್ತಿನಲ್ಲಿ ಸಿಗುವ ಎಲ್ಲಾ ವಸ್ತುಗಳೂ ಸಹ ಮಣ್ಣಿನಿಂದಲೇ ಅಂದರೆ, ಆಸ್ತಿ, ಸಂಪತ್ತು, ಆಭರಣ ಹೀಗೆ ಎಲ್ಲವೂ ಮಣ್ಣಿನಿಂದಲೇ ಆಗಿರುವುದರಿಂದ ಈ ಮನುಜನಿಗೆ ಮಣ್ಣಿನ ಮೇಲೆಯೇ ಬಹು ಪ್ರೀತಿ. ಇನ್ನು ಕರುಳಸಂಬಂಧವೂ ಸಹ ತಾನು ಬಿಟ್ಟೆನೆಂದರೂ ಅದು ಬಿಡದೆ ಈತನನ್ನು ಬಂಧಿಯಾಗಿಸಿಯೂ ಇದೆ. ಹೀಗಾಗಿ ಮಾನವನು ಮಣ್ಣಿನ ಮೇಲಿನ ಆಸೆಯಿಂದಲೋ, ಕರುಳಪ್ರೇಮದಿಂದಲೋ ತನ್ನ ಜೀವನದಲ್ಲಿ ಬಂಧಿಯಾಗಿ ತನಗೆ ಅರಿವಿದ್ದೋ, ಅರಿವು ಇಲ್ಲದೆಯೋ ಪಾಪಗಳನ್ನು ಮಾಡುತ್ತಾ, ಅದನ್ನು ಮತ್ತೆ ಸರಿದೂಗಿಸಲು ಪುಣ್ಯಕೆಲಸಗಳನ್ನು ಮಾಡುತ್ತಾ ಇರುವುದರಿಂದ ಜೀವನವು ಪಾಪ-ಪುಣ್ಯಗಳ ಸಮ್ಮಿಶ್ರಣವೇ ಆಗಿದೆ. ಇದನ್ನೇ ಈ ಕಗ್ಗದಲ್ಲಿ ಮಣ್ಣು ಕರುಳುಗಳೆಸಕವವನ ಮೈದೊಡವು ಎಂದು ಪೂಜ್ಯರು ಹೇಳಿರುವುದು.

ಮನುಷ್ಯ ತನ್ನ ಜೀವಿತಾವಧಿಯ ಕಾಲದಲ್ಲಿ ಹಲವಾರು ಘಟನೆಗಳನ್ನು ಅನುಭವಿಸುತ್ತಾ ಇರುತ್ತಾನೆ. ಹೊಸ ಹೊಸ ಅನುಭವ, ಕಾರ್ಯ, ಕ್ಷಮತೆಗಳೊಂದಿಗೆ ಬದುಕುವುದು ಒಂದು ರೀತಿಯಲ್ಲಿ ಹಲವಾರು ಬಣ್ಣಗಳು ಇರುವಂತಹ ವಸ್ತ್ರವೇಷಗಳನ್ನು ತೊಟ್ಟಂತೆಯೇ ಆಗಿರುತ್ತದೆ. ಆ ಬಣ್ಣಗಳಲ್ಲಿ ಬಿಳಿಯೂ ಇದೆ, ಹಾಗೆಯೇ ಕಪ್ಪು ಬಣ್ಣವೂ ಇದೆ. ಈ ಬಣ್ಣಗಳು ನಮ್ಮ ದೈನಂದಿನ ಬದುಕು, ವ್ಯವಸ್ಥೆಯನ್ನು ತೋರಿಸುತ್ತವೆ. ಇಲ್ಲಿ ಬಿಳಿ ಬಣ್ಣ ಎಂಬುದು ಕ್ಷಮೆ, ದಯೆ, ಪ್ರೀತಿ, ವಿಶ್ವಾಸ, ಭಾತೃತ್ವ ಹಾಗೂ ಪುಣ್ಯ ಕೆಲಸಗಳ ಪ್ರತೀಕವಾದರೆ, ಕಪ್ಪು ಬಣ್ಣವು ಸ್ವಾರ್ಥ, ಈರ್ಷ್ಯ, ಕೋಪ, ತಾಪ, ದ್ವೇಷ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಪ್ರತಿಬಿಂಬಿಸುತ್ತದೆ. ಅಂದರೆ ಮನುಷ್ಯನ ಜೀವನದಲ್ಲಿ ಇವೆಲ್ಲವೂ ಸ್ವಾಭಾವಿಕವೇ ಆಗಿವೆ. ಕಪ್ಪು ಹೆಚ್ಚಿದೆ ಎಂದು ಒಬ್ಬರನ್ನು ದ್ವೇಷಿಸುವ ಬದಲು ಆ ಕಪ್ಪು ಬಣ್ಣ ಎಂಬುದೂ ಸಹ ಒಂದು ಬಣ್ಣ ಎಂದು ಅರಿತು ಯಾರಿಗೂ ದುರುಗಟ್ಟದೆ, ದ್ವೇಷಿಸದೆ, ಅಸಹಿಷ್ಣುತೆಯಿಂದ ಇರದೆ ಜೀವನವನ್ನು ನೀನು ಮಾಡು ಎಂದು ಈ ಕಗ್ಗದಲ್ಲಿ ಆದೇಶಿದ್ದಾರೆ. ಈ ಜಗತ್ತಿನಲ್ಲಿ ಎಲ್ಲವೂ ಸಮವಿಲ್ಲ ಎಂಬುದು ಅವರವರ ವೈಯಕ್ತಿಕ ಅಭಿಪ್ರಾಯ. ಆ ಭಗವಂತನು ಬಹಳವೇ ಆಲೋಚಿಸಿ ಎಲ್ಲದರಲ್ಲಿಯೂ ಸಮಾನತೆಯನ್ನು ಇಟ್ಟು ಪ್ರಪಂಚವನ್ನು ಸೃಷ್ಟಿಸಿ, ಎಲ್ಲರೂ ಸುಖವಾಗಿರಲೆಂದು ಹಾರೈಸಿದರೆ ಈ ಮನುಷ್ಯ ತನ್ನ ಸ್ವಾರ್ಥ ಸಾಧನೆಗಾಗಿ ಎಲ್ಲವನ್ನೂ ಹಳಿಯುತ್ತಾ ಹೋಗುತ್ತಾನೆ. ವಾಸ್ತವದ ನೆಲೆಗಟ್ಟಿನಲ್ಲಿ ಈ ಪ್ರಪಂಚವನ್ನು ನೋಡಬೇಕು, ಸಂಕುಚಿತ ಮನೋಭಾವ ಬಿಡಬೇಕು. ಅವರವರು ಮಾಡುವ ಕೆಲಸ-ಕಾರ್ಯಗಳು ಅವರವರಿಗೆ ಸರಿ ಎಂದು ಕಂಡುಬರಬಹುದು, ಹಾಗಾಗಿ ಎಲ್ಲವನ್ನೂ ಸಹ ಸಮದೃಷ್ಟಿಯಲ್ಲಿ ದ್ವೇಷ ಮಾಡದೆ ನೋಡುವ ಮನಸ್ಥಿತಿಯನ್ನು ನಾವು ರೂಢಿಸಿಕೊಳ್ಳಬೇಕು. ಕಪ್ಪು ಹಾಗೂ ಬಿಳುಪು ನಮ್ಮ ಜೀವನದಲ್ಲಿ ಹೇಗೋ ಹಾಗೆಯೇ ಪಾಪ-ಪುಣ್ಯಗಳೂ ಸಹ ಆಗಿವೆ. ಆದುದರಿಂದ ಯಾರನ್ನೂ ದ್ವೇಷಿಸದೆ, ಗೌರವಿಸಬೇಕು ಎಂಬುದೇ ಈ ಕಗ್ಗದ ಹೂರಣವಾಗಿದೆ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಸ್ಕ್ವಾಷ್ ಟೂರ್ನಿ: ಫೈನಲ್‌ಗೆ ಅನಾಹತ್

ಬೇಗ ವ್ಯಾಲಿ(ಆಸ್ಟ್ರೇಲಿಯಾ): ಭಾರತದ ಉದಯೋನ್ಮುಖ ಆಟಗಾರ್ತಿ ಅನಾಹತ್ ಸಿಂಗ್ ಅವರು ಎನ್‌ಎಸ್‌ಡಬ್ಲ್ಯು ಓಪನ್ ಸ್ಕ್ವಾಷ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಫೈನಲ್ ತಲುಪಿದರು. 17 ವರ್ಷ ವಯಸ್ಸಿನ ಈ ಆಟಗಾರ್ತಿ, ತೀವ್ರ ಹೋರಾಟ ಕಂಡ ಸೆಮಿಫೈನಲ್ ಪಂದ್ಯದಲ್ಲಿ 3-2ರಿಂದ (10-12, 11-5, 11-5, 10-12, 11-7) ಈಜಿಪ್ಟ್‌ನ ನೂರ್ ಖಫಾಜಿ ಎದುರು ಗೆಲುವು ಸಾಧಿಸಿದರು. ಅಗ್ರ ಶ್ರೇಯಾಂಕಿತೆಯಾಗಿರುವ ಅನಾಹತ್, ಫೈನಲ್ ಪಂದ್ಯದಲ್ಲಿ ಹಬೀಬಾ ಹನಿ (ಈಜಿಪ್ಟ್) ಅವರ ಸವಾಲನ್ನು ಎದುರಿಸಬೇಕಿದೆ. ಎರಡನೇ ಶ್ರೇಯಾಂಕದ ಹಬೀಬಾ ಅವರು ಅಂತಿಮ ನಾಲ್ಕರ ಸುತ್ತಿನ ಪಂದ್ಯದಲ್ಲಿ 3-1ರಿಂದ (11-9, 7-11, 12-10, 11-6) ಭಾರತದ ಆಕಾಂಕ್ಷಾ ಸಾಳುಂಕೆ ಅವರನ್ನು ಮಣಿಸಿ, ಪ್ರಶಸ್ತಿ ಸುತ್ತು ಪ್ರವೇಶಿಸಿದ್ದಾರೆ. ಟೂರ್ನಿಯು ಒಟ್ಟಾರೆ ರು. 22 ಲಕ್ಷ ಬಹುಮಾನ ಮೊತ್ತ ಹೊಂದಿದೆ.

ಸೆಮೀಸ್‌ಗೆ ಲಗ್ಗೆ ಇಟ್ಟ ಶಿಲ್ಲಾಂಗ್, ನಾರ್ತ್‌ಈಸ್ಟ್

ಶಿಲ್ಲಾಂಗ್: ಮೊದಲಾರ್ಧದ ಹಿನ್ನಡೆಯಿಂದ ಚೇತರಿಸಿಕೊಂಡ ಅತಿಥೇಯ ಶಿಲ್ಲಾಂಗ್ ಲಾಜೊಂಗ್ ಎಫ್.ಸಿ ತಂಡವು 134ನೇ ಆವೃತ್ತಿಯ ಡುರ್ಯಾಂಡ್ ಕಪ್ ಫುಟ್ಬಾಲ್ ಟೂರ್ನಿಯಲ್ಲಿ ಸತತ ಎರಡನೇ ಬಾರಿ ಸೆಮಿಫೈನಲ್ ಪ್ರವೇಶಿಸಿತು. ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಶಿಲ್ಲಾಂಗ್ ತಂಡವು 2-1 ಗೋಲುಗಳಿಂದ ಇಂಡಿಯನ್ ನೇವಿ ಎಫ್.ಟಿ ತಂಡವನ್ನು ಮಣಿಸಿತು. ವಿಜಯ್ ಮರಾಂಡಿ ಅವರು 38ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ ನೇವಿ ತಂಡಕ್ಕೆ ಮೊದಲಾರ್ಧದಲ್ಲಿ (1-0) ಮುನ್ನಡೆ ಒದಗಿಸಿದ್ದರು. ಆದರೆ ಉತ್ತರಾರ್ಧದಲ್ಲಿ ದಮ್ಮೈರ್‌ಫಾಂಗ್ ಲಿಂಗ್ಡೋ (69ನೇ ನಿಮಿಷ) ಮತ್ತು ಸನಾ ಮೈಲ್ಲಿಂಪ್ಡಾ (79ನೇ ನಿಮಿಷ) ಅವರು ಶಿಲ್ಲಾಂಗ್ ಪರ ಗೋಲು ಗಳಿಸಿ, ಗೆಲುವಿನ ರೂವಾರಿಯಾದರು. ಮಂಗಳವಾರ ನಡೆಯುವ ಸೆಮಿಫೈನಲ್‌ನಲ್ಲಿ ಶಿಲ್ಲಾಂಗ್ ತಂಡವು ಹಾಲಿ ಚಾಂಪಿಯನ್ ನಾರ್ತ್ ಈಸ್ಟ್ ಯುನೈಟೆಡ್ ಎಫ್.ಸಿ ತಂಡವನ್ನು ಎದುರಿಸಲಿದೆ. ದಿನದ ಮತ್ತೊಂದು ಕ್ವಾರ್ಟರ್ ಫೈನಲ್‌ನಲ್ಲಿ ನಾರ್ತ್ ಈಸ್ಟ್ ತಂಡವು 4-0ಯಿಂದ ಬೋಡೊಲ್ಯಾಂಡ್ ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು.

ಮಹಾರಾಜ ಟ್ರೋಫಿ: ಚೇತನ್ ಅಮೋಘ ಬ್ಯಾಟಿಂಗ್ | ಮಂಗಳೂರು ಡ್ರ್ಯಾಗನ್ಸ್‌ಗೆ ಸೋಲು

ಬೆಂಗಳೂರು ಬ್ಲಾಸ್ಟರ್ಸ್‌ಗೆ ರೋಚಕ ಜಯ

ಮೈಸೂರು: ಇಲ್ಲಿ ಭಾನುವಾರ ನಡೆದ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಮಂಗಳೂರು ಡ್ರ್ಯಾಗನ್ಸ್ ತಂಡವನ್ನು 3 ವಿಕೆಟ್‌ಗಳಿಂದ ಮಣಿಸಿತು.

ಮಳೆ ಸುರಿದ ಕಾರಣ ಭಾನುವಾರದ ಪಂದ್ಯವನ್ನು 19 ಓವರ್‌ಗೆ ಇಳಿಸಲಾಗಿತ್ತು. ಮೊದಲು ಬ್ಯಾಟ್ ಮಾಡಿದ ಮಂಗಳೂರು ಡ್ರ್ಯಾಗನ್ಸ್ ತಂಡವು ನಿಗದಿತ 19 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 174 ರನ್ ಗಳಿಸಿತು. ಗುರಿ ಬೆಂಬತ್ತಿದ ಬೆಂಗಳೂರು ಬ್ಲಾಸ್ಟರ್ಸ್ ತಂಡವು 18.3 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಮಂಗಳೂರು ತಂಡಕ್ಕೆ ಉತ್ತಮ ಆರಂಭ: ಆರಂಭಿಕ ಆಟಗಾರ ಲೋಚನ್ ಗೌಡ 32 ಬಾಲ್‌ಗಳಿಂದ 49 ರನ್ ಗಳಿಸಿ ಹಾಗೂ ಮತ್ತೋರ್ವ ಆರಂಭಿಕ ಆಟಗಾರ ಶರತ್ 22 ಬಾಲ್‌ಗಳಲ್ಲಿ 45 ರನ್ ಗಳಿಸಿ ಮಂಗಳೂರು ತಂಡಕ್ಕೆ ಭದ್ರ ಬುನಾದಿ ಹಾಕಿದರು. ಮೊದಲ ವಿಕೆಟ್‌ಗೆ ಮಂಗಳೂರು ತಂಡವು ಇವರಿಬ್ಬರ ಜತೆಯಾಟದ ಮೂಲಕ 90 ರನ್ ಗಳಿಸಿತು.

ಆದರೆ ಆ ಬಳಿಕ ಮಂಗಳೂರು ತಂಡದ ಮಧ್ಯಮ ಕ್ರಮಾಂಕದ ಆಟಗಾರರು ನಿರೀಕ್ಷಿತ ಮಟ್ಟದಲ್ಲಿ ಮಿಂಚಲಿಲ್ಲ. ತಿಪ್ಪಾ ರೆಡ್ಡಿ 15 ಬಾಲ್‌ಗಳನ್ನು ಎದುರಿಸಿ 12 ರನ್ ಗಳಿಸಿದರೆ, ಮ್ಯಾಕ್ನೈಲ್ ನೊರೊನ್ಹಾ 11 ಬಾಲ್ ಎದುರಿಸಿ 12 ರನ್ ಗಳಿಸಿದರು. ಆದರ್ಶ್ ಪ್ರಜ್ವಲ್ ಕೇವಲ 5 ರನ್ ಗಳಿಸಿ ಪೆವಿಲಿಯನ್ ಸೇರಿದರು.

ಎಸ್. ಶಿವರಾಜ್ ಕೊನೆಯಲ್ಲಿ 15 ಬಾಲ್ ಎದುರಿಸಿ 33 ರನ್ ಗಳಿಸುವಲ್ಲಿ ಸಫಲರಾದರು. 14 ಬಾಲ್‌ಗಳನ್ನು

ಎದುರಿಸಿದ ಶ್ರೇಯಸ್ ಗೋಪಾಲ್ 12 ರನ್ ಗಳಿಸಿ ಅಜೇಯರಾಗುಳಿದರು. ಬೆಂಗಳೂರು ತಂಡದ ಪರವಾಗಿ ಪ್ರತೀಕ್ ಜೈನ್ ಮತ್ತು ಮೊಹ್ಸಿನ್ ಖಾನ್ ತಲಾ 2 ವಿಕೆಟ್ ಪಡೆದರೆ, ವಿದ್ಯಾಧರ್ ಪಾಟೀಲ್ ಮತ್ತು ನವೀನ್ ತಲಾ ಒಂದು ವಿಕೆಟ್ ಪಡೆದರು.

ಚೇತನ್ ಆಕರ್ಷಕ ಬ್ಯಾಟಿಂಗ್: ಗುರಿಯನ್ನು ಬೆಂಬತ್ತಿದ ಬೆಂಗಳೂರು ಬ್ಲಾಸ್ಟರ್ಸ್ ತಂಡದ ಆರಂಭವೂ ಉತ್ತಮವಾಗಿತ್ತು. ಆರಂಭಿಕ ಆಟಗಾರರಾಗಿ ಕ್ರೀಸ್‌ಗೆ ಬಂದ ಎಲ್.ಆರ್. ಚೇತನ್ ಮಂಗಳೂರು ಬೌಲರ್‌ಗಳನ್ನು ದಂಡಿಸಿ ಮತ್ತೊಮ್ಮೆ ಆಕರ್ಷಕ ಇನ್ನಿಂಗ್ಸ್ ಆಡಿದರು. 46 ಬಾಲ್ ಎದುರಿಸಿದ ಅವರು 74 ರನ್ ಗಳಿಸಿದರು. ಇನ್ನೋರ್ವ ಆರಂಭಿಕ ಆಟಗಾರ ರೋಹನ್ ಪಾಟೀಲ್ 13 ಬಾಲ್‌ಗಳಲ್ಲಿ 26 ರನ್ ಗಳಿಸಿದರು. ಮೊದಲ ವಿಕೆಟ್‌ಗೆ 4.1 ಓವರ್‌ಗಳಲ್ಲಿ 48 ರನ್ ಗಳಿಸುವಲ್ಲಿ ಈ ಜೋಡಿ ಯಶಸ್ವಿಯಾಯಿತು.

ಬಳಿಕ ಬಂದ ಬೆಂಗಳೂರು ತಂಡದ ಮಯಾಂಕ್ ಅಗ್ರವಾಲ್ ಬಿರುಸಿನ ಹೊಡೆತಕ್ಕೆ ಮುಂದಾದರು. ಆದರೆ 9 ಬಾಲ್‌ಗಳಲ್ಲಿ 20 ರನ್ ಗಳಿಸಿ ಔಟ್ ಆದರು. ಆ ನಂತರ ವಿಕೆಟ್ ಕೀಪರ್ ಸೂರಜ್ ಅಹುಜಾ 12 ಬಾಲ್ ಎದುರಿಸಿ 21 ರನ್ ಗಳಿಸಿದರು. ಉಳಿದಂತೆ ಶುಭಾಂಗ್ ಹೆಗ್ಡೆ 2 ರನ್ ಗಳಿಸಿದರೆ, ರೋಹನ್ ನವೀನ್ 3 ರನ್ ಗಳಿಸಲಷ್ಟೇ ಶಕ್ತರಾದರು. ಕೊನೆಯಲ್ಲಿ ನವೀನ್ ಎಂ.ಜಿ (4) ಹಾಗೂ ವಿದ್ಯಾಧರ್ ಪಾಟೀಲ್ (6) ಅಜೇಯರಾಗುಳಿದು ಬೆಂಗಳೂರು ತಂಡಕ್ಕೆ ಇನ್ನು 3 ಬಾಲ್ ಬಾಕಿ ಇರುವಂತೆ ರೋಚಕ ಜಯವನ್ನು ತಂದುಕೊಟ್ಟರು.

ಮಂಗಳೂರು ತಂಡದ ಪರವಾಗಿ ಕ್ರಾಂತಿ ಕುಮಾರ್ 2 ವಿಕೆಟ್ ಪಡೆದರೆ, ಶ್ರೇಯಸ್ ಗೋಪಾಲ್, ನೊರೊನ್ಹಾ, ಸಚಿನ್ ಶಿಂಧೆ ಮತ್ತು ಶ್ರೀವತ್ಸ ತಲಾ ಒಂದು ವಿಕೆಟ್ ಗಳಿಸಿದರು.

ಭಾರತ ತಂಡಕ್ಕೆ ಹಿರಿಯ ವೇಗಿಯ ಆಯ್ಕೆ ಖಚಿತ

ಏಷ್ಯಾ ಕಪ್‌ಗೆ ಬುಮ್ರಾ ಲಭ್ಯ

ದೆಹಲಿ: ಮುಂಬರುವ ಏಷ್ಯಾ ಕಪ್ ಟೂರ್ನಿಯ ಭಾರತ ತಂಡದಲ್ಲಿ ಹಿರಿಯ ವೇಗದ ಬೌಲರ್ ಜಸ್‌ಪ್ರೀತ್ ಬುಮ್ರಾ ಲಭ್ಯರಿದ್ದಾರೆಂದು ಮೂಲಗಳು ಖಚಿತಪಡಿಸಿವೆ. ಆ ಮೂಲಕ ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡಕ್ಕೆ ಜಸ್‌ಪ್ರೀತ್ ಬುಮ್ರಾ ಸೇರ್ಪಡೆ ಮೂಲಕ ಬಲ ಸಿಕ್ಕಿದಂತಾಗಲಿದೆ.

ಏಷ್ಯಾ ಕಪ್ ಟೂರ್ನಿಯು ಸೆಪ್ಟೆಂಬರ್ 9ರಂದು ಯುಎಇಯಲ್ಲಿ ಆರಂಭವಾಗಲಿದೆ. ತಾನು ಸಂಪೂರ್ಣ ಫಿಟ್ ಆಗಿದ್ದು ಏಷ್ಯಾ ಕಪ್ ಟೂರ್ನಿಯಲ್ಲಿ ಆಡಲು ಬಯಸುತ್ತಿದ್ದೇನೆಂದು ಬುಮ್ರಾ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಆಯ್ಕೆದಾರರ ಮುಖ್ಯಸ್ಥ ಅಜಿತ್ ಅಗರ್ಕರ್‌ಗೆ ತಿಳಿಸಿದ್ದಾರೆ. ಅಗರ್ಕರ್ ಸಾರಥ್ಯದ ಬಿಸಿಸಿಐ ಆಯ್ಕೆ ಸಮಿತಿಯು ಆಗಸ್ಟ್ 19ರಂದು ಮುಂಬೈನ ಕಛೇರಿಯಲ್ಲಿ ಸಭೆ ನಡೆಸಲಿದ್ದು, ಏಷ್ಯಾ ಕಪ್ ಟೂರ್ನಿಗೆ ಭಾರತ ತಂಡವನ್ನು ಪ್ರಕಟಿಸುವ ಸಾಧ್ಯತೆ ಇದೆ.

ಕಳೆದ ವರ್ಷ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ಬಳಿಕ ಜಸ್‌ಪ್ರೀತ್ ಬುಮ್ರಾ ಭಾರತ ವೈಟ್‌ಬಾಲ್ ತಂಡದಿಂದ ದೂರ ಉಳಿದಿದ್ದಾರೆ. ಬಾರ್ಬಡೋಸ್‌ನ ಬ್ರಿಡ್ಜ್ ಸ್ಟೋನ್‌ನಲ್ಲಿ ನಡೆದಿದ್ದ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಬುಮ್ರಾ 18 ರನ್ ನೀಡಿ ಎರಡು ವಿಕೆಟ್ ಪಡೆದು, ಭಾರತ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಇತ್ತೀಚೆಗೆ ಕೆನಿಂಗ್ಟನ್ ಓವಲ್‌ನಲ್ಲಿ ನಡೆದಿದ್ದ ಆ್ಯಂಡರ್ಸನ್-ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಸರಣಿಯ ನಿರ್ಣಾಯಕ ಐದನೇ ಪಂದ್ಯಕ್ಕೂ ಮುನ್ನ ಅವರಿಗೆ ಒತ್ತಡ ಹೆಚ್ಚಬಾರದೆಂದು ತಂಡದಿಂದ ಬಿಡುಗಡೆ ಮಾಡಲಾಗಿತ್ತು. ಮೊದಲ ನಾಲ್ಕು ಟೆಸ್ಟ್ ಪಂದ್ಯಗಳಲ್ಲಿ ಮೂರರಲ್ಲಿ ಆಡಿದ್ದ ಬುಮ್ರಾ ಎರಡು ಬಾರಿ ಐದು ವಿಕೆಟ್‌ಗಳನ್ನು ಪಡೆದಿದ್ದರು.

ಟಿ20 ಟೂರ್ನಿ: ಕಡಿಮೆ ಒತ್ತಡ

ಏಷ್ಯಾ ಕಪ್ ಟೂರ್ನಿಯು ಟಿ20 ಮಾದರಿಯಲ್ಲಿ ನಡೆಯುವುದರಿಂದ ಜಸ್‌ಪ್ರೀತ್ ಬುಮ್ರಾ ಮೇಲೆ ಹೆಚ್ಚಿನ ಒತ್ತಡವಿರುವುದಿಲ್ಲ. ಪ್ರತೀ ಪಂದ್ಯದಲ್ಲೂ ಗರಿಷ್ಠ ನಾಲ್ಕು ಓವರ್‌ಗಳನ್ನು ಮಾತ್ರ ಬೌಲ್ ಮಾಡಿದರೆ ಸಾಕಾಗುತ್ತದೆ. ಗುಂಪು ಹಂತದಲ್ಲಿ ಪಂದ್ಯಗಳ ನಡುವೆ ಮೂರರಿಂದ ನಾಲ್ಕು ದಿನಗಳ ವಿಶ್ರಾಂತಿ ಇರುವುದರಿಂದ ಅವರ ಕೆಲಸದ ಹೊರೆಗೆ ಸಮಸ್ಯೆಯಾಗುವ ಸಾಧ್ಯತೆಯಿಲ್ಲ.

ಏಕದಿನ ಸರಣಿ ಗೆದ್ದ ಭಾರತ-ಎ ಮಹಿಳೆಯರು | ಅಲಿಸಾ ಹೀಲಿ ಅಮೋಘ ಶತಕ

ಕ್ಲೀನ್ ಸ್ವೀಪ್‌ನಿಂದ ಪಾರಾದ ಆಸೀಸ್

ಬ್ರಿಸ್ಬೇನ್: ಆಸ್ಟ್ರೇಲಿಯಾ-ಎ ಮತ್ತು ಭಾರತ-ಎ ಮಹಿಳಾ ತಂಡದ ನಡುವಿನ ಮೂರನೇ ಏಕದಿನ ಪಂದ್ಯವನ್ನು ಆತಿಥೇಯ ಆಸ್ಟ್ರೇಲಿಯಾ-ಎ ತಂಡವು 9 ವಿಕೆಟ್‌ಗಳಿಂದ ಗೆದ್ದುಕೊಂಡಿತು. ಸರಣಿಯ ಮೊದಲ ಎರಡು ಪಂದ್ಯಗಳನ್ನು ಗೆದ್ದುಕೊಂಡಿದ್ದ ಭಾರತ ಮಹಿಳಾ ತಂಡ 2-1 ಅಂತರದಿಂದ ಸರಣಿಯನ್ನು ಕೈವಶ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಆಸೀಸ್ ಪರ ಪಂದ್ಯ ವಿಜೇತ ಇನ್ನಿಂಗ್ಸ್ ಆಡಿದ ಆರಂಭಿಕ ಆಟಗಾರ್ತಿ ಮತ್ತು ವೇಗಿ ಮಿಚೆಲ್ ಸ್ಟಾರ್ಕ್ ಅವರ ಪತ್ನಿ ಅಲಿಸಾ ಹೀಲಿ ಸ್ಫೋಟಕ ಶತಕ ಬಾರಿಸಿದರು.

ಭಾರತ ಮೊದಲು ಬ್ಯಾಟಿಂಗ್ ಮಾಡಿ 216 ರನ್ ಗಳಿಸಿತು. ತಂಡದ ಪರ ಆರಂಭಿಕ ಆಟಗಾರ್ತಿ ಶೆಫಾಲಿ ವರ್ಮಾ 52 ರನ್ ಗಳಿಸಿದರೆ, ಯಸ್ತಿಕಾ ಭಾಟಿಯಾ 42 ರನ್ ಗಳಿಸಿದರು. ಯುವ ಆಟಗಾರ್ತಿ ನಂದಿನಿ ಕಶ್ಯಪ್ 28 ರನ್ ಗಳಿಸಿದರೆ, ನಾಯಕಿ ರಾಧಾ ಯಾದವ್ 18 ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು. ರಾಘ್ವಿ ಬಿಶ್ತ್ 18 ರನ್ ಗಳಿಸಿದರು.

ಆಸ್ಟ್ರೇಲಿಯಾ ಪರ ನಾಯಕಿ ತಹ್ಲಿಯಾ ಮೆಕ್‌ಗ್ರಾತ್ 8 ಓವರ್‌ಗಳಲ್ಲಿ 40 ರನ್‌ಗಳಿಗೆ ಮೂರು ವಿಕೆಟ್ ಪಡೆದರು.

ಗುರಿಯನ್ನು ಬೆನ್ನಟ್ಟಿದ ಆಸ್ಟ್ರೇಲಿಯಾ-ಎ ತಂಡದ ಪರ ಅಲಿಸಾ ಹೀಲಿ ಆರಂಭದಿಂದಲೇ ಆಕ್ರಮಣಕಾರಿಯಾಗಿ ಬ್ಯಾಟಿಂಗ್ ಆರಂಭಿಸಿದರು. 85 ಎಸೆತಗಳಲ್ಲಿ 23 ಬೌಂಡರಿ ಮತ್ತು ಮೂರು ಸಿಕ್ಸರ್‌ಗಳ ಸಹಾಯದಿಂದ ಅಜೇಯ 137 ರನ್ ಗಳಿಸಿದರು, ಅಲ್ಲದೆ ತಹ್ಲಿಯಾ ವಿಲ್ಸನ್ ಅವರೊಂದಿಗೆ ಮೊದಲ ವಿಕೆಟ್‌ಗೆ 137 ರನ್ ಪೇರಿಸಿದರು. ರಾಚೆಲ್ ಟ್ರೆನಮನ್ ಅಜೇಯ 21 ರನ್‌ಗಳ

ಕೊಡುಗೆ ನೀಡಿದರು. ಭಾರತದ ಪರ ರಾಧಾ ಯಾದವ್ ಒಂದು ವಿಕೆಟ್ ಪಡೆದರು.

ಎರಡೂ ತಂಡಗಳ ನಡುವೆ ನಡೆದ ಮೊದಲ ಎರಡು ಏಕದಿನ ಪಂದ್ಯಗಳನ್ನು ಭಾರತ ವನಿತಾ ಪಡೆ ಗೆದ್ದುಕೊಂಡಿತು. ಹೀಗಾಗಿ ಆಸ್ಟ್ರೇಲಿಯಾ ತಂಡವು ಕ್ಲೀನ್ ಸ್ವೀಪ್ ತಪ್ಪಿಸಲು ಮೂರನೇ ಏಕದಿನ ಪಂದ್ಯವನ್ನು ಗೆಲ್ಲುವುದು ಬಹಳ ಮುಖ್ಯವಾಗಿತ್ತು. ಅದರಂತೆ ಅಲಿಸಾ ಹೀಲಿ ಅವರ ಬಲಿಷ್ಠ ಇನ್ನಿಂಗ್ಸ್‌ನಿಂದಾಗಿ, ತಂಡವು 3-0 ಅಂತರದ ಸೋಲಿನಿಂದ ಪಾರಾಯಿತು.

ಬಾಬರ್ ಆಝುಮ್ ಮತ್ತು ಮೊಹಮ್ಮದ್ ರಿಝ್ವಾನ್‌ಗೆ ಕೊಕ್ | ಹೊಸ ಆಟಗಾರರಿಗೆ ಮಣೆ

ಏಷ್ಯಾ ಕಪ್: ಪಾಕ್ ತಂಡ ಪ್ರಕಟ

ದೆಹಲಿ: ಬಹುನಿರೀಕ್ಷಿತ ಏಷ್ಯಾ ಕಪ್ ಟೂರ್ನಿಗೆ ಪಾಕಿಸ್ತಾನ ತಂಡವನ್ನು ಪ್ರಕಟಿಸಲಾಗಿದೆ. ಪಾಕಿಸ್ತಾನ ಕ್ರಿಕೆಟ್ ಮಂಡಳಿ ತನ್ನ ತಂಡದಲ್ಲಿ ಹೊಸ ಆಟಗಾರರಿಗೆ ಮಣೆ ಹಾಕಿದೆ. ಈ ಬಾರಿ ಬಾಬರ್ ಆಝುಮ್ ಮತ್ತು ಮೊಹಮ್ಮದ್ ರಿಝ್ವಾನ್ ಅವರಂತಹ ಅನುಭವಿ ಆಟಗಾರರನ್ನು ಕೈ ಬಿಟ್ಟು ಅಚ್ಚರಿ ಮೂಡಿಸಿದೆ. ಆದರೆ ಅವರಿಬ್ಬರನ್ನೂ ತಂಡದಿಂದ ಕೈಬಿಟ್ಟಿರುವ ಬಗ್ಗೆ ಪಾಕ್ ಕ್ರಿಕೆಟ್ ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅದೇ ರೀತಿ ನಸೀಮ್ ಶಾ ಮತ್ತು ಶದಾಬ್ ಖಾನ್ ಅವರಂತಹ ಪ್ರಮುಖ ಆಟಗಾರರನ್ನೂ ತಂಡದಿಂದ ಕೈಬಿಡಲಾಗಿದೆ. 2024ರ ನವೆಂಬರ್‌ನಿಂದ ನಸೀಮ್ ಶಾ ಒಂದೇ ಒಂದು ಟಿ20 ಪಂದ್ಯವನ್ನು ಆಡಿಲ್ಲ. ಶದಾಬ್ ಖಾನ್ ಬಾಂಗ್ಲಾದೇಶ ವಿರುದ್ಧದ ತವರಿನಲ್ಲಿ ಟಿ20 ಸರಣಿಯಲ್ಲಿ ಆಡಿದ್ದರು, ಆದರೆ ಇದೀಗ ಅವರು ಗಾಯಗೊಂಡಿದ್ದು, ಭುಜದ ಸಮಸ್ಯೆಗೆ ಶಸ್ತ್ರಚಿಕಿತ್ಸೆಗೆ ಒಳಗಾಗುವಂತೆ ಅವರಿಗೆ ಸೂಚಿಸಲಾಗಿದೆ.

ಪಾಕ್ ತಂಡ: ಸಲ್ಮಾನ್ ಅಲಿ ಅಘಾ (ನಾಯಕ), ಫಖಾರ್ ಝಮಾನ್, ಹಸನ್ ನವಾಜ್, ಸಾಹಿಬ್‌ಝಾದಾ ಫರ್ಹಾನ್, ಸ್ಯಾಮ್ ಆಯುಬ್, ಖುಷ್ದಿಲ್ ಶಾ, ಹುಸೇನ್ ತಲಾತ್, ಮೊಹಮ್ಮದ್ ಹ್ಯಾರಿಸ್ (ಕೀಪರ್), ಅಬ್ರಾರ್ ಅಹ್ಮದ್, ಫಹೀಮ್ ಅಶ್ರಫ್, ಹ್ಯಾರಿಸ್ ರೌಫ್, ಹಸನ್ ಅಲಿ, ಮೊಹಮ್ಮದ್ ನವಾಜ್, ಮೊಹಮ್ಮದ್ ವಸಿಮ್ ಜೂನಿಯರ್, ಸಲ್ಮಾನ್ ಮಿರ್ಜಾ, ಶಾಹೀನ್ ಶಾ ಅಫ್ರಿದಿ ಮತ್ತು ಸೂಫಿಯಾನ್ ಮುಕೀಮ್.

ವಿಟಾಕೀಸ್

ಏಳುಮಲೆ ಗಡಿಮೀರಿದ ಪ್ರೇಮಕಥೆ

ಖ್ಯಾತ ನಿರ್ದೇಶಕ ತರುಣ್ ಸುಧೀರ್ ನಿರ್ಮಾಣದ ಏಳುಮಲೆ ಸಿನಿಮಾ ತನ್ನ ಕಂಟೆಂಟ್ ಮೂಲಕವೇ ಸದ್ದು ಮಾಡುತ್ತಿದೆ. ಹಾಡುಗಳು ಹಾಗೂ ಟೈಟಲ್ ಟೀಸರ್ ಮೂಲಕ ಸಿನಿಪ್ರಿಯರಲ್ಲಿ ನಿರೀಕ್ಷೆ ಹೆಚ್ಚಿಸಿದ್ದು, ಇದೀಗ ಈ ಚಿತ್ರದ ಬಿಡುಗಡೆ ದಿನಾಂಕ ನಿಗದಿಯಾಗಿದೆ. ಸೆಪ್ಟೆಂಬರ್ 5 ರಂದು ಏಳುಮಲೆ ಅದ್ದೂರಿಯಾಗಿ ತೆರೆಗೆ ಬರಲಿದೆ. ಪುನೀತ್ ರಂಗಸ್ವಾಮಿ ನಿರ್ದೇಶನದ ಏಳುಮಲೆ ಕನ್ನಡ, ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ ಬಿಡುಗಡೆಯಾಗಲಿದೆ.

ಕರ್ನಾಟಕ-ತಮಿಳುನಾಡು ನಡುವಿನ ಗಡಿಭಾಗದ ಪ್ರೇಮಕಥೆಯಾಗಿರುವ ಈ ಸಿನಿಮಾದಲ್ಲಿ ನಟಿ ರಕ್ಷಿತಾ ಸಹೋದರ ರಾಣಾ ಕನ್ನಡದ ಹುಡುಗ ಹರೀಶ್ ಪಾತ್ರದಲ್ಲಿ ನಟಿಸಿದ್ದಾರೆ. ರಾಣಾ ರಗಡ್ ಲುಕ್‌ನಲ್ಲಿ ಮಿಂಚಿದ್ದು, ಆ್ಯಕ್ಷನ್‌ನಲ್ಲಿಯೂ ಗಮನಸೆಳೆಯಲಿದ್ದಾರೆ. ರಿಯಾಲಿಟಿ ಶೋ ಮೂಲಕ ಮನೆ ಮಾತಾಗಿರುವ ಮೈಸೂರಿನ ಹುಡುಗಿ ಪ್ರಿಯಾ ಆಚಾರ್ ತಮಿಳು ಹುಡುಗಿಯ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಜಗಪತಿ ಬಾಬು, ನಾಗಾಭರಣ, ಕಿಶೋರ್ ಕುಮಾರ್, ಸರ್ದಾರ್ ಸತ್ಯ ಮುಂತಾದವರು ತಾರಾಬಳಗದಲ್ಲಿದ್ದಾರೆ.

ನೈಜ ಘಟನೆ ಆಧರಿಸಿ ಸಿನಿಮಾವಾಗಿದ್ದು, ಭಾವನಾತ್ಮಕವಾದ ಕಥೆಯನ್ನು ಒಳಗೊಂಡಿದೆ. ಚಾಮರಾಜ ನಗರ, ಸೇಲಂ, ಈರೋಡ್ ಸೇರಿದಂತೆ ಕರ್ನಾಟಕ-ತಮಿಳುನಾಡು ಗಡಿ ಭಾಗದಲ್ಲಿ ಚಿತ್ರೀಕರಣ ನಡೆಸಲಾಗಿದೆ. ರಾಣಾಗೆ ಈ ಸಿನಿಮಾ ಬಿಗ್ ಬ್ರೇಕ್ ನೀಡುವುದು ಖಚಿತವಾಗಿದೆ.

ಪ್ರಶಾಂತ್.ಟಿ.ಆರ್

ಲ್ಯಾಂಡ್ ಲಾರ್ಡ್ ಜತೆ ಪ್ರತ್ಯಕ್ಷವಾದ ಮುಸ್ತಾಫಾ

ಡೇರ್ ಡೆವಿಲ್ ಮುಸ್ತಾಫಾನಾಗಿ ಮನಗೆದ್ದ ನಟ ಶಿಶಿರ್, ಆ ಬಳಿಕ ಮತ್ತಾವಾ ಸಿನಿಮಾದಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ಶಿಶಿರ್ ಎಲ್ಲಿ ಹೋದರು ಎಂದು ಸಿನಿಪ್ರಿಯರು ಹುಡುಕುತ್ತಿರುವಾಗಲೇ ಲ್ಯಾಂಡ್ ಲಾರ್ಡ್ ಜತೆಗೆ ಪ್ರತ್ಯಕ್ಷವಾಗಿದ್ದಾರೆ. ದುನಿಯಾ ವಿಜಯ್ ನಾಯಕರಾಗಿ ನಟಿಸುತ್ತಿರುವ ಲ್ಯಾಂಡ್ ಲಾರ್ಡ್ ಸಿನಿಮಾದಲ್ಲಿ ಶಿಶಿರ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ತಮ್ಮ ಸಿನಿ ಜರ್ನಿಯ ಕುರಿತಂತೆ ಶಿಶಿರ್ ವಿ.ಸಿನಿಮಾಸ್‌ನೊಂದಿಗೆ ಸಂತಸ ಹಂಚಿಕೊಂಡಿದ್ದಾರೆ.

ಮರೆಯಾಗಿದ್ದ ಮುಸ್ತಾಫ

ಡೇರ್ ಡೆವಿಲ್ ಮುಸ್ತಾಫಾದಲ್ಲಿ ಮಿಂಚಿದ ಶಿಶಿರ್ ನೋಡಿದ ಸಿನಿಪ್ರಿಯರು ಮೆಚ್ಚಿಕೊಂಡಾಡಿದರು. ಆ ಬಳಿಕ ಮರೆಯಾಗಿದ್ದ ಶಿಶಿರ್ ಈಗ ಮತ್ತೆ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಹೌದು, ಶಿಶಿರ್ ಲ್ಯಾಂಡ್ ಲಾರ್ಡ್ ಜತೆಗೆ ಪ್ರತ್ಯಕ್ಷವಾಗಿದ್ದಾರೆ. ಜಡೇಶ್ ಕುಮಾರ್ ಹಂಪಿ ನಿರ್ದೇಶನದ ಈ ಚಿತ್ರದಲ್ಲಿ ದುನಿಯಾ ವಿಜಯ್ ನಾಯಕನಾಗಿ ನಟಿಸುತ್ತಿದ್ದಾರೆ. ಶಿಶಿರ್ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದು, ದೇವಿ ಎಂಬ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ಆ್ಯಂಗ್ರಿ ಯಂಗ್ ಮ್ಯಾನ್ ಆಗಿ ಅಬ್ಬರಿಸಲು ಸಿದ್ಧವಾಗಿದ್ದಾರೆ. ಲ್ಯಾಂಡ್ ಲಾರ್ಡ್ ಗ್ರಾಮೀಣ ಹಿನ್ನೆಲೆಯಲ್ಲಿ ಸಾಗುವ ಕಥೆಯಾಗಿದ್ದು, ಸೆಟ್ಟೇರಿದಾಗಿನಿಂದಲೂ ಕುತೂಹಲ ಮೂಡಿಸಿದೆ. ಬಹುತೇಕ ಚಿತ್ರೀಕರಣ ಮುಗಿಸಿರುವ ಈ ಸಿನಿಮಾದ ಬೆಂಚ್ ಮಾರ್ಕ್ ಕ್ರಿಯೇಟ್ ಮಾಡುವುದು ಖಚಿತ ಎನ್ನುವ ನಂಬಿಕೆ ಶಿಶಿರ್ ಅವರಲ್ಲಿದೆ.

ಕೌಟುಂಬಿಕ ಕಥೆಯಲ್ಲಿ ಶಿಶಿರ್

ಲ್ಯಾಂಡ್ ಲಾರ್ಡ್ ಜತೆಗೆ ಮತ್ತೊಂದು ಹೊಸ ಸಿನಿಮಾದಲ್ಲಿಯೂ ಶಿಶಿರ್ ನಟಿಸಿದ್ದಾರೆ. ಇದು ಕೌಟುಂಬಿಕ ಕಥೆಯ ಸಿನಿಮಾವಾಗಿದ್ದು ಶಿಶಿರ್ ನಾಯಕನಾಗಿ ಕಂಗೊಳಿಸಲಿದ್ದಾರೆ. ಈ ಸಿನಿಮಾದ ಶೂಟಿಂಗ್ ಕಂಪ್ಲೀಟ್ ಆಗಿದ್ದು, ಇನ್ನೂ ಶೀರ್ಷಿಕೆ ರಿವೀಲ್ ಆಗಿಲ್ಲ ನವ ನಿರ್ದೇಶಕರ ಸಾರಥ್ಯದಲ್ಲಿ ಮೂಡಿಬಂದಿರುವ ಈ ಚಿತ್ರವನ್ನು ಖ್ಯಾತ ನಿರ್ಮಾಪಕರು ನಿರ್ಮಿಸಿದ್ದಾರೆ. ಈ ಸಿನಿಮಾದ ಕೂಡ ಶೀಘ್ರದಲ್ಲಿಯೇ ತೆರೆಗೆ ಬರಲಿದೆ.

ಬದುಕು ಬದಲಿಸಿದ ಮುಸ್ತಫಾ

ನಾನು ಮೈಸೂರಿನ ನಟನಾ ಶಾಲೆಯಲ್ಲಿ ಅಭಿನಯ ತರಬೇತಿ ಪಡೆಯುತ್ತಿದ್ದೆ. ಅಲ್ಲಿಗೆ ಹಲವು ಕಲಾವಿದರು ಬರುತ್ತಿದ್ದರು, ನಾನು ಅವರಂತೆ ಸಿನಿಮಾ ನಟನಾಗಬೇಕು ಎಂದುಕೊಂಡಿದ್ದೆ. ಹೀಗಿರುವಾಗಲೇ ನನಗೆ ಡೇರ್ ಡೆವಿಲ್ ಮುಸ್ತಾಫಾ ಚಿತ್ರದಲ್ಲಿ ನಟಿಸಲು ಅವಕಾಶ ಸಿಕ್ಕಿತು. ಈ ಸಿನಿಮಾ ನನ್ನನ್ನು ನಟನಾಗಿ ಗುರುತಿಸಿತು. ಬದುಕನ್ನೇ ಬದಲಿಸಿತು ಎಂದು ಶಿಶಿರ್ ಸಂಸದಿಂದ ನುಡಿಯುತ್ತಾರೆ.

ಸಮಾಜಕ್ಕೆ ಒಳ್ಳೆಯ ಸಂದೇಶ ಸಾರುವ ಸಿನಿಮಾಗಳಲ್ಲಿ ನಟಿಸಬೇಕು ಎಂಬ ಆಸೆ ಇದೆ. ಅಂತಹ ಸಿನಿಮಾಗಳಿಗಾಗಿ ಕಾಯುತ್ತಿದ್ದೇನೆ. ಅದಕ್ಕೆ ತಕ್ಕಂತೆ ಈಗಾಗಲೇ ಒಂದಷ್ಟು ಕಥೆಗಳನ್ನು ಕೇಳಿದ್ದೇನೆ.

ಡೇರ್ ಡೆವಿಲ್ ಮುಸ್ತಾಫಾ ಚಿತ್ರವನ್ನು ನೋಡಿ ಮೆಚ್ಚಿದ ವಿಜಯ್ ಸರ್ ನನಗೆ ಕರೆ ಮಾಡಿ ಲ್ಯಾಂಡ್ ಲಾರ್ಡ್, ಚಿತ್ರದಲ್ಲಿ ನಟಿಸುವಂತೆ ಹೇಳಿದರು. ಅಂತೆಯೇ ನಾನು ಸಿನಿಮಾದಲ್ಲಿ ನಟಿಸಲು ಸಂತಸದಿಂದಲೇ ಸಮ್ಮತಿಸಿದೆ. ನನಗೆ ಈ ಚಿತ್ರದಲ್ಲಿ ಒಳ್ಳೆಯ ಪಾತ್ರವೇ ಸಿಕ್ಕಿದೆ.

31 ಡೇಸ್ ಟೀಸರ್ ರಿಲೀಸ್

ಜಾಲಿಡೇಸ್ ಚಿತ್ರದ ಖ್ಯಾತಿಯ ನಿರಂಜನ್ ಶೆಟ್ಟಿ 31 ಡೇಸ್ ಚಿತ್ರದಲ್ಲಿ ಮೂಲಕ ಮತ್ತೊಮ್ಮೆ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಈಗಾಗಲೇ ಫಸ್ಟ್ ಲುಕ್ ಹಾಗೂ ಹಾಡುಗಳ ಮೂಲಕ ಸಿನಿಪ್ರಿಯರ ಮನಗೆದ್ದಿರುವ 31 ಡೇಸ್ ಚಿತ್ರದ ಟೀಸರ್ ರಿಲೀಸ್ ಆಗಿದೆ. ಕಾರ್ಮಿಕ ಸಚಿವ ಸಂತೋಷ್ ಲಾಡ್ ಟೀಸರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. 31 ಡೇಸ್ ಚಿತ್ರಕ್ಕೆ ಹೈ ವೋಲ್ಟೇಜ್ ಲವ್ ಎಂಬ ಅಡಿಬರಹವಿದ್ದು, ಇದನ್ನು ಗಮನಿಸಿದರೆ ಚಿತ್ರದಲ್ಲಿ ಸುಂದರ ಪ್ರೇಮಕಥೆ ಇರುವುದು ಸ್ಪಷ್ಟವಾಗುತ್ತದೆ. ಇದರ ಜತೆಗೆ ಸಸ್ಪೆನ್ಸ್ ಬೆರೆತಿದ್ದು, ಹಾರರ್ ಕೊಡ ಇದೆ. ಒಂದೇ ಮನೆಯಲ್ಲಿ ನಡೆಯುವ ಪ್ರೇಮಕಥೆ ಇದು ಎಂಬುದು ಸ್ಪಷ್ಟವಾಗುತ್ತದೆ. ರಾಜ ರವಿಕುಮಾರ್ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ನಿರಂಜನ್ ಶೆಟ್ಟಿ ಲವ್ವರ್ ಬಾಯ್ ಆಗಿ ಕಂಗೊಳಿಸಿದ್ದು, ಪ್ರಜ್ವಲಿ ಸುವರ್ಣ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಗ್ಲಾಮರ್ ಲುಕ್‌ನಲ್ಲಿ ಮಿಂಚಿದ್ದಾರೆ. 31 ಡೇಸ್ ಖ್ಯಾತ ಸಂಗೀತ ನಿರ್ದೇಶಕ ವಿ.ಮನೋಹರ್ ಸಂಗೀತ ನಿರ್ದೇಶನದ ನೂರ ಐವತ್ತನೇ ಸಿನಿಮಾ ಎಂಬುದು ವಿಶೇಷ. ಮನೋಹರ್ ಸಂಗೀತ ನಿರ್ದೇಶನದ ಜತೆಗೆ ವಿಶೇಷ ಪಾತ್ರದಲ್ಲಿಯೂ ಕಾಣಿಸಿಕೊಂಡಿದ್ದಾರೆ.

ಎನ್‌ಸ್ಟಾರ್ ಬ್ಯಾನರ್‌ನಲ್ಲಿ ನಾಗವೇಣಿ ಶೆಟ್ಟಿ ಈ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಚಿತ್ರದಲ್ಲಿ ಹನ್ನೊಂದು ಹಾಡುಗಳಿದ್ದು ಒಂದಕ್ಕಿಂತ ಒಂದು ಗೀತೆಗಳು ಮಧುರವಾಗಿ ಮೂಡಿಬಂದಿವೆ. ವಿನುತ್ ಛಾಯಾಗ್ರಹಣ, ಧನು ಕುಮಾರ್ ನೃತ್ಯ ನಿರ್ದೇಶನ ಹಾಗೂ ನಿಖಿತ್ ಪೂಜಾರಿ ಸಂಕಲನ ಈ ಚಿತ್ರಕ್ಕಿದೆ. 31 ಡೇಸ್ ಇಂದಿನ ಪೀಳಿಗೆಗೆ ಹೇಳಿ ಮಾಡಿಸಿದ ಸುಂದರ ಕಥನವಾಗಿದ್ದು, ಸೆಪ್ಟೆಂಬರ್ 5 ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.

ಅದ್ದೂರಿಯಾಗಿ ಬರಲಿದೆ ಮುಧೋಳ್

ಕ್ರೇಜಿಸ್ಟಾರ್ ವಿ.ರವಿಚಂದ್ರನ್ ಅವರ ಪುತ್ರ ವಿಕ್ರಮ್ ರವಿಚಂದ್ರನ್ ತಮ್ಮ ಹುಟ್ಟು ಹಬ್ಬದಂದು ಅಭಿಮಾನಿಗಳಿಗೆ ಉಡುಗೊರೆ ನೀಡಿದ್ದಾರೆ. ತಮ್ಮ ಮುಧೋಳ್ ಸಿನಿಮಾದ ಬಗ್ಗೆ ಅಪ್ಡೇಟ್ ನೀಡಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಮುಧೋಳ್ ಈ ಹಿಂದೆಯೇ ತೆರೆಗೆ ಬರಬೇಕಿತ್ತು. ಆದರೆ ಸಿನಿಮಾದ ಕೆಲಸಗಳು ತಡವಾಗಿದ್ದವು. ಈಗ ಮುಧೋಳ್ ಅದ್ದೂರಿಯಾಗಿ ಮೂಡಿಬರುತ್ತಿದೆ. ಹೌದು, ಮುಧೋಳ್‌ಗೆ ಅಮೃತ ಸಿನಿ ಕ್ರಾಫ್ಟ್ ಕೂಡ ಕೈ ಜೋಡಿಸಿದೆ.

ಈ ಕುರಿತು ಸಂತಸ ಹಂಚಿಕೊಂಡಿರುವ ವಿಕ್ರಮ್, ನನ್ನ ಹೊಸ ಪ್ರಾಜೆಕ್ಟ್ ಹುಡುಕುತ್ತಿದ್ದಾಗ ನಿರ್ದೇಶಕ ಕಾರ್ತಿಕ್ ರಾಜು ಸಿಕ್ಕರು. ಒಳ್ಳೆಯ ಕಥೆ ಮಾಡಿಕೊಂಡು ಮುಧೋಳ ಸಿನಿಮಾವನ್ನು ನಿರ್ದೇಶಿಸುತ್ತಿದ್ದಾರೆ. ಅಂದುಕೊಂಡಂತೆ ಸಿನಿಮಾವೂ ಮೂಡಿಬರುತ್ತಿದೆ. ಈ ಚಿತ್ರ ದೊಡ್ಡ ಸಹಯೋಗದ ಮೂಲಕ ಪ್ರೇಕ್ಷಕರ ಮುಂದೆ ಬರಬೇಕು ಅನ್ನುವ ಹುಡುಕಾಟದಲ್ಲಿದ್ದಾಗ, ಅಮೃತ ಸಿನಿ ಕ್ರಾಫ್ಟ್ ಕೈಜೋಡಿಸಿತು. ಹಾಗಾಗಿ ನಮ್ಮ ಮುಧೋಳ್ ಚಿತ್ರವನ್ನು ದೊಡ್ಡ ಮಟ್ಟದಲ್ಲಿ ಬಿಡುಗಡೆ ಮಾಡಲು ಸಿದ್ಧತೆ ನಡೆಸಿದ್ದೇವೆ. ನಮ್ಮ ಚಿತ್ರದಲ್ಲಿ ದೊಡ್ಡ ತಂಡವೇ ಇದ್ದು, ಚಿತ್ರಕ್ಕೆ ಶಕ್ತಿ ತುಂಬಿದೆ ಎಂದು ವಿಕ್ರಮ್ ರವಿಚಂದ್ರನ್ ಹೇಳಿದರು. ಮುಧೋಳ್ ಮಾಸ್ ಅಂಡ್ ಕ್ಲಾಸ್ ಆಗಿ ಮೂಡಿಬರುತ್ತಿದ್ದು, ಈ ಹಿಂದೆಯೇ ಬಿಡುಗಡೆಯಾದ ಸಿನಿಮಾದ ಪೋಸ್ಟರ್ ಹಾಗೂ ಟೀಸರ್ ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ.